
ತತ್ತ್ವಪ್ರಕಾಶ ಕೆ ೩೫/೫೪, ಕ್ರ.ಸಂ. ೩೩೪

ತತ್ತ್ವಮಾಲಾಸ್ತೋತ್ರ ಕೆ ೩೬/೧೩, ಕ್ರ.ಸಂ. ೩೫೦

ತಾತ್ಪರ್ಯಸಂಗ್ರಹ (ಸಂ.ಕ) ಕೆ ೩೫/೫೩, ಕ್ರ.ಸಂ. ೩೩೩

ದಕ್ಷಿಣಾಮೂರ್ತಿಸ್ತೋತ್ರ (ಸಂ) ಕೆ ೨೫/೪, ಕ್ರ.ಸಂ. ೧೭೦

ದಶವಿಧ ಪಾದೋದಕವಿಚಾರ ಕೆ ೩೫/೫೨, ಕ್ರ.ಸಂ. ೩೩೨

ದೀಕ್ಷಾಪ್ರಯೋಗ (ಸಂ) ಕೆ ೩೫/೪೦, ಕ್ರ.ಸಂ. ೩೨೦

ದೀಕ್ಷಾವಿಧಿ (ಸಂ) ಕೆ ೩೦/೧೪, ಕ್ರ.ಸಂ. ೨೫೩

ದೀಕ್ಷಾವಿಧಿ ಕೆ ೩೫/೪೨, ಕ್ರ.ಸಂ. ೩೨೨

ದೂತಲಕ್ಷಣ ಕೆ ೨೪/೧೬, ಕ್ರ.ಸಂ. ೧೬೧

ದೇವಿನಾಂದ್ಯ ಕೆ ೧/೨೦, ಕ್ರ.ಸಂ. ೨೦

ದೇವಿನಾಂದ್ಯ ಕೆ ೩೬/೨೭, ಕ್ರ.ಸಂ. ೩೬೪

ದೇವಿನಾಂದ್ಯ ಕೆ ೪೦/೧೨, ಕ್ರ.ಸಂ. ೪೦೨

ದೇವಿಸ್ತೋತ್ರ (ಸಂ) ಕೆ ೨೭/೧, ಕ್ರ.ಸಂ. ೧೮೯

ದೇವೀನಾಂದ್ಯ ಕೆ ೨೯/೨೪, ಕ್ರ.ಸಂ. ೨೩೬

ದೇವೀಸಹಸ್ರನಾಮ (ಸಂ) ಕೆ ೩೦/೬, ಕ್ರ.ಸಂ. ೨೪೫

ದೇವೀಸ್ತೋತ್ರ ಕೆ ೩೬/೨೨, ಕ್ರ.ಸಂ. ೩೫೯

ಧನಂಜಯ ಕೆ ೫/೨, ಕ್ರ.ಸಂ. ೭೦

ಧರ್ಮಾಂಗದಚರಿತ್ರ (ತೆ) ಕೆ ೧೮/೧, ಕ್ರ.ಸಂ. ೧೧೬

ನಮಸ್ಕಾರಗದ್ಯ ಕೆ ೨೫/೧೧, ಕ್ರ.ಸಂ. ೧೭೭

ನಮಸ್ಕಾರಗದ್ಯ ಕೆ ೪೧/೧೬, ಕ್ರ.ಸಂ. ೪೨೬

ನಮಸ್ಕಾರಗದ್ಯ: ಪಾಲ್ಕುರಿಕೆ ಸೋಮಾಂಕ ಕೆ ೧೦/೮, ಕ್ರ.ಸಂ. ೮೭

ನರಪಿಂಗಲಿಯ ಶಕುನ ಕೆ ೨೪/೧೦, ಕ್ರ.ಸಂ. ೧೫೫
ನಳಚಕ್ರವರ್ತಿಕಥಾ (ತೆ) ಕೆ ೧೬, ಕ್ರ.ಸಂ. ೧೧೪
ನಾಗವರ್ಮಛಂದಸ್ಸು ಕೆ ೪೯/೩, ಕ್ರ.ಸಂ. ೪೭೮
ನಾನಾರ್ಥರತ್ನಾಕರ ಕೆ ೧೧/೧, ಕ್ರ.ಸಂ. ೯೨
ನಾನಾರ್ಥರತ್ನಾಕರ ಕೆ ೫/೩, ಕ್ರ.ಸಂ. ೭೧
ನಾನಾರ್ಥರತ್ನಾಕರ ವ್ಯಾಖ್ಯಾನ ಕೆ ೩೩/೧೯, ಕ್ರ.ಸಂ. ೨೭೮
ನಾನಾರ್ಥಸಮಾನಾರ್ಥಗಳು ಕೆ ೪೮/೮, ಕ್ರ.ಸಂ. ೪೭೫
ನಾಮಲಿಂಗಾನುಶಾಸನ ಕೆ ೧/೧, ಕ್ರ.ಸಂ. ೧
ನಾಮಲಿಂಗಾನುಶಾಸನ ಕೆ ೪೮/೧, ಕ್ರ.ಸಂ. ೪೬೮
ನಾಮಲಿಂಗಾನುಶಾಸನ ಕೆ ೪೯/೧, ಕ್ರ.ಸಂ. ೪೭೬
ನೀಲಕಂಠಭಾಷ್ಯ (ಸಂ) ಕೆ ೨೧/೬, ಕ್ರ.ಸಂ. ೧೪೩
ನೀಲಮ್ಮನ ಸ್ತೋತ್ರ ಕೆ ೨೯/೩, ಕ್ರ.ಸಂ. ೨೧೫
ನೀಲಮ್ಮನ ಸ್ತೋತ್ರ ಕೆ ೩೬/೨, ಕ್ರ.ಸಂ. ೩೩೯
ನೀಲಮ್ಮನವರ ಸ್ತೋತ್ರದರ್ಥ ಕೆ ೧/೪, ಕ್ರ.ಸಂ. ೪
ನೀಲಲೋಚನೆಯ ಸ್ತವಿತ್ಯ ಕೆ ೧/೫, ಕ್ರ.ಸಂ. ೫
ನೀಲಾಂಬಿಕಾಲಲಿತಸ್ತೋತ್ರ ಕೆ ೧/೬, ಕ್ರ.ಸಂ. ೬
ನೀಲಾಂಬಿಕಾಲಲಿತಸ್ತೋತ್ರ ಕೆ ೨೯/೧, ಕ್ರ.ಸಂ. ೨೧೩
ನೀಲಾಂಬಿಕಾಲಲಿತಸ್ತೋತ್ರ ಕೆ ೩೬/೧, ಕ್ರ.ಸಂ. ೩೩೮
ನೂರೊಂದು ವಿರಕ್ತರ ನಾಮದ ಪದ ಕೆ ೨೭/೧೪, ಕ್ರ.ಸಂ. ೨೦೨
ಪಂಚಕಲಶಪೂಜಾವಿಧಿ (ಸಂ) ಕೆ ೨೧/೫, ಕ್ರ.ಸಂ. ೧೪೨
ಪಂಚತಂತ್ರ ಕೆ ೯, ಕ್ರ.ಸಂ. ೭೯
ಪಂಚಪಕ್ಷಿಯ ಶಕುನ ಕೆ ೨೪/೧೧, ಕ್ರ.ಸಂ. ೧೫೬
ಪಂಚಪ್ರಕಾರಗದ್ಯ ಕೆ ೨೫/೧೦, ಕ್ರ.ಸಂ. ೧೭೬
ಪಂಚಪ್ರಕಾರಗದ್ಯ: ಸೋಮನಾಥ ಕೆ ೧೦/೯, ಕ್ರ.ಸಂ. ೮೮
ಪಂಚಪ್ರಕಾರದ ಗದ್ಯ ಕೆ ೪೧/೧೫, ಕ್ರ.ಸಂ. ೪೨೫

ಪಂಚಶಿಖಾಗಮದ ನಾಂದ್ಯ ಕೆ ೨೯/೧೯, ಕ್ರ.ಸಂ. ೨೩೧

ಪಂಚೀಕರಣದ ಪದ ಕೆ ೨/೩, ಕ್ರ.ಸಂ. ೩೬

ಪಂಚೀಕರಣದ ಪದಗಳು ಕೆ ೨೮/೪, ಕ್ರ.ಸಂ. ೨೦೬

ಪಟ್ಟಾಭಿಷೇಕ ಚರಪತಿ ಸಂಸ್ಕಾರ ನಿರೂಪಣಂ (ಸಂ) ಕೆ ೩೫/೪೬, ಕ್ರ.ಸಂ. ೩೨೬

ಪದ್ಯನಾನಾರ್ಥ ಕೆ ೧೧/೩, ಕ್ರ.ಸಂ. ೯೪

ಪರಮತಗಜಾಂಕುಶತಾರಾವಳಿ ಕೆ ೩/೮, ಕ್ರ.ಸಂ. ೫೬

ಪರಮರಹಸ್ಯ [ಷಟ್‌ಸ್ಥಲನಿರ್ಣಯ] ಕೆ ೮/೧, ಕ್ರ.ಸಂ. ೭೭

ಪರಮರಹಸ್ಯ ಕೆ ೩೪, ಕ್ರ.ಸಂ. ೨೮೦

ಪರಮಾನುಭವಬೋಧೆ ಕೆ ೪/೧, ಕ್ರ.ಸಂ. ೫೮

ಪರಮಾನುಭವಬೋಧೆ: ನಿಜಗುಣಶಿವಯೋಗಿ ಕೆ ೪೫/೩, ಕ್ರ.ಸಂ. ೪೪೯

ಪರಮಾರ್ಥಗೀತೆ ಕೆ ೪/೨, ಕ್ರ.ಸಂ. ೫೯

ಪರಮಾರ್ಥಗೀತೆ: ನಿಜಗುಣಶಿವಯೋಗಿ ಕೆ ೪೫/೨, ಕ್ರ.ಸಂ. ೪೪೮

ಪರಮಾರ್ಥಪ್ರಕಾಶಿಕೆ ಕೆ ೪/೩, ಕ್ರ.ಸಂ. ೬೦

ಪರಮಾರ್ಥಪ್ರಕಾಶಿಕೆ: ನಿಜಗುಣಶಿವಯೋಗಿ ಕೆ ೪೫/೫, ಕ್ರ.ಸಂ. ೪೫೧

ಪಾದಪೂಜಾವಿಧಿ (ಸಂ. ಕ.) ಕೆ ೩೫/೩೨, ಕ್ರ.ಸಂ. ೩೧೨

ಪಾದೋದಕವಿಧಿಃ (ಸಂ) ಕೆ ೩೫/೪೯, ಕ್ರ.ಸಂ. ೩೨೯

ಪುಣ್ಯಾಹವಾಚನ – ನಾಂದಿ (ಸಂ) ಕೆ ೩೫/೨೮, ಕ್ರ.ಸಂ. ೩೦೮

ಪುರುಷಸೂಕ್ತಂ (ಸಂ) ಕೆ ೩೫/೩೭, ಕ್ರ.ಸಂ. ೩೧೭

ಪುಷ್ಪವಿಧಿ (ಸಂ) ಕೆ ೩೦/೧೫, ಕ್ರ.ಸಂ. ೨೫೪

ಪೂಜಾವಿಧಿಃಷಡಕ್ಷರಾಚಾರ್ಯಪ್ರೋಕ್ತ (ಸಂ) ಕೆ ೩೫/೪೮, ಕ್ರ.ಸಂ. ೩೨೮

ಪೈಪ್ಪಲೋಪನಿಷತ್ (ಸಂ) ಕೆ ೩೫/೩, ಕ್ರ.ಸಂ. ೨೮೩

ಪ್ರಣವೋಪನಿಷತ್ (ಸಂ) ಕೆ ೩೫/೫, ಕ್ರ.ಸಂ. ೨೮೫

ಪ್ರಭುದೇವರ ಪುರಾಣದ ನಾಂದ್ಯ ಕೆ ೩೬/೨೯, ಕ್ರ.ಸಂ. ೩೬೬

ಪ್ರಭುದೇವರ ಪುರಾಣದ ನಾಂದ್ಯ ಕೆ ೪೦/೧೫, ಕ್ರ.ಸಂ. ೪೦೫

ಪ್ರಭುದೇವರ ವಚನಗಳು ಕೆ ೩೯/೧, ಕ್ರ.ಸಂ. ೩೮೯

ಪ್ರಭುದೇವರಪುರಾಣದ ನಾಂದ್ಯದ ಲಿಂಗಸ್ತೋತ್ರದ ಪದ ಕೆ ೧/೧೪, ಕ್ರ.ಸಂ. ೧೪

ಪ್ರಭುದೇವರಪುರಾಣದ ನಾಂದ್ಯದ ಷಟ್ಪದ ಕೆ ೬/೨, ಕ್ರ.ಸಂ. ೭೩

ಪ್ರಭುದೇವರು ನಿರೂಪಿಸಿದ ಪದಮಂತ್ರಗೋಪ್ಯ ಕೆ ೧೯/೯, ಕ್ರ.ಸಂ. ೧೨೮

ಪ್ರಭುದೇವರು ನಿರೂಪಿಸಿದ ಮಂತ್ರಗೋಪ್ಯ ಕೆ ೨/೯, ಕ್ರ.ಸಂ. ೪೨

ಪ್ರಭುದೇವರು ನಿರೂಪಿಸಿದ ಮಂತ್ರಗೋಪ್ಯ ಕೆ ೨೮/೧೦, ಕ್ರ.ಸಂ. ೨೧೨

ಪ್ರಭುದೇವರು ನಿರೂಪಿಸಿದ ಸೃಷ್ಟಿಯ ವಚನ ಕೆ ೧೯/೫, ಕ್ರ.ಸಂ. ೧೨೪

ಪ್ರಭುದೇವರು ನಿರೂಪಿಸಿದ ಸೃಷ್ಟಿಯ ವಚನ ಕೆ ೨/೫, ಕ್ರ.ಸಂ. ೩೮

ಪ್ರಭುದೇವರು ನಿರೂಪಿಸಿದ ಸೃಷ್ಟಿಯ ವಚನ ಕೆ ೩೭/೫, ಕ್ರ.ಸಂ. ೩೮೫

ಪ್ರಭುದೇವರು ನಿರೂಪಿಸಿದ ಸೃಷ್ಟಿಯ ವಚನ ಕೆ ೪೬/೬, ಕ್ರ.ಸಂ. ೪೫೮

ಪ್ರಭುದೇವರು ನಿರೂಪಿಸಿದ ಸೃಷ್ಟಿವಚನ ಕೆ ೨೮/೬, ಕ್ರ.ಸಂ. ೨೦೮

ಪ್ರಭುಲಿಂಗದ ಕಂದ ಕೆ ೪೧/೧೩, ಕ್ರ.ಸಂ. ೪೨೩

ಪ್ರಭುಲಿಂಗಲೀಲೆ ಕೆ ೧೨, ಕ್ರ.ಸಂ. ೯೭

ಪ್ರಭುಸ್ವಾಮಿ ಸಿದ್ಧರಾಮೇಶ್ವರಂಗೆ ಬೋಧಿಸಿದ ಪದಮಂತ್ರಗೋಪ್ಯ ಕೆ ೪೬/೧೦, ಕ್ರ.ಸಂ. ೪೬೨

ಪ್ರಶ್ನಶಾಸ್ತ್ರಭಾಗ ಕೆ ೨೪/೧೮, ಕ್ರ.ಸಂ. ೧೬೩

ಪ್ರಶ್ನಾದಿ ಜ್ಯೋತಿಷವಿಷಯಗಳು ಕೆ ೨೪/೧೨, ಕ್ರ.ಸಂ. ೧೫೭

ಪ್ರಸಾದಚಿಂತಾಮಣಿ ಕೆ ೮/೨, ಕ್ರ.ಸಂ. ೭೮

ಪ್ರಸ್ತವಾದ (ಸಂ) ಕೆ ೨೭/೪, ಕ್ರ.ಸಂ. ೧೯೨

ಪ್ರಸ್ತ್ರಯ (ಸಂ) ಕೆ ೨೭/೭, ಕ್ರ.ಸಂ. ೧೯೫

ಪ್ರಾಣಲಿಂಗಸಂಬಂಧ (ಸಂ) ಕೆ ೩೦/೧೬, ಕ್ರ.ಸಂ. ೨೫೫

ಬಸವರಾಜದೇವರ ಮನೆಯ ರಾಯಸದ ಬಂಕಣ್ಣಗಳ ವಚನ ಕೆ ೧೩/೩, ಕ್ರ.ಸಂ. ೧೦೦

ಬಸವಸ್ತುತಿ ಕೆ ೪೦/೧೬, ಕ್ರ.ಸಂ. ೪೦೬

ಬಸವಸ್ತೋತ್ರದ ತ್ರಿವಿಧಿ ಕೆ ೪೧/೬, ಕ್ರ.ಸಂ. ೪೧೬
ಬಸವೇಶ್ವರ ಪುರಾಣದ ಭಾಮಿನಿ ನಾಂದ್ಯ ಕೆ ೪೦/೮, ಕ್ರ.ಸಂ. ೩೯೮
ಬಸವೇಶ್ವರನ ಎಂಬತ್ತೆಂಟು ಪವಾಡ ಕೆ ೩೬/೩೩, ಕ್ರ.ಸಂ. ೩೭೦
ಬಸವೇಶ್ವರನ ಪುರಾಣದ ನಾಂದ್ಯ ಕೆ ೨೯/೫, ಕ್ರ.ಸಂ. ೨೧೭
ಬಸವೇಶ್ವರನ ಪುರಾಣದ ನಾಂದ್ಯ ಕೆ ೩೬/೨೩, ಕ್ರ.ಸಂ. ೩೬೦
ಬಸವೇಶ್ವರನ ಲಲಿತಪದಸ್ತೋತ್ರ ಕೆ ೩೬/೨೮, ಕ್ರ.ಸಂ. ೩೬೫
ಬಸವೇಶ್ವರಪುರಾಣದ ನಾಂದ್ಯ ಕೆ ೧/೧೮, ಕ್ರ.ಸಂ. ೧೮
ಬಿಲ್ವಾಷ್ಟಕಂ (ಸಂ) ಕೆ ೩೫/೩೫, ಕ್ರ.ಸಂ. ೩೧೫
ಭಕ್ತಿಬಿನ್ನಹದ ರಗಳೆ ಕೆ ೪೧/೫, ಕ್ರ.ಸಂ. ೪೧೫
ಭಕ್ತಿಯೋಗೋಪನಿಷತ್ (ಸಂ) ಕೆ ೩೫/೧೧, ಕ್ರ.ಸಂ. ೨೯೧
ಭವಾನೀಸಹಸ್ರನಾಮಸ್ತೋತ್ರ (ಸಂ) ಕೆ ೨೦/೬, ಕ್ರ.ಸಂ. ೧೩೪
ಭವಿಸಂಗ ಭವಿಪಾಕ ನಿರಸನಂ ಕೆ ೩೦/೧೦, ಕ್ರ.ಸಂ. ೨೪೯
ಭಾವಚಿಂತಾರತ್ನ: ಗುಬ್ಬಿ ಮಲ್ಲಣಾರ್ಯ ಕೆ ೧೫/೩, ಕ್ರ.ಸಂ. ೧೧೧
ಭಾವಚಿಂತಾರತ್ನದ ನಾಂದ್ಯ ಕೆ ೨೯/೭, ಕ್ರ.ಸಂ. ೨೧೯
ಭಾವಚಿಂತಾರತ್ನದ ಶಿವಪಂಚವಿಂಶತಿಲೀಲಾನಾಂದ್ಯ ಕೆ ೩೬/೧೨, ಕ್ರ.ಸಂ. ೩೪೯
ಭಾಷಾಮಂಜರಿಯ ಟೀಕು ಕೆ ೩೩/೨, ಕ್ರ.ಸಂ. ೨೬೧
ಭಿಕ್ಷಾಟಣದ ಕಾವ್ಯ: ಗುರುಲಿಂಗಣಾರ್ಯ ಕೆ ೪೨/೪, ಕ್ರ.ಸಂ. ೪೪೩
ಭಿಕ್ಷಾಟನಚರಿತೆ ಕೆ ೩೩/೧೧, ಕ್ರ.ಸಂ. ೨೭೦
ಭಿಕ್ಷಾಟನದ ಚರಿತ್ರ ಕೆ ೧೫/೧, ಕ್ರ.ಸಂ. ೧೦೯
ಭೂಶುದ್ಧಿವಿಚಾರಃ (ಸಂ) ಕೆ ೩೫/೪೧, ಕ್ರ.ಸಂ. ೩೨೧
ಭೈರವೇಶ್ವರನ ಕಾವ್ಯ: ನಂಜುಂಡ ಕೆ ೪೨/೫, ಕ್ರ.ಸಂ. ೪೪೪
ಮಂಗರಾಜನಿಘಂಟು [ಅಭಿನವಾಭಿಧಾನಂ] ಕೆ ೩/೯, ಕ್ರ.ಸಂ. ೫೭
ಮಂಗಲಾಷ್ಟಕಂ (ಸಂ) ಕೆ ೨೫/೨, ಕ್ರ.ಸಂ. ೧೬೮
ಮಠಸ್ಥಲ (ಸಂ) ಕೆ ೩೦/೧೩, ಕ್ರ.ಸಂ. ೨೫೨

ಮಠಸ್ಥಲಂ (ಸಂ) ಕೆ ೩೫/೪೪, ಕ್ರ.ಸಂ. ೩೨೪
ಮಣ್ಣೇಶ್ವರನ ಕಾವ್ಯದ ನಾಂದ್ಯ ಕೆ ೧/೨೬, ಕ್ರ.ಸಂ. ೨೬
ಮಣ್ಣೇಶ್ವರನ ಪುರಾಣದ ನಾಂದ್ಯ ಕೆ ೨೯/೧೬, ಕ್ರ.ಸಂ. ೨೨೮
ಮಣ್ಣೇಶ್ವರನ ಪುರಾಣದ ನಾಂದ್ಯ ಕೆ ೩೬/೧೮, ಕ್ರ.ಸಂ. ೩೫೫
ಮನುರಾಜೇಂದ್ರಪ್ರಬಂಧಪದ್ಯೋತ್ಪ್ರೇಕ್ಷಾರ್ಥ ಕೆ ೩೩/೨೦, ಕ್ರ.ಸಂ. ೨೭೯
ಮನೋವಿಕಾರನಿರಸನ ರಗಳೆ ಕೆ ೪೧/೪, ಕ್ರ.ಸಂ. ೪೧೪
ಮನೋವಿಜಯ ಕೆ ೩/೭, ಕ್ರ.ಸಂ. ೫೫
ಮನೋವಿಜಯ ತಾತ್ಪರ್ಯಚಂದ್ರಿಕೆ: ತೋಂಟದ ಸಿದ್ಧಲಿಂಗದೇಶಿಕ ಕೆ ೧೩/೭, ಕ್ರ.ಸಂ. ೧೦೪
ಮನೋವಿಜಯಕಾವ್ಯ ಕೆ ೪/೧೦, ಕ್ರ.ಸಂ. ೬೭
ಮರುಳದೇವರ ಕಂದ ಕೆ ೪೧/೧೧, ಕ್ರ.ಸಂ. ೪೨೧
ಮರುಳದೇವರ ಕಂದ: ಮರುಳದೇವ ಕೆ ೧೦/೬, ಕ್ರ.ಸಂ. ೮೫
ಮಲಯರಾಜಸ್ತೋತ್ರ: ಮಲಯರಾಜ ಕೆ ೩೦/೩, ಕ್ರ.ಸಂ. ೨೪೨
ಮಲಯರಾಜಸ್ತೋತ್ರದ ಟೀಕು ಕೆ ೨೬/೪, ಕ್ರ.ಸಂ. ೧೮೫
ಮಲುಹಣಸ್ತೋತ್ರ (ಸಂ) ಕೆ ೪೧/೨೬, ಕ್ರ.ಸಂ. ೪೩೬
ಮಲುಹಣಸ್ತೋತ್ರ (ಸಂ) ಕೆ ೪೭/೧, ಕ್ರ.ಸಂ. ೪೬೪
ಮಲುಹಣಸ್ತೋತ್ರಂ (ಸಂ) ಕೆ ೨೦/೮, ಕ್ರ.ಸಂ. ೧೩೬
ಮಲುಹಣಸ್ತೋತ್ರದ ಟೀಕು ಕೆ ೨೬/೩, ಕ್ರ.ಸಂ. ೧೮೪
ಮಲೆಯರಾಜಸ್ತೋತ್ರ (ಸಂ) ಕೆ ೪೧/೨೭, ಕ್ರ.ಸಂ. ೪೩೭
ಮಲ್ಲೇಶ್ವರನ ನಾಂದ್ಯ ಕೆ ೧/೨೯, ಕ್ರ.ಸಂ. ೨೯
ಮಲ್ಲೇಶ್ವರನ ನಾಂದ್ಯ ಕೆ ೩೬/೨೫, ಕ್ರ.ಸಂ. ೩೬೨
ಮಲ್ಹಣಸ್ತೋತ್ರ ಕೆ ೩೦/೨, ಕ್ರ.ಸಂ. ೨೪೧
ಮಹದೈಪುರೀಶ್ವರಶತಕ (ಸಂ) ಕೆ ೪೧/೨೩, ಕ್ರ.ಸಂ. ೪೩೩
ಮಹನ್ಯಾಸ (ಸಂ) ಕೆ ೩೫/೧೬, ಕ್ರ.ಸಂ. ೨೯೬
ಮಹಲಿಂಗಗುರುಶಿವಸಿದ್ಧೇಶ್ವರಪ್ರಭು ಅಂಕಿತದ ವಚನಗಳು ಕೆ ೨೭/೯, ಕ್ರ.ಸಂ. ೧೯೭

ಮಹಾದೇವಿಯಕ್ಕಗಳು ನಿರೂಪಿಸಿದ ಸೃಷ್ಟಿಯ ವಚನ ಕೆ ೨೮/[illegible]
ಕ್ರ.ಸಂ. ೨೦೭

ಮಹಾದೇವಿಯಕ್ಕಗಳು ನಿರೂಪಿಸಿದ ಸೃಷ್ಟಿಯ ವಚನ ಕೆ ೩೭/೪,
ಕ್ರ.ಸಂ. ೩೮೪

ಮಹಿಮಾಶತಕ (ಸಂ) ಕೆ ೪೧/೨೪, ಕ್ರ.ಸಂ. ೪೩೪

ಮಹಿಮ್ನಸ್ತೋತ್ರ (ಸಂ) ಕೆ ೨೦/೯, ಕ್ರ.ಸಂ. ೧೩೭

ಮಹಿಮ್ನಸ್ತೋತ್ರ (ಸಂ) ಕೆ ೩೩/೧೮, ಕ್ರ.ಸಂ. ೨೭೭

ಮಹಿಮ್ನಸ್ತೋತ್ರ (ಸಂ) ಕೆ ೪೧/೨೫, ಕ್ರ.ಸಂ. ೪೩೫

ಮಹಿಮ್ನಸ್ತೋತ್ರ (ಸಂ) ಕೆ ೪೭/೩, ಕ್ರ.ಸಂ. ೪೬೬

ಮಹಿಮ್ನಸ್ತೋತ್ರದ ಟೀಕು ಕೆ ೨೬/೨, ಕ್ರ.ಸಂ. ೧೮೩

ಮಿಶ್ರತ್ರಿವಿಧಿ ಕೆ ೪೧/೭, ಕ್ರ.ಸಂ. ೪೧೭

ಮಿಶ್ರಷಟ್ಪದಿ ಕೆ ೩೬/೪೨, ಕ್ರ.ಸಂ. ೩೭೯

ಮಿಶ್ರಷಟ್ಪದಿ ಸ್ತೋತ್ರ ಕೆ ೩೬/೪೧, ಕ್ರ.ಸಂ. ೩೭೮

ಮಿಶ್ರಾರ್ಪಣ ಕೆ ೨/೨, ಕ್ರ.ಸಂ. ೩೫

ಮಿಶ್ರಾರ್ಪಣ ಕೆ ೩೭/೨, ಕ್ರ.ಸಂ. ೩೮೨

ಮಿಶ್ರಾರ್ಪಣ ಕೆ ೪೬/೩, ಕ್ರ.ಸಂ. ೪೫೫

ಮುರಿಗಾಶಾಂತವೀರೇಶ್ವರಸ್ವಾಮಿಗಳ ಸ್ತೋತ್ರ ಕೆ ೪೦/೯, ಕ್ರ.ಸಂ. ೩೯೯

ಮುರಿಗಾಸ್ವಾಮಿಗಳ ನಾಂದ್ಯ ಕೆ ೪೦/೪, ಕ್ರ.ಸಂ. ೩೯೪

ಮುರಿಗೆಯ ಕರಿಬಸವೇಶ್ವರನು ನಿರೂಪಿಸಿದ ವೈಶಾನ್ಯಷಟ್ಪದ ಕೆ ೩೬/
೩೭, ಕ್ರ.ಸಂ. ೩೭೪

ಮುರಿಗೆಯ ಶಾಂತವೀರೇಶ್ವರಸ್ವಾಮಿಗಳ ಸ್ತೋತ್ರ ಕೆ ೨೯/೧೪, ಕ್ರ.ಸಂ. ೨೨೬

ಮುರಿಗೆಯಸ್ವಾಮಿಗಳ ಸ್ತೋತ್ರದ ನಾಂದ್ಯ ಕೆ ೧/೯, ಕ್ರ.ಸಂ. ೯

ಮುರಿಗೆಶಾಂತವೀರೇಶ್ವರನ ಪಂಚವಿಂಶತಿ ಸ್ತೋತ್ರಂ ಕೆ ೩೬/೫,
ಕ್ರ.ಸಂ. ೩೪೨

ಮುರಿಗೆಸ್ವಾಮಿಗಳ ಸ್ತೋತ್ರ ಕೆ ೧/೨೪, ಕ್ರ.ಸಂ. ೨೪

ಮುರಿಗೆಸ್ವಾಮಿಗಳು ನಿರೂಪಿಸಿದ ನಾಂದ್ಯ ಕೆ ೧/೮, ಕ್ರ.ಸಂ. ೮
ಮುರಿಗೆಸ್ವಾಮಿಗಳು ನಿರೂಪಿಸಿದ ನಾಂದ್ಯ ಕೆ ೨೯/೧೩, ಕ್ರ.ಸಂ. ೨೨೫
ಮುರುಗೆಸ್ವಾಮಿಗಳು ನಿರೂಪಿಸಿದ ನಾಂದ್ಯ ಕೆ ೩೬/೩, ಕ್ರ.ಸಂ. ೩೪೦
ಮೂತ್ರಗೈವಲಕ್ಷಣ ಕೆ ೨೪/೯, ಕ್ರ.ಸಂ. ೧೫೪
ಮೂರು ಬಿಸಿಗೆಯ ಫಲ ಕೆ ೨೪/೧೭, ಕ್ರ.ಸಂ. ೧೬೨
ಮೃತ್ಯುಂಜಯ ವಜ್ರಕವಚಂ (ಸಂ) ಕೆ ೩೫/೩೦, ಕ್ರ.ಸಂ. ೩೧೦
ಯಳಮಲೆಯ ಶಂಕರದೇವರು ಸೇರಿಸಿದ ಡಣಾಯಕರ ಕಂದ ಕೆ ೧೦/೫, ಕ್ರ.ಸಂ. ೮೪
ಯೋಗಾಂಗವಿಭೂಷಣ ಕೆ ೪/೪, ಕ್ರ.ಸಂ. ೬೧
ರಗಡ (ತೆ) ಕೆ ೧೮/೪, ಕ್ರ.ಸಂ. ೧೧೯
ರಾಘವಾಂಕನ ಕಾವ್ಯ ಕೆ ೫೦/೧, ಕ್ರ.ಸಂ. ೪೮೦
ರಾಘವಾಂಕನ ಕಾವ್ಯ: ಚಿಕ್ಕನಂಜಾಚಾರ್ಯ ಕೆ ೩೧, ಕ್ರ.ಸಂ. ೨೫೮
ರಾಘವಾಂಕಯ್ಯನ ಕಾವ್ಯ: ಚಿಕ್ಕನಂಜಾಚಾರ್ಯ ಕೆ ೩೮, ಕ್ರ.ಸಂ. ೩೮೮
ರಾಜಗಾಳಿಫಲ ಕೆ ೨೪/೧೪, ಕ್ರ.ಸಂ. ೧೫೯
ರಾಜಶೇಖರ ಕೆ ೩೨, ಕ್ರ.ಸಂ. ೨೫೯
ರಾಮಾಭ್ಯುದಯಕಥಾಕುಸುಮಮಂಜರಿ ತಿಮ್ಮಕವಿ ಕೆ ೨೩, ಕ್ರ.ಸಂ. ೧೪೫
ರಾವಂದೂರ ವರತೆಯ ಸೋಮಣ್ಣಗಳು ನಿರೂಪಿಸಿದ ಪಂಚೀಕರಣದ ಪದ ಕೆ ೩೭/೩, ಕ್ರ.ಸಂ. ೩೮೩
ರುದ್ರಕವಚ (ಸಂ) ಕೆ ೨/೧೪, ಕ್ರ.ಸಂ. ೪೭
ರುದ್ರಮಂತ್ರ (ಸಂ) ಕೆ ೨/೧೨, ಕ್ರ.ಸಂ. ೪೫
ರುದ್ರಹೃದಯ (ಸಂ) ಕೆ ೩೦/೧೮, ಕ್ರ.ಸಂ. ೨೫೭
ರುದ್ರಾಕ್ಷಜಾಬಾಲೋಪನಿಷತ್ತು (ಸಂ) ಕೆ ೩೩/೧೩, ಕ್ರ.ಸಂ. ೨೭೨
ರುದ್ರೋಪನಿಷತ್ (ಸಂ) ಕೆ ೧೪/೧, ಕ್ರ.ಸಂ. ೧೦೬
ರುದ್ರೋಪನಿಷತ್ (ಸಂ) ಕೆ ೩೫/೨, ಕ್ರ.ಸಂ. ೨೮೨
ಲಕ್ಷ್ಮಪ್ಪಗಾರಿ ಚಿಟ್ಟಪ್ಪಗಾರಿ ವಚನಾಲು (ತೆ) ಕೆ ೧೮/೩, ಕ್ರ.ಸಂ. ೧೧೮

ಲಲಿತ ನಾಂದ್ಯದ ಪದ ಕೆ ೨೯/೨೩, ಕ್ರ.ಸಂ. ೨೩೫

ಲಿಂಗಪುರಾಣದ ನಾಂದ್ಯ ಕೆ ೧/೧೭, ಕ್ರ.ಸಂ. ೧೭

ಲಿಂಗಪುರಾಣದ ನಾಂದ್ಯ ಕೆ ೨೯/೨೭, ಕ್ರ.ಸಂ. ೨೩೯

ಲಿಂಗಪುರಾಣದ ನಾಂದ್ಯ ಕೆ ೩೬/೧೧, ಕ್ರ.ಸಂ. ೩೪೮

ಲಿಂಗಲೀಲಾವಿಲಾಸಚಾರಿತ್ರ ಕೆ ೧೩/೬, ಕ್ರ.ಸಂ. ೧೦೩

ಲಿಂಗಸ್ತೋತ್ರದ ಷಟ್ಪದ ಕೆ ೧/೩೧, ಕ್ರ.ಸಂ. ೩೧

ಲಿಂಗಸ್ತೋತ್ರದ ಷಟ್ಪದಂಗಳು ಕೆ ೪೦/೨೦, ಕ್ರ.ಸಂ. ೪೧೦

ಲಿಂಗಸ್ತೋತ್ರದ ಷಟ್ಪದಗಳು ಕೆ ೬/೧, ಕ್ರ.ಸಂ. ೭೨

ಲಿಂಗಸ್ತೋತ್ರದ ಷಟ್ಪದಿ ಕೆ ೩೬/೩೫, ಕ್ರ.ಸಂ. ೩೭೨

ವಜ್ರಸೂಚೋಪನಿಷತ್ (ಸಂ) ಕೆ ೩೫/೫೫, ಕ್ರ.ಸಂ. ೩೩೫

ವರತೆ ಸೋಮಯ್ಯಗಳು ನಿರೂಪಿಸಿದ ಪಂಚೀಕರಣದ ಪದ ಕೆ ೪೬/೪, ಕ್ರ.ಸಂ. ೪೫೬

ವರತೆಯ ಸೋಮಂಗಳು ನಿರೂಪಿಸಿದ ಪಂಚೀಕರಣದ ಪದ ಕೆ ೧೯/೩, ಕ್ರ.ಸಂ. ೧೨೨

ವಸ್ತುಕ ಪುರಾಣದ ಶಿವಲಿಂಗಸ್ತೋತ್ರ ಕೆ ೩೬/೨೬, ಕ್ರ.ಸಂ. ೩೬೩

ವಸ್ತುಕಪುರಾಣದ ನಾಂದ್ಯ ಕೆ ೪೦/೧೧, ಕ್ರ.ಸಂ. ೪೦೧

ವಾಣಿಜ್ಯೋತ್ಪತ್ಯಂ (ಸಂ. ಕ.) ಕೆ ೩೫/೩೪, ಕ್ರ.ಸಂ. ೩೧೪

ವಾಯಸಶಕುನ ಕೆ ೨೪/೧೫, ಕ್ರ.ಸಂ. ೧೬೦

ವಿಜಯತಂತ್ರ (ಸಂ) ಕೆ ೩೫/೫೬, ಕ್ರ.ಸಂ. ೩೩೬

ವಿಭೂತಿಪಂಚಾಕ್ಷರಗಳಿಗೆ ಸಂಬಂಧಿಸಿದ ಕೆಲವು ವಿವರಗಳು ಕೆ ೫೦/೨, ಕ್ರ.ಸಂ. ೪೮೧

ವಿವಾಹಕ್ರಮ (ಸಂ) ಕೆ ೩೫/೨೭, ಕ್ರ.ಸಂ. ೩೦೭

ವಿವೇಕಚಿಂತಾಮಣಿ: ನಿಜಗುಣಶಿವಯೋಗಿ ಕೆ ೪೫/೪, ಕ್ರ.ಸಂ. ೪೫೦

ವೀರಭದ್ರ ಸಹಸ್ರನಾಮ (ಸಂ) ಕೆ ೨೦/೫, ಕ್ರ.ಸಂ. ೧೩೩

ವೀರಭದ್ರಸ್ಥಾಪನವಿಧಿಃ (ಸಂ) ಕೆ ೩೫/೨೫, ಕ್ರ.ಸಂ. ೩೦೫

ವೀರಮಾಹೇಶ್ವರಧರ್ಮನಿರ್ಣಯಃ (ಸಂ) ಕೆ ೨೧/೨, ಕ್ರ.ಸಂ. ೧೩೯
ವೀರಶೈವವಿವಾಹಕ್ರಮ (ಸಂ) ಕೆ ೨೧/೧, ಕ್ರ.ಸಂ. ೧೩೮
ವೀರಶೈವಾಮೃತಪುರಾಣದ ನಾಂದ್ಯ ಕೆ ೧/೨೩, ಕ್ರ.ಸಂ. ೨೩
ವೀರಶೈವಾಮೃತಪುರಾಣದ ನಾಂದ್ಯದ ಪದ ಕೆ ೨೯/೧೧, ಕ್ರ.ಸಂ. ೨೨೩
ವೀರಶೈವಾಮೃತಪುರಾಣದೊಳಗಣ ನಾಂದ್ಯಗಳು ಕೆ ೩೬/೩೨, ಕ್ರ.ಸಂ. ೩೬೯
ವೃಷಭಗೀತೆ ಕೆ ೩/೫, ಕ್ರ.ಸಂ. ೫೩
ವೃಷಭಗೀತೆ ಕೆ ೪/೮, ಕ್ರ.ಸಂ. ೬೫
ವೃಷಭಪ್ರತಿಷ್ಠಾವಿಧಿಃ (ಸಂ) ಕೆ ೩೫/೨೩, ಕ್ರ.ಸಂ. ೩೦೩
ವೃಷಭಶತಕ ಕೆ ೨೫/೮, ಕ್ರ.ಸಂ. ೧೭೪
ವೃಷಭಸೂಕ್ತಂ (ಸಂ) ಕೆ ೩೫/೧೪, ಕ್ರ.ಸಂ. ೨೯೪
ವೃಷಭಸ್ಥಾಪನಪಟಲ (ಸಂ) ಕೆ ೩೫/೨೨, ಕ್ರ.ಸಂ. ೩೦೨
ವೃಷಭಾಷ್ಟಕ ಕೆ ೨೫/೭, ಕ್ರ.ಸಂ. ೧೭೩
ವೃಷಭೇಂದ್ರವಿಜಯಲಲಿತಪದನಾಂದ್ಯ ಕೆ ೧/೨೧, ಕ್ರ.ಸಂ. ೨೧
ವೃಷೇಂದ್ರಸ್ತುತಿ ಕೆ ೪೦/೧೦, ಕ್ರ.ಸಂ. ೪೦೦
ವೇದಾಂತಸಾರೋಪನಿಷತ್ (ಸಂ) ಕೆ ೩೫/೮, ಕ್ರ.ಸಂ. ೨೮೮
ವೈದ್ಯ ಕೆ ೨೪/೧೩, ಕ್ರ.ಸಂ. ೧೫೮
ವೈರಾಗ್ಯಷಟ್ಪದಿಕೆ ೧/೩೦, ಕ್ರ.ಸಂ. ೩೦
ಶಂಕರದೇವರ ಕಂದ ಕೆ ೧೦/೪, ಕ್ರ.ಸಂ. ೮೩
ಶಂಕರದೇವರ ಕಂದ ಕೆ ೪೧/೧೦, ಕ್ರ.ಸಂ. ೪೨೦
ಶಂಕರದೇವರು ನಿರೂಪಿಸಿದ ಶತಕ ಕೆ ೨೫/೬, ಕ್ರ.ಸಂ. ೧೭೨
ಶಂಕರಶತಕ ಕೆ ೨೭/೧೩, ಕ್ರ.ಸಂ. ೨೦೧
ಶಂಕರಸಂಹಿತೆ ನಾಂದ್ಯ ಕೆ ೩೬/೩೧, ಕ್ರ.ಸಂ. ೩೬೮
ಶಂಕರಸಂಹಿತೆಯ ನಾಂದ್ಯ ಕೆ ೧/೨೮, ಕ್ರ.ಸಂ. ೨೮
ಶಂಕರಸಂಹಿತೆಯ ನಾಂದ್ಯ ಕೆ ೪೦/೧೭, ಕ್ರ.ಸಂ. ೪೦೭
ಶತಕತ್ರಯದ ವ್ಯಾಖ್ಯಾನ ಕೆ ೨೬/೧, ಕ್ರ.ಸಂ. ೧೮೨

ಶತರುದ್ರನಾಮ (ಸಂ) ಕೆ ೩೫/೫೦, ಕ್ರ.ಸಂ. ೩೩೦

ಶಬರಶಂಕರವಿಳಾಸ: ಷಡಕ್ಷರದೇವ ಕೆ ೧೫/೨, ಕ್ರ.ಸಂ. ೧೧೦

ಶಬರಶಂಕರವಿಳಾಸ: ಷಡಕ್ಷರದೇವ ಕೆ ೪೨/೧, ಕ್ರ.ಸಂ. ೪೪೦

ಶಬ್ದಮಣಿದರ್ಪಣ, ನಿಟ್ಟೂರ ನಂಜಯ್ಯನ ಟೀಕುಸಹಿತ ಕೆ ೪೯/೨, ಕ್ರ.ಸಂ. ೪೭೭

ಶಬ್ದಮಣಿದರ್ಪಣ: ಧಾತುನಿರ್ಣಯಪ್ರಕರಣ ಕೆ ೪೯/೪, ಕ್ರ.ಸಂ. ೪೭೯

ಶಬ್ದಮಣಿದರ್ಪಣಂ ಕೆ ೧೧/೫, ಕ್ರ.ಸಂ. ೯೬

ಶಬ್ದರತ್ನಾಕರ ಕೆ ೧೧/೨, ಕ್ರ.ಸಂ. ೯೩

ಶಬ್ದರೂಪಮಾಲಿಕೆ ಕೆ ೪೮/೨, ಕ್ರ.ಸಂ. ೪೬೯

ಶಬ್ದಾಗಮಕಂದ ಕೆ ೨೭/೫, ಕ್ರ.ಸಂ. ೧೯೩

ಶಬ್ದಾನುಶಾಸನ ಕೆ ೧೭, ಕ್ರ.ಸಂ. ೧೧೫

ಶರಣುಬಸವ ರಗಳೆ: ಪಾಲ್ಕುರಿಕೆ ಸೋಮನಾಥ ಕೆ ೪೧/೩, ಕ್ರ.ಸಂ. ೪೧೩

ಶಾರೀರಕೋಪನಿಷತ್ (ಸಂ) ಕೆ ೩೫/೭, ಕ್ರ.ಸಂ. ೨೮೭

ಶಿವಕವಚ (ಸಂ) ಕೆ ೧೪/೨, ಕ್ರ.ಸಂ. ೧೦೭

ಶಿವಕವಚ (ಸಂ) ಕೆ ೨/೧೩, ಕ್ರ.ಸಂ. ೪೬

ಶಿವಕವಚ (ಸಂ) ಕೆ ೨೦/೨, ಕ್ರ.ಸಂ. ೧೩೦

ಶಿವಪೂಜಾವಿಧಾನಂ (ಸಂ) ಕೆ ೧೪/೩, ಕ್ರ.ಸಂ. ೧೦೮

ಶಿವಪೂಜಾವಿಧಾನಂ (ಸಂ) ಕೆ ೨೧/೩, ಕ್ರ.ಸಂ. ೧೪೦

ಶಿವಪೂಜಾವಿಧಾನಂ ಕೆ ೩೦/೯, ಕ್ರ.ಸಂ. ೨೪೮

ಶಿವಪೂಜಾವಿಧಿಃ (ಸಂ) ಕೆ ೩೫/೨೬, ಕ್ರ.ಸಂ. ೩೦೬

ಶಿವಮಹಿಮಾಶತಕ ಕೆ ೧/೩೩, ಕ್ರ.ಸಂ. ೩೩

ಶಿವಮಹಿಮಾಶತಕ ಕೆ ೩೬/೩೮, ಕ್ರ.ಸಂ. ೩೭೫

ಶಿವಯೋಗಪ್ರದೀಪಿಕೆ ಕೆ ೨/೧೫, ಕ್ರ.ಸಂ. ೪೮

ಶಿವಯೋಗಾಂಗವಿಭೂಷಣ ಕೆ ೩/೧, ಕ್ರ.ಸಂ. ೪೯

ಶಿವರಾತ್ರಿ ಪ್ರಾದುರ್ಭಾವ (ಸಂ) ಕೆ ೩೫/೨೦, ಕ್ರ.ಸಂ. ೩೦೦

ಶಿವಲಾಂಛನ (ಸಂ) ಕೆ ೩೫/೪೫, ಕ್ರ.ಸಂ. ೩೨೫

ಶಿವಲಿಂಗನಾಂದ್ಯ ಕೆ ೨೯/೪, ಕ್ರ.ಸಂ. ೨೧೬

ಶಿವಲಿಂಗನಾಂದ್ಯ ಕೆ ೪೦/೩, ಕ್ರ.ಸಂ. ೩೯೩

ಶಿವಲಿಂಗಪದ್ಯದ [ವಸ್ತುಕಪುರಾಣದ] ನಾಂದ್ಯ ಕೆ ೧/೧೯, ಕ್ರ.ಸಂ. ೧೯

ಶಿವಲಿಂಗಮಹಿಮಾಷಟ್ಪದ ಕೆ ೩೬/೩೬, ಕ್ರ.ಸಂ. ೩೭೩

ಶಿವಲಿಂಗಷಟ್ಪದಿಕೆ ೧/೩೨, ಕ್ರ.ಸಂ. ೩೨

ಶಿವಸಹಸ್ರನಾಮ (ಸಂ) ಕೆ ೨೦/೪, ಕ್ರ.ಸಂ. ೧೩೨

ಶಿವಸಹಸ್ರನಾಮ (ಸಂ) ಕೆ ೩೦/೭, ಕ್ರ.ಸಂ. ೨೪೬

ಶಿವಾಧವಾಶತಕ (ಸಂ) ಕೆ ೪೧/೨೧, ಕ್ರ.ಸಂ. ೪೩೧

ಶಿವಾಧಿಕ್ಯಶತಕ ಕೆ ೨೭/೧೧, ಕ್ರ.ಸಂ. ೧೯೯

ಶಿವಾನಂದಲಹರಿ ಕನ್ನಡ ಟೀಕು ಕೆ ೧೩/೮, ಕ್ರ.ಸಂ. ೧೦೫

ಶಿವಾವಲ್ಲಭಶತಕ (ಸಂ) ಕೆ ೪೧/೨೨, ಕ್ರ.ಸಂ. ೪೩೨

ಶೀಲವಂತನ ತ್ರಿವಿಧಿ ಕೆ ೪೧/೯, ಕ್ರ.ಸಂ. ೪೧೯

ಶೀಲವಂತನ ತ್ರಿವಿಧಿ: ಚೆನ್ನಮಲ್ಲ ಕೆ ೧೦/೩, ಕ್ರ.ಸಂ. ೮೨

ಶುಭಶಕುನಗಳು ಕೆ ೨೪/೫, ಕ್ರ.ಸಂ. ೧೫೦

ಶ್ರೀರುದ್ರ (ಸಂ) ಕೆ ೨೦/೧, ಕ್ರ.ಸಂ. ೧೨೯

ಶ್ರೀರುದ್ರ (ಸಂ) ಕೆ ೨೭/೧೦, ಕ್ರ.ಸಂ. ೧೯೮

ಶ್ರೀರುದ್ರ (ಸಂ) ಕೆ ೩೩/೧೭, ಕ್ರ.ಸಂ. ೨೭೬

ಶ್ರೀರುದ್ರಯಜುರ್ವೇದೋಪನಿಷತ್ (ಸಂ) ಕೆ ೩೫/೩೬, ಕ್ರ.ಸಂ. ೩೧೬

ಶ್ರೀಸೂಕ್ತಂ (ಸಂ) ಕೆ ೩೫/೧೫, ಕ್ರ.ಸಂ. ೨೯೫

ಶ್ರುತಿರಹಸ್ಯೋಪನಿಷತ್ (ಸಂ) ಕೆ ೩೫/೧೩, ಕ್ರ.ಸಂ. ೨೯೩

ಷಟ್ಸ್ಥಲಗದ್ಯ ಕೆ ೨೫/೧೩, ಕ್ರ.ಸಂ. ೧೭೯

ಷಟ್ಸ್ಥಲಗದ್ಯ ಕೆ ೪೧/೧೮, ಕ್ರ.ಸಂ. ೪೨೮

ಷಟ್ಸ್ಥಲತಿಲಕ ಕೆ ೪/೧೧, ಕ್ರ.ಸಂ. ೬೮

ಷಟ್ಸ್ಥಲತಿಲಕದ ನಾಂದ್ಯ ಕೆ ೧/೨೨, ಕ್ರ.ಸಂ. ೨೨

ಷಟ್ಸ್ಥಲತಿಲಕದ ನಾಂದ್ಯ ಕೆ ೪೦/೧೯, ಕ್ರ.ಸಂ. ೪೦೯

ಷಟ್ಸ್ಥಲತಿಲಕದ ನಾಂದ್ಯಪದ ಕೆ ೨೯/೧೭, ಕ್ರ.ಸಂ. ೨೨೯

ಷಟ್ಸ್ಥಲದ ಗದ್ಯ: ಸೋಮನಾಥ ಕೆ ೧೦/೧೧, ಕ್ರ.ಸಂ. ೯೦

ಷಟ್ಸ್ಥಲದ ಜ್ಞಾನಸಾರ ಕೆ ೧/೨೫, ಕ್ರ.ಸಂ. ೨೫

ಷಟ್ಸ್ಥಲದ ಜ್ಞಾನಸಾರ ಕೆ ೨೯/೨೫, ಕ್ರ.ಸಂ. ೨೩೭

ಷಟ್ಸ್ಥಲಾನುಗ್ರಹದೀಕ್ಷಾವಿಧಿಃ (ಸಂ) ಕೆ ೩೫/೪೭, ಕ್ರ.ಸಂ. ೩೨೭

ಷಡಕ್ಷರಿಯ ಕಂದ ಕೆ ೪೧/೧೨, ಕ್ರ.ಸಂ. ೪೨೨

ಷಡಕ್ಷರೋದ್ಧರಣೆ ಕೆ ೨೨, ಕ್ರ.ಸಂ. ೧೪೪

ಷಡಾಕ್ಷರಿಯ ರಗಳೆ ಕೆ ೪೧/೨, ಕ್ರ.ಸಂ. ೪೧೨

ಷಡ್ವಕ್ತ್ರ (ಸಂ) ಕೆ ೨೯/೧೦, ಕ್ರ.ಸಂ. ೨೨೨

ಷಡ್ವಕ್ತ್ರ ಕೆ ೧/೨೭, ಕ್ರ.ಸಂ. ೨೭

ಷಡ್ವಕ್ತ್ರ ಕೆ ೩೬/೧೯, ಕ್ರ.ಸಂ. ೩೫೬

ಷಡ್ವಕ್ತ್ರದ ಟೀಕು ಕೆ ೩೩/೩, ಕ್ರ.ಸಂ. ೨೬೨

ಸಂಸ್ಕೃತಸ್ತೋತ್ರವೊಂದರ ಟೀಕು ಕೆ ೩೦/೧, ಕ್ರ.ಸಂ. ೨೪೦

ಸದ್ಗುರುರಹಸ್ಯ ಕೆ ೩/೨, ಕ್ರ.ಸಂ. ೫೦

ಸದ್ಗುರುರಹಸ್ಯ ಕೆ ೪/೫, ಕ್ರ.ಸಂ. ೬೨

ಸಮಾಧಿಕ್ರಿಯದ ಉದ್ಧರಣೆ ಕೆ ೨೪/೨೦, ಕ್ರ.ಸಂ. ೧೬೫

ಸಮಾಧಿಕ್ರಿಯದ ಉದ್ಧರಣೆ ಕೆ ೪೭/೪, ಕ್ರ.ಸಂ. ೪೬೭

ಸರ್ವತೋಭದ್ರಾತ್ಮಕಮಂಡಲ (ಸಂ) ಕೆ ೩೦/೧೭, ಕ್ರ.ಸಂ. ೨೫೬

ಸರ್ವಸಾರೋಪನಿಷತ್ (ಸಂ) ಕೆ ೩೫/೪, ಕ್ರ.ಸಂ. ೨೮೪

ಸಹಜಮನುಷ್ಯರ ಅವಲಕ್ಷಣಗಳು ಕೆ ೨೪/೮, ಕ್ರ.ಸಂ. ೧೫೩

ಸಾನಂದಗಣೇಶ್ವರಚರಿತ: ಭದ್ರಕವಿಲಿಂಗಧೀರ (ತೆ) ಕೆ ೧೮/೨, ಕ್ರ.ಸಂ. ೧೧೭

ಸಾಮುದ್ರಿಕಾಲಕ್ಷಣ ಕೆ ೨೪/೨, ಕ್ರ.ಸಂ. ೧೪೭

ಸಾಮುದ್ರಿಕೆಯ ಶಾಸ್ತ್ರ ಕೆ ೨೪/೧, ಕ್ರ.ಸಂ. ೧೪೬

ಸಿದ್ದೇಶ್ವರನಪುರಾಣದ ನಾಂದ್ಯ ಕೆ ೪೦/೫, ಕ್ರ.ಸಂ. ೩೯೫

ಸಿದ್ಧರಾಮೇಶ್ವರನ ಮಂತ್ರಗೋಪ್ಯ ಕೆ ೨೭/೬, ಕ್ರ.ಸಂ. ೧೯೪
ಸಿದ್ಧಾಂತಶಿಖೋಪನಿಷತ್ (ಸಂ) ಕೆ ೩೫/೧೦, ಕ್ರ.ಸಂ. ೨೯೦
ಸಿದ್ಧಾಂತಶಿರೋಮಣಿ (ಸಂ) ಕೆ ೩೫/೨೧, ಕ್ರ.ಸಂ. ೩೦೧
ಸಿದ್ಧಿವಿನಾಯಕಪೂಜಾ, ಕಥಾವಿಧಾನಂ (ಸಂ) ಕೆ ೩೫/೩೧, ಕ್ರ.ಸಂ. ೩೧೧
ಸಿದ್ಧೇಶ್ವರನ ಪುರಾಣದ ನಾಂದ್ಯ ಕೆ ೨೯/೧೨, ಕ್ರ.ಸಂ. ೨೨೪
ಸಿದ್ಧೇಶ್ವರನ ಪುರಾಣದ ನಾಂದ್ಯ ಕೆ ೩೬/೧೬, ಕ್ರ.ಸಂ. ೩೫೩
ಸಿದ್ಧೇಶ್ವರನ ಪುರಾಣದ ನಾಂದ್ಯ ಕೆ ೩೬/೨೪, ಕ್ರ.ಸಂ. ೩೬೧
ಸಿದ್ಧೇಶ್ವರನ ಪುರಾಣದ ನಾಂದ್ಯ ಕೆ ೩೬/೭, ಕ್ರ.ಸಂ. ೩೪೪
ಸಿದ್ಧೇಶ್ವರನ ಪುರಾಣದ ನಾಂದ್ಯ ಕೆ ೪೦/೨, ಕ್ರ.ಸಂ. ೩೯೨
ಸಿದ್ಧೇಶ್ವರಪುರಾಣದ ನಾಂದ್ಯ ಕೆ ೧/೧೧, ಕ್ರ.ಸಂ. ೧೧
ಸಿದ್ಧೇಶ್ವರಪುರಾಣದ ನಾಂದ್ಯ ಕೆ ೨೯/೨, ಕ್ರ.ಸಂ. ೨೧೪
ಸಿದ್ಧೇಶ್ವರಪುರಾಣದ ಭಾಮಿನಿಪದ ಕೆ ೧/೧೨, ಕ್ರ.ಸಂ. ೧೨
ಸುಂದರೇಶ್ವರ ನಾಂದ್ಯ ಕೆ ೩೬/೨೧, ಕ್ರ.ಸಂ. ೩೫೮
ಸೃಷ್ಟಿನಿರ್ದೇಶವಾಚ್ಯ ಕೆ ೨/೧೧, ಕ್ರ.ಸಂ. ೪೪
ಸೋಮನಾಥಕಾವ್ಯದ ನಾಂದ್ಯ ಕೆ ೩೬/೧೦, ಕ್ರ.ಸಂ. ೩೪೭
ಸೋಮನಾಥನ ಕಾವ್ಯದ ನಾಂದ್ಯ ಕೆ ೧/೧೬, ಕ್ರ.ಸಂ. ೧೬
ಸೋಮನಾಥನ ಕಾವ್ಯದ ನಾಂದ್ಯ ಕೆ ೨೯/೧೫, ಕ್ರ.ಸಂ. ೨೨೭
ಸೋಮನಾಥಭಾಷ್ಯ (ಸಂ. ಕ.) ಕೆ ೩೫/೧, ಕ್ರ.ಸಂ. ೨೮೧
ಸೋಮವಾರವ್ರತಪೂಜಾವಿಧಿಃ (ಸಂ) ಕೆ ೩೫/೩೩, ಕ್ರ.ಸಂ. ೩೧೩
ಸೋಮೇಶ್ವರನ ಪುರಾಣದ ನಾಂದ್ಯ ಕೆ ೨೯/೨೧, ಕ್ರ.ಸಂ. ೨೩೩
ಸೌಂದರಪುರಾಣದ ನಾಂದ್ಯ ಕೆ ೧/೧೫, ಕ್ರ.ಸಂ. ೧೫
ಸೌಂದರಪುರಾಣದ ನಾಂದ್ಯ ಕೆ ೨೯/೧೮, ಕ್ರ.ಸಂ. ೨೩೦
ಸೌಂದರಪುರಾಣದ ನಾಂದ್ಯ ಕೆ ೩೬/೮, ಕ್ರ.ಸಂ. ೩೪೫
ಸೌಂದರಪುರಾಣದ ನಾಂದ್ಯದ ಪದ ಕೆ ೪೦/೭, ಕ್ರ.ಸಂ. ೩೯೭
ಸ್ವತಂತ್ರಸಿದ್ಧಲಿಂಗೇಶ್ವರವಚನಗಳು ಕೆ ೧/೨, ಕ್ರ.ಸಂ. ೨

ಸ್ವಪ್ನದ ಫಲ ಕೆ ೨೪/೪, ಕ್ರ.ಸಂ. ೧೪೯

ಸ್ವರಚಿಂತಾಮಣಿ ಕೆ ೨೪/೧೯, ಕ್ರ.ಸಂ. ೧೬೪

ಸ್ವರಚಿಂತಾಮಣಿ ಕೆ ೨೪/೩, ಕ್ರ.ಸಂ. ೧೪೮

ಸ್ವರಯೇಕೋತ್ತರಶತಸ್ಥಲ ಕೆ ೧೦/೧, ಕ್ರ.ಸಂ. ೮೦

ಸ್ವರೂಪಾಮೃತ ಕೆ ೩/೪, ಕ್ರ.ಸಂ. ೫೨

ಸ್ವರೂಪಾಮೃತ ಕೆ ೪/೭, ಕ್ರ.ಸಂ. ೬೪

ಹತ್ತೊಂಬತ್ತು ಪದಗಳ ಟೀಕು ಕೆ ೩೩/೫, ಕ್ರ.ಸಂ. ೨೬೪

ಹನುಮಾಣ್ಯನು ಪರಮೇಶ್ವರನ ಸ್ತೋತ್ರವ ಮಾಡಿದ ಮಹಾನಾಟಕದ ವೃತ್ತ ಕೆ ೨೫/೫, ಕ್ರ.ಸಂ. ೧೭೧

ಹಮ್ಮೀರಕಾವ್ಯ ಕೆ ೧೫/೪, ಕ್ರ.ಸಂ. ೧೧೨

ಹಮ್ಮೀರವಿಕ್ರಮಾತುಳ ಪ್ರಬಂಧ ಕೆ ೪೨/೨, ಕ್ರ.ಸಂ. ೪೪೧

ಹರಿಹರನ ಗಿರಿಜಾಕಲ್ಯಾಣದ ಪದ್ಯಗಳ ಟೀಕು ಕೆ ೩೩/೪, ಕ್ರ.ಸಂ. ೨೬೩

ಹರಿಹರನ ಗಿರಿಜಾಕಲ್ಯಾಣದ ಪದ್ಯಗಳ ಟೀಕು ಕೆ ೩೩/೯, ಕ್ರ.ಸಂ. ೨೬೮

ಹಲಾಯುಧಸ್ತೋತ್ರ (ಸಂ) ಕೆ ೪೧/೨೯, ಕ್ರ.ಸಂ. ೪೩೯

ಹಲಾಯುಧಸ್ತೋತ್ರ ಕೆ ೩೦/೫, ಕ್ರ.ಸಂ. ೨೪೪

ಹಲಾಯುಧಸ್ತೋತ್ರದ ಟೀಕು ಕೆ ೨೬/೬, ಕ್ರ.ಸಂ. ೧೮೭

ಹಾಲಾಸ್ಯಪುರಾಣದ ನಾಂದ್ಯ ಕೆ ೩೬/೨೦, ಕ್ರ.ಸಂ. ೩೫೭

****

೧

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೧

ನಾಮಲಿಂಗಾನುಶಾಸನ

ಪತ್ರದ ಅಳತೆ: ೯.೫'' X ೨''; ಪ್ರತಿ ಪುಟದಲ್ಲಿ ಸುಮಾರು ೧೪ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೯-೫೦ ಅಕ್ಷರಗಳು.

ಕೃತಿಕಾರ: ಅಮರಸಿಂಹ

ಸ್ವರೂಪ: ಶ್ಲೋಕ

ವಸ್ತು: ಸಂಸ್ಕೃತ ಶಬ್ದಕೋಶ

ಆದಿ:

ಶ್ರೀಗುರುಬಸವಲಿಂಗಾಯ ನಮಃ। ಅಮರಸಿಂಹದ ಗ್ರಂಥವ ಬರವುದಕ್ಕೆ ಸುಬಮಸ್ತು।

ಯಸ್ಯಜ್ಞಾನದಯಾಸಿಂಧೋರಗಾಧಸ್ಯಾನಘಾಗುಣಾಃ ॥
ಸೇವ್ಯತಾಮಕ್ಷಯೋಧೀರಾ । ಸ್ಸಶ್ರಿಯ್ಯೈಚಾಮೃತಾಯಚ ॥೧॥

ಸಮಾಹೃತ್ಯಾನ್ಯತಂತ್ರಾಣಿ ಸಂಕ್ಷಿಪ್ತೈಃ ಪ್ರತಿಸಂಸ್ಕೃತೈಃ ॥
ಸಂಪೂರ್ಣಮುಚ್ಯತೇವರ್ಗೈರ್ನಾಮಲಿಂಗಾನುಶಾಸನಂ ॥೨॥

ಅಂತ್ಯ:

ಪುರಲಿಂಗವಿರೊದೆಶೆಷಂತುಜ್ಞೇಯಂ ಶಿಷ್ಟಪ್ರಯೋಗತಃ॥ ಇತಿ ತ್ರಿಲಿಂಗಾದಿ ಸಂಗ್ರಹವರ್ಗಃ ಇತ್ಯಮರಸಿಂಹಕೃತೌ ನಾಮಲಿಂಗಾನುಶಾಸನೇ ತೃತೀಯ ಕಾಂಡ ಸಮಾಪ್ತಃ॥ ಮಂಗಳಮಹಾಶ್ರೀಶ್ರೀಶ್ರೀ॥ ಅಂತು ಕಾಂಡಕ್ಕಂ ಸರ್ಗಕ್ಕಂ ಗ್ರಂಥಕ್ಕಂ ಅಮರಸಿಂಹ ತೃತೀಯಕಾಂಡ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ೧ರಿಂದ ೪೪ನೆಯ ಪತ್ರದವರೆಗೆ ತ್ರಿಕಾಂಡ ಅಮರಕೋಶ ಮೂಲ ಮಾತ್ರ ಇದೆ. [ಸಂಸ್ಕೃತ].

****

೨

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೨

ಸ್ವತಂತ್ರ ಸಿದ್ಧಲಿಂಗೇಶ್ವರವಚನಗಳು

ಪತ್ರದ ಅಳತೆ: ೯.೫'' X ೨''; ಪ್ರತಿ ಪುಟಕ್ಕೆ ೯ ಸಾಲುಗಳು; ಸಾಲಿನಲ್ಲಿ ಸುಮಾರು ೪೫-೪೭ ಅಕ್ಷರಗಳು. ಒಟ್ಟು ೭ ಪತ್ರಗಳು [೧-೭]

ಕೃತಿಕಾರ: ?

ಸ್ವರೂಪ: ವಚನಗಳು

ವಸ್ತು: ಅಧ್ಯಾತ್ಮ

ಆದಿ:

ಶ್ರೀ ಗುರು ಬಸವಲಿಂಗಾಯನಮಃ॥ ವಚನ॥ ಅಣುವಿಂಗಣುವಾಗಿ। ಮಹತ್ತಿಂಗೆ ಮಹತ್ತಾಗಿ। ಪರಿಪೂರ್ನವಾದ ಪರವೆಂಬ ಪ್ರಸಾದಮೂರ್ತಿಯು ಯಿರವಹೇಳಿಹೆ ಕೇಳಿರಂಣಾ। ಮುಂದೆ ತಾರಾಬೀಜ । ಹಿಂದೆ ಸುನಾದ

ಬೀಜ। ಬಲದಲ್ಲಿ ಆತ್ಮಬೀಜ। ಯಡದಲ್ಲಿ ವಿದ್ಯಬೀಜ। ಎಂಟರಲ್ಲಿ ಅಷ್ಟೈಶ್ವರ್ಯ ಅಷ್ಟಶಕ್ತಿಬೀಜ। ಹದಿನಾಱಱಲ್ಲಿ ಕಲೆ ಕಲಾಪತಿಗಳು। ಮೂವತ್ತೆರಡಱಲ್ಲಿ ವಿಕಲೆ ವಿಕಲಾಪತಿಗಳು। ಯಿಂತಿ ತ್ರಿಮಂಡಲದ ಮಧ್ಯ ಸೂಕ್ಷ್ಮಕರ್ನಿಕೆಎಲ್ಲಿ ಪರಿಶುದ್ಧ ಪ್ರಸಾದವನು ಮಹಾನುಭಾವರ ಸಂಗದಲ್ಲಿರ್ದ್ದರಿದೆನು ಕಾಣಾ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ॥

ಅಂತ್ಯ:

ತಂತಿವಿಡಿದು ಹುಟ್ಟಿದ ಶಬ್ದವನರ್‍ರಿವುದು ಗುರುಲಿಂಗದಲ್ಲಿ। ಕುಡುವಿಡಿದು ಹುಟ್ಟಿದ ಶಬ್ದವನರಿವುದು ಶಿವಲಿಂಗದಲ್ಲಿ। ಕೊಳಲು ವಾಸುಗಿ ನಾಗಸರಶಂಖದೊಳಗಾಗಿ ಹುಟ್ಟಿದ ಶಬ್ದವನರಿವುದುಗಂ ಜಂಗಮಲಿಂಗದಲ್ಲಿ। ವಚನಗೀತದೊಳಗಾಗಿ ಹುಟ್ಟಿದ ಶಬ್ದವನರಿವುದು ಪ್ರದ ಲಿಂಗದಲ್ಲಿ। ಇವೆಲ್ಲರಲ್ಲಿ ಷಶಬ್ದವನಱುವುದು ಮಹಾಲಿಂಗದಲ್ಲಿ ॥ ಪೀತವರ್ನದ ರೂಪನರಿವುದು ಆಚಾರಲಿಂಗದಲ್ಲಿ। ಶ್ವೇತವರ್ನದ ರೂಪನರಿವುದು ಗುರುಲಿಂಗದಲ್ಲಿ । ಕಪೋತವರ್ನದ ರೂಪನರಿವುದು ಶಿವಲಿಂಗದಲ್ಲಿ। ಮಾಂಜಿಷ್ಟ ವರ್ನದ ರೂಪನರಿವುದು ಜಂಗಮಲಿಂಗದಲ್ಲಿ। ಹರಿತವರ್ನದ ರೂಪನರಿವುದು ಪ್ರಸಾದಲಿಂಗದಲ್ಲಿ। ಇವೆಲ್ಲರಲ್ಲಿಹ ರೂಪನರಿವುದು ಪ್ರಸಾದಮಹಾಲಿಂಗದಲ್ಲಿ। ಕಟಿಣವಾದ ಷ್ಪರ್ಶನವನವನರಿವುದು ಆಚಾರಲಿಂಗದಲ್ಲಿ। ಸೈತ್ಯವಾದಷ್ಪರ್ಶನಱುವುದು ಗುರುಲಿಂಗದಲ್ಲಿದ। ಓಷ್ಣವಾದ ಷ್ಪರ್ಶವನರಿವುದು ಶಿವಲಿಂಗದಲ್ಲಿ। ಮೃದುವಾದ ಷ್ಪರ್ಶವನರಿವುದು ಜಂಗಮಲಿಂಗದಲ್ಲಿ। ಮಿಶ್ರವಾದ ಷ್ಪರ್ಶವನರಿವುದು ಪ್ರಸಾದಲಿಂಗದಲ್ಲಿ। ಇವೆಲ್ಲರಲ್ಲಿ ಷ್ಪರ್ಶವನರಿವುದು ಮಹಾಲಿಂಗದಲ್ಲಿ।

ವಿಶೇಷವಿಷಯ: ೧ರಿಂದ ೬ನೆಯ ಪತ್ರದವರೆಗೆ ೨೭ನೆಯ ವಚನದವರೆಗೆ ಮಾತ್ರ ಇದೆ; ಅಪೂರ್ಣವಾಗಿ ನಿಂತುಹೋಗಿದೆ.

****

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೩

ಕರ್ನಾಟಕಧಾತು

ಪತ್ರದ ಅಳತೆ: ೯.೫" X ೨"; ಪ್ರತಿ ಮುಖದಲ್ಲಿ ಸುಮಾರು ೧೩ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೭ ಅಕ್ಷರಗಳು; ಒಟ್ಟು ೮ ಪತ್ರಗಳಿವೆ [೧೬ ಮುಖಗಳು]

ಕೃತಿಕಾರ: ಕೇಶವ [ಕೇಶಿರಾಜ]

ಸ್ವರೂಪ: ಟೀಕಾ ಗದ್ಯ; ಕನ್ನಡ ಸಂಸ್ಕೃತ ಮಿಶ್ರ; ಸಂಸ್ಕೃತಪ್ರಧಾನ.

ವಸ್ತು: ಕನ್ನಡಧಾತುಗಳು ಮತ್ತು ಅವುಗಳಿಗೆ ಸಂಸ್ಕೃತದಲ್ಲಿ ಅರ್ಥ.

ಆದಿ:

ಶ್ರೀಗುರು ಬಸವಲಿಂಗಾಯನಮಃ॥ ಕರ್ನಾಟಕಧಾತು॥

ವೇದಸಮನಾಗಿ ಭೀಮನಿ
ನಾದುದು ಸಂಸ್ಕೃತಧಾತುವಾತೆಱದಿಂದಂ।
ಯಾದವಕಟಕಾಚಾರ್ಯ್ಯನಿ
ನಾದುದು ಕರ್ಣಾಟಕಧಾತು ಕವಿಕೇಶವನಿಂ॥

ದೊರೆವಡೆದ ಮಹಾಪ್ರಾಣಾ
ಕ್ಷರಾಂತದೊಂಙಞಶಷಾಂತಹಾಂತಕ್ಷಾಂತೋ ।
ದ್ಧರಣದಿನುದ್ಭವಿಸಿವು ಬ
ಲ್ಲರ ಮತದಿಂ ಧಾತು ತಿಳಿವುದಿವ ನಿಕ್ರಮದಿಂ॥

ಕ್ರಿಯಾರ್ಥೋ ಧಾತುಃ॥ ಈ ಪ್ರದಾನೇ। ಒಸೆಹೇಕಾರಕ್ಷಣೆ। ಕಿರಕ್ತಪಕ್ವೆ। ಕೇಶಯನೇ। ನಿಧುವನೇ ಚ। ಮಿಸುಕು ಸ್ಪಂದನೆ। ಮುಸುಕು ಆವರಣೇ। ತದ್ಭಾವೇ ಚ। ಕುಸುಕು ಘಾತನೇ।

ಅಂತ್ಯ:

ಮನಂಗೊಳ್ ಚಿತ್ತವಿಮೋಹನೇ। ಅಸುಂಗೊಳ್ ಪ್ರಾಣಾಪಹರಣೇ। ಬಳಿಕೊಳ್ ಕ್ರಮಸಂಧಾನೇ। ನೆರೆಗೊಳ್ ಸರ್ವಸ್ವಹರಣೇ।

ವರ್ಮ್ಮ ಭೇದೇ ಚ। ಮಾರ್ಕೊರ್ಕ್ಕಳ್ ಸಂಮುಖೇ। ಒಲವರಂಗೊಳ್
ಪಕ್ಷಿಸ್ವೀಕಾರೇ ॥೯೪೬॥

ಗದ್ಯ॥ ಯಿದು ಸಮಸ್ತಶಾಬ್ದಿಕಜನಮನೋಜನತ ಶಬ್ದಸಂದೇಹಶಲ್ಯ ಚಾರುಚುಂಬಕಾರಮಾನನೂನ ಕರ್ನ್ನಾಟಕಲಕ್ಷಣಶಿಕ್ಷಾಚಾರ್ಯ ಸುಕವಿ ಕೇಶಿರಾಜ ವಿರಚಿತಮಪ್ಪ ಶಬ್ದಮಣಿದರ್ಪ್ಪಣದೊಳ್ ಧಾತುನಿರ್ಣಯಂ ಷಷ್ಟಮ ಪ್ರಕರಣಂ॥ ಕಂನಡದಾತು ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಕನ್ನಡಧಾತುಗಳಿಗೆ ಸಂಸ್ಕೃತದಲ್ಲಿ ಅರ್ಥ ನೀಡಲಾಗಿದೆ. ಕೇಶಿರಾಜನ ಶಬ್ದಮಣಿದರ್ಪಣದ ಒಂದು ಪ್ರಕರಣ; ಸ್ವತಂತ್ರ ಕೃತಿಯಲ್ಲ.

****

೪

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೪

ನೀಲಮ್ಮನವರ ಸ್ತೋತ್ರದರ್ಥ

ಪತ್ರದ ಅಳತೆ: ೯.೫" X ೨"; ಪ್ರತಿ ಮುಖದಲ್ಲಿ ಸುಮಾರು ೧೧ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೯ನೆಯ ಪುಟದಿಂದ ೧೫ನೆಯ ಪುಟದ ವರೆಗೆ ಒಟ್ಟು ೭ ಪತ್ರಗಳಿವೆ [೧೩ ಮುಖಗಳು]

ಕೃತಿಕಾರ:?

ಸ್ವರೂಪ: ಕನ್ನಡ ಟೀಕಾಗದ್ಯ

ವಸ್ತು: ನೀಲಲೋಚನೆಯ ಸ್ತೋತ್ರಕ್ಕೆ ಬರೆದಿರುವ ಟೀಕೆ

ಆದಿ:

ಶ್ರೀಗುರುವೇ ಗತಿ। ನೀಲಂಮನವರ ಸ್ತೋತ್ರದರ್ಥ॥ ವಿತತ ಪ್ರಸಿದ್ಧವಾದ। ಗುರು। ದೀಕ್ಷಾಗುರು। ಶೀಕ್ಷಾಗುರು। ಜ್ಞಾನಗುರುಸ್ಥಲವು। ಲಿಂಗ। ಕ್ರಿಯಾಲಿಂಗ। ಭಾವಲಿಂಗ। ಜ್ಞಾನಲಿಂಗಸ್ಥಲವು। ಚರ। ಸ್ವಯ। ಚರ। ಪರಸ್ಥಲವು। ಶಿಷ್ಯ। ಶಿಷ್ಯ। ಶಿಷ್ಯೃಷ। ಸೇವ್ಯಸ್ಥಲವು॥ ಪ್ರತ್ತಿ। ಕಾಯಾನುಗ್ರಹ। ಯಿಂದ್ರಿಯಾನುಗ್ರಹ।

ಪ್ರಾಣಾನುಗ್ರಹಸ್ಥಲವು। ವ್ಯವಸ್ಥಿತ। ಕಾರ್ಯಾರ್ಪಿತ। ಕರಣಾರ್ಪಿತ। ಭಾವಾರ್ಪಿತ ಸ್ಥಲವು। ಲಿಂಗಜಲ। ಭಾಂಡ। ಭಾಜನ। ಅಂಗಲೇಪನಸ್ಥಲವು॥ ಸುಪ್ರಸಾದ। ಕೊಂಡದು ಪ್ರಸಾದ। ನಿಂದುದೋಗರ। ಚರಾಚರನಾಸ್ತಿಸ್ಥಲವು॥

ಅಂತ್ಯ:

ಶ್ರೀಗುರು ಕರುಣಿಸಿ ಕೊಟ್ಟ ಲಿಂಗವಲ್ಲದನ್ಯವನಱಿಯದಿಹುದೆ ಲಿಂಗಾಚಾರ। ಸಜ್ಜನಕಾಯಕದಿ ದ್ರವ್ಯವ ತಂದು। ಗುರುಲಿಂಗ ಜಂಗಮಕ್ಕೆ ಮಾಡಿ ನೀಡಿ ಸತ್ಯನಾಗಿಹುದೆ ಸದಾಚಾರ। ಶಿವಶರಣರೆ ಹಿರಿಯರಾಗಿ ತಾನೆ ಕಿಱಿಯರಾಗಿಪ್ಪುದೆ ಭೃತ್ಯಾಚಾರ। ಗುರುಲಿಂಗ ಜಂಗಮ ಪಾದೋದಕ ಪ್ರಸಾದವೆಂಬೈದರ ಸ್ವರೂಪವ ತಂನೊಳಗೆ ಕೊಂಡಿಪ್ಪುದು ಪಂಚಾಚಾರವೆನಿಸಿಕೊಂಬುದು॥

ವಿಶೇಷವಿಷಯ: ಅಪೂರ್ಣವಾಗಿ ನಿಂತಿರುವಂತಿದೆ.

****

೫

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೫

ನೀಲಲೋಚನೆಯ ಸ್ತವಿತ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೧ನೆಯ ಪುಟದಲ್ಲಿದೆ.

ಕೃತಿಕಾರ: ?

ಸ್ವರೂಪ: ವಾರ್ಧಕಷಟ್ಪದಿ; ೫ ನುಡಿಗಳು.

ವಸ್ತು: ನೀಲಾಂಬಿಕೆಯ ಸ್ತುತಿ; ೫ ನುಡಿಗಳಿಂದ ಕೂಡಿದೆ.

ಆದಿ:

ಶ್ರೀಗುರು ಬಸವಲಿಂಗಾಯನಮಃ॥ ನೀಲಲೋಚನೆಯ ಸ್ತವಿತ್ಯವ ಬರೆವುದಕ್ಕೆ ಸುಭಮಸ್ತು ನಿರ್ವಿಘ್ನಮಸ್ತು॥

ಶರಣು ಶರಣಹಿತಮತಹತಕಾಲಜಿತ ನಿಮಗೆ।
ಶರಣು ಶರಣಾವಾಗನಿಂಮಮೃದುಪದಂಗಳಿಗೆ।
ಶರಣೆಂದು ದುರಿತವನು ಕಳೆವೆನೆಂನಯ ಜಗದ್ಗುರು ಬಸವರಾಜನರಸಿ॥

ಪದ॥

ಪತ್ರಜಾತನಶಿರಃಪತ್ರಕರಪಾತ್ರನಂ।
ಪತ್ರಗಮನನನಯನಪತ್ರವಿಕಸಿತ ಭಾನು।
ಪತ್ರವೈರಿಯುಪತ್ರಮಿತ್ರಾಗ್ನಿಯಾವಾಗನೇತ್ರನಾಗಿರುತಿಪ್ಪನನಾ॥
ಪತ್ರಾತಪತ್ರಚಾಲೋಕುಲಿಶಕುದರಾತ।
ಪತ್ರನಯನೊಪಾದಪತ್ರನಂ ಸದ್ಭಕ್ತಿ।
ಗೋತ್ರನಂ ಭವಲತಾಲವಿತ್ರನಂ ಸದ್ಧರ್ಮಗಾತ್ರಬಸವೇಶನರಸಿ॥೧॥

ಅಂತ್ಯ:
ಯೀ ಪದಂಗಳನುದಯಮದ್ಯಾನಸಂಜೆಯೊಳು।
ವ್ಯಾಪಕತ್ವದಿ ಬರದೊದಡೆಭಕ್ತಿಯಿಂ।
ತಾಪದುಸ್ಸಂಗ ದುಸ್ಸ್ವಪನಂಗಳಳಿವವು ಕಾಪಾಲಿ ಬಸವೇಶನಾ॥
ಯೋಪಳೆನಿಸುವ ನೀಲಲೋಚನೆಯ ಸ್ತೋತ್ರಮಂ।
ಪಾಪಕೋಪವಿರಹಿತ ದುಸ್ಸಂಗದೂರವಹ ।
ಚಾಪಲರು ಬಜಿಸಿ ಭಕ್ತಿಯ ರಸವು ತುಂಬಿದ್ದವಕೂಪಳೆನಿಸುವ ಶಾಂತಿಯಾ॥೫॥

ನೀಲಲೋಚನೆಯ ಸ್ತೋತ್ರ ಸಮಾಪ್ತ॥ ಮಂಗಳಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೬

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೬

ನೀಲಾಂಬಿಕಾಲಲಿತಸ್ತೋತ್ರ

ಪತ್ರದ ಅಳತೆ: ೯.೫" X ೨"; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೧ನೆಯ ಪುಟದ ಹಿಂಭಾಗದಿಂದ ೩ನೆಯ ಪುಟದ ಹಿಂಭಾಗದವರೆಗಿದೆ.

ಕೃತಿಕಾರ: ?

ಸ್ವರೂಪ: ಭಾಮಿನಿಷಟ್ಪದಿ; ೨೫ ನುಡಿಗಳು.

ವಸ್ತು: ನೀಲಾಂಬಿಕೆಯ ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ ನೀಲಾಂಬಿಕಾಲಲಿತಸ್ತೋತ್ರ। ಭಾಮಿನಿ ಷಟ್ಪದಿ।

ಶ್ರೀಮದತುಳಾನಂದೆ ಶುಭಕರೆ।
ವಾಮಲೋಚನೆವರದವಂದಿತೆ।
ರಾಮಕುಂತಳೆರನಿಕಮೆದುರೆರಾಜಮಂತ್ರಾಂಗಿ॥
ಸೋಮಮುಖಿಸನ್ಮಾನೆಸುಗುಣ।
ಸ್ತೋಮಮಂದಿರೆ ಸಾರಸೌಂದರೆ।
ಸೋಮಗಂಧಿನಿ ನೀಲಲೋಚನೆ ಪಾಲಿಸೆಲೆ ತಾಯೆ॥೧॥

ಅಂತ್ಯ:

ಉರಿಯೊಳಗೆ ಕರ್ಪ್ಪೂರಂ ಬೆರದಂತೆ ತಂನಮಳ
ತರ ಕಂಜಪುರವಾಸ ವರದಿಟ್ಟಲಿಂಗದೊ
ಳ್ಬೆರೆದು ಬೇರಿಲ್ಲದಿಹನೀಲಾಂಬಿಕಾಲಲಿತಪಂಚವಿಂಶತಿನುತಿಗಳಂ ।
ಬರದೋದಿಕೇಳಲರಿವರ್ಗ್ಗವೈಕಾರಮದ।
ಕರಣಂಗಳಳಿದುವರಭಕ್ತಿಷಟ್ಕಲಾಷ್ಟ।
ಪರತರಾವರಣಪಂಚಾಚಾರವಳವಟ್ಟು ನಿಜಮುಕ್ತರಹರು ನಿರುತಂ॥೨೫॥

ನೀಲಾಂಬಿಕಾಲಲಿತಸ್ತೋತ್ರಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೭

ಇಮ್ಮಡಿಮುರಿಗೆಸ್ವಾಮಿಗಳು ನಿರೂಪಿಸಿದ ಶಿವಲಿಂಗನಾಂಧ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೪ನೆಯ ಪತ್ರದಿಂದ ಪ್ರಾರಂಭವಾಗಿ ೬ನೆಯ ಪತ್ರದ ವರೆಗಿದೆ.

ಕೃತಿಕಾರ: ಇಮ್ಮಡಿಮುರಿಗೆಸ್ವಾಮಿಗಳು

ಸ್ವರೂಪ: ಭಾಮಿನಿಮತ್ತು ವಾರ್ಧಕ ಷಟ್ಪದಿ; ೨೫ ನುಡಿಗಳು

ವಸ್ತು: ಸ್ತುತಿ

ಆದಿ:

ಇಮ್ಮಡಿಮುರಿಗೆಸ್ವಾಮಿಗಳು ನಿರೂಪಿಸಿದ ಶಿವಲಿಂಗನಾಂಧ್ಯ॥ ಭಾವಿನಿಪದ॥

ಶ್ರೀಮದಚಕೂಮಾರಿಕಾಮುಖ।
ತಾಮರಸಮಕರಂದಮಧುಕರ।
ಸೋಮಶೇಖರಶತಮಖಾಚ್ಯುತಕುಜಸುತವರದಾ॥
ಭೂಮಿಜಲಶಿಖಿಮಾರುತಾಂಬರ।
ಸೋಮಯಾಜಿದಿನೇಶವಿಧುತನು।
ಸಾಮದಿಂ ಸಲಹೆಮ್ಮನತಿದಯವೆರಸಿಶಿವಲಿಂಗಾ॥೧॥

ಅಂತ್ಯ:

ಸಲೆ ನಿನ್ನ ಪಂಚವಿಂಶತಿನುತಿಯನಿದನಾವ।
ನೊಲಿದೋದಿದಪನವಗೆ ಭವಬಂಧನವದಿಲ್ಲ।
ಸುಲಭದಿಂದರ್ಥವನು ಮಾಡಿದಾತಗೆಯಂತೆಕೇಳನಿಗದೆತೆರನಲ್ಲೈ।
ಚಿಲುಪಾಲು ಸಕ್ಕರೆಯ ಬೆರಕೆಯನು ಸವಿದನಿಗೆ।
ನೆಲೆಯಾದಪುದೆಯಂಬಿಲದ ರುಚಿಯದರದೆ।
ಚಲಿತಾನ್ಯನುತಿನಿಂನನುತಿಯನುತಿಯಿದಕೆ ಬೆಲೆಯಿಲ್ಲ ಶಿವಲಿಂಗೇಶ್ವರಾ॥೨೫॥

ಶಿವಲಿಂಗನಾಂದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಪೂರ್ಣವಾಗಿದೆ. ಬರವಣಿಗೆ ಶುದ್ಧ ಸ್ಪಷ್ಟ

****

೮

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೮

ಮುರಿಗೆಸ್ವಾಮಿಗಳು ನಿರೂಪಿಸಿದ ನಾಂದ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೬ನೆಯ ಪತ್ರದಿಂದ ಪ್ರಾರಂಭವಾಗಿ ೮ನೆಯ ಪತ್ರದ ವರೆಗಿದೆ.

ಕೃತಿಕಾರ: ಮುರಿಗೆಸ್ವಾಮಿಗಳು

ಸ್ವರೂಪ: ಷಟ್ಪದಿ; ೨೪ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಮದಭ್ರಾಳಕಭ್ರಾಜಿತ ಭ್ರರಸಭ್ರ।
ದ್ಧಾಮನಿಧಿ ಧವಳರುಗ್ಧೂಮಕೆತ್ವಕ್ಷಸ।
ದ್ವ್ಯೋಮವೃದ್ಧಿನಭಿತ್ಕಾಮಜಿದ್ದೆಮಾದ್ರಿಧರ್ಮ್ಮಕೃತ್ಕರ್ಮಭೇದಿ॥
ಭ್ರಾಮಕೋದ್ದತ ಪಂಚಮೆಡ್ರಾಭ್ರದೈತ್ಯಾದಿ।
ಭೂಮಿಭಾರಕಬಲಾಖರ್ವ್ವಗರ್ವ್ವಾಪಹ।
ಸ್ವಾಮಿ ಶಾಶ್ವತಮಹತ್ಪ್ರೇಮಿ ಪಾಲಯ ಸದಾಶ್ರೀಶಾಂತವೀರೇಶ್ವರಾ॥೧॥

ಅಂತ್ಯ:

ಅಂಗಲಿಂಗಾನನಕರಂಗಳ।
ಸಂಗಶಕ್ತಿಸುಭಕ್ತಿಮನುಗಳ।
ಮಂಗಳಾರ್ಪಿತ ತತ್ಪ್ರಸಾದಂಗಳನುನೆಜ಼ಿಯಱಿದು॥

ಲಿಂಗಸಂಗಾನಂದಸುಖಿಗಳ।
ತುಂಗಮಾನಸರಂಗಮಂಟಪ।
ರಂಗಿತಾತುಳವಿಜಯರಾಮಾಂಗಾಭಿಗುಣಧಾಮ॥೨೪॥

ನಾಂದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೯

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೯

ಮುರಿಗೆಯಸ್ವಾಮಿಗಳ ಸ್ತೋತ್ರದ ನಾಂದ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ಲನೆಯ ಪತ್ರದಿಂದ ಪ್ರಾರಂಭವಾಗಿ ೧೧ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ; ೨೫ ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರು ಬಸವಲಿಂಗಾಯನಮಃ ॥ ನಾಂದ್ಯ॥ ವಾರ್ಧ್ಧಿಕಪದ॥
ಶ್ರೀಮದಮರೇಂದ್ರವೈಕುಂಠವಿಧಿಕ್ಷೇಮಹಿಮ।
ಭೂಮಿಭೃದ್ವರತನುಜೆಯರ್ಧಾಂಗಯುಮಿಜನ।
ಪ್ರೇಮಧೂಮಧ್ವಜಹಿಮಾಂಶುದಿನಕರವಿಲೋಚನಸಾಂದ್ರಮಹಿಮ ಸುಗುಣಾ।
ಸ್ತೋಮಪೂರ್ವಾಮರಶಿರೋಮಾಲೆದಳೆದಪರ।
ಕಾಮಾಂಗದಹನಭಸಿತವಿಲೇಪಕಾಯಮು।
ತ್ಸ್ವಾಮಿ ರಕ್ಷಿಸು ಮಹೋತ್ಸುಗಶಾಂತವೀರೇಶನರಗಿಷ್ಟದಾತಮುದದಿಂ॥೧॥

ಅಂತ್ಯ:

ವರಹರಸ್ತುತಿಗಳನಿದಂಮಿಗೆ।
ಬರೆದು ನಿಚ್ಚಂ ಪಠಿಸೆ ದುರ್ಗುಣ।
ದುರಿತಸಂಕುಳಮರ್ದ್ದನ ಭಯಕರವರದಕರನೂ॥
ಚಿರತರಾಯುಶ್ರೀಯುಮಂ ಸ।
ದ್ಗುರುಚರಾಮಳಲಿಂಗಭಕ್ತಿಯ।
ನಿರದೆ ಕರುಣಿಸಿ ಸಲಹುವಂ ಶ್ರೀಶಾಂತವೀರೇಶ॥೨೫॥

ಮುರಿಗೆಯಸ್ವಾಮಿಗಳ ಸ್ತೋತ್ರದ ನಾಂದ್ಯ ಸಮಾಪ್ತ ಮಂಗಳಮಹಾ ಶ್ರೀ ಶ್ರೀ

ವಿಶೇಷವಿಷಯ: ಸಮಗ್ರ

****

೧೦

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೧೦

ಚೇರಮಾಂಕನ ಕಾವ್ಯದ ನಾಂದ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೧೦ನೆಯ ಪತ್ರದಿಂದ ಪ್ರಾರಂಭವಾಗಿ ೧೪ನೆಯ ಪತ್ರದ ವರೆಗಿದೆ.

ಕೃತಿಕಾರ: ಚೇರಮ

ಸ್ವರೂಪ: ಷಟ್ಪದಿ; ೩೫ ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಚೇರಮಾಂಕನ ಕಾವ್ಯದ ನಾಂದ್ಯ॥

ಭೂವಳಿಯಯುದನುವನಾ ನಾರದಂ ಬಿನ್ನವಿಸೆ।
ಪಾವನಚರಿತ್ರನೆನಿಸುವ ಭಸಿತಕಯನಂ।
ದೇವದೇವಂ ಕಳುಪೆ ಧರಣಿತಳಕ್ಕೆ ಚೇರಮನಾಗಿ ನಡೆತಂದನೂ॥

ಪ:

ಮದಗಜಾವದನತಾಮರಸ ದಿನನಾಥ।
ಂತಫಲಪ್ರದ ಸದಾ ಮಂಜುಳಾಂಗ ನಿ।
ಮ ಿರ್ಮ್ಮಳಮೂರ್ತ್ತಿ ಸಾಮವೇದಸ್ತುತ್ಯ ರಾಮಣೀಯಕ ಸುಭಕ್ತಾ॥
ಮಿಂಪಾನತಕಲ್ಪಭೂಮಿರುಹಸಕಲಸುಖ।
ಮಪರ್ವತಸಾರ್ವ್ವಭೌಮಸೌಂಧರ ದಿವ್ಯ।
ಮಾತೃವೆನಿಪ ಗಂಗಾಮಕುಟ ರಕ್ಷಿಸಾ ಪ್ರೇಮದಿಂ ಭೋಗಮಲ್ಲಾ॥೧॥

ಅಂತ್ಯ:

ಯಿದು ಸಕಲಭಕ್ತಪದಪದ್ಮಮಧುಕರಪುಣ್ಯ।
ಸದನ ಗುಬ್ಬಿಯಮಲ್ಲಾಣಾರ್ಯ್ಯರ ಕೃಪಾಪಾತ್ರ।
ಮುಧಿತನವರಸಭವರಿತ ಲಕ್ಷಣಾಲಂಕಾರನಿಪುಣನೆಂದೆನಿಸಿ ಮೆಱೆವಾ॥
ಚದುರ ಚೇರಮನೊರೆದ ಚಾರಮಚರಿತ್ರಮಂ।
ಪದಪಿನಿಂದ ಬರದೋದಿ ಕೇಳಿ ವಿಸ್ತರಿಸುವ।
ರ್ಗೊದಗಿರ್ಪ್ಪದಾಯುರಾರೋಗ್ಯಸಂಪದಸರ್ವ್ವಸಿದ್ಧಿಸತ್ಯಂ ಸತ್ಯವು॥೩೫॥

ಚೇರಮಾಂಕನ ಕಾವ್ಯ ಸಮಾಪ್ತಿ ಮಂಗಳ ಮಹಾಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೧೧

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೧೧

ಸಿದ್ಧೇಶ್ವರಪುರಾಣದ ನಾಂದ್ಯ

ಪತ್ರದ ಅಳತೆ: ೯.೫" X ೨"; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೧೪ನೆಯ ಪತ್ರದಿಂದ ಪ್ರಾರಂಭವಾಗಿ ೧೮ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ; ೪೫ ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಸಿದ್ಧೇಶ್ವರನ ಪುರಾಣದ ನಾಂದ್ಯ॥ ವಾರ್ಧ್ಧಿಕ ಪದ॥

ಶ್ರೀರಮಣವಿಧಿವಾಸವಪ್ರಮುಖವಿಬುಧಕೋ।
ಟಿರಮಾಣಂತ್ಯಪ್ರಭಾರಂಜಿತಾಂಘ್ರಿ ಪಂ।
ಕೇರುಹಯುಗಂ ವಿಯತ್ಕೇಶನಹಿಭೂಷನಾನಂದಸಂದೋಹಯುಕ್ತಂ॥
ತಾರಕಾಚಲಮಂದಿರಂ ಸಕೃಲ್ಲೋಕವಿ।
ಸ್ತಾರಕನೆನಿಪ್ಪಶ್ರೀಗುರು ನಿರಂಜನಲಿಂಗ।
ನೋರಂತೆಶರಣಮಂದಾರನಗಣಿತಕೃಪಾಪೂರನೆಮ್ಮಂ ಸಲಹುಗೆ ॥೧॥

ಅಂತ್ಯ:

ಜಯಜನಾರ್ದನಘನಪ್ರೀತಶರಣವ್ರಾತ।
ಜಯಜಿತಕುಸುಮಚಾಪ ಜನನಮರಣವಿಲೋಪ।
ಜಯ ಜಾತಿಸೂತಕವಿಕಾರಹರನಮಿತಜನದಾನಂದಕರಶುಭಕರಾ॥
ಜಯಜಂಗಮಾಕಾರ ಸಕಲಜಗದಾಧಾರ।
ಜಯಜಟಾಮಕುಟಾಂಕ ನಿರ್ಮಲನಿರಾತಂಕ।
ಜಯಪರಂಜ್ಯೋತಿಪ್ರಕಾಶ ಗುರು ಸಿದ್ಧಲಿಂಗೇಶ ಸುಜ್ಞಾನಕೋಶ॥೪೫॥

ಸಿದ್ಧೇಶ್ವರನಪುರಾಣದನಾಂದ್ಯ ಸಮಾಪ್ತಿ ಮಂಗಳಮಹಾಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೧೨

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೧೨

ಸಿದ್ಧೇಶ್ವರಪುರಾಣದ ಭಾಮಿನಿಪದ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೧೮ನೆಯ ಪತ್ರದಿಂದ ಪ್ರಾರಂಭವಾಗಿ ೨೦ನೆಯ ಪತ್ರದ ವರೆಗಿದೆ.

ಕೃತಿಕಾರ: ಶಾಂತೇಶ

ಸ್ವರೂಪ: ಷಟ್ಪದಿ; ૩೫ ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಸಿದ್ಧೇಶ್ವರನ ಪುರಾಣದ ಭಾವಿನಿಪದ॥
ಶ್ರೀವಿಮಲಕಾತ್ಯಾಯನೀಶ್ವರ।
ದೇವಿಯಾಸನಪದ್ಮಮಧುಕರ।
ಪಾವನಾತ್ಮಕ ಗಿರಿಶ ಶಂಕರ ಕರುಣ ಘನವಾದ॥
ದೇವ ದೇವ ನವೀನ ನಿರ್ಮಲ।
ಜೀವಿತೇಶ್ವರಕೈರವಾರುಣ।
ಭೂವಳೆಯಮಂ ಪಾಲಿಪುದು ಸಿದ್ದೇಶ ಚಿತ್ಕೋಶ॥೧॥

ಅಂತ್ಯ:

ಯಿದು ವಿಮಲಗುರು ತೋಂಟದಾರ್ಯ್ಯನ।
ಪದಕಮಲಷಟ್ಚರಣನೆನಿಸುವ।
ಸದಮಲದ ಸನ್ಮಲ್ಲಾಣಾರ್ಯ್ಯನ ಕುಲಶರಧಿ ಚಂದ್ರಾ॥
ಪದುಳದಿಂ ಶಾಂತೇಶನೊರೆದೀ।
ವಿದಿತ ಸಿದ್ದೇಶ್ವರನ ಪೌರಾಣವ।
ನೊದವಿ ಕೇಳುವ ಭಕ್ತತತಿಗಿಷ್ಟಾರ್ತ್ಥವೊಂದುವದೂ॥೩೫॥

ಸಿದ್ದೇಶ್ವರನ ಪುರಾಣದ ನಾಂದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೧೩

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೧೩

ಚನ್ನಬಸವೇಶ್ವರದೇವರಪುರಾಣದ ನಾಂದ್ಯ

ಪತ್ರದ ಅಳತೆ: ೯.೫" X ೨"; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೨೦ನೆಯ ಪತ್ರದಿಂದ ಪ್ರಾರಂಭವಾಗಿ ೨೯ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ೮೬ನುಡಿಗಳಿವೆ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ। ಚಂನಬಸವೇಶ್ವರದೆವರ ಪುರಾಣದ ನಾಂದ್ಯ। ಪದ॥

ಶ್ರೀಪರಮ ಸದ್ಗುರು ಪರಂಪರಂಜ್ಯೋತಿಶ್ಪ।
ರೂಪನಾದ್ಯಂತರಹಿತಂ ನಿತ್ಯನದ್ವಯಂ।
ಪಾಪರಹಿತಂ ಪರಬ್ರಹ್ಮಜ್ಞಾನಬೋಧಾಸುಕರ್ತೃಮೆಂದು॥
ಗೋಪವಾಹನರಾವಗಂ ಬಿಡದೆನುಮಯ।
ಶ್ರೀಪಾದಪದ್ಮಂಗಳಂ ಭಜಿಸುತಿಹರೆನ್ನ।
ತಾಪತ್ರಯಂಗಳಂ ಪರಿಸಿ ರಕ್ಷಿಸು ನಿಮ್ಮನಾಂ ಪೊಗಳ್ವೆನಳ್ಕಱಂದಾ॥೧॥

ಅಂತ್ಯ:

ಯಿಂತೆಸೆವ ಚೆನ್ನಬಸವೆಶನ ಪುರಾಣಮಂ।
ಸಂತಸದಿ ಬರದವಗೊರ್ಣದಿದಗರ್ತ್ಥವಾ।

ದ್ಯಂತಮಂ ಬಿಡದೆ ಪೇಳ್ದರ್ಗ್ಗೆ ಪಠಿಸಿದವರ್ಗ್ಗೆ ಭಕ್ತಿಯಿಂ ಕೇಳ್ದವರ್ಗ್ಗೆ॥
ಸಂತತಂ ಸಕಲಸುಖಮಂ ಸಕಲಭೋಗಮನ।
ನಂತ ಸೌಭಾಗ್ಯಮಂ ಕೊಟ್ಟು ರಕ್ಷಿಸುವಾ।
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದಾ॥೮೬॥

ಚೆನ್ನಬಸವೇಶ್ವರನ ಪುರಾಣದ ನಾಂದ್ಯಪದ ಸಂಪೂರ್ನ ಮಂಗಳಮಹಾಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೧೪

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೧೪

ಪ್ರಭುದೇವರಪುರಾಣದ ನಾಂದ್ಯದ ಲಿಂಗಸ್ತೋತ್ರದ ಪದ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೨೯ನೆಯ ಪತ್ರದಿಂದ ಪ್ರಾರಂಭವಾಗಿ ೩೬ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ೭೨ ನುಡಿಗಳಿವೆ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಪ್ರಭುದೇವರಪುರಾಣದ ಸ್ತೋತ್ರಷಟ್ಪದಿ॥
ರಾಗ ಕಲ್ಯಾಣಿ॥ ಪರಿವರ್ದನಿ॥

ಶ್ರೀದ್ಧಸಿತಂಗವಿಹೃದ್ಭೂಭಂಗಲ।
ಸದ್ಭಕ್ತಿದಕುಧರೋದ್ಭೂಧವಭವ।
ಭಿದ್ಭೀಮಾರ್ಜುನಹಾರವಿಕಾಶಸರೋದ್ಭವ ಪ್ರತ್ಯರ್ತ್ತಿ।
ಸದ್ಭೂಕುಂದಮರುದ್ಭೂಜೋತ್ಸವರ ।

ಸದ್ಭವ್ಯಾವಯಹೃದ್ಭಂಜನ ಜ।
ಗದ್ಭಯಕಾಂತನಮದ್ಭಯಹರ ಬೃಹದ್ಭಾನ್ವಕ್ಷಿ ಜಯ॥೧॥

ಅಂತ್ಯ:

ಗರುಡಪದ॥
ನರಸುರವರವರನತಪದಸರಸಯುತನುರಗ।
ಧರಮಕರಪದತನುತನುಹನದಹನ ಮರುಥಪಥ ನಗ।
ಗರಹರಯಮನಮದಮದನಮದಶಮನಭವತಪನ ಹುತವಹನಯನ॥
ವರದಕರ ಕನಕನಗಭವನ ಭವಭಯದಳನ।
ಗುರುಸದಯತರ ಮಧುರ ಸುರಪಸುತವರದಪರದ।
ತರತಗರಳಗಳ ಸತತನತ ಚಯ ಸುಭದ ವರಕರ ವರ ಕೊಡು ಕೊಡೂ॥೭೨॥

ಪ್ರಭುದೇವರ ಪುರಾಣದ ನಾಂದ್ಯದ ಲಿಂಗಸ್ತೋತ್ರದ ಪದ್ಯ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೧೫

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೧೫

ಸೌಂದರಪುರಾಣದ ನಾಂದ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೩೬ನೆಯ ಪತ್ರದಿಂದ ಪ್ರಾರಂಭವಾಗಿ ೩೯ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ೩೦ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ। ಸೌಂದರಪುರಾಣದ ನಾಂದ್ಯ। ವಾರ್ಧಿಕಪದ॥

ಶ್ರೀವರಸರೋಜಭವದೇವೇಂದ್ರಮುಖ್ಯ ನಾ।
ನಾ ವಿಬುಧಮಕುಟಮಣಿರತ್ನಗಣವಿಮಳಪ್ರ।
ಭಾವಿರಾಜಿತಚರಣನಮೃತಕರಶೇಖರನು ಶಂಕರನು ಸೌಖ್ಯಕರನೂ॥
ಪಾವನಚರಿತ್ರನುಜ್ವಳಭಾಳನೇತ್ರನಗ।
ಜಾವಲ್ಲಭಂ ನಿಗಮದುರ್ಲ್ಲಭಂ ರಕ್ಷಿಸುಗೆ।
ಭೂವಳೆಯಮಂ ನೀಲಕಂಠಲಿಂಗಂ ಸುಜನಹೃದಯಸರಸಿಜಭೃಂಗನೂ॥೧॥

ಅಂತ್ಯ:

ದಾರಿದ್ರೋದ್ರೇಕಭದ್ರದ್ವಿಭವಿದಳನ ಕಂಠಿರವಂ ಸರ್ವವಿದ್ಯಾ।
ಧಾರಂ ಶ್ರೀನೀಲಕಂಠೇಶ್ವರನ ಕರುಣ ಸತ್ಸಾರ ದುಗ್ಧಾಬ್ಧಿ ಬೆಸಮ್ಯ।
ಕ್ಕಾರಾದೀಶ ಪ್ರಭಾಸಂಚಯ ವಿದುವಿದಿತಂ ಸೌಂದರಾದಿಶನೆಂದೆಂ।
ಬರಮ್ಯಂ ಚಿತ್ತ ಪಂಚಾಕ್ಷರವನನವರತಂ ಭಾವಿಸಲ್ ಶ್ರೀನಿವಾಸಂ॥೩೦॥

ಸೌಂದರಪುರಾಣದ ನಾಂದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೧೬

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೧೬

ಸೋಮನಾಥನ ಕಾವ್ಯದ ನಾಂದ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೪೦ನೆಯ ಪತ್ರದಿಂದ ಪ್ರಾರಂಭವಾಗಿ ೪೨ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ೨೦ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಸೋಮನಾಥನಕಾವ್ಯದ ನಾಂದ್ಯ॥ವಾರ್ಧಿಕ ಪದ॥

ದೇವಸಭೆಯೊಳಗಿಂದುದರನ ಬೆಸನಂ ಪಡೆದು।
ಭೂವಳಿಯಕೆಸೆವ ಸೌರಾಷ್ಟ್ರದೊಳು ನಿ ಜನಿಸಿ ಬೆಳೆ।
ದಾವಗಂ ವ್ಯವಹಾರರೂಪಿಂದ ಹುಲಿಗೆರೆಗೆ ನಡೆತಂದನಾದಯ್ಯನೂ ॥ಪದ॥
ಶ್ರೀಮದಗಜಾಹರುಷರತ್ನಾಕರೇಂದುಗಾ।
ರೀಮನೋವನವಸಂತಂ ಭವಾಣಪದನ।
ತಾಮರಸದಿನಕರನೂಮಾ ಕಲ್ಪಲತೆವೃಕ್ಷಪ್ರಬಲಬಲಸುರಭೂರುಹಂ।
ಭೂಮಿಭೃತನೆಯಾಕ್ಷಿಕುಮುದನುತಚಂದ್ರಿಕಾ।
ನಾಮನೆಂಸಂ ಸಲಹುಗನುದಿನಂ ಹುಲಿಗೆರೆಯ।
ಸೋಮನಾಥಂ ಸೋಮಶೇಖರಂ ಸೋಮ ದಯಾಳುಮೂರ್ತಿ ವಿಲಾಸನೂ॥೧॥

ಅಂತ್ಯ:

ಮೀಱಿ ಕಂಡಂ ಕಂಡು ತನುವಿನೊಳು ಪುಳುಕಮಂ।
ಹೆಱದಂ ಸಂತೋಷವನೆಱದಂ ಜನನಮಂ।
ಮುಱದಂ ಕಳೆಗಳಂ ಬೀಱದಂ ವಿಪುಳಡಗೆಯಾಱದಂ ಸಂಸಾರದಿಂ।
ಜಾರಿದಂ ನಿಷ್ಟೆಯಂ ಸಾರಿದಂ ಭಕ್ತಿಯ।
ತೋರಿದಂ ಹಗೆಗಳಂ ತೇಱದಂ ಚಿತ್ತಮಂ।
ಮಾಱದಂ ಶಿವನಡಿಗೆ ಸೂಱೆಗೊಟ್ಟಂ ಮನವನಪ್ರತಿಮನಾದಯ್ಯನೂ॥೨೦॥

ಸೋಮನಾಥನ ಕಾವ್ಯದ ನಾಂದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೧೭

ಲಿಂಗಪುರಾಣದ ನಾಂದ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೪೨ನೆಯ ಪತ್ರದಿಂದ ಪ್ರಾರಂಭವಾಗಿ ೪೫ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ; ೨೧ ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಲಿಂಗಪುರಾಣದ ನಾಂದ್ಯ॥ ವಾರ್ದ್ಧಿಕಪದ॥
ಬಸವೇಶ ಸದ್ಗುಣೋತ್ತುಂಗ ಕರುಣಾಪಾಂಗ।
ಬಸವಂಣ ಸಂಹೃತಾನಂಗ ಸತತಾಭಂಗ।
ಬಸವಸದ್ಭಕ್ತಿಪುಂಗವ ಬಸವ ಸಂಗಿತತರಂಗ ವೇದಪ್ರಸಂಗ॥
ಬಸವ ಸಾಕ್ಷಾತ್ಮಹೇಶಾಂಗ ಸದ್ಗುರುಲಿಂಗ।
ಬಸವಚರಲಿಂಗಪದಪದ್ಮವಿಲಸದ್ಭೃಂಗ।
ಬಸವ ಪಶುಪತಿಚರಣನಿಹಿತಾಂತರಂಗ ಮದ್ಭರ್ತೃ ಮತ್ತಾತ ಬಸವಾ॥೧॥

ಅಂತ್ಯ:

ಜಯ ಬಸವರಾಜೇಂದ್ರನನುಭವಾಂಬುಧಿಚಂದ್ರ।
ಜಯ ಬಸವರಾಜೇಂದ್ರಕಮಪಾಠಜರೇಂದ್ರ।
ಜಯ ಬಸವರಾಜೇಂದ್ರ ಚರಣವಂದಿತುಪೇಂದ್ರ ಜಯ ಬಸವರಾಜತೇಜಾ॥
ಜಯಬಸವರಾಜೇಂದ್ರ ಸತ್ಯಸದ್ಗುಣಸಾಂದ್ರ।
ಜಯ ಬಸವರಾಜೇಂದ್ರ ಸದ್ಭಕ್ತಿಘನಸಾಂದ್ರ।
ಜಯ ಬಸವರಾಜೇಂದ್ರನಾಮನುತನತನಿಂದ್ರ ಜಯಬಸವರಾಜ ಪಾಹಿ॥೨೧॥

ಲಿಂಗಪುರಾಣದ ನಾಂದ್ಯದ ಪದ ಸಮಾಪ್ತ ಮಂಗಳ ಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೧೮

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೧೮

ಬಸವೇಶ್ವರಪುರಾಣದ ನಾಂದ್ಯ

ಪತ್ರದ ಅಳತೆ: ೯.೫" X ೨"; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೪೫ನೆಯ ಪತ್ರದಿಂದ ಪ್ರಾರಂಭವಾಗಿ ೪೮ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ; ૩೫ ನುಡಿಗಳಿವೆ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಬಸವೇಶ್ವರನ ಪುರಾಣದ ನಾಂದ್ಯ॥

ಶ್ರೀಗುರುವೆ ದೀಕ್ಷಾಗುರುವೆ ರಕ್ಷಾಗುರುವೆ ಶಿ।
ಕ್ಷಾಗುರುವೆ ಸರ್ವ್ವಾಗಮೋಕ್ತ ಕಳಾಗುರುವೆ ಶಿವ।
ಯೋಗಧರ್ಮ್ಮಾರ್ಥಯೋಗಗುರುವೆ।
ತ್ಯಾಗಗುರುವೆ ಸುಧೀಗುರುವೆ ವಾಚಾಗುರುವೆ। ಭವ।
ರೋಗಹರ ಶರಣಾಗು ಬಸವ ಮಹಾಗುರುವೆ ಯಮಗೆ ॥೧॥

ಅಂತ್ಯ:

ಇದು ಸಕಳ ಮಾಹೇಶ್ವರಾಮಳ
ಪದಪಯೋಜಪರಾಗಮಧು ಷ

ಟ್ಟದಿಯೆನಿಪ ಪಾಲ್ಕುರಿಕೆಸೋಮೇಶ್ವರನ ಕಾರುಣ್ಯ॥
ವದವಿದಖಿಳಕಳಾಪ್ರಪೂರಿತ।
ಹೃದಯ ಭೀಮಕವಿಪ್ರಣೀತಾ।
ದ್ಭುದಯ ಬಸವಪುರಾಣ ಕಥೆಯೊಳಗಷ್ಟಮಾಶ್ವಾಸಂ ॥೩೫॥

ಬಸವೇಶ್ವರನ ಪುರಾಣದ ನಾಂದ್ಯ ಸಂಪೂರ್ಣ
ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೧೯

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೧೯

ಶಿವಲಿಂಗಪದ್ಯದ [ವಸ್ತುಕಪುರಾಣದ] ನಾಂದ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೪೮ನೆಯ ಪತ್ರದಿಂದ ಪ್ರಾರಂಭವಾಗಿ ೪೯ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ; ೪೨ ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ವಸ್ತುಕಪುರಾಣದ ನಾಂದ್ಯ॥

ಶ್ರೀಮತ್ಕಲ್ಯಾಣಭೂಭೃನ್ನುತ್ತುಖರಪದಂ ದಿವ್ಯಗಂಗಾಂಬಿಕಾಸ।
ತ್ಪ್ರೇಮಾವಾಸಂ ಗಣೇಂದ್ರಾನ್ವಿತನುರುಮಹಿಮಾದಾರನಶ್ರಾಂತಸತ್ವಾ।
ರಾಮಂ ಭೂತಿಪ್ರಯುಕ್ತಂ ಪ್ರಣವರುಚಿ ಪರಾನಂದಧರ್ಮಂ ಸಲೀಲೋ।
ದ್ದಾಮಂ ರಕ್ಷಿಪ್ಪುದೆಮ್ಮಂ ಬಿಡದನವರತಂ ನಂದಿಕೇಶಂ ಮಹೇಶಂ॥೧॥

ಅಂತ್ಯ:

ಶ್ರೀಶಾಂಭವಿಶುಭಾಂಗನಿ।
ವೇಶಿತವಾಮಾಂಗನಂಗಜಾಹಿತನುರುಗಾ॥
ಧೀಶಧರನಮಳಗುಣನಿಧಿ।
ಕೋಶಂ ಕೊಡುಗೆಮಗೆ ಸೌಖ್ಯಮಂ ಶಿವಲಿಂಗಂ॥೪೨॥

ಶಿವಲಿಂಗಪದ್ಯದ ನಾಂದ್ಯ ಸಂಪೂರ್ನ್ನ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೨೦

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೨೦

ದೇವಿ ನಾಂದ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೪೯ನೆಯ ಪತ್ರದಿಂದ ಪ್ರಾರಂಭವಾಗಿ ೫೨ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ೪೨ ನುಡಿಗಳಿವೆ; ವಿವಿಧವೃತ್ತಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ದೇವಿನಾಂದ್ಯವ ಬರೆವುದಕ್ಕೆ ಶುಭಮಸ್ತು।ತೋಟಕವೃತ್ತಂ॥

ಕರಿರಾಣ್ಮುಖಷಣ್ಮುಖಮಾತೆ ಮನೋ।
ಹರ ಮಂಧರಮಂದಿರೆ ಶೌರಿನತೆ।
ಕರುಣಾರುಣ ಭಾಸುರಕಾಂತಿಯುತೇ।
ಶರಣಾಗೆನನಗಂಬಿಕೆ ಶೈಲಸುತೆ॥೧॥

ಅಂತ್ಯ:

ಪೃಥ್ವೀವೃತ್ತ॥
ಸುಪರ್ಣರಥಪೂಜಿತೆ ಸುಕರಕೀರ್ತಿವಿಭ್ರಾಜಿತೆ।
ಕೃಪಾರಸತರಂಗಿಣಿ ಕುಪಿತ ದೈತ್ಯಸಂಹಾರಿಣಿ।
ಕಪರ್ದಿಹೃದಯಪ್ರಿಯೆ ಕನಕಸುವರ್ಣೆ ಸಚ್ಚಿನ್ಮಯೆ।
ಜಪಾಸುಮರುಚಿಪ್ರಭೆ ಜನನಿ ಪಾಲಿಸದ್ರೀಂದ್ರಜೆ॥೪೨॥

ದೇವೀನಾಂದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೨೧

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೨೧

ವೃಷಭೇಂದ್ರವಿಜಯಲಲಿತಪದನಾಂದ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೫೨ನೆಯ ಪತ್ರದಿಂದ ಪ್ರಾರಂಭವಾಗಿ ೫೭ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ; ೫೭ ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಲಿಂಗವೇ ಗತಿ॥ ವೃಷಭೇಂದ್ರವಿಜಯಲಲಿತ ಪದ ನಾಂದ್ಯವ ಬರೆವುದಕ್ಕೆ ಶುಭಮಸ್ತು॥
ಶ್ರೀಕರಗುಣಾಂಬುಧಿಸುಧಾಕರಕಳಾಧರಕೃಪಾಕಲಿತಲೋಚನದಿನಾಕರಸಹಸ್ರಾ।
ಲೋಕರುಚಿವಿಗ್ರಹಪಿನಾಕಧರದರ್ಶನಕಳಾತರಸುಪುಣ್ಯಪರಿಪಾಕಯುತಸೇವ್ಯಾ।

ಭೀಕರಯಮಪ್ರಹರನಾಕಸದನಾರ್ಚಪದಕೋಕನದನಿರ್ಜಿತವರಾಕಪರವಾದ। ನಿಕವಿನತಾಸುತಸತಾತನುತ ಪಾಲಿಸ ಸುಗಣೈಕಪತಿಪಾಲಿತಸುಲೋಕ ಬಸವೇಶಾ ॥ ೧॥

ಅಂತ್ಯ:

ತುಷ್ಟಮುಖದುಸ್ಸಹ ಬಲಿಷ್ಟಗದಮರ್ದ್ದನಗರಿಷ್ಟ ನಿಜಪಜ್ಜಲಯುದಿಟ್ಟಿರನರಾರ್ಚ್ಯ। ದಿಟ್ಟಿತಜಗತ್ರಯವರಿಷ್ಟ ಗರುಡಾಂತ ಪರಮೇಷ್ಟಿನುತ ಭರ್ಗ್ಗಪದಸ್ಥಜನಲೋಲಾ। ಶ್ರೇಷ್ಟಸುಕವಿಪ್ರಕರಪುಷ್ಟಸುರಭೂಜಖಲಕಾಷ್ಟದವಪಾವಕವರಿಷ್ಟ ಗಣವೃಂದಾ। ಜ್ಯೇಷ್ಟಪರಿತರ್ಜ್ಜಿತಲಘಿಷ್ಟ ಮತವಾದಿಕುಲಸುಷ್ಟವಚನೋತ್ಕರಮಹಿಷ್ಟ ಬಸವೇಶಾ॥೫೭॥

ವೃಷಭೇಂದ್ರವಿಜಯಾಲಲಿತಪದನಾಂದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೨೨

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೨೨

ಷಟ್ಸ್ಥಲತಿಲಕದ ನಾಂದ್ಯ

ಪತ್ರದ ಅಳತೆ: ೯.೫" X ೨"; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೫೮ನೆಯ ಪತ್ರದಿಂದ ಪ್ರಾರಂಭವಾಗಿ ೬೧ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ, ೩೩ ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಷಟ್ಸ್ಥಲತಿಲಕದ ನಾಂದ್ಯಪದ॥ ಪಲ್ಲವ॥
ವಲ್ಲಕೀಮೃದಂಗಾದಿವಾದ್ಯಭೇದಂಗಳಂ।
ಬಲ್ಲ ಜಾಣರ್ ನುಡಿಸೆ ನುಡಿವಂತೆ ಮನ್ಮನೋ।

ವಲ್ಲಭಂ ವೃಷಭಲಿಂಗ ನುಡಸಲೀ ಕೃತಿಯ ಮಾಡುವೆ ಕೇಳಿ ಶರಣಜನರೂ॥

ಪದ॥

ಶ್ರೀಗುರುವೆ ವಿಪುಲಾಮೃತಾಗುರುವೆ ಗ್ಲಾನಾಕ್ರಿ।
ಯಾಗುರುವೆ ಭೋಗಪ್ರದಾಗುರುವೆ ನತನರ।
ಕ್ಷಾಗುರುವೆ ದುರಿತಸಿಕ್ಷಾಗುರುವೆ ಶಿಷ್ಯಾದಿಕ್ಷಾಗುರುವೆ ನೈಜಮುಕ್ತಿ॥
ತ್ಯಾಗಗುರುವೆ ಲಿಂಗಯೋಗಗುರುವೆ ಭವವಿ।
ಯೋಗಗುರುವೆ ಜೀವಶಿವರೇಕಸಮರಸವಿ।
ದಾಗುರುವೆ ಪರಿಪೂರ್ನದಿ ಗುರುವೆ ವೃಷಭಲಿಂಗ ಭೋಗಗುರುವೆ ಶರಣುನಿಮಗೆ ॥೧॥

ಅಂತ್ಯ:

ಸರದಿ ನೊರೆತೆರೆಬೊಬ್ಬುಳಿಗಳನೊಳಕೊಂಡಂತೆ।
ಉರುಸಾರಸಿಲೆಯಂಬುಧಿ ಗ್ರಹಿಸಿದೊಲ್ಮುಖದೊಳಿಹ।
ವರವಿಲಾಸನ ಕೈವಿಡೊಳಕೊಂಡಂತೆಜಿನಂತೆ ಮರುತಸಾಂಚಲ್ಯಗಳನೂ॥
ಸುರವರ್ತ್ತನೊಳಕೊಂಡತೆರದಿ ಪ್ರಕಾಶದಿಂ।
ದುರುವಮಲಧಿಪತಿಲರಸವನೊಳಕೊಂಡಂತೆ।
ಪರಮಪ್ರಸಾದಲಿಂಗಂ ಶರಣನಂ ಗ್ರಹಿಪುದೆಂದನಾ ದೇಶಿಕೇಂದ್ರ॥೩೩॥

ಷಟ್ಸ್ಥಲತಿಲಕದ ನಾಂದ್ಯ ಸಂಪೂರ್ಣ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೨೩

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೨೩

ವೀರಶೈವಾಮೃತಪುರಾಣದ ನಾಂದ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೬೧ನೆಯ ಪತ್ರದಿಂದ ಪ್ರಾರಂಭವಾಗಿ ೬೩ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ, ೨೦ ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ। ವೀರಶೈವಾಮೃತಪುರಾಣದ ನಾಂದ್ಯದ ಪದ।

ಗುರ್ವ್ವಗ್ರಹರಿಯಜಸುಪರ್ವ್ವನತನಂದೀಶ।
ಧೂರ್ವಾಸಹಷ್ರ್ವಾಬ ಪಾರ್ವಣ ಶಶಾಂಕಗಂ।
ಥರ್ವ್ವದಿಗ್ಘೋರ್ಪೇಂದ್ರಗರ್ವ್ವಹರದುರ್ಮ್ಮಾರ್ಗ್ಗಚಾರ್ವಾಕದೂರಲಪ।
ದುರ್ವ್ವರಾಧರನಿಕರಸಾರ್ವ್ವಭೌಮಾತಜಾ।
ನಿರ್ವ್ವಹಣದಿಷ್ಟದನೆ ಸರ್ವ್ವಜ್ಞಾ ಶಾಂತಮಲ್ಲಾ ॥೧॥

ಅಂತ್ಯ:

ಭೂಲೋಕಪಾವನ ಕಕೊದ್ಗಿರಿ ಸದಾಕ್ಷಂಣ್ಯ।
ಕೈಲಾಸವದಜಿ ಮೆಲಣಗವಿಯು ಸಿಂಹಾಸ।
ನಾಲಂಕೃತ್ತದ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯ॥
ಶೀಲಷಟ್ಸ್ಥಲ ಹಲಗೆಯಾರ್ಯ್ಯನಾಶಿಪಲ।
ಮೌಲಿಮಣಿ ಕೆಂಚವೀರಾಂಹ್ವಯಂ ಗೊರೆದ ಸುವಿ।
ಶಾಲ ವರವೀರಶೈವಾಮೃತಪುರಾಣಮಂ ಕೂರ್ತ್ತು ಪದನಂ ಮಾಡಿದಂ॥೧೮॥

ಇದು ವೀರಶೈವಷಟ್ಸ್ಥಲಮಾರ್ಗ್ಗ ಸದ್ಭಾವ।
ಸದನಸುವಿರಕ್ತವ್ರತಾಚಾರಿ ಚಿತ್ರಿಯಾ।
ಪ್ರದ ಹಲಗೆಯಚಾರ್ಯ್ಯನಖಿಳ ಮಹೇಶ್ವರ ಹಿತಾರ್ಥದಿಂ ಕೇಳ್ಸತತಂ ನಾ॥
ಪದಪದ್ಮಮಧುಕರಂ ಕೆಂಚವೀರಾಖ್ಯಂಗೆ।
ಮುದದಿ ಪೇಳಿ ವೀರಶೈವಾಮೃತದೊಳಗಾ।
ದುದು ಪುರಾಣ ಪೂರ್ನ್ನದೆಡೆಗಳು ಖಾಂಡಮುಂ ಸಂದಿಯಿಪ್ಪತ್ತೆರಡಲಾ॥೧೯॥

ಯಿದು ಪರಮ ಷಟ್ಸ್ಥಲಬ್ರಂಹಿಗಳ ವೀರಶೈ।
ವದ ಮಾರ್ಗ್ಗದುಂನತ ಜ್ಞಾನಿಗಳನೈರ್ಮಲ್ಯ॥
ಹೃದಯನಿಶ್ಚಯತತ್ವಸಂಪನ್ನಂ ಹಲಗೆಯಾಚಾರ್ಯ ಕೆಂಚವೀರಾಖ್ಯಂಗೆ।
ಪದಪಿಂದ ನಂಜುಂಡೆದೇವರೊಪ್ಪುವ ತೇಜದೊ।

ಘುದಿತ ವರವೀರಶೈವಾಮೃತಾಖ್ಯಾನವೆಂ।
ಬುದ ನಿರೂಪಮಂಗೊಟ್ಟುದೆಂಟುಖಾಂಡಂ ಪೂರ್ನ್ನವಱುತೂ॥೨೦॥

ವೀರಶೈವಾಮೃತದ ಪುರಾಣದ ನಾಂದ್ಯ ಸಂಪೂರ್ನ ಮಂಗಳಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೨೪

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೨೪

ಮುರಿಗೆಸ್ವಾಮಿಗಳ ಸ್ತೋತ್ರ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೬೩ನೆಯ ಪತ್ರದಿಂದ ಪ್ರಾರಂಭವಾಗಿ ೬೪ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ, ೨೫ ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಮುರಿಗೆಸ್ವಾಮಿಗಳ ಸ್ತೋತ್ರವನು ಬರವುದಕ್ಕೆ ಶುಭಮಸ್ತು ವಾಕ್ಸಿದ್ಧಿರಸ್ತು॥ ಭಾವಿನಿವರ್ನದ ಷಟ್ಪದವು॥ ರಾಗನಾಟಿ॥

ಶ್ರೀಮದನುಪಮಸರ್ತಮ್ಮ್ರಳ।
ಸೋಮಶೇಖರ ಕಾಮಸಂಹರ।
ಸ್ವಾಮಿಶಾಶ್ವತಶರಣಜನಸತ್ಪ್ರೇಮಗುಣಧಾಮಾ॥
ಹೇಮಗಿರಿನಿಜನಿವಾಸಶಂಕರ।
ನಾಮಕರುಣಾಸಾರಕೋವಿದ।
ರಾಮಣೀಯಕಶಾಂತವೀರಚಿದಂಗ ಪಾಲಿಪುದೂ॥೧॥

ಅಂತ್ಯ:

ಪಾಹಿ ಸಜ್ಜನಮೋಹಿ ನಿರ್ಮ್ಮಲ।
ಪಾಹಿ ಭಕ್ತರ ಸಾಹಿ ಸಂತತ।
ಪಾಹಿ ಶರಣರ ಕಾಮಧೇನುವೆ ತ್ರಾಹಿ ಮತ್ಪಾಹಿ॥
ಪಾಹಿ ದೇವರ ದೇವ ಪಾಹಿ।
ಪಾಹಿ ಸುರವರಪ್ರಾಣ ಪಾಹಿ।
ಪಾಹಿ ಕರುಣಾಪಾಂಗ ಜಂಗಮ ತ್ರಾಹಿ ಮತ್ಪಾಹಿ॥೨೪॥

ಯಿಂತು ನಿಮ್ಮಯ ಮಹಿಮೆ ನುತಿಯನು।
ಸಂತತಂ ಬರದೋದಿದವರಂ।
ಚಿಂತಿಯಳಿದುಂನತದ ಮುಕ್ತಿಯನೆಯಿದಿ ನಿಜವಹರುಂ॥
ಅಂತುಮಲ್ಲದೆ ಸಕಲ ಸಿದ್ಧಿಯು।
ಸಂತಸದೊಳೆಯಿತಂದು ಪಡವದು।
ಕಾಂತ ಮುರಿಗೆಯ ಶಾಂತವೀರ ನಿಜೇಶ ರಕ್ಷಿಪುದೂ॥೨೫॥

ಮುರಿಗೆಯ ಶಾಂತವೀರೇಶ್ವರನ ಪಂಚವಿಂಶತಿಸ್ತೋತ್ರ ಸಮಾಪ್ತ ಮಂಗಳ ಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೨೫

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೨೫

ಷಟ್ಸ್ಥಲದ ಜ್ಞಾನಸಾರ

ಪತ್ರದ ಅಳತೆ: ೯.೫" X ೨"; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೬೪ನೆಯ ಪತ್ರದಿಂದ ಪ್ರಾರಂಭವಾಗಿ ೬೮ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ, ೫೧ ನುಡಿಗಳು

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ।। ಷಟ್ಸ್ಥಲದ ಜ್ಞಾನಸಾರಾ।। ಭಾವಿಸಿಪದ।।

ವೀರಶೈವಾಚಾರಮಾರ್ಗ್ಗದ।
ಸಾರಷಟ್ಸ್ಥಲಸಾರವನು ಪರಿ।
ದೋರಣಂಗೊಳಿಸುವೆನು ಸಜ್ಜನರೊಲಿದು ಲಾಲಿಪುದೂ।।ಪದ।।
ಗುರುವೆ ಯಂನಯ ನಿತ್ಯರೂಪನೆ।
ಗುರುವೆ ಯಂನಯ ಮುಕ್ತಿರೂಪನೆ।
ಗುರುವೆ ಯಂನಯ ಸ್ವಾರ್ತ್ಥರೂಪನೆ ಭಾವರೂಪಕನೆ।।
ಗುರುವೆ ಯಂನಯ ಮುಕ್ತಿರೂಪನೆ।
ಗುರುವೆ ಯಂನಯ ಭಕ್ತಿರೂಪನೆ।
ಗುರುವೆ ನಿಮ್ಮುವ ಪೊಗಳ್ವೆನೀವುದು ಮತಿಚಮತ್ಕೃತಿಯಾ।।೧।।

ಅಂತ್ಯ:

ರಸವಲಂಕಾರಭಾವದ ।
ವ್ಯಸಕವಿಲ್ಲೆನಟೇಡಏಡನಂ।
ರಸವೆ ಚಿದ್ರಸಜ್ಞಾನತಾಲಂಕಾರಮಾಗಿಹುದು।
ಯಸವಷಟ್ಸ್ಥಲ ಜ್ಞಾನಿಗಳಿಗಿದು।
ರಸಭರಿತಮಾಗಿಹುದು ಮಿಕ್ಕಿನ।
ವಿಷಯದುರ್ಮುಖಿ ಮೂಡರಿಗಿದು ನಿರುಪಮಾಹುದೂ।।೫೦।।

ಯೀಗಳೀ ಷಟ್ಸ್ಥಲದ ಸಾರವ।
ರಾಗದಿಂದಲಿ ವೋದಿ ಕೇಳ್ದರೆ।
ಭೋಗಮೋಕ್ಷಗಳಹವು ಸಂಶಯವಿಲ್ಲ ನಿಶ್ಚಯವೂ।।
ಭೋಗಮೋಕ್ಷವು ಸರ್ವಸಿದ್ಧಿಯ।
ಯೀಗ ಲಿಂಗವೆನಿಪ್ಪಶರಣರೂ।
ಬೇಗ ಸದ್ಯೋನ್ಮುಕ್ತರಪ್ಪರೂ ಬಸವಲಿಂಗದಲಿ।।೫೧।।

ಷಟ್ಸ್ಥಲದ ಜ್ಞಾನಸಾರಾಯ ಸಂಪೂರ್ಣ ಮಂಗಳ ಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೨೬

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೨೬

ಮಣ್ಣೇಶ್ವರನ ಕಾವ್ಯದ ನಾಂದ್ಯ

ಪತ್ರದ ಅಳತೆ: ೯.೫" X ೨"; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೬೮ನೆಯ ಪತ್ರದಿಂದ ಪ್ರಾರಂಭವಾಗಿ ೭೦ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ, ೧೩ ನುಡಿಗಳು; ಟೀಕಾಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಮಣ್ಣೇಶ್ವರನ ಕಾವ್ಯದ ನಾಂದ್ಯ॥ ಪದ॥

ತರವುರದನ ತಂದೆ ತನುಜೆ ಮನೆಯ ಸಖ।
ತರುಣಾನರ್ಮನವರನಣುಗಾ।
ನರಸಿಯಾತ್ಮಜನ। ಮಾವನ ಮಾಗ।
ನುರುಪಿದ ಗುರುವೆ ಮಣ್ಣೇಶ ಮಾಂ ತ್ರಾಹಿ॥೧॥

ಟೀಕು॥ ತರುವುರದನ। ಚಂದ್ರನ। ತಂದೆ। ಸಮುದ್ರದ। ತನುಜೆಯ। ಲಕ್ಷ್ಮಿಯ। ಮನೆಯ। ತಾವರೆಯ। ಸಖ। ಸೂರ್ಯನ। ತರುಣ। ಕರ್ನನ। ಅಂಮನ। ಕೊಂತಿಯ। ವರನ। ಪಾಂಡುವನ। ಅಣುಗನ। ಅರ್ಜುನನ। ಅರಸಿಯ। ಸುಭದ್ರೆಯ। ಆತ್ಮಜನ। ಅಭಿಮನ್ಯುವಿನ। ಮಾವನ। ವಿಷ್ಣುವಿನ। ಮಗನ। ಮನ್ಮಥನ। ಉರುಪಿದ। ದಹಿಸಿದಂಥ। ಮಂಣೇಶ। ಚಿತ್ಪ್ರತತಿಗೆ ಕರ್ತೃವಾದಂಥ। ಗುರುವೆ। ಯಲೆ ಆಚಾರ್ಯನೆ। ಮಾಂ। ಯೆನ್ನನು। ತ್ರಾಹಿ। ರಕ್ಷಿಸು॥೧॥

ಅಂತ್ಯ:

ಸರಸಿ ಪೊಕ್ಕನ ತಾಯ ವರನಣುಗನ ರಕ್ತ।
ಸುರಿದನಯ್ಯನ ವಾಜಿಯುರನಿ।
ಗರಿಸುತೆಯರಸನದರ ಬೊವನ ಸೊಸೆಯ ಮೂ।
ಗರಿದನಯ್ಯನೆ ಮಂಣೇಶಾ॥೧೩॥

ಟೀಕು॥ ಸರಸಿ। ಕೊಳನ। ಪೊಕ್ಕನ। ಕೌರವನ। ತಾಯ। ಗಾಂಧಾರಿಯ। ವರನ। ಧೃತರಾಷ್ಟ್ರನ। ಅಣುಗನ। ದುಶ್ಶಾಸನನ। ರಕ್ತ ಸುರಿದನ। ಭೀಮನ। ಅಯ್ಯನ। ವಾಯವ್ಯನ। ವಾಜಿಯ। ಯೆರಳೆಯ। ಉರನೆಗೆ। ಯದೆಯಲ್ಲಿ ದರಿಸಿರ್ದ। ಚಂದ್ರನ। ಅರಿ। ಸರ್ಪನಾ। ಸುತೆ। ನಾಗಕರ್ನಿಕೆಯ। ಅರಸನ। ಅರ್ಜುನನ। ವರ। ಶ್ರೇಷ್ಠನಾದ। ಬೋವನ। ಕೃಷ್ಣನ। ಸೊಸೆಯ। ಶಾರದಿಯ ಮೂಗರಿದನ। ವೀರೇಶ್ವರನ। ಅಯ್ಯನ। ತಂದೆಯಾದ ಶಿವಸ್ವರೂಪನಾದ ಮಂಣೇಶನೆ ನಮಸ್ಕಾರವು॥೧೩॥

ಮಂಣೇಶ್ವರನ ನಾಂದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೨೭

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೨೭

ಷಡ್ವಕ್ತ್ರ

ಪತ್ರದ ಅಳತೆ: ೯.೫" X ೨"; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೭೦ನೆಯ ಪತ್ರದಿಂದ ಪ್ರಾರಂಭವಾಗಿ ೭೩ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ, ೯ ನುಡಿಗಳು; ಟೀಕಾಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ।। ಷಡ್ವಕ್ತ್ರ। ಪರಶಿವನ ಆರುಮುಖದ ಮಹತ್ವವು। ಯೆಂಬುದೀಗ। ಷಡ್ವಕ್ತ್ರ ಯಂಬ ಶಬ್ದಕ್ಕರ್ಥ।।

ಪ್ರಾಲೇಯಾಮಲಮಿಂದುಕುಂದಧವಲಂ ಗೋಕ್ಷೀರಫೇನಪ್ರಭಂ।
ಭಸ್ಮಾಭ್ಯಂಗಮನಂಗದೇಹದಹನಂ ಜ್ವಾಲಾವಲೀಲೋಚನಂ।।
ಬ್ರಹ್ಮೇಂದ್ರಾದಿಮರುದ್ಗಣೈಸ್ತುತಿಪದಂ ಋಗ್ವೇದಶಾಖಾಮಯಂ।
ಸದ್ಯೋಜಾತಮಿದಂ ಕಲಂಕರಹಿತಂ ಸ್ಥಾಣೋರ್ಮುಖಂ ಪಶ್ಚಿಮಂ।।

ಟೀಕು।। ಪ್ರಾಲೇಯ। ಹಿಮದ ಹಾಂಗೆ। ಅಮಲಂ। ಕಳಂಕಿಲ್ಲದಂಥ। ಇಂದುಕುಂದಧವಲಂ। ಚಂದ್ರಮೊಲ್ಲೆಗಳೋಪಾದಿಯ ಬಿಳಿದಾದಂಥ। ಗೋಕ್ಷೀರ। ಆವಿನ ಹಾಲಿನ। ಫೇನಪ್ರಭಂ। ನೊರೆಯೋಪಾದಿಯ। ಕಾಂತಿಯನುಳ್ಳಂಥ। ಅನಂಗ। ಕಾಮನ। ದೇಹ। ಶರೀರವನು।। ದಹನಂ। ಸುಟ್ಟಂಥ। ಭಸ್ಮ। ವಿಭೂತಿಯ। ಅಭ್ಯಂಗ। ಸ್ನಾನವನುಳ್ಳಂಥಾ।। ಜ್ವಾಲಾವಳಿ। ಅಗ್ನಿಕಿಡಿಗಳ ಸಾಲುಗಳನುಳ್ಳ। ಲೋಚನಂ। ಕಣ್ಣನುಳ್ಳಂಥ। ಬ್ರಮ್ಹೇಂದ್ರಾದಿ ಮರುದ್ಗಣೈಃ। ಬ್ರಹ್ಮ ದೇವೇಂದ್ರ ಮೊದಲಾದ ದೇವತೆಗಳ ಸಮೂಹದ। ಸ್ತುತಿಪದಂ। ಸ್ತೋತ್ರಂಗಳಿಗೆ ಸ್ಥಾನವಾದಂಥ। ಋಗ್ವೇದಶಾಖಾಮಯಂ। ಋಗ್ವೇದದ ಶಾಖೆಸ್ವರೂಪನಾದಂಥ। ಸ್ಥಾಣೋಃ। ಪರಮೇಶ್ವರನ। ಯಿದಂ। ಯಿದು। ಕಲಂಕರಹಿತಂ। ತಪ್ಪುವಿಲ್ಲದಂಥ। ಸದ್ಯೋಜಾತಂ। ಸದ್ಯೋಜಾತವೆಂಬ ಪೆಸರನುಳ್ಳಂಥ। ಪಶ್ಚಿಮಂ ಮುಖಂ। ಪಡುವಳ ಮುಖವನು। ನಮಾಮಿ। ನಮಸ್ಕಾರವ ಮಾಡುವೆನು।।।।

ಅಂತ್ಯ:

ಪರಿಪಾಂಡುರ ರಾಜಹಂಸಾಃ। ಯೆಲ್ಲಾಕಡೆಯಲ್ಲಿ ಬಿಳಿದಾದ ರಾಜಹಂಸೆಗಳು ಸಮುದ್ರವನು ದಾಂಟುತ್ತಂವಿದ್ದಾವು । ಹಾಂಗೆ। ಸಂಸಾರಸಾಗರಂ। ಸಂಸಾರ ಸಮುದ್ರದ ಕಡೆಯಾದಂಥ। ಪಾದಂ। ದಡವನು। ಅವತರಂತಿ। ದಾಂಟುತ್ತಂ ವಿಹರು।।೯।। ಷಡ್ವಕ್ತ್ರ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೨೮

ಶಂಕರಸಂಹಿತೆಯ ನಾಂದ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೭೩ನೆಯ ಪತ್ರದಿಂದ ಪ್ರಾರಂಭವಾಗಿ ೮೨ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ; ೧೦೦ ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ।। ಶಂಕರಸಂಹಿತೆಯ ನಾಂದ್ಯದ ಲಿಂಗ ಸ್ತೋತ್ರದ ಪದ।।

ಶ್ರೀನಗಸುತಾರಮಣ ಮಾನಿತಕೃಪಾಭರಣ।
ಮೌನಿಸನ್ನುತಪಾದ ಗಾನನಿಗಮಾಮೋದ।
ಸಾನುರಾಗಸ್ವಾಂತ ಭಾನುಬಿಂಬ ನಿಶಾಂತಸೂನತ್ಕುನೆಲಕಾಂತಾ।।
ಜ್ಞಾನಸುಖಸದ್ಭೂಮಿನಾನಾಗುಣಾರಾಮ। ಜಾನಕೀಪತಿಪಕ್ಷಭೂನಿಲಿಂಪಾದ್ಯಕ್ಷ।
ದಾನಕಲಿತಾಟೋಪವೈನತೇಯಗರೋಪ ಸಾನುಮಚ್ಚಾಪ ಶರಣೂ।।೧।।

ಅಂತ್ಯ:

ಅಸಮನಯನಾಕಾರ ಪಶುಪವಾಹನಶೂರ।
ಪಶುಸಮಯೋದ್ಧಾರ ವಿಷದ ವಿಭವಾಸ್ಫಾರ।
ದಶದಿಗ್ಯಶಃಪೂರ ಕುಸುಮಬಾಣಶರಿರ ಭಸಿತಾಂಗ ಮೊದಕಾರ।
ಅಸಮಪುಣ್ಯಶರೀರ ವಸುಧಾಚಯಾಧಾರ।
ಭಸಿತಕಾಯಾ ಕುಮಾರ ಪಿಶಿತಾಶನೊಸ್ಮಾರ।

ಲಸಿತ ಶೈವಾಚಾರಸುವಿರನಿತ ಉದ್ಧಾರ ಬಸವ ರಣದಿರ ಶರಣೂ॥೧೦೦॥
ಶಂಕರಸಂಹಿತೆಯ ನಂದ್ಯದ ಪದಂ ಸಂಪೂರ್ಣ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೨೯

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೨೯

ಮಲ್ಲೇಶ್ವರನ ನಾಂದ್ಯ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೮೨ನೆಯ ಪತ್ರದಿಂದ ಪ್ರಾರಂಭವಾಗಿ ೮೮ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ವಾರ್ಧಕಷಟ್ಪದಿ; ౭೧ ನುಡಿಗಳು

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ। ಮಲ್ಲೇಶ್ವರನ ನಾಂದ್ಯವ ಬರೆವುದಕ್ಕೆ ಶುಭಮಸ್ತು।

ಗುರುವೆ ಪರಿಪೂರ್ಣಪರಮಾತ್ಮಪರಮ್ಹಾನಂದು।
ದಿರವೆ ನಂಬಿದರಾತದೊಳಗೆಸವಸತ್ಯಸಾ।
ಗರವೆ ಸಚರಾಚರವ ನೆನಹುಮಾತ್ರದಿ ಪಾವನವ ಮಾಳ್ಪ ಕಲ್ಪತರುವೆ॥
ಇರವೆ ಸದ್ಭಕ್ತಜನರಾ ಮನದಕೊನೆಯಲ್ಲಿ।
ಮೊರವದೋಂಕಾರನಾದಕ್ಕೆ ಪರವಸಗೊಂಡು।
ಶಿರವ ತೂಗಾಡಿತಿಪಾಗುರುಮೂರ್ತಿಸಲಹೆನ್ನ ಮಲ್ಲೇಶ ಪಾರ್ವತೀಶ॥೧॥

ಅಂತ್ಯ:

ಗುರುಚೆನ್ನಮಲ್ಲೇಶಪಾರ್ವ್ವತೀಶ್ವರಶುಭ।
ಕರಚರಿತೆನಾಂದ್ಯಗಳ ಬರದೋದಿ ಕೇಳಿದವರ್ಗ್ಗೆ।
ದೊರಕುವದಭೀಷ್ಟಾರ್ಥಸಿದ್ಧಿಸಿದ್ಧಿಸುಭವದುರಿತಕಂಟಕವಳಿವುದು।
ಪರಮಪಂಚಾಕ್ಷರಿಯ ಸ್ಮರಿಸುತ್ತಲಾವಾಗ।
ಗುರುಜಂಗಮದಪಾದತೀರ್ಥಾಮೃತವ।
ನೆರದು ರಕ್ಷಿಸುವ ಮಮಕರ್ತ್ತ ಮದ್ಗುರು ಚೆನ್ನಮಲ್ಲೇಶಪಾರ್ವತೀಶಾ॥೭೧॥

ಮಲ್ಲೇಶ್ವರನ ನಾಂದ್ಯಸಂಪೂರ್ಣಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೩೦

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೩೦

ವೈರಾಗ್ಯಷಟ್ಪದಿ

ಪತ್ರದ ಅಳತೆ: ೬.೫" X ೨"; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೮೮ನೆಯ ಪತ್ರದಿಂದ ಪ್ರಾರಂಭವಾಗಿ ೯೭ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ; ೧೦೧ ನುಡಿಗಳು

ವಸ್ತು: ವೈರಾಗ್ಯಬೋಧನೆ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ವೈರಾಗ್ಯಷಟ್ಪದಿಯ ಬರೆವುದಕ್ಕೆ ಶುಭಮಸ್ತು॥

ಶ್ರೀಮನ್ಮಹಾಮಹಿಮಸಾರನಂದಿರನಂ।
ಕಾಮಿತಾರ್ಥವನೀವಕರುಣಿಯಂ ತರುಣಿಯಂ।

ವಾಮಭಾಗದಿತಾಳ್ದ ದಕ್ಷನಂತ್ರ್ಯಕ್ಷನಂಪಕ್ಷನಂ ಶಿವಭಕ್ತಿಯ।
ವ್ಯೋಮಗಂಗಾಶಿರೋತ್ತಂಸನಂ ಹಂಸನಂ।
ಕಾಮೋಗ್ರಜಿಹ್ವಗವಿನಾಯಕನ ನಾಯಕನ।
ರಾಮಕಂದರ ಉರ್ದ್ಧರೇತನಂನೀತಂ ಬಸವಲಿಂಗನ ಭಜಿಪೆನೂ॥೧॥

ಅಂತ್ಯ:

ಗುರುಲಿಂಗಚರರೂಪ ಧರಿಸಿದಮಲಾನಂದ।
ವರಬಸವಚೆಂನಬಸವಾಂಕಚಿತ್ರಭುದೇವ।
ಪರಮಮಹಿಮರಪಾದಮಕರಂದಪಂಕರುಹಷಟ್ಪದಂಗಳ ಸಂತತಂ॥
ಸ್ಥಿರವಾಗಿ ಹೃತ್ಕಮಲದೊಳ್ಧರಿಸಿ ವದನಸರ।
ಸಿರುಹದೊಳ್ನೆಲೆಗೊಳಿಸಿಪರಿಸಿಭಕ್ತಿಜ್ಞಾನ।
ವಿರತಿಯಂಕರುಣಿಪನು ಕರಕಂಜಪುರವಾಸವರದಿಷ್ಟಲಿಂಗೇಶನೂ॥೧೧೧॥

ವೈರಾಗ್ಯಷಟ್ಪದ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೩೧

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೩೧

ಲಿಂಗಸ್ತೋತ್ರದ ಷಟ್ಪದಿ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೯೮ನೆಯ ಪತ್ರದಿಂದ ಪ್ರಾರಂಭವಾಗಿ ೧೦೭ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ; ೧೧೧ ನುಡಿಗಳು

ವಸ್ತು: ಶಿವಸ್ತುತಿ

ಆದಿ:

ಶ್ರೀಗುರು ಬಸವಲಿಂಗಾಯನಮಃ॥ ಲಿಂಗಸ್ತೋತ್ರದಷಟ್ಪದಿ॥ ಭಾವಿನಿಪದ॥

ಶ್ರೀಮದಗಜಾವಾಮಭಾಗೋ।
ದ್ದಾಮವಪುರಭಿರಾಮನಭಿನುತ।
ಸಾಮಗಾನಸ್ತೋಮಸರಸಪ್ರೇಮನರಿಭೀಮಾ॥
ಕಾಮತಾತಪಿತಾಮಹಪ್ರಮು।
ಖಾಮರೇಂದ್ರಕ್ಷೇಮನಪ್ರತಿ।
ನಾಮನೊಸೆದುದ್ಧರಿಸುಗೆಂಮಂ ಸಿದ್ಧವಟಧಾಮಾ॥೧॥

ಅಂತ್ಯ:

ಈ ಪರಮಘನಲಿಂಗನುತಿಗಳಂ ಪ್ರೀತಿಯಿಂ।
ದೆ ಪೊತ್ತುಪಠಿಸಿ ಕೇಳ್ದೊಡೆ ವಿಸ್ತರಿತಾಂನ
ರೂಪಿಸಿದೊಡಂ ಪೊಗಳ್ದೊಡಂ ಕ್ಷಾಮಡಾಮರ ಯಕ್ಷರಾಕ್ಷಸವಿಷಫಣಿ।
ಕೋಪಪವಿಮೃತ್ಯುತಸ್ಕರಸಿಂಹಮದತುಂಬಿ।
ಭೂಪದಾರಿದ್ರಾದಿಕಾಲಕಾಮಾಗ್ನಿಸಂ।
ತಾಪಶಾರ್ದೂಲಭಯವಳಿದ ಘನಲಿಂಗೈಕ್ಯರಪ್ಪುದಿದುಸಿದ್ಧಾಂತವು॥೧೧॥

ಲಿಂಗಸ್ತೋತ್ರದ ಷಟ್ಪದಂಗಳು ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೩೨

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೩೨

ಶಿವಲಿಂಗಷಟ್ಪದಿ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೧೦೭ನೆಯ ಪತ್ರದಿಂದ ಪ್ರಾರಂಭವಾಗಿ ೧೧೪ನೆಯ ಪತ್ರದ ವರೆಗಿದೆ.

ಕೃತಿಕಾರ: ದ್ವಿತೀಯ ಮುರಿಗಾಗುರುಸಿದ್ಧಸ್ವಾಮಿ

ಸ್ವರೂಪ: ವಾರ್ಧಕಷಟ್ಪದಿ; ೧೦೫ ನುಡಿಗಳು

ವಸ್ತು: ಶಿವಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ। ಮುರಿಗಾಗುರುಸಿದ್ಧಸ್ವಾಮಿಗಳು ನಿರೂಪಿಸಿದ ಶಿವಲಿಂಗಷಟ್ಪದಿಯ ಬರೆವುದಕ್ಕೆ ಸುಭಮಸ್ತು ನಿರ್ವಿಘ್ನಮಸ್ತು। ವಾರ್ದ್ಧಿಕ ಪದ॥

ಶ್ರೀಮದಜಹರಿಪುರಂಧರಪೂರೋಗಮದೇವ।
ತಾಮಣಿಮಕುಟಘಟಿತಚರಣಸರಸಿಜಶರಣ।
ರಾಮಯವಿಪಿನದಾವ ದಾನವಮದಾಂಧತಮಸೋದಯನಳಿನಬಾಂಧವ।
ಹಿಮಭೂಧರಶರಾಸನಸಸಿಕಲೋತ್ತಂಸ।
ರಾಮಚಂದ್ರಾವನಿಪ ಪಾಶುಪತ ಬಾಣದಸು।
ಧಾಮಯಕಳೆವರಮಹೇಶ್ವರಗಿರೀಶ್ವರನಿರೀಶ್ವರರೆಶ್ವರಪಾಲಯಾ॥೧॥

ಅಂತ್ಯ:

ಇದನಾವನೋದುವಾತಂ ಕೇಳುವಾತನಂ।
ತಿದನಾವ ಬರೆವಾತನಿದನಾವನನುಸರಿಸಿ।
ಮುದದಿಂದೆಪೇಳುವಾತಂ ಜನನಮರಣಂಗಳನು ಮೀರಿಯಿಹಪರದೊಳೂ।
ಸದಮಳಮಹಾದೇವನಿಂನೊಳೆ ತತ್ತ್ವವನು।
ಪದುಳದಿಂ ಪಡೆದಮೃತವಮೃತವಂದಾದಂತೆ।
ಮುದದಿಂದಲೊಂದಾಗಿಮೆಱೆವನ್ನೆಶುಭಮಸ್ತುಸದಯಶಿವಲಿಂಗೇಶ್ವರಾ॥೧೦೫॥

ಶ್ರೀಮದ್ವಿತೀಯ ಮುರಿಗೆಸ್ವಾಮಿಗಳು ನಿರೂಪಿಸಿದ ಶಿವಲಿಂಗಷಟ್ಪದಿ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೧

ಕೃತಿಕ್ರಮಾಂಕ: ಕೆ ೧/೩೩

ಶಿವಮಹಿಮಾಶತಕ

ಪತ್ರದ ಅಳತೆ: ೯.೫'' X ೨''; ಪ್ರತಿ ಮುಖದಲ್ಲಿ ಸುಮಾರು ೧೨ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೧೧೪ನೆಯ ಪತ್ರದಿಂದ ಪ್ರಾರಂಭವಾಗಿ ೧೨೨ನೆಯ ಪತ್ರದ ವರೆಗಿದೆ.

ಕೃತಿಕಾರ: ಮಲ್ಲಿಕಾರ್ಜುನ [ಚೆನ್ನಮಲ್ಲಿಕಾರ್ಜುನದೇವ]

ಸ್ವರೂಪ: ವೃತ್ತಕಂದಗಳು; ೧೧೫ ನುಡಿಗಳು

ವಸ್ತು: ಶ್ರೀಚೆನ್ನಮಲ್ಲೇಶ್ವರಾ ಎಂಬ ಅಂಕಿತದಲ್ಲಿ ರಚಿತವಾಗಿರುವ ಶತಕ

ಆದಿ: ಶ್ರೀಗುರು ಬಸವಲಿಂಗಾಯನಮಃ।। ಶಿವಮಹಿಮಾಶತಕವ ಬರೆವುದಕ್ಕೆ ನಿರ್ವಿಘ್ನಮಸ್ತು।।

ಶಾರ್ದೂಲವೃತ್ತಂ।।

ಶ್ರೀಮತ್ಪದ್ಮಜಪದ್ಮನಾಭವಿನುತಶ್ರೀಪಾದಪದ್ಮಂದ್ವಯ।
ಕರ್ಮೊದ್ಗರ್ವ್ವತಮಃಪ್ರಚಂಡತರಮಾರ್ತಂಡಪ್ರಶಸ್ತಪ್ರತಿ।
ಸ್ತೋಮಸ್ವಾಂತನಿಶಾಂತತಾಂತನಿರುಪಾಧಿಜ್ಯೋತಿರ್ಮೋಕ್ಷಪ್ರದಾ।
ಸ್ವಾಮಿಶ್ರೀಗಿರಿನಾಥರಕ್ಷಿಸೊಲವಿಂ ಶ್ರೀಚೆನ್ನಮಲ್ಲೇಶ್ವರಾ।।೧।।

ಅಂತ್ಯ:

ಪರಶಕ್ತಿಪ್ರಯುತಂ ಪರಾತ್ಪರತರಂ ಪಂಚಾನನಂ ಪಾಪಸಂ।
ಹರಣಂ ಪನ್ನಗಭೂಷಣಂ ಪರಿಹೃತಾಂಭೋಜಾತನೇತ್ರಾತ್ಮಜಂ।।
ಪರಿಪೂರ್ಣಂ ಪಶುಪಂ ಪರೇತಪತಿಗರ್ವ್ವಾಂಬುಪ್ರದಸ್ವರ್ಘನಂ।
ಪರಮೇಶಾಪರಿಪಾಲಿಕೆಮ್ಮನೊಲವಿಂ ಶ್ರೀಚೆನ್ನಮಲ್ಲೇಶ್ವರಾ।।೧೧೩।।

ಕಂದ॥ ಶ್ರುತಿಸೂಕ್ತಿರತ್ನಮಾಲಾ।

ಸ್ತುತಿಯಂ ಗುರುಕರುಣದಿಂದೆಪೇಳ್ದಂ ಸ್ವಯಶೋ।
ಭಿತಮಲ್ಲಿಕಾರ್ಜುನಂ
ಪರಿಹೃತಪರಮತಚೆನ್ನಮಲ್ಲಿಕಾರ್ಜುನದೇವಂ॥೧೧೪॥

ಶಿವಮಹಿಮಾಶತಕಂವೈ
ಷ್ಣವವಾಗದ್ವೈತಿಕರ್ಮಿಗಳಹೃತ್ಸಲ್ಯಂ।
ಪ್ರವರಶಿವಭಕ್ತಪರಿಸ
ದ್ಭುವನದೊಳಿದು ಬೆಳ್ಪರತ್ನದೀಪಿಕೆಯೆನಿಹುಂ॥೧೧೫॥

ಶಿವಮಹಿಮಾಶತಕಸಮಾಪ್ತ ಮಂಗಳಮಸ್ತು॥

ವಿಶೇಷವಿಷಯ: ಸಮಗ್ರ

****

೩೪

ಕಟ್ಟು: ಕೆ ೨

ಕೃತಿಕ್ರಮಾಂಕ: ಕೆ ೨/೧

ಚೆನ್ನಬಸವೇಶ್ವರದೇವರು ನಿರೂಪಿಸಿದ ಕರಣಹಸಿಗೆ

ಪತ್ರದ ಅಳತೆ: ೧೦.೧೧" X ೨"; ಪ್ರತಿಪುಟದಲ್ಲಿ ಸುಮಾರು ೮ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫-೪೬ ಅಕ್ಷರಗಳು; ೧ನೆಯ ಪತ್ರದಿಂದ ಪ್ರಾರಂಭವಾಗಿ ೧೧ನೆಯ ಪತ್ರದ ವರೆಗಿದೆ.

ಕೃತಿಕಾರ: ಚೆನ್ನಬಸವೇಶ್ವರ

ಸ್ವರೂಪ: ಗದ್ಯ

ವಸ್ತು: ವೀರಶೈವ ಆಧ್ಯಾತ್ಮವಿಚಾರ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಚೆನ್ನಬಸವೇಶ್ವರದೇವರು ನಿರೂಪಿಸಿದ ಕರಣಹಸಿಗೆ॥ ಓಂಕಾರವೆಂಬ ಪ್ರಣವದಲ್ಲಿ। ಅಕಾರ ಉಕಾರ ಮಕಾರ।

ಮೂರು ಬೀಜಾಕ್ಷರ। ಅಕಾರವೆ ನಾದ। ಉಕಾರವೆ ಬಿಂದು। ಮಕಾರವೆ ಕಳೆ। ಮತ್ತಂ। ಅಕಾರವೆ ರುದ್ರ। ಉಕಾರವೆ ಈಶ್ವರ। ಮಕಾರವೆ ಸದಾಶಿವ। ಇಂತಿ ಅಕಾರ ಉಕಾರ ಮಕಾರಕ್ಕೆ ನಾದಬಿಂದುಕಳೆಯೆ ಆಧಾರ। ಆ ನಾದಬಿಂದುಕಳೆಗೆ ಪ್ರಕೃತಿಯೆ ಆಧಾರ। ಆಪ್ರಕೃತಿಗೆ ಪ್ರಾಣವೆ ಆಧಾರ। ಆ ಪ್ರಾಣಕ್ಕೆ ಲಿಂಗವೆ ಆಧಾರ। ಆಯೆಂದೊಡೆ ಅನಾಹತ। ಊಯೆಂದೊಡೆ ನಾದವಿಳಿಯಿತ್ತು। ಮಾಂಯೆಂಬಲ್ಲಿ ಬಿಂದು ಬಂದು ಕೂಡಲು। ಶಿವಶಕ್ತಿಯಾಗುತ್ತುಂ ವಿಹಂತ ಓಂಕಾರವಾಯಿತ್ತು। ಅಕಾರವೆಂಬ ಪ್ರಣವದಲ್ಲಿ। ಅಗ್ನಿರ್ಭವತಿ ರುಗ್ವೇದಸ್ತಥಾ ರುದ್ರೇತಿ ದೇವತಾ॥ ಅಕಾರೇ ಚ ಲಯಂ ಯಾಂತಿ। ಪ್ರಥಮೇ ಪ್ರಣವಾಂಶಿಕೇ ॥೧॥

ಅಂತ್ಯ:

ಯಿನ್ನು ಮನಮನನಮನನಿಯ್ಯ। ಯಿಂತಿವು ಮನತ್ರಯಂಗಳು। ಯಿವಕ್ಕೆ ವಿವರ। ಮನವೆಂಬಲ್ಲಿ ತಂನ ಹೇಳುವದು। ಮನನವೆಂಬಲ್ಲಿ ತಂನಿಂದಊವ ಜ್ಞಾನವ ಹೇಳುವದು। ಮನನಿಯ್ಯವೆಂಬಲ್ಲಿ ಜ್ಞಾನದಿಂದಊಹಿಸಿಕೊಂಬ ವಸ್ತುವ ಹೇಳುವದು। ಯಿಂತಿವು ೩ಕರಣಂಗಳು। ಯಿವಕ್ಕೆ ವಿವರ। ಮಾನಸವೆಂದೊಡೆ ಮನದಲ್ಲಿ ನೆನೆವುದು। ವಾಚಕವೆಂದೊಡೆ ನುಡಿವುದು। ಕಾಯಕವೆಂದೊಡೆ ತನ್ನ ಮುಟ್ಟಿಮಾಡುವದು। ಯಿಂತಿವು ತ್ರಿಕರಣಂಗಳ ಭೇದ॥೩೦॥ ಯಿನ್ನ ಉದರಾಗ್ನಿ। ಮಂದಾಗ್ನಿ। ಭುಕಾಮಾಗ್ನಿ। ಶೋಕಾಗ್ನಿ। ವಡಬಾಗ್ನಿ। ಯಿಂತಿವು ಪಂಚಾಗ್ನಿಗಳು॥

ಚೆನ್ನಬಸವೇಶ್ವರದೇವರು ನಿರೂಪಿಸಿದ ಕರಣಹಸಿಗೆ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ; ಉತ್ತಮಪ್ರತಿ

****

ಕಟ್ಟು: ಕೆ ೨

ಕೃತಿಕ್ರಮಾಂಕ: ಕೆ ೨/೨

ಮಿಶ್ರಾರ್ಪಣ

ಪತ್ರದ ಅಳತೆ: ೧೦.೧೧" X ೨"; ಪ್ರತಿಪುಟದಲ್ಲಿ ಸುಮಾರು ೮ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫-೪೬ ಅಕ್ಷರಗಳು; ೧೧ನೆಯ ಪತ್ರದಿಂದ ಪ್ರಾರಂಭವಾಗಿ ೧೭ನೆಯ ಪತ್ರದ ವರೆಗಿದೆ.

ಕೃತಿಕಾರ: ಚೆನ್ನಬಸವೇಶ್ವರ

ಸ್ವರೂಪ: ವಚನ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ|| ಮಿಶ್ರಾರ್ಪಣ||

ಷಟ್ಸ್ಥಲಬ್ರಹ್ಮವನೊಡಗೂಡಿಹೆವೆಂದೊಡೆ
ಅದಾರಿಗೆ ನಿಲುಕುವದಯ್ಯಾ|
ಅರ್ಪಿತ ಅನಾರ್ಪಿತವೆಂದು ವಪ್ಪಕ್ಕೆ ನುಡಿಯಬಹುದಲ್ಲದೆ|
ಅರ್ಪಣದ ಭೇದವನಱಿದು
ಸೊಪ್ಪಡಗಿದ ನಿಃಪತಿ ನಿಜಲಿಂಗೈಕ್ಯದಿರವು|
ಅದೆಂತಯ್ಯ ಯಂದೊಡೆ|
ಕಾಯದ ಕೈಮುಟ್ಟಿ ಕ್ರಿಯಾರ್ಪಣವ ಮಾಡುವಲ್ಲಿ|
ಭೋಜ್ಯವಾಚಾರಲಿಂಗದಲ್ಲಿ ಯಿಂತಿ|
ಪಾನ್ಯ ಗುರುಲಿಂಗದಲ್ಲಿ|
ಭಕ್ಷ ಶಿವಲಿಂಗದಲ್ಲಿ|
ಚೋಹ್ಯ ಜಂಗಮಲಿಂಗದಲ್ಲಿ|
ಯಿವೆಲ್ಲ ಅಲ್ಲಿಯ ಅಱಿವು ಮಹಾಲಿಂಗದಲ್ಲಿ
ಯಿಂತೀ ಷಡ್ವಿಧಕಾ ಕಾಯಾರ್ಪ್ಪಣವಾದಲ್ಲಿ
ಮುಂದೆ ಕರಣಾರ್ಪಣಭೇದಮಂ ಪೇಳ್ವೆ||

ಅಂತ್ಯ:

ಆದಿ ಶೂನ್ಯಂ ಮಧ್ಯ ಶೂನ್ಯಂ
ಅಂತ್ಯಶೂನ್ಯಂ ನಿರಾಮಯಂ।
ಸರ್ವಶೂನ್ಯಂ ನಿರಾಲಂಬಂ।
ನಿಶ್ಯಬ್ದಂ ಬ್ರಹ್ಮ ಉಚ್ಯತೆ।
ಎಂಬ ನುಡಿಗೆಡೆಗೊಡದೆ।
ನಿರವಯ ಸ್ಥಲದಲ್ಲಿ ನಿಜವನ್ನೈದಿ।
ಪ್ವಾನಿಗ ಅಭೇದ್ಯಭೇದಕ ಅಸಾಧ್ಯ ಸಾಧಕ।
ಚಿನ್ಮಯ ಚಿದ್ರೂಪ ಚಿದಾನಂದ।
ಅಂತಪ್ಪ ದಿವ್ಯ ಶಿವಯೋಗಿ ಮಹಾಶರಣ
ಪ್ರಭುದೇವರ ಬಸವಣ್ಣನ ಕರುಣದಿಂದಾನು
ಬದುಕಿದೆನಯ್ಯಾ ಕೂಡಲ ಚೆನ್ನ ಸಂಗಮದೇವಾ॥

ಮಿಶ್ರಾರ್ಪಣ ಸಮಾಪ್ತವು ಮಂಗಳಮಹಾಶ್ರೀಶ್ರೀಶ್ರೀಶ್ರೀಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ; ಉತ್ತಮಪ್ರತಿ

****

೩೬

ಕಟ್ಟು: ಕೆ ೨

ಕೃತಿಕ್ರಮಾಂಕ: ಕೆ ೨/೩

ಪಂಚೀಕರಣದ ಪದ

ಪತ್ರದ ಅಳತೆ: ೧೦.೧೧" X ೨"; ಪ್ರತಿಪುಟದಲ್ಲಿ ಸುಮಾರು ೮ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫-೪೬ ಅಕ್ಷರಗಳು; ೧೭ನೆಯ ಪತ್ರದಿಂದ ಪ್ರಾರಂಭವಾಗಿ ೧೮ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಪಂಚೀಕರಣದ ಪದ॥

ಕ್ರೀಡಿಗೆ ಸೃಷ್ಟಿಯ ಸೂತ್ರವನೊಲವಿಂ।
ಹೂಡಿ ವಿಲಾಸಿಸುವಂತಂನುವನೊಡ।
ಟೀಕು॥ ಜಲಂಧರ। ಜಲಂಧರಾಸುರನ। ಕ। ಬ್ರಂಹ್ಮನ। ಕಂ। ಮಸ್ತಕವನು। ಧರನ। ಧರಿಸಿದಂಥಾ ಪರಶಿವನ। ಸದೃಶ। ಸಮಾನವಾದ। ಅಂಗ। ದೇಹವುಳ್ಳಂಥಾ ದೇವನೆ। ಜಯಜಯ। ಸರ್ವ್ವೋತ್ಕರ್ಷನಾಗು ಸರ್ವ್ವೋತ್ಕರ್ಷನಾಗು। ಮಹಾ। ಶ್ರೇಷ್ಠರಾದ। ಪ್ರಮಥಗಣ। ನಂದೀಶಾದಿ ಪ್ರಮಥಗಣಂಗಳೆಂಬ। ಶಸ್ಯ। ಪೈರುಗಳಿಗೆ। ಪ್ರಾವೃಟನ। ಪೌರ್ನಮಿಯ ಚಂದ್ರನಾದಂಥಾ ದೆವನೆ। ಜಯಜಯ। ಸರ್ವ್ವೋತ್ಕರ್ಷನಾಗು ಸರ್ವ್ವೋತ್ಕರ್ಷನಾಗು। ಮಲತ್ರಯ। ಮೂರು ಮಲಂಗಳೆಂಬ। ಲತಾ। ಬಳ್ಳಿಗೆ। ಲವಿತ್ರ। ಕುಡುಗೋಲಾದಂಥ। ವುಂನ್ನತ। ದೊಡ್ಡಿತ್ತಾದ। ಭವ। ಸಂಸಾರವೆಂಬ। ಅಬ್ಧಿ। ಸಮುದ್ರಕ್ಕೆ। ಭೈತ್ರ। ಹಡಗಾದಂಥ। ಅತ್ರಿ। ಅತ್ರಿಮುನಿಶ್ವರನಿಂದ। ವಿ। ವಿಶೇಷವಾಗಿ। ನುತ। ಕೀರ್ತಿಸಿಕೊಳ್ಳುತ್ತಿರ್ದ್ದಂಥಾ। ದೇವನೆ। ಜಯಜಯ। ಸರ್ವ್ವೋತ್ಕರ್ಷನಾಗು ಸರ್ವ್ವೋತ್ಕರ್ಷನಾಗು। ಜನನ ಮರಣ। ಹುಟ್ಟುಹೊಂದುಗಳೆಂಬ। ಕುಜ। ವೃಕ್ಷವನು। ಕ್ರುಂತ। ಛೇದಿಸುವದಕ್ಕೆ। ಕ್ಷುತ। ಕುರಿತ್ತಾದ। ಪರಶು। ಪರಶುಕೊಡಲಿಯಾದಂಥಾ

ದೇವನೆ। ಜಯಜಯ। ಸರ್ವೋತ್ಕರ್ಷನಾಗು ಸರ್ವೋತ್ಕರ್ಷನಾಗು। ಯೆತೀಶ। ಯೋಗೀಶ್ವರರ। ಹೃತ್। ಹೃದಯವೆಂಬ। ಕುಮುದ। ನೈದಿಲೆಗೆ। ರಜಸಕರಾಜ। ನಕ್ಷತ್ರಪತಿಯಾದ ಚಂದ್ರನಾದಂಥ ದೇವನೆ। ಜಯಜಯ। ಸರ್ವೋತ್ಕರ್ಷನಾಗು ಸರ್ವೋತ್ಕರ್ಷನಾಗು। ಮಾಯ। ಅವಿದ್ಯಾಪ್ರಪಂಚೆಂಬ। ಅಂಧಕಾರ। ಕಾವಳವನು। ಭೇದ್ಯನ। ಪೋಡುವದಕ್ಕೆ। ಸೂರ್ಯ್ಯ। ಆದಿತ್ಯನಾದಂಥ ದೇವನೆ। ಜಯಜಯ। ಸರ್ವೋತ್ಕರ್ಷನಾಗು ಸರ್ವೋತ್ಕರ್ಷನಾಗು। ಪ್ರಭುವೆ। ಸ್ವತಂತ್ರಕರ್ತೃವಾದಂಥ ದೇವನೆ। ಮಾಂ। ಯೆನ್ನನು। ತ್ರಾಹಿ ತ್ರಾಹಿ। ರಕ್ಷಿಸು ರಕ್ಷಿಸುಯೆಂಬುದರ್ಥ॥ ಪ್ರ ೭೮॥ ಪ್ರಭುದೇವರ ಪುರಾಣದ ಸಾಂಧ್ಯದ ಪದಗಳು ಸಮಾಪ್ತ ಮಂಗಳಮಹಾಶ್ರೀ॥

ವಿಶೇಷವಿಷಯ: ತುಂಬ ಸುಂದರ ಶುದ್ಧ ಬರವಣಿಗೆ; ಪ್ರತಿಪದಾರ್ಥದ ರೂಪದಲ್ಲಿ ಟೀಕೆ ಬರೆಯಲಾಗಿದೆ.

****

೭೪

ಕಟ್ಟು: ಕೆ ೭

ಕೃತಿಕ್ರಮಾಂಕ: ಕೆ ೭/೧

ಏಕೋತ್ತರಶತಸ್ಥಲಸಾರಾಮೃತ

ಪತ್ರದ ಅಳತೆ: ೧೩" X ೨"; ಪ್ರತಿ ಪುಟದಲ್ಲಿ ಸುಮಾರು ೧೩ ಸಾಲುಗಳಿವೆ; ಪ್ರತಿ ಸಾಲಿನಲ್ಲಿ ೮೦-೮೫ ಅಕ್ಷರಗಳಿವೆ; ೧ನೆಯ ಪತ್ರದಿಂದ ೯೧ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ವಚನ ಮತ್ತು ಟೀಕಾಗದ್ಯ

ವಸ್ತು: ವೀರಶೈವಸಿದ್ಧಾಂತ

ಆದಿ:

ಶ್ರೀಗುರುಬಸವಲಿಂಗಾಯ ನಮಃ। ಯೆಕೊತ್ತರಶತಸ್ಥಲಸಾರಾಮೃತ॥ ಪಿಂಡಸ್ಥಲ॥

ಶಿಲೆಯೊಳಗಣ ಪಾವಕನಂತೆ
ಉದಕದೊಳಗಣ ಪ್ರತಿಬಿಂಬದಂತೆ

ಬೀಜದೊಳಗಣ ವೃಕ್ಷದಂತೆ
ಶಬ್ದದೊಳಗಣ ನಿಃಶಬ್ದದಂತೆ
ಗೊಹೇಶ್ವರಾ ನಿಮ್ಮ ಶರಣರ ಸಂಬಂಧಾ॥

ಟೀಕು॥ ಶಿಲೆಯೊಳಗಿಪ್ಪಗ್ನಿ ಮೈದೋಱದ ಹಾಂಗೆ ಪರಬ್ರಹ್ಮವು ಪಿಂಡಸ್ಥಲವಾಗಿರ್ದ್ದು ಕಾಣಿಸಬಾರದೆಂಬುದೀಗ ಶಿಲೆಯೊಳಗಣ ಪಾವಕನಂತೆಂಬ ಶಬ್ದಕ್ಕರ್ಥ॥ ಆವುದಾನೊಂದು ಪ್ರತಿಬಿಂಬವು। ಉದಕದೊಳಗಿರ್ದು ಆ ವುದಕದ ಗುಣಧರ್ಮಕರ್ಮವ ಹೊಂದ್ದದ ಹಾಂಗೆ ಆ ಪರಬ್ರಹ್ಮವು ಪಿಂಡಸ್ಥಲವಾಗಿರ್ದ್ದು ಆ ಪಿಂಡದ ಗುಣಧರ್ಮಕರ್ಮವ ಹೊದ್ದದಿಪ್ಪುದೀಗ। ವುದಕದೊಳಗಣ ಪ್ರತಿಬಿಂಬದಂತೆಂಬ ಸಬ್ದಕ್ಕರ್ಥ॥ ಬೀಜದೊಳಗಣ ವೃಕ್ಷದ ಹಾಂಗೆ ಆ ಪರಬ್ರಹ್ಮವು ಪಿಂಡಸ್ಥಲವಾಗಿರ್ದ್ದು ಆ ಪಿಂಡಮಧ್ಯದಲ್ಲಿ ಗೂಢವಾಗಿಪ್ಪುದೆಂಬುದೀಗ। ಬೀಜದೊಳಗಣ ವೃಕ್ಷದಂತೆಂಬ ಶಬ್ದಕ್ಕರ್ಥ॥ ಶಬ್ದದೊಳಗೆ ನಿಃಶಬ್ದವಿದ್ದುದನು ಭೇದಿಸಬಾರದ ಹಾಂಗೆ ಪರಬ್ರಹ್ಮವು ಪಿಂಡಸ್ಥಲವಾಗಿರ್ದ್ದು ಅಭೇದ್ಯಮಧ್ಯನಪ್ಪು ದೆಂಬುದೀಗ। ಶಬ್ದದೊಳಗಣ ನಿಃಶ್ಯಬ್ದದಂತೆಂಬ ಶಬ್ದಕ್ಕರ್ಥ॥ ಯಿದು ಒಂದು ಶಂಭವನಿರ್ವ್ವಚನಾ॥೧॥

ಅಂತ್ಯ:

ಆ ಪರಬ್ರಹ್ಮ ಪ್ರಭುದೇವರು ಅಂಗದಲ್ಲಿ ಅಳವಡಿಸಿಕೊಂಡು ನಿಜದಲ್ಲಿ ನಿರ್ವಯಲಾದರೆಂಬುದೀಗ। ಆ ಹಂಣ ಪ್ರಭುದೇವರು ಆರೋಗಣೆಯ ಮಾಡಿ ನಿಜದಲ್ಲಿ ನಿರ್ವಯಲಾದರೆಂಬ ಶಬ್ದಕ್ಕರ್ಥ॥ ಆ ಪ್ರಭುವಿನ ಕ್ರಪಾಪ್ರಸಾದವ ಚೆನ್ನಬಸವಣ್ಣನಳವಡಿಸಿಕೊಂಡ ಕಾರಣ ನಿಃಕಳಲ ಪರಬ್ರಹ್ಮವು ಹೃತ್ಕಮಲಕರ್ನಿಕಾಕುಹರ ಮಧ್ಯದಲ್ಲಿ ಯಿಂಬಿಟ್ಟುಕೊಂಡನೆಂಬುದೀಗ। ಪ್ರಭುವಿನ ಕಾರುಣ್ಯಪ್ರಸಾದವ ಕೊಂಡೆನಾಗಿ ಕೂಡಲಸಂಗಮದೇವರು ಯಿತ್ತ ಬಾರೆಂದು ತಮ್ಮ ಹೃತ್ಕಮಲದಲ್ಲಿ ಯಿಂಬಿಟ್ಟುಕೊಂಡನೆಂಬ ಶಬ್ದಕ್ಕರ್ಥ॥೧೦॥

ಅಂತು ವಚನ ೨೨೦ಕ್ಕಂ ಮಂಗಳ ಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೭

ಕೃತಿಕ್ರಮಾಂಕ: ಕೆ ೭/೨

ಎಲ್ಲಾ ಪುರಾತನರ ಬೆಡಗಿನ ವಚನ

ಪತ್ರದ ಅಳತೆ: ೧೩" X ೨"; ಪ್ರತಿ ಮುಖದಲ್ಲಿ ಸುಮಾರು ಹದಿಮೂರು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೮೦-೮೫ ಅಕ್ಷರಗಳು. ಪತ್ರ ೯೨ರಿಂದ ಪತ್ರ ೨೧೩ರವರೆಗಿದೆ.

ಕೃತಿಕಾರ:

ಸ್ವರೂಪ: ವಚನ ಮತ್ತು ಟೀಕಾಗದ್ಯ

ವಸ್ತು: ವೀರಶೈವಸಿದ್ಧಾಂತ

ಆದಿ:

ಶ್ರೀಗುರು ಬಸವಲಿಂಗಾಯನಮಃ। ಯಲ್ಲಾ ಪುರಾತನರ ಬೆಡಗಿನ ವಚನ॥ ಪ್ರಥಮದಲ್ಲಿ ಕೋಲಶಾಂತಯ್ಯಗಳ ವಚನ॥

> ಮೂರು ಮೊಲೆಯುನುಂಡು ಬಂದವ ನೀನಾರು ಹೇಳಾ ಸಂದಿಲ್ಲದರ್ಪ್ಪಣದಲ್ಲಿ ಬಂದು ನೊಂದೆಯಲ್ಲಾ ಅಂದಿನ ಬೆಂಬಳಿಯ ಮರದು ಯಿಂದಿನ ಸಂದೇಹಕ್ಕೊಡಲಾಗಿ ಯೀ ವುಭಯದ ಸಂದ ನಿಂನ ನೀನಱಿ ಪುಂಣ್ಯರಂಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗಾ॥

ಟೀಕು॥ ಸಂಸಾರವಿಷಯರಸೋದಕವ ತುಂಬಿಕೊಂಡಿಹಾ ತನುತ್ರಯ ಗಳೆಂಬವಿಗ। ಮೂರು ಮೊಲೆಯೆಂಬ ಶಬ್ದಕ್ಕರ್ಥ॥ ಆ ತನುತ್ರಯ ಸಂಬಂಧದಿಂದ ಜೀವಾತ್ಮನು ಆ ದೇಹೇಂದ್ರಿಯ ವಿಷಯಸುಖವ ನನುಭವಿಸುತ್ತಿರ್ದ್ದನೆಂಬುದೀಗ। ವುಂಡೂ ಯಂಬ ಶಬ್ದಕ್ಕರ್ಥ। ಆ ದೇಹೇಂದ್ರಿಯವಿಷಯಸುಖವನನುಭವಿಸಿದಾತ್ಮನು [ಪ್ರತಿ] ಭವದಲ್ಲಿ ಬರುತ್ತಿರ್ದ್ದನೆಂಬುದೀಗ। ಬಂದವನೆಂಬಶಬ್ದಕ್ಕರ್ಥ। ದಶವಾಯುಗಳ ದಶಗುಣ ಪ್ರಕೃತಿಯಲ್ಲಿ ಸಿಕ್ಕಿಬರುತ್ತಿರ್ದ್ದನೆಂಬುದೀಗ। ಈರೈದು ಕಂಡು ಬಂದವನೆಂಬ ಶಬ್ದಕ್ಕರ್ಥ। ಯಿಂತಪ್ಪ ಆತ್ಮಂಗೆ ಸುಜ್ಞಾನೋದಯವಾಗಿ ತನ್ನ ನಿಜಸ್ವರೂಪವಂ ಮಱದು। ಭವರಾಟನದೊಳಗೆ ಸಿಲ್ಕಿ ಕೆಟ್ಟೆವಲ್ಲಾಯೆಂದು ನಿರಿಕಿಸುತ್ತಿರ್ದ್ದವೆಂಬುದೀಗ। ಬಂದವ

ನಿನಾರು ಹೇಳಾ ಯಂಬ ಶಬ್ದಕ್ಕರ್ಥ। ಅಂತು ಪ್ರಪಂಚಿನಲ್ಲಿ ಬಿನ್ನವಿಲ್ಲದಿರ್ದ್ದ ಪಂಚಭೂತ ಗ್ರಾಮವೆಂಬುದೀಗ। ಸಂದಿಲ್ಲದ ಪಟ್ಟಣದಲ್ಲಿ ಯಂಬ ಶಬ್ದಕ್ಕರ್ಥ। ಅಂತು ಪಂಚಭೂತಮುಖ್ಯವಾದ ತನುತ್ರಯದಲ್ಲಿ ಆತ್ಮನು ಸಿಲ್ಕಿ ಕಾಲಕಾಮರ ಕೈಯಲ್ಲಿ ಬಡಿವಡೆದು ದುಃಖಬಟ್ಟನೆಂಬುದೀಗ। ನೊಂದೆಯಲ್ಲಾ ಎಂಬ ಶಬ್ದಕ್ಕರ್ಥ॥ ಅಂತು ಅನಾದಿ ಪರಶಿವತತ್ವದಲ್ಲಿ ಭಿನ್ನವಿಲ್ಲದೆ ಕೂಡಿರ್ದ್ದ ಚಿದಾಂಶಕನಾದಾತ್ಮಂಗೆ ಶಿವ ತನ್ನ ಪಂಚಮುಖದಿಂದ ಪಂಚತತ್ವ ಸಂಬಂಧವಾದ ದೇಹವ ಆತ್ಮಂಗೆ ಸಂಬಂಧವ ಮಾಡಲು ನಿಜವಂ ಮಱದು ದೇಹೋಹಂಮೆಂದು ದೇಹೇಂದ್ರಿಯಸುಖವ ಮೆಚ್ಚಿದ ಕಾರಣಯೆಂಬುದೀಗ ಅಂದೆನ್ನ ಬೆಂಬಳಿಯ ಮಱದು ಯಂಬ ಶಬ್ದಕ್ಕರ್ಥ॥ ಯಿಂತಪ್ಪ ಸಂಕಲ್ಪ ಕೊಡಲಾಗಿ ಜೀವಭಾವಭ್ರಾಂತಿಗೆ ಸಿಕ್ಕಿ ಕೆಟ್ಟನೆಂಬುದೀಗ। ಯಿಂದೆನ್ನ ಸಂದೇಹ ಕ್ಕೊಡಲಾಗಿ ಯಂಬ ಶಬ್ದಕ್ಕರ್ಥ॥ ಅಂತಿರ್ದ್ದಾತ್ಮಂಗೆ ಜ್ಞಾನೋದಯವಾಗಿ ತಂನ ನಿಜವಪ್ಪ ಪರಬ್ರಹ್ಮವನಱದು ಸಂದೇಹಭ್ರಾಂತಿಯೊಡನೆ ತೊಳಲುವ ಸಕಲಪ್ರಪಂಚವಿವೃತ್ತಿಮಾಡೆ ಶ್ರೀಗುರುಕಾರುಣ್ಯಮಂ ಪಡದು ಶಿವಸತ್ಪಥದಲ್ಲಿ ಆಚರಿಸುತ್ತಿರ್ದ್ದನೆಂಬುದೀಗ। ಯಿಂತೀ ಉಭಯದ ಸಂದ ನಿನ್ನ ನೀನಱಯಂಬ ಶಬ್ದಕ್ಕರ್ಥ॥

ಅಂತ್ಯ:

> ಅಂಡವೆಂಬ ತತ್ತಿಯೊಡದು ಪಿಂಡ ಪಲ್ಲಟವಾಗಗಂಡಗಂಡರನಱಸಿ
> ತೊಳಲಿ ಬಳಲುತ್ತೈದಾರೆ ಖಂಡಮಂಡಲದೊಳಗೆ ಕಂಡೆನೊಂದು
> ಚೋದ್ಯವ ಕಂಡನ ಕಯ್ಯ ದರ್ಪ್ಪಣವ ಪ್ರತಿಬಿಂಬ ನುಂಗಿತ್ತು
> ದಿವರಾತ್ರೆಯು ಉದೆಯದ ಬೆಳಗ ಕತ್ತಲೆ ನುಂಗಿತ್ತು
> ಗೊಹೆಶ್ವರನಲ್ಲಿಯೆ ನಿರ್ವ್ವಯಲಾಯಿತ್ತೂ॥

ಟೀ॥ ಶ್ರೀಶ್ರೀಶ್ರೀ ಮದ್ಗುರು ಯಡೆಯೂರ ತೋಂಟದ ಯೋತಿವರನ ಪಾದಾಬ್ಜವೇ ಗತಿ॥.....

ವಿಶೇಷವಿಷಯ:

೨೧೩ನೆಯ ಪತ್ರಕ್ಕೆ ಅಪೂರ್ಣವಾಗಿ ನಿಂತುಹೋಗಿದೆ.

****

ಕಟ್ಟು: ಕೆ ೭

ಕೃತಿಕ್ರಮಾಂಕ: ಕೆ ೭/೩

ಕಾಲಜ್ಞಾನದ ವಚನಗಳು

ಪತ್ರದ ಅಳತೆ: ೧೩" X ೨"; ಪ್ರತಿ ಮುಖದಲ್ಲಿ ಸುಮಾರು ಹದಿಮೂರು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೮೦-೮೫ ಅಕ್ಷರಗಳು. ಪತ್ರ ೨೧೪ರಿಂದ ಪತ್ರ ೨೧೯ರವರೆಗಿದೆ.

ಕೃತಿಕಾರ: ?

ಸ್ವರೂಪ: ವಚನ

ವಸ್ತು: ವೀರಶೈವಸಿದ್ಧಾಂತ

ಆದಿ:

ಶ್ರೀಗಣಾಧಿಪತಾಯ ನಮಃ॥ ಶ್ರೀಗುರು ಬಸವಲಿಂಗಾಯನಮಃ॥ ....ವುದಕ್ಕೆ ಶುಭಮಸ್ತು। ಶೋಭನಮಸ್ತು। ವಚನ। ಮುಂದೆ ಚೆಂನಬಸವೇಶ್ವರದೇವರು ನಿರೂಪಿಸಿರುವಂತ ಕಾಲಜ್ಞಾನದ ಸೂಚನೆಯಂ ಪೇಳುತ್ತಿದ್ದ ....ಯ್ಯಗಳೆ ರುದ್ರಮುನಿಸ್ವಾಮಿಗಳು। ಸಿದ್ಧರಾಮಯ್ಯ ಕೇಳಿ। ಸದ್ಯವರವೆ॥೧॥

ಅಂತ್ಯ:

ಯಿಂತ ಅವಗುಣಗಳನು ವಿಚಾರಿಸುವರಿಲ್ಲ। ಸೀಲವಂತರೆಂದ್ಯಮಗೆ ಸರಿಯಿಲ್ಲೆನುತಲಿ। ಕತು ....ಬಳನೊಲುಮೆಯಿಲ್ಲದೆ। ಕಾಲಾಂತಕನ ಬಾಧೆ ಬಂಧನಕೆ ವಳಗಹರೆ॥೭॥

ಶ್ರೀಶ್ರೀಶ್ರೀ ಮಮ್ಮಗುರು ಯಡೆಯೂರ ತೋಂಟದ ಯೇತಿವರನ ಪಾದಾಬ್ಜವೇ ಗತಿ॥.....

ವಿಶೇಷವಿಷಯ:

೨೧೯ನೆಯ ಪತ್ರಕ್ಕೆ ಮುಗಿದಿದೆ. ನಡುನಡುವೆ ತ್ರುಟಿತ.

****

ಕಟ್ಟು: ಕೆ ೮

ಕೃತಿಕ್ರಮಾಂಕ: ಕೆ ೮/೧

ಪರಮರಹಸ್ಯ [ಷಟ್‌ಸ್ಥಲನಿರ್ಣಯ]

ಪತ್ರದ ಅಳತೆ: ೬.೫'' X ೨''; ಪ್ರತಿಪುಟದಲ್ಲಿ ಸುಮಾರು ೬ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦ ಅಕ್ಷರಗಳು; ೧ರಿಂದ ೩೦ ಪತ್ರಗಳು

ಕೃತಿಕಾರ: ?

ಸ್ವರೂಪ: ಸಂಸ್ಕೃತಮೂಲ ಮತ್ತು ಅದಕ್ಕೆ ಸಾರಾಂಶರೂಪದ ಕನ್ನಡ ಗದ್ಯ ಟೀಕೆ

ವಸ್ತು: ಷಟ್ಸ್ಥಲವಿಚಾರ

ಆದಿ:

ಶ್ರೀಗಣಾಧಿಪತಯೇನಮಃ। ಶ್ರೀಗುರುಬಸವಲಿಂಗಾಯನಮಃ। ಪರಮರಹಶ್ಯೆ ಬರವದಕ್ಕೆ ಸುಭಮಸ್ತು। ಆಯುರಾರೋಗ್ಯೈಲಶ್ವರ್ಯಮಸ್ತು।

ಕೈಲಾಶೆ ಶಿಖರೆ ರಮ್ಯೋ।
ಭಕ್ತಿಸಂಧಾವನಾಯಕಂ।
ಪ್ರಣಮ್ಯೆ ಪಾರ್ವತಿಭಕ್ತ್ಯೈಲ।
ಶೆಂಕರಂ ಪರಿಪೃಶ್ಚತಿ॥

ಟೀಕು॥ ಅತ್ಯಂತ ರಮಣೀಯವಾಗಿರುತಿರ್ದಂಥಾ। ಕೈಲಾಸಶಿಪರ್ವತದ। ಶಿಖರದಲ್ಲಿ। ಭಕ್ತಿಸಂಧಾನಕ್ಕೆ ವಡೆಯನಾಗುತಂವಿದಂಥಾ। ಪರಮೇಶ್ವರನನು ಪಾರ್ವತಿದೇವಿ। ಭಕ್ತಿಯಿಂದ ನಮಸ್ಕಾರವಂ ಮಾಡಿ। ಬೆಸಂಗೊಳುತ್ತಂ ಯಿದ್ದಾಳೂ॥೧॥

ಶ್ರೀದೇವ್ಯೂವಾಚಾ। ಪಾರ್ವತಿದೇವಿ ನುಡಿದಳು॥

ಅಂತ್ಯ:

ಸದ್ಭಕ್ತಿಶ್ಚ ಸದಾಚಾರಂ।
ಸದ್ಗೋಷ್ಟಿ ಚ ಸದಾಸುಚಿಃ॥
ಸಂಮ್ಯೆಗ್ನಾನಸದಾನಂದಂ।
ತತ್ರ ತಿಷ್ಠಾಮಿ ಪಾರ್ವತಿ॥

ಟೀಕು॥ ಸದ್ಭಕ್ತಿಯೂ ಸದಾಚಾರವು। ಸದ್ಗೋಷ್ಟಿಯೂ। ಸುಚಿತ್ತವು। ಸಂಮ್ಯೆಗ್ನಾನವು। ಸದಾನಂದವು। ಯೆಲ್ಲಿಉಂಟೋ। ಅಲ್ಲಿ ಯಿಹೆನೆಂದು ಪಾರ್ವತಿದೇವಿಯರಿಗೆ ಪರಮೇಶ್ವರನು। ನಿರೂಪಿಸಿದನೂ॥೧೫೧॥

ಯಿತಿ ಉಮೆಯೀಶ್ವರಸಂವ್ವಾದೆ ಷಟ್ಸಲನಿರ್ಣಯು ಸಂಪೂರ್ಣಮಸ್ತು ಮಂಗಳ ಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಕೃತಿ ಪೂರ್ಣವಿದೆ

****

೭೮

ಕಟ್ಟು: ಕೆ ೮

ಕೃತಿಕ್ರಮಾಂಕ: ಕೆ ೮/೨

ಪ್ರಸಾದಚಿಂತಾಮಣಿ

ಪತ್ರದ ಅಳತೆ: ೬.೫''X೨''; ಪ್ರತಿಪುಟದಲ್ಲಿ ಸುಮಾರು ೯ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦ ಅಕ್ಷರಗಳು; ೪೧ರಿಂದ ೭೧ ಪತ್ರಗಳು

ಕೃತಿಕಾರ: ಶಾಂತಾಚಾರ್ಯ

ಸ್ವರೂಪ: ಟೀಕಾಗದ್ಯ; ಸಂಸ್ಕೃತ ಮೂಲದ ಜೊತೆಗೆ ಸಂಗ್ರಹರೂಪದ ಕನ್ನಡಗದ್ಯಟೀಕೆ.

ವಸ್ತು: ತೀರ್ಥಪ್ರಸಾದಾದಿಗಳ ಮಹತ್ತ್ವನಿರೂಪಣೆ

ಆದಿ:

ಲಿಂಗೋದಕವೆ ವಿಶೇಷವು। ಆವದು ಕ್ರಮಂ ಸ್ನಾನಪಾನಂಗಳಂ ಮಾಡುವ ಭಕ್ತಂಗೆ ಸರ್ವವ್ಯಾಧಿಸರ್ವಪಾಪಕ್ಷಯುವು। ತ್ರಿವಿಧ ಪಾದೋದಕಮಂ ಗಣೇಶ್ವರಾದಿ ಸಮಸ್ತ ಮುಮುಕ್ಷುಗಳು। ಕೊಂಡು ಧನ್ಯರಾದರು। ಯೆಂದು ಶಿವನಿರೂಪವು॥

ಪಾದೋದಕಂ ಪುರಭಿದಃ।
ಪಾಶಜಲ್ಮಂಹರಂಪರಂ॥

ಪಾಣಿಸೂಕ್ತಿಭಿರಾದ್ವಾಯಾಂ।
ವಪುಕಾಮಂ ಗಣೇಶ್ವರಾ॥೩೩॥
ನಿರ್ಮಾಲ್ಯಂ ಸಲಿಲಂ ಪ್ರಾಹು।
ದೇವದೇವಸ್ಯ ಶೂಲಿನಾಂ।
ಕ್ಷಯಂ ಕುಷ್ಟಜ್ವರಂ ಸ್ವಾಷಿ।
ಮುಚ್ಯೇತೇ ಕಿಲ್ಬಿಷ್ಯೈರಪಿ॥೩೪॥

ಹಾಂಗೆ ಪಾದೋದಕವು ಸರ್ವವ್ಯಾಧಿ ಸರ್ವಪಾಪಮಂ ತೆಸುವದುಯೆಂದು ವೀರಾಗಮದಲ್ಲಿ ಶಿವನಿರೂಪವು॥ ಮತ್ತಂ ಬ್ರಹ್ಮನಿರೆಯಲ್ಲಿ ಸನತ್ಕುಮಾರಂಗೆ ನುಡಿದನು॥ ಬ್ರಹ್ಮೊವಾಚ॥ ಪಾದೋದಕ ವಿಶೇಷವನು ಬೋಧಿಸುತ್ತಿದ್ದನೂ ಪಿತಾಮಹನು। ಬೋಧಿಸುತ್ತಿದ್ದನು॥

ಅಕಾಲಮೃತ್ಯುಮಥನಂ।
ಸರ್ವವ್ಯಾಧಿವಿನಾಶನಂ॥
ಸರ್ವಪಾಪ್ರೋಪಶಮನಂ।
ಶಂಭುಪಾದೋದಕಂ ಶುಭಂ॥೩೫॥

ಶಿವನ ಪಾದೋದಕವು। ಅಪಮೃತ್ಯು ಮುಂತಾದ ಸರ್ವಭಯ ನಿವಾರಣವೆಂದು। ಸನತ್ಕುಮಾರಂಗೆ ನುಡಿದನು॥

ಅಂತ್ಯ:

ಬ್ರಾಂಹ್ಮಿ। ಷಡದ್ವಾರತಿತರಃ॥ ಸಮಾಧಿಸಿದ್ಧೇಶ್ವರನ। ವರಕಾರುಂಣ್ಯೇ। ಕೃಪಾಲೋಕನದಿಂದ। ಯೀ ಪ್ರಸಾದಚಿಂತಾಮಣಿಯಲ್ಲಿ। ತೀರ್ಥಪ್ರಸಾದ ಗುರುಲಿಂಗಜಂಗಮ ಉತ್ಪತ್ಯಾದಿಶಷಮಂ। ವೇದಾಗಮ ಪೌರಾಣಂಗಳಲ್ಲಿ ಯಿದಿವನ ಗ್ರಂಥಮಂ ಸೂಚನೆ ಮಾತ್ರದಿಂದ। ಯೋಗಾಚಾರ್ಯ। ಷಡುಸ್ಥಲ ನಿರ್ಣಯರಾನ್ವಿತರಪ್ಪ॥ ವೇದಾಗಮ ನಿರುತರಪ್ಪ। ಶಾಂತಾಚಾರ್ಯನು। ಸಮಸ್ತ ಮಾಹೇಶ್ವರರ ವರ ಕಾರುಂಣ್ಯದಿಂ। ಕಿಂಚಿತ್ಸೂಮತಿಯಿಂದ। ಸ್ವಾನುಭವ ಸಿದ್ಧದಿಂದ। ಜಗಹಿತಾರ್ಥಮಾಗಿ ಪ್ರಕಾಶಿಸಲ್ಪಟ್ಟಿತು॥

ಟೀಕು॥

ಮಂಹಾನಾದ ಮಂಹಾಬಿಂದು।
ಮಹಾದಾರೌಶಸ್ವರೂಪಕಂ॥

ಮಹಾಜ್ಞಾನಮಯಂ ಶಾಂತಂ।
ಗುರುದೇವ್ವೋ ನಮೋಸ್ತುತೇ॥೨೫॥

ಸರ್ವಕರ್ಮವಿನಿರ್ಮುಕ್ತಂ।
ಸರ್ವಸಂಗವಿವರ್ಜಿತಂ॥
ಸರ್ವದೇವಮಯಂ ಶಾಂತಂ।
ಪಾಹಿಮದ್ಗುರುದೇವಯೋ॥೨೬॥

ಸುದ್ಧಬೋಧಾತ್ಮಕಂ ಪಾಹಿ।
ಪಾಹಿಪರಮಾತ್ಮರೂಪಯೋ॥
ಪಾಹಿಮಾಂ ಪರಮಾಂ ದೇವಾ।
ಶ್ರೀಮಂನಾಥಸ್ಯ ಪಾಹಿಮಾಂ॥೨೭॥

ಇತಿಶ್ರೀ ಪ್ರಸಾದಚಿಂತಾಮಣಿಯ ಪಂಚಮೋಧ್ಯಾಯಂ ಸಮಾಪ್ತಂ॥ ಮಂಗಳಮಹಾಶ್ರೀಶ್ರೀಶ್ರೀ॥ ಅಂತು ಸಂಧಿ ೫ಕ್ಕೆ ಶ್ಲೋಕ ೩೦೭ಕ್ಕೆ ಶುಭಮಸ್ತು॥

ವಿಶೇಷವಿಷಯ: ೩೧ರಿಂದ ೪೦ರವರೆಗಿನ ಗರಿಗಳು ಕಳೆದುಹೋಗಿವೆ; ಕೃತಿಯು ಮೊದಲಲ್ಲಿ ಲುಪ್ತ; ಉಳಿದಂತೆ ಅಂತ್ಯದವರೆಗೂ ಇದೆ. ೩೧ ರಿಂದ ೭೧ರವರೆಗೆ ೪೧ ಪತ್ರಗಳು; ಇದರಲ್ಲಿ ಮೊದಲ ೧೦ ಗರಿಗಳಿಲ್ಲ. ಒಟ್ಟು ಐದು ಅಧ್ಯಾಯಗಳಿವೆ.

****

೭೯

ಕಟ್ಟು: ಕೆ ೯

ಕೃತಿಕ್ರಮಾಂಕ: **ಕೆ ೯**

ಪಂಚತಂತ್ರ

ಪತ್ರದ ಅಳತೆ: ೧೩" X ೨"; ೧ರಿಂದ ೭೩ನೆಯ ಪತ್ರದವರೆಗೆ. ಪ್ರತಿಪುಟದಲ್ಲಿ ಸುಮಾರು ೮ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೫೭–೬೦ ಅಕ್ಷರಗಳಿವೆ.

ಕೃತಿಕಾರ: ???

ಸ್ವರೂಪ: ಕನ್ನಡ ಗದ್ಯದಲ್ಲಿದೆ: ನಡುನಡುವೆ ಸಂಸ್ಕೃತ ಶ್ಲೋಕಗಳೂ ಬರುತ್ತವೆ.

ವಸ್ತು: ವಿಷ್ಣುಶರ್ಮನ ಪಂಚತಂತ್ರದ ಕಥೆ

ಆದಿ:

ಶ್ರೀ ಗಣಾಧಿಪತಯೇನ್ನಮಃ।। ಪಂತಂತ್ರಿಯ ಪುಸ್ತಕಕ್ಕೆ ಶುಭಮಸ್ತು।। ಯಿತಿ ವಿದ್ಯಾಭ್ಯಾಸನೀತಿಸಾರಸಂಗ್ರಹೇ। ಶ್ರೀ ವಿಷ್ಣುಶರ್ಮಸ್ಯ ಕೃತೌ।। .... ರೋನಾಮ ಪೀಠಿಕೆಯೋಗ ಪ್ರಥಮಪರಿಯಾಯ।। ಮಿತ್ರಭೇದತಂತ್ರಮಂ ಪೇಳ್ವೆ।। ಗ್ರಂಥವಿಸ್ತರಭೀರೂಣಾಂ। ಬಾಲಾನಾಂ ಮಂದಚೇತ.... ಧಂಯಾಂ ಪಂಚತಂತ್ರಾಖ್ಯಂ। ಯಿದಂ ಸಂಕ್ಷಿಪ್ಯತೇ ಕ್ರುತಊ।।

ಟೀಕು।। ಬಾಲಕರಿಗೆ। ಅರಿತೂ ಅರಿಯದವರುಗಳಿಗೆ। ನೂತನವಾಗಿ ವಿದ್ಯಾಕಲಿ .... ಮೂರ್ಖರಾಗಿಯಿದ್ದವರಿಗೆ। ನೀತಿಮಾರ್ಗ್ಗಂಗಳ ಅರಿಯುಲೋಸುಗ। ಯೀಮಹಾಪಂಚತಂತ್ರಮಂ ನಿರ್ಮಿಸಿ ಪೇಳ್ವೆನದೆಂತೆನೆ।। ಕಥೆ .... ಪುರವೆಂಬ ಪಟ್ಟಣದಲ್ಲು। ಸುದರ್ಶನನೆಂಬ ರಾಯುಂ। ಆತಂಗೆ। ಚಿತ್ರರೇಕೆಯೆಂಬ ಸತಿ। ಅಮರಶಕ್ತಿಯೆಂಬ ಪ್ರಧಾನಂ। ಸಹಿ .... ದ ರಾಜ್ಯವನಾಳುತ್ತ। ಯಿದ್ದನು। ಆತನ ಗುಣಕಥನಂಗಳು ಅದೆಂತೆನೆ।।

ಶ್ಲೋಕ।। ಪ್ರಭುರ್ವಿವೇಕೀ ಪ್ರಮದಾಸುಸೀಲ।
ತುರಂಗ್ಗಮಂಶಸ್ತ್ರ.... ರಾ।।
ವಿದ್ವಾನ್ನಿರಾಗೀ ಧನಿಕಪ್ರದಾತಾ।
ಪಂಚೈವ ರತ್ನಾನಿ ಸಂಜೀವಲೋಕೇ।।

ಟೀಕು।। ಯೀ ಅಯಿದು ಗುಣವು ಜೀವರತ್ನವೆನಿಸಿಕೊಂಬವೂ।। .... ದೊರೆಗಳಲ್ಲಿ ವಿವೇಕಗುಣವಿರಬೇಕು। ರೂಪವತಿಯಾದ ಸತಿಯರಲ್ಲಿ ಸದ್ಗುಣವಿರಬೇಕು। ಜಾತಿ ಅಶ್ವವು ರಣದೊಳಗೆ ಘಾಯ .... ಮಹಾ ಧೈರ್ಯವಿರಬೇಕು। ವಿದ್ವಾಂಸರುಗಳಿಗೆ ರಾಗದ್ವೇಷವಿಲ್ಲದೆಯಿರಬೇಕು। ಧನಿಕಂಗೆ ತ್ಯಾಗಗುಣವಿರಬೇಕು। ಯೀ ಅಯಿದುಗುಣ ....ಕೊಂಬವು। ಮತ್ತೂ। ಅರಸುಗಳು ಯೀಹ ಲಕ್ಷಣ।।

ಅಂತ್ಯ:

ಕರುಣಕಟಾಕ್ಷದಿಂದ ಅನೇಕ ವಿದ್ವತ್ಕನ್ನಿಕೆಯಿಂದ। ಮಹಾಪ್ರಭುಡರಾದೆವು ಯೆಂದು ಬಿಂನ್ಯೆಸಲು। ವೊಂದು ದಿವಸಂ ಯೀ ವಿಷ್ಣುಶರ್ಮಂ ಯೀ

ಮೂವರು ಕುಮಾರರಂ ಕೂಡಿಕೊಂಡು। ಆ ಸುದರುಶನನೆಂಬ ರಾಯನ ಬಳಿಗೆ ಬಂದು। ಆಶೀರ್ವಾದಮಂ ಕೊಟ್ಟು ಕುಳ್ಳಿರಲಾಗಿ। ಯಿವರು ಮಹಾ ಪ್ರವೀಣರಾದರೆ ಯೆಂದು ರಾಯಂ ಕೇಳಲಾಗಿ ಆ ವಿಷ್ಣುಶರ್ಮಂ ಅವರ ಕೂಡೆ ಪ್ರತ್ಯೇಕ ಪ್ರತ್ಯೇಕವಾಗಿ। ಕತೆಗಳಂ ಹೇಳಿಸಿ। ಯಿವರ ಕುಶಲತ್ವಮಂ ತೋರಿಸಲಾಗಿ। ರಾಯಂ। ಆತನ ಪ್ರಧಾನ ಮಹಾವಿನೆಯೋಗಿಗಳು ಕಂಡು ನೋಡಿ ಮೆಚ್ಚಿ ಅತಿ ಸಂತೋಷಂಬಟ್ಟು। ಯೀ ವಿಪ್ರಂಗೆ ಸಪ್ತಾಗಮಮಂ ಕೊಟ್ಟು ಕಳುಹಿದನೂ। ಯಿತ್ತಲಿ ಕುಮಾರರು ಮಹಾಧರ್ಮ ಉದಾರತ್ವದಿಂದ ಸ್ತಿರಬುದ್ಧಿಯಿಂದಲು ರಾಜ್ಯವನಾಲುತ್ತಯಿದ್ದರೆನೆ।

ವೃತ್ತ॥ ಯೆತಿಮುನಿವರವಾಕ್ಯಂ। ದಾಪ್ತಸಂತೋಷಪೋಶ
ಗಗನಚರವಂದ್ಯಂ। ಮುನಿಮಹಾಪ್ರಹಸನಿಳವಲಯ।
ಶಾಮಲಾಂಗದಾಮಲ। ಕವಿಕಾಮಿನಿಭಿರ್ಲಲಾಸ॥

ಟೀಕು॥ ಯಿಂತೆಂಬ ನೀತಿಯ ಮರಿಯಾದೆಯಲ್ಲು॥ ಆ ಕುಮಾರರು ಚಿರಕಾಲ ಪರಿಯಂತ್ರದಲ್ಲು। ಮಹಾ ಆಯಿಶ್ವರ್ಯದಿಂದ ಸುಖರಾಜ್ಯಂಗೈವುತ್ತಿದ್ದರೂ॥ ಯಿತಿ ಪಂಚತಂತ್ರದ ಕಥೆ ಮಹಾಸಮಾಪ್ತ ಮಂಗಳಮಹಾ॥

ವಿಶೇಷವಿಷಯ: ವಿಷ್ಣುಶರ್ಮನ ಪಂಚತಂತ್ರದ ಕಥೆಯ ಕನ್ನಡ ಗದ್ಯ ರೂಪಾಂತರ; ಕೃತಿಯು ಹಲವೆಡೆ ತ್ರುಟಿತವಾಗಿದೆ; ಕೊನೆಗೆ ೭೨ನೆಯ ಪತ್ರವಿಲ್ಲ; ೭೩ನೆಯ ಪತ್ರಕ್ಕೆ ಕೃತಿಯು ಸಂಪೂರ್ಣವಾಗಿದೆ.

****

೮೦

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೦/೧**

ಏಕೋತ್ತರಶತಸ್ಥಲ

ಪತ್ರದ ಅಳತೆ: ೧೦'' X ೨''; ಪ್ರತಿಪುಟದಲ್ಲಿ ಸುಮಾರು ೧೦ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦-೬೫ ಅಕ್ಷರಗಳಿವೆ.

ಕೃತಿಕಾರ: ?

ಸ್ವರೂಪ: ವಚನ, ಸ್ವರವಚನ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ। ಸ್ವರಏಕೋತ್ತರಶತಸ್ಥಲದ ವಚನ।
ಪ್ರಥಮದಲ್ಲಿ ಪಿಂಡಸ್ಥಲ। ರಾಗ ಮಧುಮಾಧವಿ। ತಾಳ ದರು ಪಲ್ಲವ॥

ಬಿಂದುಬಿನ್ನಾಣದೊಳಗಂದವಿಡಿದಿಹ ಕಳಾ
ನಂದ ಪಿಂಡೋದಯದ ಜ್ಞಾನನಿರುತಾ॥

ಪದ॥

ಕಾರಮೇಘದೊಳು ಮಿಂಚಡಗಿ ತೋಱದ ತೆಱದಿ।
ನೀರೊಳಡಕಂಗೆಯ್ದ ಕಿಚ್ಚಿನಂತೆ।
ಬೀರುತಿಹ ಫಳರಸದೊಳಿಪ್ಪ ನವರುಚಿಯಂತೆ।
ವಾರಣದ ಮಸ್ತಕದ ಮುತ್ತಿನಂತೆ॥೧॥
ಶಶಿಕಾಂತದೊಳಗುದಕವಸರಡಗಿ ನಿಂದಂತೆ।
ಹಸುಳೆಯೊಳಗಣ ಸ್ವಪ್ನದೊಱದಂತೆ।

ಅಂತ್ಯ:

ಜ್ಞಾನಜ್ಯೋತಿಯ ಪ್ರಭೆ ತಾನಾಗಿ ನಿಂದಿರ್ದ್ದು।
ತಾನಾಗಿರ್ದ್ದೆನೆಂಬಜ್ಞಾನಶೂನ್ಯವಾಗಿ।
ತಾನೆ ತಂನೊಳು ಮೈಮಱದೊರಗಿದ।
ನಿರಾಳ ಜ್ಞಾನಾತೀತ ನಿರುಪಮ ನಿಷ್ಕಲ ನಿರ್ಭೇದ್ಯಾ॥೬॥
ಶಬ್ದನಿಶ್ಶಬ್ದವಾಗಿ ನಿಃಶಬ್ದವನಾಹತವಾಗಿ।
ಶಬ್ದ ನಿಃಶಬ್ದವೆಂಬ ಬುದ್ಧಿ ನಿರ್ವಯಲಾಗಿ।
ಯಿದ್ದುದು ಹೌದೆಂಬುದನಱಯದೆ ಮೆಱಗೆಟ್ಟ
ನಿಃಶಬ್ದಗಂಭೀರ ಗೊಹೇಶ್ವರಾ ನಿಂಮ ಬಸವಂಣಾ॥೭॥

ಅಂತು ಅಂಗಸ್ಥಲ ೪೪ಕ್ಕಂ ಪದನು ೨೫೪ಕ್ಕಂ ಲಿಂಗಸ್ಥಲ ೫೭ಕ್ಕಂ ಪದನು ೨೯೯ಕ್ಕಂ ಅಂತು ಉಭಯಂಗೂಡಿ ೫೫೩ಕ್ಕಂ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಈ ಪ್ರತಿಯಲ್ಲಿ ೫೯ರಿಂದ ೭೬ರವರೆಗಿನ ಪತ್ರಗಳಿಲ್ಲ.

****

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೦/೨**

ಅಷ್ಟಾವರಣತ್ರಿವಿಧಿ

ಪತ್ರದ ಅಳತೆ: ೧೦'' X ೨''; ಪ್ರತಿಪುಟದಲ್ಲಿ ಸುಮಾರು ೧೦ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦-೬೫ ಅಕ್ಷರಗಳಿವೆ.

ಕೃತಿಕಾರ: ?

ಸ್ವರೂಪ: ತ್ರಿವಿಧಿ

ವಸ್ತು: ಆಧ್ಯಾತ್ಮಿಕ

ಆದಿ:

ಜ್ಞಾನಪಂಚಾಕ್ಷರಿತತ್ವ॥

ಪಂಚಾಕ್ಷರಿ ಪರಬ್ರಹ್ಮಮೂರ್ತಿ ತಾನೆ।
ಪಂಚಾಕ್ಷರಿಜ್ಞಾನಕ್ಕೆ ಜ್ಞಾನಸಂಬಂಧವು।
ಪಂಚಾಕ್ಷರಿ ಶಿವತತ್ವ ಯೋಗಿನಾಥಾ॥೧೪೦॥

ಅಂತ್ಯ:

ಮಂತ್ರಮನವಾವರಿಸಿ ಭ್ರಾಂತುಗೆಟ್ಟುದು ನೋಡಾ।
ಶಾಂತಿ ಸಲಿಲದಿ ಯನ್ನ ಮೈವನದುದೂ।
ಕಂತುಕಾಲರನೊದೆದು ಮಹಂತರ ಮರಣಗೆಲಿದು ನಿ
ಶ್ಚಿಂತಸುಖಿಯಾದೆ ಯೋಗಿನಾಥಾ॥೧೪೫॥

ಅಷ್ಟವರತ್ರಿವಿಧಿ ಸಮಾಪ್ತ ಮಂಗಳಮಹಾ ಶ್ರಿಶ್ರೀಶ್ರೀ

ವಿಶೇಷವಿಷಯ: ಈ ಪ್ರತಿಯಲ್ಲಿ ೫ರಿಂದ ೭೫ರವರೆಗಿನ ಪತ್ರಗಳಿಲ್ಲ; ಹಾಗಾಗಿ ಈ ಕೃತಿಯ ಮೊದಲಿಂದ ೧೪೦ನೆಯ ಪದ್ಯದವರೆಗಿನ ಭಾಗ ಇಲ್ಲ. ಒಂದು ಪತ್ರದ ಅರ್ಧಮುಖದಷ್ಟು ಭಾಗ ಮಾತ್ರ ಲಭ್ಯವಿದೆ.

****

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೦/೩**

ಶೀಲವಂತನ ತ್ರಿವಿಧಿ

ಪತ್ರದ ಅಳತೆ: ೧೦'' X ೨''; ಪ್ರತಿಪುಟದಲ್ಲಿ ಸುಮಾರು ೧೦ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦-೬೫ ಅಕ್ಷರಗಳಿವೆ.

ಕೃತಿಕಾರ: ಚೆನ್ನಮಲ್ಲ

ಸ್ವರೂಪ: ತ್ರಿವಿಧಿ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಶೀಲವಂತನ ತ್ರಿವಿಧಿ॥

ಕಂದ॥ ನವಹಾತ್ಮಲಿಂಗಶಿವಯನ
ಲಮಲತರದ ಸಂಗ ಅಯಗಳೆರಡಾರ್ನ್ನಂಚಿ।
ದ್ರಮಣಲಿಂಗಾಂಗ ಸಂಗ
ಕ್ರಮವಾತ್ಮಸ್ಯುಲಿಂಗ ಪ್ರಣವಸಂಯೋಗಮಿದಂ॥

ತ್ರಿವಿಧಿ॥ ಶ್ರೀಗುರುದೇವಂಗೆ ಆಗಮಾತೀತಂಗೆ
ನಾಗಕಂಕಣಗೆ। ಯತಿವರಮರಳಾರ್ಯಂಗೆ
ರಾಗದಿಂದೊಮ್ಮೆ। ಶರಣೆಂಬೆ

ಅಂತ್ಯ:

ಯೆಲ್ಲಾಪುರಾತನರ ಮೆಲ್ಲಡಿಯ ನಿಜಹೃದಯ
ದಲ್ಲಿ ತಳದಗಲ। ದಿರು ಮಗನೆಯೆಂದು ಚೆನ್ನ
ಮಲ್ಲನನು ಸಲಹಿದಿರಿ ಗುರುವೆ॥೧೧೧॥

ಕಂದ॥ ಈ ಗುರುಸ್ತವವನಾವವ।
ರಾಗದಿ ಬರದೋದಿ ಕೇಳಿ ತಿಳಿದತ್ಯೆರ್ಯಸಲು।

ಭೋಗಮೋಕ್ಷಗಳು ಪರಶಿವ।
ಯೋಗಾನುಭಾವ ಪ್ರಸಾದಸುಖದೊರಕೊಳೂಂ॥

ಆತ್ಮಲಿಂಗಪ್ರಣವಸಂಯೋಗಸ್ಥಲಸಂಪೂರ್ನ್ನ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೮೩

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೦/೪**

ಶಂಕರದೇವರ ಕಂದ

ಪತ್ರದ ಅಳತೆ: ೧೦''X೨''; ೭೬ನೆಯ ಪತ್ರದಿಂದ ೮೪ನೆಯ ಪತ್ರದವರೆಗಿದೆ. ಪ್ರತಿ ಪುಟದಲ್ಲಿ ಸುಮಾರು ೧೦ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦-೬೫ ಅಕ್ಷರಗಳಿವೆ.

ಕೃತಿಕಾರ: ಶಂಕರದೇವ

ಸ್ವರೂಪ: ಕಂದ; ೧೨೧ ನುಡಿಗಳು

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಶಂಕರದೇವರ ಕಂದ॥

ಶರಣೆಂಬೆಂ ಶರಣೆಂಬೆಂ
ಶರಣೆಂಬೆಂ ನಿಚ್ಚನಿಚ್ಚ ಶರಣೆನುತಿಹೆ ನಾಂ
ಗುರುಲಿಂಗಜಂಗಮಶ್ರೀ
ಚರಣತಳಕ್ಕಂ ಪ್ರಸಂನಶಂಕರಲಿಂಗಾ॥೧॥

ಅಂತ್ಯ:

ಶ್ರೀನಾಗರಾಜಕಂಕಣ।

ದಾನವರಿಪುನಯನಚರಣನಿರುಪಮಭಕ್ತಿ॥
ಜ್ಞಾನವೈರಾಗ್ಯಮಂ ಕೊಡು
ನೀನೆನಗೊಲವಿಂ ಪ್ರಸಂನಶಂಕರಲಿಂಗಾ॥೧೨೧॥

ಶಂಕರದೇವರ ಕಂದ ಸಂಪೂರ್ನ್ನ ಮಂಗಳ ಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೮೪

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೦/೫**

ಎಳಮಲೆಯ ಗುರುಶಾಂತದೇವರುಸಿರಿಸಿದ ಡಣಾಯಕರ ಕಂದ

ಪತ್ರದ ಅಳತೆ: ೧೦" X ೨"; ೮೪ನೆಯ ಪತ್ರದಿಂದ ೮೮ನೆಯ ಪತ್ರದವರೆಗಿದೆ. ಪ್ರತಿಪುಟದಲ್ಲಿ ಸುಮಾರು ೧೦ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦-೬೫ ಅಕ್ಷರಗಳಿವೆ.

ಕೃತಿಕಾರ: ?

ಸ್ವರೂಪ: ಕಂದ; ೧೧೦ ನುಡಿಗಳು

ವಸ್ತು: ಅಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಯಳಮಲೆಯ ಗುರುಶಾಂತದೇವ ರುಸಿರಿಸಿದ ಡಣಾಯಕರ ಕಂದ॥

ಶ್ರೀಯಂ ಪಡವಡೆ ಸಾಸ್ವತ।
ದಾಯುಸ್ಯದಪೆಕ್ಷೆ ತನಗೆ। ಕೈಗೂಡುವಡಿ।
ಮಾಯಕೊಳಗಾಗದಿರ್ಪ್ಪಡೆ।
ಜಿಯ್ಯನಜಪ ಓಂ ನಮಃ ಶಿವಾಯಂಬ ಪದಂ॥೧॥

ಪುಣ್ಯಕ್ಷೇತ್ರದ ಬೀಜಂ।
ಪುಣ್ಯಮಹಾನದಿಗಳಿರಉಸುಕ್ರುತದ ಬಿಯಂ।
ಬಂಣಿಸಲಾರದಿ ಘನ।
ಪುಂಣ್ಯವಿದೆನಮಗೊಂನಮಃ ಶಿವಾಯಂಬ ಪದಂ॥೨॥

ಅಂತ್ಯ:

ಆರಕ್ಷರದಿಂ ಮಂತ್ರಂ।
ಮೂರುಕಂಣಭವನೊದ ವೆಗ್ಗಳ ದೈವಂ।
ಬೆರಿಲ್ಲವೆಂದು ಧರಿತ್ರಿಗೆ।
ಸಾರ್ದಿದನಾ ಕೇಶಿರಾಜ ದಂಡಾಧೀಶಂ॥೧೧೦॥

ಷಡಾಕ್ಷರಿಯ ಕಂದ ಸಂಪೂರ್ಣ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೮೫

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೦/೬**

ಮರುಳದೇವರ ಕಂದ: ಮರುಳದೇವ

ಪತ್ರದ ಅಳತೆ: ೧೦''X ೨''; ೮೮ನೆಯ ಪತ್ರದಿಂದ ೯೩ನೆಯ ಪತ್ರದವರೆಗಿದೆ. ಪ್ರತಿಪುಟದಲ್ಲಿ ಸುಮಾರು ೧೦ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦-೬೫ ಅಕ್ಷರಗಳಿವೆ.

ಕೃತಿಕಾರ: ಮರುಳದೇವ

ಸ್ವರೂಪ: ಕಂದ; ೧೩೪ ನುಡಿಗಳಿವೆ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಶ್ರೀಮರುಳದೇವರ ಕಂದ॥

ಶ್ರೀಮತ್ಸಾಂಭವಭಕ್ತಿ।
ಪ್ರೇಮಾನಂದಾಬ್ಧಿಸೋಮ ನತಜನದಯಾ ವಿ
ಶ್ರಾಮನರಿಭೀಮನನಗಜಾ।
ವಾಮಾಂಗೋದ್ದಾಮನೆಮ ಪ್ರಮಥಪ್ರಭುವೆ॥೧॥

ಸೋಮಾರ್ಕ್ಕಸಿಖಿವಿಲೋಚನ।
ಕಾಮಾಂತಕ ತ್ರೈಪುರಾರಿಭವಹರಶಂಕರ।
ತಾಮರಸಾಕ್ಷಜಸುರವಾ।
ದ್ಯಾಮರಸೇವಿತಪದಾಬ್ಜ ಪರಮ ಪ್ರಭುವೆ॥೨॥

ಅಂತ್ಯ:

ವರಬಸವ ಚೆಂನಬಸವೇ
ಶ್ವರಪ್ರಭು ಮಹದೇವಿ ಸಿದ್ಧರಾಮೇಶ್ವರಮು।
ಖ್ಯರ ಪ್ರಮಥರಡಿಗಳನು ಹೃ
ತ್ಸರಸಿಜದೊಳು ತಾಳ್ದು ಬಾಳ್ದೆ ಪರಮಪ್ರಭುವೆ॥೧೩೪॥

ಮರುಳುದೇವರು ನಿರೂಪಿಸಿದ ಕಂದ ಸಂಪೂರ್ಣ ಮಂಗಳಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೮೬

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೦/೭**

ಅಕ್ಷರಾಂಕಮಾಲಿಕಾಗದ್ಯ (ಸಂ)

ಪತ್ರದ ಅಳತೆ: ೧೦'' X ೨''; ೯೩ನೆಯ ಪತ್ರದಲ್ಲಿದೆ. ಪ್ರತಿಪುಟದಲ್ಲಿ ಸುಮಾರು ೧೦ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦-೬೫ ಅಕ್ಷರಗಳಿವೆ.

ಕೃತಿಕಾರ: ಪಾಲ್ಕುರಿಕೆ ಸೋಮನಾಥ

ಸ್ವರೂಪ: ಪದ್ಯ, ಪದ್ಯಗಂಧಿಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಅಕ್ಷರಾಂಕಮಾಲಿಕಾಗದ್ಯ॥
ನಂದಿಮಾಲಿನೀವೃತ್ತ॥

ಓಂ ಜಯಜಯ ಬಸವಾಖ್ಯಸ್ವಾನುಭೂತ್ಯೈಕಸೌಖ್ಯಃ
ಪ್ರಮಥಗಣಪವಿತ್ರಃ ಪ್ರಸ್ಫುರದ್ಭಕ್ತಿಗೋತ್ರಾಃ।
ಪ್ರಣಮಿತಬುಧವರ್ಯ್ಯಃ ಸ್ವಾರದೈಶ್ವರ್ಯಧೂರ್ಯ್ಯಃ
ಪ್ರಥಿತ ವೃಷಭರೂಪ ಭ್ರಾಮಮನಃ ಪ್ರತಾಪಃ॥೧॥

ಅಂತ್ಯ:

ಅಕ್ಷರಸ್ತುತಿಪಾತ್ರ। ಯಿತಿ ಶಿವಕರಂ ಶ್ರೀಬಸವದಂಡನಾಥ ನಮಸ್ತೇ ನಮಸ್ತೇ
ನಮಃ॥

ಗ್ರಂಥ॥ ಅಕಾರಾದಿಕ್ಷಕಾರಾಂತಂ। ಮಕಾರೋದ್ಯಕ್ಷಮಾಲಿಕಂ।
ಪ್ರಸಾದಿ ಸೋಮನಾಥಾಖ್ಯ। ಬಸವಸ್ಯಕೃಪಾನಿಧಿಃ॥

ಅಕ್ಷರಮಾಲಿಕಾಗದ್ಯ ಸಮಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೮೭

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೦/೮**

ನಮಸ್ಕಾರಗದ್ಯ

ಪತ್ರದ ಅಳತೆ: ೧೦''X೨''; ೯೪ನೆಯ ಪತ್ರದಿಂದ ೯೫ನೆಯ ಪತ್ರದವರೆಗಿದೆ.
ಪ್ರತಿಪುಟದಲ್ಲಿ ಸುಮಾರು ೧೦ ಸಾಲುಗಳು; ಪ್ರತಿ ಸಾಲಿನಲ್ಲಿ
ಸುಮಾರು ೬೦-೬೫ ಅಕ್ಷರಗಳಿವೆ.

ಕೃತಿಕಾರ: ಪಾಲ್ಕುರಿಕೆ ಸೋಮನಾಥ

ಸ್ವರೂಪ: ಪದ್ಯ, ಪದ್ಯಗಂಧಿಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ನಮಸ್ಕಾರಗದ್ಯ॥

ಶ್ರೀಕಂಠೋದ್ಭವವೇದಚೋದಿತಲಸದ್ಭಿರವ್ರತಃ ಪ್ರರಕಿಕ್ರಿಯಾ।
ಚರ್ಯ್ಯ ದೇಶಿಕ ದೇಶಿಕಾಯ ಭುವನಸ್ತುತ್ಯಾಯ ನಿತ್ಯಾಯ ಸ।
ದ್ಭಾಂಡಾಗಾರ ಧುರಂಧರಾಯ ಸುಮಹದ್ರುದ್ರಾಯ ಭದ್ರಾಯತೇ।
ಸಾಕ್ಷಶ್ರೀವೃಷಾಧಿಪಾಂ ಸಬಸವಾದಿಶಾಯ ತಸ್ಮೈ ನಮಃ॥೧॥

ಅಂತ್ಯ:

ಗ್ರಂಥ॥ ಬಕಾರಾಯ ಸಕಾರಾಯ।

ವಕಾರಾಯ ನವೋನಮಃ॥
ನಮೋ ವೃಷಭಜಾತಾಯ।
ಬಸವಾಯ ತೇ ನಮೋನಮಃ॥

ಕಂದ॥ ಸರಸ ನಮಸ್ಕೃತಿಗದ್ಯಂ।

ತರಪದಮಣಿಖಚಿತವಾಕ್ಯವರ್ನಾಬ್ಜಷ್ಟೋ॥
ತ್ತರಶತಕುಸುಮಂಗಳ ಬಸ।
ವರಸರ್ಗರ್ಪಿಸಿದ ಪಾಲ್ಕುಱಿಕೆ ಸೋಮಾಂಕಂ॥

ನಮಸ್ಕಾರಗದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೦/೯**

ಪಂಚಪ್ರಕಾರಗದ್ಯ

ಪತ್ರದ ಅಳತೆ: ೧೦''X೨''; ೯೫ನೆಯ ಪತ್ರದಿಂದ ೯೬ನೆಯ ಪತ್ರದವರೆಗಿದೆ.
ಪ್ರತಿಪುಟದಲ್ಲಿ ಸುಮಾರು ೧೦ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦-೬೫ ಅಕ್ಷರಗಳಿವೆ.

ಕೃತಿಕಾರ: ಪಾಲ್ಕುರಿಕೆ ಸೋಮನಾಥ

ಸ್ವರೂಪ: ಪದ್ಯ; ಪದ್ಯಗಂಧಿಗದ್ಯ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ।। ಪಂಚಪ್ರಕಾರಗದ್ಯ।। ಶ।।

ಸ್ವಸ್ತಿಶ್ರೀಪ್ರಮಥಾನ್ವಯೋತ್ತಮಸಿಲಾಧಶ್ರೀಮುನೀಂದ್ರಾತ್ಮಜಾ
ಶ್ರೀಕಂಠಪ್ರತಿಬಿಂಬಮೂರ್ತಿರನಘಶ್ರೀನಂದಿನಾಥೋವಿಭೂ।
ತಸ್ಯಾಂಶೋದ್ಭವದಂಡನಾಥ ಬಸವಾ ಶ್ರೀನಾಮಧೇಯಪ್ರಭೋ।
ತತ್ಕಾರುಣ್ಯತರಂಗಿತಂ ಮ್ಯೈ ಸದಾ ನಿಕ್ಷೇಪ್ಯತಾನ್ವೀಕ್ಷಣಂ।।೧।।

ಓಂ ಜಯಜಯ ಬಸವ ಬಸವ ಶ್ರೀಮನ್ಮಹಾವೃಷಭೇಂದ್ರಪರಾವತಾರ। ಸಮಂಚಿತ ವೀರಮಾಹೇಶ್ವರಾಚಾರಸಾರ ಪ್ರಮಥಗಣಾಲಂಕಾರ ಹಾರ ಜಗತ್ರಯಾಧಾರದೆಮ ಬಸವಾ।।೨।।

ಅಂತ್ಯ:

ಜಯಶಿವರಂಜನ। ಜಯಭವಭಂಜನ।
ಜಯಕರುಣಾಕರ। ಜಯಸುರಭಿಕರ।
ಜಯಗತದೂಷಣ। ಜಯನುತಭಾಷಣ।
ಜಯಗುಣರಾಜಿತ। ಜಯಗಣ ಪೂಜಿತ।

ಜಯಜಯಶ್ರೀ ಬಸವದಂಡನಾಥ ನಮಸ್ತೆ ನಮಸ್ತೆ ನಮಃ॥
ಗ್ರಂಥ॥ ಬಸವಸ್ಯ ಕೃಪಾಮೂರ್ತ್ತಿ।

ಸೋಮನಾಥಪ್ರಸಾದಿನಾಂ॥
ಅನವದ್ಯಮಿದಂ ಗದ್ಯಂ।
ಮಮಗದ್ಯಂ ಜಗನ್ನುತಂ॥

ಪಂಚಪ್ರಕಾರಗದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೮೯

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೦/೧೦**

ಅಷ್ಟೋತ್ತರಶತನಾಮದ ಗದ್ಯ

ಪತ್ರದ ಅಳತೆ: ೧೦''X ೨''; ೯೬ನೆಯ ಪತ್ರದಿಂದ ೯೭ನೆಯ ಪತ್ರದವರೆಗಿದೆ. ಪ್ರತಿಪುಟದಲ್ಲಿ ಸುಮಾರು ೧೦ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦-೬೫ ಅಕ್ಷರಗಳಿವೆ.

ಕೃತಿಕಾರ: ?

ಸ್ವರೂಪ: ಪದ್ಯ, ಪದ್ಯಗಂಧಿಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಅಷ್ಟೋತ್ತರಶತನಾಮದ ಗದ್ಯ। ವೃತ್ತ ಉ॥

ಚಿತ್ಕಳಿಕ್ರತಾಂಗ ಜಯಚಿನ್ಮಯಚಿತ್ಸುಖಚಿತ್ಸ್ವಭಾವಭೃತ್।
ಚಿತ್ಕಮಳಾರ್ಕ್ಕ ಚಿದ್ಘನ ಚಿದಾತ್ಮ ಚಿದದ್ವಯ ಚಿದ್ವಿಶೇಷವಿತ್।
ಚಿತ್ಕ್ರುತ ಚಿದ್ವಿಶಿಷ್ಟ ಚಿದಖಂಡ ಚಿದೌಘ ಚಿದಂತ ಚಿತ್ಸುಕೃತ್।
ಚಿತ್ಕನಕಾಂಗಚಿದ್ರಸಲದ್ಬಸವೇಶಮಹಿಶ ಸಂತತಂ॥೧॥

ಅಂತ್ಯ:

ಗ್ರಂಥ॥ ಸ್ತುವಾಮಿ ಶ್ರದ್ದಯಾ ನಿತ್ಯಂ।
ಮಮತಾಂ ಬಸವಾಂಹ್ವಯಂ।
ಯಸ್ತದಷ್ಟೋತ್ತರಂ ಸಾಕ್ಷಾ
ತ್ಸ್ಯತಕಂ ಭುಕ್ತಿಮುಕ್ತಿದಂ॥

ಅಷ್ಟೋತ್ತರಶತನಾಮಗದ್ಯಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಹನ್ನೆರಡು ಪದ್ಯಗಳಿವೆ; ಸಮಗ್ರ

****

೯೦

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೦/೧೧**

ಷಟ್ಸ್ಥಲದ ಗದ್ಯ

ಪತ್ರದ ಅಳತೆ: ೧೦''X೨''; ೯೭ನೆಯ ಪತ್ರದಿಂದ ೯೮ನೆಯ ಪತ್ರದವರೆಗಿದೆ. ಪ್ರತಿಪುಟದಲ್ಲಿ ಸುಮಾರು ೧೦ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೭೦-೭೫ ಅಕ್ಷರಗಳಿವೆ.

ಕೃತಿಕಾರ: ಪಾಲ್ಕುರಿಕೆ ಸೋಮನಾಥ

ಸ್ವರೂಪ: ಪದ್ಯ, ಪದ್ಯಗಂಧಿಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಷಟ್ಸ್ಥಲದ ಗದ್ಯ॥

ಮ॥ ಸ್ವಸ್ತಿಶ್ರೀಷಡ್ವಿದಾಂಗಸ್ಥಲವೆನಿಪಲಷಸದ್ಭಕ್ತಮಾಹೇಶ್ವರಾಂಹಂ।
ಹಸ್ತವ್ಯಾಪ್ತಪ್ರಸಾದಿಪ್ರವಿಮಲಹೃದಯಾಪ್ರಾಣಲಿಂಗಿಶ್ಚಯಜ್ಯಾ।
ತಿಸ್ತತ್ಪಾಶಂ ಭೂತಪ್ರಭಲಶರಣಲಿಂಗೈಕ್ಯ ತದ್ದಿವ್ಯ ಮಹಾತ್ಮೆಯಂ।
ಸ್ತೋತ್ರಂ ಮಾಳ್ಪನಾಹ ಕರುಣಿಸೆನಗೆ ನೀನೊಲ್ದು ಸೋಮೇಶಲಿಂಗಾ॥೧॥

ಅಂತ್ಯ:

ಕಂದ॥ ಅಷ್ಟೋತ್ತರಶತವಿದದಿಂ।

ದಿಷ್ಟಸುಷಟ್ಸ್ಥಲದ ಸುಪ್ರಸಂಗದನೊರದೆಂ ॥
ಸ್ಪಷ್ಟತರೋಕ್ತಿಗಳಿಂದಂ।
ಶ್ರಿಷ್ಟಂ ಶ್ರೀಸೋಮನಾಥಸದ್ಗುಣಯೂಥಂ॥

ಷಟ್ಸ್ಥಲಗದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೯೧

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೦/೧೨**

ಉದಾಹರಣಗದ್ಯ

ಪತ್ರದ ಅಳತೆ: ೧೦" X ೨"; ಪ್ರತಿಪುಟದಲ್ಲಿ ಸುಮಾರು ೧೦ ಸಾಲುಗಳು;
ಪ್ರತಿ ಸಾಲಿನಲ್ಲಿ ಸುಮಾರು ೬೦-೬೫ ಅಕ್ಷರಗಳಿವೆ.

ಕೃತಿಕಾರ: ಪಾಲ್ಕುರಿಕೆ ಸೋಮನಾಥ

ಸ್ವರೂಪ: ಪದ್ಯ, ಪದ್ಯಗಂಧಿಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಉದಾಹರಣಗದ್ಯ॥

ಜಯತು ಬಸವರಾಜಃ। ಪ್ರಾಣಲಿಂಗಾತ್ತಪೂಜಃ।
ಶರಣದಿಜಭೂಜಃ। ಸ್ಮರಸಂವಿತ್ಸರೋಜಃ।
ಗಣಪರಿಷದದೀನಃ॥ ಖ್ಯಾತದಾನಾಪದಾನಃ॥

ಅಂತ್ಯ:

ವೃತ್ತ॥

ಶ್ರೀಬಸವರಾಜಗುಣಮಣಿಕಚಿತಂ
ಜಯತೋತ್ಸವರ್ನಮಯಮೇತತ್।
ಸೋಮಸುಖವಿನಾರಚಿತ।
ಹೃದಯಾಭರಣಂ ಸದಾಮುದಾಹರಣಂ॥೧೭॥

ಉದಾಹರಣಗದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೯೨

ಕಟ್ಟು: ಕೆ ೧೦

ಕೃತಿಕ್ರಮಾಂಕ: **ಕೆ ೧೧\೧**

ನಾನಾರ್ಥರತ್ನಾಕರ

ಪತ್ರದ ಅಳತೆ: ೧೧'' X ೨''; ಪ್ರತಿ ಪುಟದಲ್ಲಿ ಸುಮಾರು ೮ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೧ನೆಯ ಪತ್ರದಿಂದ ೩೮ನೆಯ ಪತ್ರದ ವರೆಗಿದೆ.

ಕೃತಿಕಾರ: ದೇವೋತ್ತಮ

ಸ್ವರೂಪ: ವೃತ್ತಗಳು ಮತ್ತು ಟೀಕಾಗದ್ಯ

ವಸ್ತು: ನಾನಾರ್ಥ ನಿರೂಪಣೆ ಕೋಶ

ಆದಿ:

ಶ್ರೀಗುರು ಬಸವಲಿಂಗಾಯನಮಃ॥ ನಾನಾರ್ಥರತ್ನಾಕರ॥

ವೃತ್ತ॥ಶ್ರೀದಿವಿಜೇಂದ್ರವಂದಿತಪದಾಂಬುಜನಾನಾತಹೃತ್ಪಯೋಜಮಿ
ತ್ರೋದಯ ನವ್ಯನೂನಸಕಲಾಗಮಶಾ[ಸ್ತ್ರ]ರಾಜಿತೇಜಬೋ।
ಧೋದಯನುಂನತೋತ್ಸವದಯಾಂಚಿತಧರ್ಮಸುಧಾಬ್ಧಿಪೂರ್ಣಚಂ
ದ್ರೋದಯನಾದನಾದಿಪರಮೇಶ್ವರನೀಗೆಮಗಿಷ್ಟಸಿದ್ಧಿಯಂ ॥೧॥

ವಾಣಿ ಜಗತ್ಪಿತಾಮಹನ ರಾಣಿಯತಿವಸುಖಪ್ರದೈಕಕ।
ಲ್ಯಾಣಿಸುನೀಲರತ್ನನೀಲವೇಣಿ ಪದದ್ವಿತೀಯಾಬ್ಜ ನಿಮ್ಮ।
ಗೀರ್ವಾಣಿ ವಿಕರ್ಮವಲ್ಲರಿಕೃಪಾಣಿ ಸುಸಂಗೀತಗಾಣಿ ಗೌರವ।
ಶ್ರೇಣಿ ಸರೋಜಪಾಣಿ ದಯೆಯಿಂದೆಮಗೀಗೆ ವಚೋವಿಲಾಸಮಂ॥೨॥

ನಿಜಗೋಪಾಲಿ ಧನಂಜಯಾಭಿನವಮಾಚಂ ಭಾಗುರಿನಾಗವ।
ರ್ಮಜಯಂತ್ಯಾಮರಶಬ್ದಮಂಜರಿಬಲಾದ್ಯುಕ್ತಾಭಿಧಾನಾರ್ಥಮಂ।
ದ್ವಿಜವಂಶಾರ್ಣವಪೂರ್ಣಚಂದ್ರನೆನಿಪಾ ದೇವೋತ್ತಮಂ ಪೇಳೆ ಸೂ।
ರಿಜನಂ ಮೆಚ್ಚಲು ಸೇವ್ಯಮಾಯ್ತು ಜಗದೊಳ್ನಾನಾರ್ಥರತ್ನಾಕರಂ॥೩॥

ವಾರಿಶಿರೋರುಹಾಂಬುನಿಧಿ ಯೋಗ್ಯಮಶೇಷನುನಭಾದ್ಧರಂ ಸುರಾ।
ಹಾರಮರೀಚಿ ಮುಕ್ತಿಸಿತವಿಂದುದಜಿಲ್ಲಿಮೃತಾಭಿಧಾನಮಂ।
ಗಾರಕಪಾದಪಾಗ್ರನವಿಲಾನಲಸಿಸಕತಾಂಬ್ರಕೇತುಕಾ।
ಕೋರಗವಿಪ್ರಚೂಡಶಿರಮೂಲಿಕೆಯೊಳ್ ಶಿಖಿಯೆಂಬ ವಾಚಕಂ ॥೪॥

ಟೀಕು॥ ಉದಕ। ಮಂಡೆತೂದಿ। ಆ ಸಮುದ್ರ। ಯೋಗ್ಯ। ದಿಕ್ಕು। ಗುಣ। ಯಜ್ಞ। ಅಮೃತ। ಕಿರಣ। ಮುಕ್ತಿ। ಬಿಳಿದು। ನಿಂದುದು ॥೩॥ ಅಮೃತಶಬ್ದ॥

ಅಂತ್ಯ:

ಜಗದೊಳ್ ಜಾಣರ ಮೆಚ್ಚು ಸತ್ಕವಿಸಮೂಹಕ್ಕೆಯ್ದೆ ತಾಯೀಡುವಾ।
ಗ್ನಿಗಳಾನಂದರಸಾದಿವಾಸಗಮಕಿಸಂತಾನಸುಪ್ರತಿವಾ।
ದಿಗಳಾವಾಸನಿಧಾನದುರ್ಜನಜನಾಂಭೋಜಾತಶುಭ್ರಾಂಶುಮೆ।
ಬಗುಣೋದ್ದಾತದ ಪೆಂಪುವೆತ್ತುದೊಲವಿಂ ನಾನಾರ್ಥರತ್ನಾಕರಂ॥೧೬॥

ನಾನಾರ್ಥರತ್ನಾಕರಸಮಾಪ್ತಮಂಗಲಮಹಾಶ್ರೀ॥

ಕರಕೃತಮಾಪರಾಧಂ ಕ್ಷಂತುಮರ್ಶ್ಯಂತಿ ಸಂತಃ। ಶ್ರೀ

ತಪ್ಪಂ ಬರಿದ ಕಡುಜಡ।
ವಪ್ಪಾತಂ ಬರೆದನೆಂದು ಬೈಲ್ಬೇಡಂ।
ತಪ್ಪಕ್ಕುಂ ಶುದ್ಧಮಕ್ಕುಂ।
ತಪ್ಪುಳ್ಳೆಡೆದಿದ್ದವುದುತ್ತಮ ಪುರುಷರ್॥

ವಿಶೇಷವಿಷಯ: ಸಮಗ್ರ; ಅಕ್ಷರಗಳು ಸ್ಪಷ್ಟವಾಗಿವೆ.

****

೯೩

ಕಟ್ಟು: ಕೆ ೧೧

ಕೃತಿಕ್ರಮಾಂಕ: **ಕೆ ೧೧/೨**

ಶಬ್ದರತ್ನಾಕರ

ಪತ್ರದ ಅಳತೆ: ೧೧" X ೨"; ಪ್ರತಿ ಪುಟದಲ್ಲಿ ಸುಮಾರು ೮ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೩೮ನೆಯ ಪತ್ರದಿಂದ ೪೦ನೆಯ ಪತ್ರದ ವರೆಗಿದೆ.

ಕೃತಿಕಾರ: ?

ಸ್ವರೂಪ: ಕಂದಪದ್ಯಗಳು

ವಸ್ತು: ನಾನಾರ್ಥಶಬ್ದಕೋಶ

ಆದಿ:

ಶ್ರೀ ಗುರುಬಸವಲಿಂಗಾಯನಮಃ॥ ಶಬ್ದರತ್ನಾಕರ।

ಕಮಲಮೆನೆಮವನಮಕ್ಕುಂ।
ಕಮಲಂ ಜಲಸೂರ್ಯಶಶಿ ಕರಿಹಯಮಕ್ಕುಂ॥
ಕಮಲಮೆನೆ ಕುಮುದಮಕ್ಕುಂ।
ಕಮಲಂ ತಾ ಕಮಲಮಕ್ಕುಂ ಶಬ್ದಾಗಮದೊಳ್॥೧॥

ಕಮಲಮೆನೆ ತುಂಬಿಯಕ್ಕುಂ।
ಕಮಲಂ ಬಿಳಿದಕ್ಕು ಹಂಸೆಕಣ್ಣುಗಳಕ್ಕುಂ॥
ಕಮಲಮೆನೆ ಕದನಮಕ್ಕುಂ।
ಕಮಲಂ ಗಿರಿಯಕ್ಕು ನೋಡೆ ಶಬ್ದಾಗಮದೊಳ್॥೨॥

ಅಂತ್ಯ:

ಅಜನೆನೆ ವಾರಿಧಿಯಕ್ಕುಂ।
ಅಜನೆಂದೆನಲಾನೆಯಕ್ಕು। ಮಂದರಮಕ್ಕುಂ॥

ಅಜನೆನೆ ಶಶಿರವಿಯಕ್ಕುಂ।
ಅಜನೆಂದೆನೆ ಮುಕ್ತಿಯಕ್ಕು ಶಬ್ದಾಗಮದೊಳ್॥೩೦॥

ಶಬ್ದರತ್ನಾಕರ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ೩೦ ಕಂದಪದ್ಯಗಳ ಕೃತಿ; ಪೂರ್ಣವಾಗಿದೆ. ಅಕ್ಷರಗಳು ಸ್ಪಷ್ಟವೂ ಶುದ್ಧವೂ ಆಗಿವೆ.

****

೯೪

ಕಟ್ಟು: ಕೆ ೧೧

ಕೃತಿಕ್ರಮಾಂಕ: **ಕೆ ೧೧/೩**

ಪದ್ಯನಾನಾರ್ಥ

ಪತ್ರದ ಅಳತೆ: ೧೧'' X ೨''; ಪ್ರತಿ ಪುಟದಲ್ಲಿ ಸುಮಾರು ೮ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೪೦ನೆಯ ಪತ್ರದಿಂದ ೪೨ನೆಯ ಪತ್ರದ ವರೆಗಿದೆ.

ಕೃತಿಕಾರ:

ಸ್ವರೂಪ: ಕಂದಪದ್ಯಗಳು

ವಸ್ತು: ನಾನಾರ್ಥಶಬ್ದಕೋಶ

ಆದಿ:

ಶ್ರೀ ಗುರುಬಸವಲಿಂಗಾಯನಮಃ॥ ಪದ್ಯನಾನಾರ್ಥ॥

ಮಂಗಳಮರದುದಿನವಿಲು।
ಭುಜಂಗಾಗ್ನಿಮಯುಖತಾಮ್ರವಿಪ್ರಕಿರೀಟೋ॥
ತ್ತುಂಗಶಿರಂ ಮೂಲಿಕೆಭೇ।
ದಂಗಳ್ಪನ್ನೊಂದುನಾಮಶಿಖಿಶಬ್ದಂಗಳ್॥೧॥

ಅಂತ್ಯ:

ಸಾಮಾನ್ಯಂ ಪುಣ್ಯಂ ಸು।
ತ್ರಾಮಂ ಘನಬಹಳಸರುಸದಂತಿಸಮೂಹಂ।
ಸಾಮಜಮಳೆಯೊಂಭತ್ತುಂ।
ಭೂಮಿಗೆ ಪೊಸತೆನಿಸುತಿಹಘನಾಘನಶಬ್ದಂ॥೩೯॥

ನಾನಾರ್ಥಂ ಸಮಾಪ್ತಂ ಮಂಗಳಮಹಾ ಶ್ರೀಶ್ರೀಶ್ರೀಶ್ರೀಶ್ರೀ

ವಿಶೇಷವಿಷಯ: ೩೯ ಕಂದಪದ್ಯಗಳ ಕೃತಿ; ಪೂರ್ಣವಾಗಿದೆ. ಅಕ್ಷರಗಳು ಸ್ಪಷ್ಟವೂ ಶುದ್ಧವೂ ಆಗಿವೆ.

****

೯೫

ಕಟ್ಟು: ಕೆ ೧೧

ಕೃತಿಕ್ರಮಾಂಕ: **ಕೆ ೧೧/೪**

ಕರ್ಣಾಟಶಬ್ದಮಂಜರಿ

ಪತ್ರದ ಅಳತೆ: ೧೧'' X ೨''; ಪ್ರತಿ ಪುಟದಲ್ಲಿ ಸುಮಾರು ೮ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೪೨ನೆಯ ಪತ್ರದಿಂದ ೫೪ನೆಯ ಪತ್ರದ ವರೆಗಿದೆ; ೫೫ನೆಯ ಪತ್ರ ಇಲ್ಲ.

ಕೃತಿಕಾರ: ತೋಂಟದಾರ್ಯ

ಸ್ವರೂಪ: ವಾರ್ಧಕಷಟ್ಪದಿ

ವಸ್ತು: ಶಬ್ದಾರ್ಥಕೋಶ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಕರ್ನ್ನಾಟಶಬ್ದಮಂಜರಿ॥ ವಾರ್ದ್ಧಿಕ ಷಟ್ಪದಿ॥
ಶ್ರೀಮದವಿರಳಸಕಲನಿಃಕಲಗುಣಾತೀತ।
ನಾಮರೂಪಕ್ರಿಯಾರಹಿತಶ್ರುತಿತತಿವಿನುತ।
ಕಾಮಿತಫಲಪ್ರದಾಯಕ ಸಕಲಲೋಕನಾಯಕ ನಿತ್ಯನಿರ್ಮಾಯಿತ॥

ರಾಮಣೀಯಕಯೋಗಿಜನಮನೋನಿಲಯಚಿ।
ತ್ಕಾಮಿನಿಕಾಂತಕರುಣಿಸುವಿಮಲಮತಿ ಮ।
ತ್ಸ್ವಾಮಿವರಗುರುನಿರಂಜನವೃಜಿನಮೇಘಪ್ರಭಂಜನಮದಭಂಜನಾ॥೧॥

ವರಷಟ್ಸ್ಥಲಾಚಾರಸಂಸಿದ್ಧನಮಂಸು।
ಸ್ಥಿರಶೈವಪಂಚಾಕ್ಷರಿಮಂತ್ರಹೃದಯನರು।
ತರಸತ್ಕ್ರಿಯಾಜ್ಞಾನಸಂಪನ್ನನಖಿಳಶಾಸ್ತ್ರಾರ್ಥಕೋವಿದಪಾವನಾ॥
ಚರಿತಘನಗುರುನಿರಂಜನಲಿಂಗಚರನಸರ।
ಸಿರುಹಸೌರುಭಮಧುಕರಂ ತೋಂಟದಾರ್ಯ್ಯಬಿ।
ತ್ತರಿಸಿದನೆನಲ್ಕೆ ಮೆಚ್ಚದರೊಳರೆಕರ್ಣಾಟಶಬ್ದಮಂಜರಿಯನಿದನೂ॥೨॥

ಅಂತ್ಯ:

ಸೆಳೆಗೊಂಬುಬಕ್ಕೆವಲಸಳ್ಳೆಗೊಂಬುಂ ಸುಟಿಗು।
ರುಳುರಂಗುದುಟಿಸೆಳ್ಳುಗುರುಬಳಲ್ಮುಡಿನಾಡೆ।
ನಳಿತೋಳು ನೆಲೆಮೊಲೆಬಗಸೆಗಂಣುಚೆಲ್ಲೆಗಣ್ಗಳುಸೋರ್ಮುಡಿಭಾವಿಸೆ॥
ಬಳಿಕೆ ಪಂನಿಜುಕುಡುವ್ರುರ್ವಸೆಳೆನಡುವೆನಿಪ್ರು।
ವಿಳೆಯಲಿರುಸಹಜದಿಂದೊಡಲೊಳಿರ್ದೊಡಂ।
ತಿಳಿವುದುಪಸರ್ಗ್ಗಯೆಂದಮಲಸತ್ಕವಿನಿವಹವಿಮಹಾಶಬ್ದಂಗಳಂ ॥೧೧೯॥

ಇಂತು ನೆಱೆಕರ್ಣಾಟಭಾಷೆಯೊಳ್ತಱಸಂದ।
ನಂತನಾಮಂಗಳೊಳ್ದೆಶಿಯ್ಯ ಪಲವುತೆಱ।
ನಂತವು ಮಹಾಶೇಷಗಂ ತಿಳಿಯಲಳವಲ್ಲವಱೊಳು ಫಲಕೆಲಶಬ್ದಮಂ॥

ವಿಶೇಷವಿಷಯ: ಕೊನೆಯ ಪತ್ರ ಕಳೆದುಹೋಗಿದೆ; ಕೃತಿಯು ೧೨೦ನೆಯ ಪದ್ಯದ ಅರ್ಧಕ್ಕೇ ನಿಂತುಹೋಗಿದೆ. ಅಕ್ಷರಗಳು ಸ್ಪಷ್ಟವೂ ಶುದ್ಧವೂ ಆಗಿವೆ.

****

ಕಟ್ಟು: ಕೆ ೧೧

ಕೃತಿಕ್ರಮಾಂಕ: **ಕೆ ೧೧/೫**

ಶಬ್ದಮಣಿದರ್ಪಣಂ

ಪತ್ರದ ಅಳತೆ: ೧೧" X ೨"; ಪ್ರತಿ ಪುಟದಲ್ಲಿ ಸುಮಾರು ೮ ಸಾಲು; ಪ್ರತಿ ಸಾಲಿನಲ್ಲಿ ಸುಮಾರು ೫೦ ಅಕ್ಷರಗಳು; ೫೬ನೆಯ ಪತ್ರದಿಂದ ೧೨೩ನೆಯ ಪತ್ರದ ವರೆಗಿದೆ.

ಕೃತಿಕಾರ: ಕೇಶಿರಾಜ

ಸ್ವರೂಪ: ಕಂದಪ್ರಧಾನ; ವೃತ್ತಿಸಹಿತ; ವೃತ್ತಿಯು ಗದ್ಯದಲ್ಲಿದೆ

ವಸ್ತು: ಹಳಗನ್ನಡವ್ಯಾಕರಣ

ಆದಿ:

ಶ್ರೀಗುರುಭ್ಯೋನ್ನಮಃ॥ ಶಬ್ದಮಣಿದರ್ಪ್ಪಣಂ॥

ಶ್ರೀವಾಗ್ದೇವಿಗೆ ಶಬ್ದದಿ।
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು॥
ದ್ಭಾವಿಪನಿರ್ಮ್ಮಲಮೂರ್ತಿಗ।
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ॥

ವೃತ್ತಿ॥ಕಾಂತಿಯೆಂಬ ಗುಣದೊಳನ್ವಿತೆಯುಪ್ಪ ವಾಕ್ಕೆಂಬ ದೇವಿಗೆ। ಪಂಚೇಂದ್ರಿಯಂಗಳ ವಿಷಯಮಪ್ಪ ಶಬ್ದಸ್ಪರ್ಶರೂಪರಸಗಂಧಂಗಳೊಳ್ಪಂ ಶ್ರೋತ್ರೇಂದ್ರಿಯಮೊಂದಱೊಳೆ ಶಬ್ದಮುಖದಿನಭಿವ್ಯಕ್ತಿಯಂ ಮಾಳ್ಪ ವಿಮಳ ಸ್ವರೂಪೆಗೆ। ಭುವನಸ್ತುತ್ಯೆಗೆ। ಈ ಶಬ್ದಶಾಸ್ತ್ರ ಪ್ರಾರಂಭದಲ್ಲಿ ನಮಸ್ಕರಿಸುವಾತನಪ್ಪೆಂ॥೧॥

ಕವಿಸುಮನೋಬಾಣನ ಯಾ।
ದವಕಟಕಾಚಾರ್ಯ್ಯನೆಸೆವದೌಹಿತ್ರನೆನಾಂ॥
ಕವಿಕೇಶವನೆಂ ಯೋಗಿ।
ಪ್ರವರಚಿದಾನಂದಮಲ್ಲಿಕಾರ್ಜುನಸುತನೆಂ॥೨॥

ಗುಣಮಮರೆ ಶಬ್ದ ಮಣಿದ।
ಪ್ರ್ವಣನಾಮವನಿಟ್ಟು ನೆಱೆಯೆ। ಕರ್ಣಾಟಕಲ॥
ಕ್ಷಣಶಬ್ದಶಾಸ್ತ್ರಮಂ ಲಾ।
ಕ್ಷಣಿಕರ್ಪೇಳೆಂದು ಬೆಸಸೆ ಬಗೆವುಗೆ ಪೇಳ್ದೆಂ॥೩॥

ಅಂತ್ಯ:

ಗಮಕಸಮಾಸದಿಂ ಱಟಕುಳಕ್ಷಳದಿಂ ಶ್ರುತಿಸಂಧಿಯಿಂ ಸಮುಚಿತಮಾಗಿ ....ದಿಂ ವಿರಹಿತಾವ್ಯಯಸಂಸ್ಕೃತಲಿಂಗದಿಂ ಪದೋತ್ತಮು ಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ ಕನ್ನಡಂ॥೫॥

ಇದು ....ಮಾನನನೂನ ಕರ್ಣಾಟಕ ಲಕ್ಷಣಶಿಕ್ಷಾಚಾರ್ಯ್ಯ ಸುಕವಿ ....

ವಿಶೇಷವಿಷಯ: ಪೂರ್ಣವಾಗಿದೆ; ಕೊನೆಯಲ್ಲಿ ಮಾತ್ರ ಕೆಲವು ಪತ್ರಗಳು ಅಲ್ಲಲ್ಲಿ ಮುಕ್ಕಾಗಿಹೋಗಿವೆ; ಅಕ್ಷರಗಳು ಸ್ಫುಟ ಸುಂದರ; ಬರವಣಿಗೆ ಶುದ್ಧವಾಗಿದೆ

****

೯೭

ಕಟ್ಟು: ಕೆ ೧೨

ಕೃತಿಕ್ರಮಾಂಕ: **ಕೆ ೧೨**

ಪ್ರಭುಲಿಂಗಲೀಲೆ

ಪತ್ರದ ಅಳತೆ: **೮.೭೫**'' X ೨''; ಪ್ರತಿಪುಟದಲ್ಲಿ ಸುಮಾರು ೧೦ ಸಾಲು; ಪ್ರತಿ ಸಾಲಿನಲ್ಲಿ ೪೨–೪೫ ಅಕ್ಷರಗಳು; ೧೮೫ನೆಯ ಪತ್ರದವರೆಗಿದೆ

ಕೃತಿಕಾರ: ಚಾಮರಸ

ಸ್ವರೂಪ: ಭಾಮಿನಿಷಟ್ಪದಿ ಕಾವ್ಯ ಮತ್ತು ಅದಕ್ಕೆ ಪ್ರತಿಪದಾರ್ಥರೂಪದ ಕನ್ನಡ ಗದ್ಯ ಟೀಕೆ.

ವಸ್ತು: ಅಲ್ಲಮಪ್ರಭುವಿನ ಲೀಲಾವಿನೋದದ ಚರಿತ್ರೆ

ಆದಿ:

...ಳು। ಬದು ಪ್ರಸಂಗ ಮಾಡುವ ಹಾಂಗೆ। ವೊಳಹೊಕ್ಕು। ಅಂತರಾಳಕ್ಕೆ ಪ್ರವೇಶವಾಗಿ। ನುಡಿದರೆ। ಪ್ರಸಂಗಿಸಿದರೆ। ಲೋಗರಿಗೆ। ಲೋಕದವರಿಗೆ। ಪ್ರತಿಶಬ್ದದಿಂದಾ। ಬದಲ ಪ್ರಸಂಗದಿಂದ। ಆ ಪರಿಯಲಿ। ಆ ಪ್ರಕಾರದಲ್ಲಿ। ಯಂನೊಳಗೆ। ನಂನಲ್ಲಿ। ಲಾಗಿನಿಂದಲಿ। ಲಬ್ಧಿಯಿಂದಲಿ। ಗುರುಗುಹೇಶ್ವರನು। ಶಿವನು। ಆಗಳೆ। ಆ ಕ್ಷಣದಲ್ಲಿ। ಯಂನನು। ನುಡಿಸಿದಡೆ। ಪ್ರಸಂಗಿಸಿದಡೆ। ನುಡಿದು ವಚಿಸಿ। ಆಗುಮಾಡಿಂಯೆ। ಮುಕ್ತಾಂಯಮಾಡಿಂಯೆ। ಆ ಪ್ರಭುಲಿಂಗಲೀಲೆಯನು। ಆ ಪ್ರಭುಲಿಂಗಲೀಲೆ ಯೆಂಬಂಥ ಶಾಸ್ತ್ರವನು। ಪೇಳ್ದೆನು। ಹೇಳಿದೆನು॥೯॥

ಪದ॥ ವಿವರಿಸುವಡಿ ಲೀಲೆಯನುಹೆ।

ಳುವೆನಧಿಠ ನಾನಲ್ಲ ಮಿಗೆ ಕೆ।
ಳುವರು ಮಾನವರಲ್ಲವಿದು ಸಾಮಾನ್ಯತರವಲ್ಲ॥
ಶಿವನ ನಟನಾನಾಟಕದ ಮಹಿಮೆಂಯ।
ಶಿವನೆ ಬಲ್ಲನದಂತು ಕಾರಣ।
ಶಿವನ ಭಕ್ತರು ತಿಳಿವುದೀ ಪ್ರಭುಲಿಂಗಲೀಲೆಯನೂ॥

ಟೀಕು॥ ವಿವರಿಸುವಡೆ। ವಿಚಾರಿಸುವಡೆ। ಯೀ ಲೀಲೆಯನು। ಯೀ ಪ್ರಭುಲಿಂಗಲೀಲೆಯನು। ಪೇಳುವೆನು। ಪೇಳುವಂಥಾತನು। ದಿಠ ನಾನಲ್ಲ। ನಿಶ್ಚಯ ನಾನಲ್ಲ॥

ಅಂತ್ಯ:

ವೊಂದು ಸಾವಿರದೊಂದುಶತಹಂ।
ನೊಂದು ಪದನೆಂದೆಂಬ ಪರುಷದ।
ಸಂದಶಿತಿಯನುಬಳಸಿ ಯಿಪ್ಪತ್ತೈದು ಗತಿಯೆಂಬಾ॥
ಹೊಂದಿಗೆಯ ಸ್ವಾಪಾನಗಳ ಬಲಿ।
ದಂದವಿಸಿಯಲ್ಲಮನಪರಮಾ।
ನಂದಲೀಲಾಮೃತಸರೋವರವಾಯ್ತು ಜಗವೊಗೆಯೋ॥೨೫॥

ಅಂತು ಗತಿ ೨೫ಕ್ಕಂ ಪದನು ೧೧೧೧ಕ್ಕಂ ಮಂಗಳಮಹಾ ಶ್ರೀಶ್ರೀಶ್ರೀ॥
ಶ್ರೀಗುರು ಮುರಿಗೇಂದ್ರಯನಮಃ॥

ಗ್ರಂಥ॥ ಯಾದೃಷಿ ಪುಸ್ತಕಂ ದೃಷ್ಟ್ವಾ ತಾದೃಷಿ ಲಿಖಿತಂ ಮಯಾ॥
ಯದಿಶುದ್ಧಮಶುದ್ಧಂವಾ ಮಮದೋಷೋ ನವಿದ್ಯತೇ॥೧॥

ಕಂದ॥ ತಪ್ಪಂ ಬರದವ ಕಡುಜಡ।

ನುತ್ಪಾತಕ ಬರದನೆಂದು ಬಯಿಯಲ್ಬೇಡಂ॥
ತಪ್ಪಕ್ಕ ಶುದ್ಧಮಕ್ಕಂ।
ತಪ್ಪುಳ್ಳಡೆ ತಿದ್ದಿಕೊಂಬುದು ಉತ್ತಮ ಪುರುಷರೂ॥೧॥

ಶ್ರೀಗುರುಪ್ರಭುಲಿಂಗಲೀಲೆ ಪುಸ್ತಕದ ಲೇಖನ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಮೊದಲಲ್ಲಿ ೧೦, ೧೯, ೨೭, ೩೪ ಈ ನಾಲ್ಕನ್ನು ಬಿಟ್ಟು ಉಳಿದಂತೆ ೧ರಿಂದ ೩೪ರವರೆಗಿನ ಪತ್ರಗಳಿಲ್ಲ; ೧೮೫ನೆಯ ಪತ್ರದವರೆಗಿದ್ದು ಕೃತಿಯು ಮುಕ್ತಾಯಗೊಂಡಿದೆ. ಆದಿಯ ಲುಪ್ತಭಾಗವನ್ನು ಬಿಟ್ಟರೆ ಉಳಿದಂತೆ ಕೃತಿಯು ಪೂರ್ಣವಾಗಿದೆಯೆಂದೇ ಹೇಳಬೇಕು. ಬರವಣಿಗೆ ಶುದ್ಧ ಸುಂದರ. ಪ್ರತಿಯು ಕೂಡ ಉತ್ತಮಸ್ಥಿತಿಯಲ್ಲಿದೆ.

****

೯೮

ಕಟ್ಟು: ಕೆ ೧೩

ಕೃತಿಕ್ರಮಾಂಕ: **ಕೆ ೧೩/೧**

ಎಲ್ಲಾ ಪುರಾತನರ ಬೆಡಗಿನ ವಚನ

ಪತ್ರದ ಅಳತೆ: ೨೦'' X ೨.೨''; ಪ್ರತಿಪುಟದಲ್ಲಿ ಸುಮಾರು ೧೩ – ೧೪ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೧೪೦ ಅಕ್ಷರಗಳು; ೧ನೆಯ ಪತ್ರದಿಂದ ೯೯ನೆಯ ಪತ್ರದವರೆಗಿದೆ

ಕೃತಿಕಾರ: ?

ಸ್ವರೂಪ: ವಚನ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಎಲ್ಲಾ ಪುರಾತನರ ಬೆಡಗಿನ ವಚನ॥ ಪ್ರಥಮದಲ್ಲಿ ಕೋಲಶಾಂತಯ್ಯಗಳ ವಚನ।

ಮೂಱುಮೊಲೆಯನುಂಡು ಬಂದವ ಯೀರ್ಕೈದು ಕಂಡು ಬಂದವ
ನೀನಾರು ಹೇಳಾ ಸಂದಿಲ್ಲದ ಪಟ್ಟಣದಲ್ಲಿ ಬಂದು ನೊಂದೆಯಲ್ಲಾ
ಅಂದಿನ ಬೆಂಬಳಿಯ ಮಱದು ಯಿಂದಿನ ಸಂದೇಹಕ್ಕೊಡಲಾಗಿ
ಯೀ ಉಭಯ ಸಂದ ನಿಂನ ನಿನಱು ಪುಣ್ಯಾರಣ್ಯಾದಹನ
ಭೀಮೇಶ್ವರ ಲಿಂಗ ನಿರಂಗಸಂಗಾ॥

ಟೀಕು॥ ಸಂಸಾರ ವಿಷಯರ ಬಂದಕ ತುಂಬಿಕೊಂಡಿಹ ತನುತ್ರಯಗಳೆಂಬವಿಗ। ಮೂಱು ಮೊಲೆಯೆಂಬ ಶಬ್ದಕ್ಕರ್ಥ। ಆ ತನುತ್ರಯ ಸಂಬಂಧವಾದ ಜೀವಾತ್ಮನು ಆ ದೇಹೇಂದ್ರಿಯ ವಿಷಯಸುಖವನನುಭವಿಸುತ್ತಿರ್ದ್ದನೆಂಬುದಿಗ। ಉಂಡೂ ಯೆಂಬ ಶಬ್ದಕ್ಕರ್ಥ। ಆ ದೇಹೇಂದ್ರಿಯ ವಿಷಯಸುಖವ ನನುಭವಿಸಿದಾತ್ಮನು ಪರಿಭವದಲ್ಲಿ ಬರುತ್ತಿರ್ದ್ದನೆಂಬುದೀಗ। ಬಂದವನೆಂಬ ಶಬ್ದಕ್ಕರ್ಥ।

ಅಂತ್ಯ:

ಅರಿಗಿಳಿದಿರಿಲ್ಲಾಯೆಂದು ಗೋರಕ್ಷಪಾಲಕಮಹಾಪ್ರಭು ಸಿದ್ಧಸೋಮನಾಥ ಲಿಂಗಕ್ಕೆ ಯಿದಿರಿಲ್ಲಾ ಯೆಂಬ ಶಬ್ದಕ್ಕರ್ಥ॥೭॥ ಯಮ್ಮವರಿಗೆ ಸಾವಿಲ್ಲ ಯಂಬುದಕ್ಕೆ॥ ಟೀ॥ ಮಹಾಘನಲಿಂಗದ ಚಿತ್ಕಲಾಂಶವೆ ಶರಣರೂಪಾಗಿ ಲಿಂಗಾಂಗ ಸಂಯೋಗಿಯಾಗಿ ಚರಿಸಿ ಲಿಂಗದೊಳ್ಳೈಕ್ಯವನೆಯ್ದಿ ನಿತ್ಯರಾಗಿ ಶರಣರು ಸಾವು ಹುಟ್ಟನಱಿಯರು ಭವಜೀವಿಗಳಲ್ಲವೆಂಬುದಿ ವಚನಾರ್ಥ॥೮॥ ಉರಿಯೊಳಗಣ ಕರ್ಪ್ಪೂರಕ್ಕೆ ಯೆಂಬುದಕ್ಕೆ ॥ಟೀ॥ ಲಿಂಗವು ನೆರೆಯೊಲಿದು ಅಂಗವನಪ್ಪಿ ಲಿಂಗಾಂಗ ಸಂಯೋಗಿಯಾದ ಶರಣಂಗೆ ಜನನಮರಣ [ಇಲ್ಲಿಗೆ ನಿಂತುಹೋಗಿದೆ; ಮುಂದಕ್ಕೆ ಬರವಣಿಗೆಯಿಲ್ಲ; ಖಾಲಿಯಿದೆ.]

ವಿಶೇಷವಿಷಯ: ೧೦೦ನೆಯ ಪತ್ರವಿಲ್ಲ; ಅಸಮಗ್ರ; ೯೯ನೆಯ ಪತ್ರದಲ್ಲಿ ಮೇಲಿನಂತೆ ಕೊನೆಯಾಗಿದೆ.

****

ಕಟ್ಟು: ಕೆ ೧೩

ಕೃತಿಕ್ರಮಾಂಕ: ಕೆ ೧೩/೨

ಗುರುಬಸವತ್ರಿವಿಧಿಯ ಸಾರ

ಪತ್ರದ ಅಳತೆ: ೨೦'' X ೨.೨''; ಪ್ರತಿಪುಟದಲ್ಲಿ ಸುಮಾರು ೧೦ - ೧೧ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೮೦-೮೫ ಅಕ್ಷರಗಳು; ೧೦೧ನೆಯ ಪತ್ರದಿಂದ ೧೧೩ನೆಯ ಪತ್ರದವರೆಗಿದೆ

ಕೃತಿಕಾರ: ಪರ್ವ್ವತ ಶಿವಯೋಗಿ

ಸ್ವರೂಪ: ತ್ರಿವಿಧಿ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಶ್ರೀಮದ್ಗುರುಬಸವತ್ರಿವಿಧಿಯ ಸಾರವ ಬರವುದಕ್ಕೆ ಶುಭಮಸ್ತು॥ ಕಂದ॥ ಬಸವನಾದಬಿಂದು ಕಲ್ಪಿತ ರೂಪವಾದ ಬಸವೇಶ್ವರನ। ತ್ರಿವಿಧಿಯ। ಗುರುಲಿಂಗಜಂಗಮದ ತ್ರಿವಿಧ ಭಕ್ತಿಯಂಬ ಸಂಪತ್ತನರಿಹಿಸಿಕೊಡುತ್ತಿರ್ದ್ದಾ ತ್ರಿಪದಿಯಂಬುದರ್ತ್ಥಾ॥ ಬಸವೇಶ್ವರನೇ ಗುರುಸ್ವರೂಪನಾದಂಥ ಬಸವರಾಜನೇ ಲಿಂಗಸ್ವರೂಪನಾದಂಥ। ಬಸವಣ್ಣನೇ ಜಂಗಮಸ್ವರೂಪನಾದಂಥ ಬಸವತಂದೆ ವಿಭೂತಿಸ್ವರೂಪನಾದಂಥ ಬಸವ ಕೃಪಾನಿಧಿ ರುದ್ರಾಕ್ಷಿಸ್ವರೂಪನಾದಂಥ ಬಸವಾ ಪಾದತೀರ್ಥ ಸ್ವರೂಪನಾದಂಥ। ಬಸವಾ ಪ್ರಸಾದಸ್ವರೂಪನಾದಂಥ। ಬಸವಾ ಶಿವಮಂತ್ರಸ್ವರೂಪನಾದಂಥ। ಯೆಲೆ ಬಸವೇಶ್ವರನೇ ರಕ್ಷಿಸು। ಪಾಲಿಸು॥

ಅಂತ್ಯ:

ಗದ್ಯ॥ ಶ್ರೀಮದ್ವೇದಾಗಮಪುರಾಣತತ್ವಮಸ್ಯಾದಿ ರಹಸ್ಯಾರ್ಥಪ್ರತಿಪಾದಿತ ವರ್ನಾಶ್ರಮಾತೀತ ವೀರಮಹೇಶ್ವರಾದಪ್ರವರ್ತಕ ಷಟ್ಸ್ಥಲಚಾರ್ಯ್ಯ ವರ್ಯ್ಯ। ಷಟ್ಸ್ಥಲಾದ್ವೈತವಿದ್ಯಾವಿನೋದಿಗಳಾದ ಸಿದ್ಧಲಿಂಗಾಖ್ಯಸ್ವಾಮಿಗಳ ಜ್ಞಾನಪ್ರಸಂನಪಾತ್ರರಾದ ಬಾಲೇಂದುಪುರದ ಹರೀಶ್ವರ ಶಾಂತವೀರೇಶರ

ಕರಸರಸಿಜಜಾತ ಶ್ರೀವೀರಮಹೇಶ್ವರ ಪರ್ವ್ವತ ಶಿವಯೋಗಿ ವಿರಚಿತ ಬಸವಸ್ತೋತ್ರದ ತ್ರಿವಿಧಿಯ ಸಾರದ ಟೀಕೆ ಮಂಗಳ ಮಹಾಶ್ರೀ॥

ವಿಶೇಷವಿಷಯ: ಒಟ್ಟು ೭೧ ನುಡಿಗಳಿವೆ. ಸಮಗ್ರ

****

೧೦೦

ಕಟ್ಟು: ಕೆ ೧೩

ಕೃತಿಕ್ರಮಾಂಕ: **ಕೆ ೧೩/೩**

ಬಸವರಾಜದೇವರ ಮನೆಯ ರಾಯಸದ ಬಂಕಣ್ಣಗಳ ವಚನ

ಪತ್ರದ ಅಳತೆ: ೨೦'' X ೨.೨''; ಪ್ರತಿಪುಟದಲ್ಲಿ ಸುಮಾರು ೧೩ - ೧೪ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೧೪೦ ಅಕ್ಷರಗಳು; ೧೧೩ನೆಯ ಪತ್ರದಿಂದ ೧೧೪ನೆಯ ಪತ್ರದವರೆಗಿದೆ

ಕೃತಿಕಾರ: ರಾಯಸದ ಬಂಕಣ್ಣ

ಸ್ವರೂಪ: ವಚನ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಶ್ರೀಮತು ಸಕಲ ತತ್ವಜ್ಞಾನಸಂಪನ್ನರಾದ ಮಹಾನುಭಾವಿಗಳ ಸ್ವರೂಪಿನ ವಚನಾಮ್ರುತವಿದು। ಬಸವರಾಜದೇವರ ಮನೆಯ ರಾಯಸದ ಬಂಕಣ್ಣಗಳ ವಚನ॥ ಯರಡೆಂಭತ್ತೇಳು ಕೋಟಿ ವಚನದ ತಾತ್ಪರ್ಯವು। ಯಿವಂದು ವಚನದಲ್ಲಿ ನಿಕ್ಷೇಪಿಸಿದ್ಧನು॥ ಯೀ ವಚನದನುಭಾವ ಅನಾದಿ ಶರಣಗಲ್ಲದೆ ಆರಿಗು ತಿಳಿಯಬಾರದೂ॥ ಅದೆಂತೆಂದೊಡ್ಯೆಯ್ಯ। ಗುರುವಿಂಗೆ ಗುರು ಉಂಟು। ಲಿಂಗಕ್ಕೆ ಲಿಂಗ ಉಂಟು। ಜಂಗಮಕ್ಕೆ ಗುರುವಿಲ್ಲ। ಲಿಂಗವಿಲ್ಲ। ಯಿವರ ಸ್ವರೂಪು। ಯಂತ್ತು ದ್ಯೆಯ್ಯ ಯಂದರೆ। ಮರಕಟ। ಪಿಪಲಿಕ। ವಿಹಂಗ। ಕುಕ್ಕುಟ। ಸ್ವಾನ।

ಅಂತ್ಯ:

ನಿತ್ಯದೆಚ್ಚರಿಕೆಯೆ ಕುಕ್ಕುಟ। ತನ್ನ ತಾನರಿವುದೆ ಸ್ವಾನ। ತಂನ ನಿತ್ಯದ ನಿಚ್ಚಯರ ಬುದ್ಧಿಯೆ ಗಜ। ಯಿಂತೀ ಷಡ್ವಿಧವ ಬಲ್ಲಾತನೆ ಬ್ರಹ್ಮಜ್ಞಾನಿ। ನಿಮ್ಮಾಣೆ ನಿಮ್ಮಯ ಪ್ರಮಥರಾಣೆ। ಅಲ್ಲೈಯ್ಯ ಬ್ರಹ್ಮಾಯ್ಯ ಬಂಕಂಣನಿಟ್ಟ ಮುಂಡಿಗೆಯನೆತ್ತುವರಿಲ್ಲಾ। ಬಸವತ್ರಿಯ ಮಹಾಪ್ರಭುವೆ॥ [ಇಲ್ಲಿಗೆ ನಿಂತಿದೆ; ಪೂರ್ಣವೆ ಅಪೂರ್ಣವೆ ತಿಳಿಯದು]

ವಿಶೇಷವಿಷಯ: ಸಮಗ್ರ

****

೧೦೧

ಕಟ್ಟು: ಕೆ ೧೩

ಕೃತಿಕ್ರಮಾಂಕ: **ಕೆ ೧೩/೪**

ಗುರುಸ್ತೋತ್ರದ ತ್ರಿವಿಧಿ

ಪತ್ರದ ಅಳತೆ: ೨೦'' X ೨.೨''; ಪ್ರತಿಪುಟದಲ್ಲಿ ಸುಮಾರು ೧೩ - ೧೪ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೧೪೦ ಅಕ್ಷರಗಳು; ೧೧೪ನೆಯ ಪತ್ರದಿಂದ ೧೧೬ನೆಯ ಪತ್ರದವರೆಗಿದೆ

ಕೃತಿಕಾರ: ?

ಸ್ವರೂಪ: ತ್ರಿವಿಧಿ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಸ್ತೋತ್ರದ ತ್ರಿವಿಧಿ॥ ಅಂಗೇಂದ್ರಿಯಂಗಳೊಳು ಲಿಂಗಗಳನಳವಡಿಸಿ। ಮಂಗಳಾತ್ಮಕನ ಮಾಡಿದ। ಮಂಗಳಾತ್ಮಕನ ಮಾಡಿದ ಗುರುವರನು ಹಿಂಗಾದೆನಲಿಸೆ ಸುಖಿಯಾದೆ॥ ಸುದ್ಧಾಂತಃಕರಣದೇಹಿಯು। ಪಿಂಡಜ್ಞಾನೋದಯುವಾಗಿ। ಸಂಸಾರವುಂ ತ್ಯಜಿಸಿ। ಅಂಗದಲ್ಲಿ ಲಿಂಗಧಾರಣವಿಲ್ಲದೆ। ವಿಭೂತಿರುದ್ರಾಕ್ಷಿಯಂ ಧರಿಸಿ ಶಿವಮಂತ್ರದಿಂ ನಿತ್ಯಾರ್ಚನ ಜಪತಪ ಹೋಮಧ್ಯಾನಾದಿಗಳಂ ಮಾಡಿ

ಶ್ರೀಗುರುಬಸವಲಿಂಗಯನಮಃ॥ ಮಿಸ್ರಸ್ತೋತ್ರದ ತ್ರಿವಿದಿಯ ಸಾರಂ॥ ಬಲ್ಲಲ್ಲಿ। ಕರ್ಮೇಂದ್ರಿಯಂಗಳಲ್ಲಿ। ಲಿಂಗವನು। ಪ್ರಾಣಲಿಂಗವನು। ಸೊಲ್ಲುಗೊಳಿಸಿದನವ್ವ। ಅವ। ಮಾತೆಂಯಾದೆಲೆ ಜ್ಞಾನಶಕ್ತಿಂಯೆ। ಸೊಲ್ಲುಗೊಳಿಸಿದಂ। ಮಂತ್ರದಿಂದೆ ಧ್ವನಿಗೊಳಿಸಿದನು। ಯಲ್ಲಾ ಕಳಾಜ್ಞಾನ। ನೆಲೆ। ಸಮಸ್ತಕಲಾಜ್ಞಾನಗಳ ಬಲ್ಲಾತನು। ತಾನೆಯೆನಿಸಿ।

ಅಂತ್ಯ:

ಪರುಷವೆ ದೊರಕಿತ್ತು ಪ್ರಸಾದದ। ಓಂಕಾರಪ್ರಣಮಸ್ವರೂಪವಾದ ಸಿದ್ಧರಸವೆ ಪ್ರಾಪ್ತವಾಯಿತ್ತು। ಬಸವ। ಚೆಂನಬಸವನೆಂಬ ಅನುಮಿಷಾನ್ಧರದಲ್ಲಿ। ಷಡಕ್ಷರಸ್ವರೂಪವಾದ। ಷಟ್ಸ್ಥಲಬ್ರಹ್ಮದಲ್ಲಿ। ಹಸನಾದೆನ್ಯೆ ಗುರುವೆ॥೩೧॥ ಮಿಶ್ರಸ್ತೋತ್ರದ ಸಾರ ಸಂಪೂರ್ನ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೧೦೨

ಕಟ್ಟು: **ಕೆ ೧೩**

ಕೃತಿಕ್ರಮಾಂಕ: **ಕೆ ೧೩/೫**

ಅಷ್ಟಾವರಣದ ತ್ರಿವಿಧಿಯ ಸಾರ

ಪತ್ರದ ಅಳತೆ: ೨೦'' X ೨.೨''; ಪ್ರತಿಪುಟದಲ್ಲಿ ಸುಮಾರು ೧೩ – ೧೪ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೧೪೦ ಅಕ್ಷರಗಳು; ೧೧೬ನೆಯ ಪತ್ರದಿಂದ ೧೩೦ನೆಯ ಪತ್ರದವರೆಗಿದೆ

ಕೃತಿಕಾರ: ?

ಸ್ವರೂಪ: ತ್ರಿವಿಧಿ; ಟೀಕಾಗದ್ಯ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಅಷ್ಟಾವರಣದ ತ್ರಿವಿಧಿಯ ಸಾರ॥

ಕಂ॥ ತಾರಕವೆನಿಪ್ಪ ಪ್ರಣವದ।

ಸಾರಾರ್ಥವೆಯಾದ ಸಿದ್ಧರಾಮನ ನಾಮವ॥
ನೋರಂತ್ತೆ ನೆನೆವ ಭಕ್ತರ।
ಸೆರ್ರಿರ್ಪ್ಪರ್ ಶಾಂತವೀರ ಮಹೇಶ್ವರಾ॥

ಶ್ಲೋಕಾ॥ ಗುರುಶ್ಚ ಲಿಂಗಶ್ಚ ಚರಪ್ರಸಾದಃ।

ಪಾದೋದಕಂ ಚ ಪ್ರಣವಾಕ್ಯಮಂತ್ರಃ॥
ರುದ್ರಾಕ್ಷಮಾಲಾಪಿ ಚ ಭಸ್ಮ ಚೇತಿ।
ನಿಂದಂತಿಯೆಷಾಂ ನರಕಂ ವ್ರಜಂತಿ॥೧॥

ಗುರುರ್ಲಿಂಗಂ ಚರಚ್ಚೇಷಂ।
ಪಂಚಾಕ್ಷರಮನುನ್ವರ್ಥ।
ಪಾದಾಂಬು ಭಸ್ಮ ರುದ್ರಾಕ್ಷಂ।
ಮಿತ್ಯಷ್ಟವರಣಾನಿ ವೈ।

ಯೆಂದು ಶ್ರೀಗುರುವೆ ವಿಭೂತಿ ಶ್ರೀಗುರುವೆರುದ್ರಾಕ್ಷಿ। ಭವಪಾಶದೂರನೆ। ಶಿವಮಂತ್ರ ಶ್ರೀಗುರುವೆ। ಲಿಂಗ ಆದಿ। ಪಾದೋದಕ। ಅಂತರಸೂಂನ್ಯನೆ। ಪ್ರಸಾದ। ಶ್ರೀಗುರುವೆ।

ಅಂತ್ಯ:

ಗುರುಲಿಂಗಚರವು ಶೇಷವು ವರಪಾದೋದಕವು ಮಂತ್ರವು ಭಸಿತಾಕ್ಷಿಗಳು ಬೆರೆದಷ್ಟಾವರಣ ತ್ರಿವಿಧಿಗೆ ನೆರೆ ಸಾರವು ಸಮಾಪ್ತಿಯಾಯಿತೂ ಶಾಂತವೀರೇಶಾ ॥೧॥

ಶ್ರೀಮದ್ವೇದಾಗಮಪುರಾಣತತ್ವಮಸ್ಯಾದಿ ರಹಸ್ಯಾರ್ಥಪ್ರತಿಪಾದ್ಯದಿತ ವರ್ನಾಶ್ರಮಾತೀತ ವೀರಮಾಹೇಶ್ವರಾದ್ವಪ್ರವರ್ತಕ ಷಟ್ಸ್ಥಲಾಚಾರ್ಯ್ಯ ವರ್ಯ್ಯ ಷಟ್ಸ್ಥಲಾದ್ವೈತ ವಿದ್ಯಾವಿನೋದಿಗಳಾದ ಅರುಣಾಚಲ ಸಿದ್ಧಲಿಂಗಾಖ್ಯ ಸ್ವಾಮಿಗಳ ಜ್ಞಾನಪ್ರಸಂನರಾದ ಬಾಲೇಂದುಪುರದ ಹರಿಶ್ವರ ಶಾಂತವೀರೇಶ್ವರಕರಸರಸಿಜಾತ ಶಿವಯೋಗಿ ವಿರಚಿತ ಅಷ್ಟಾವರಣದ ತ್ರಿವಿಧಿಯ ಸಾರದ ಟೀಕೆ ಸಮಾಪ್ತ॥

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೧೩

ಕೃತಿಕ್ರಮಾಂಕ: ಕೆ ೧೩/೬

ಲಿಂಗಲೀಲಾವಿಲಾಸಚಾರಿತ್ರ

ಪತ್ರದ ಅಳತೆ: ೨೦" X ೨.೨"; ಪ್ರತಿಪುಟದಲ್ಲಿ ಸುಮಾರು ೧೫ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೧೪೦ ಅಕ್ಷರಗಳು; ೧೩೧ನೆಯ ಪತ್ರದಿಂದ ೨೦೬ನೆಯ ಪತ್ರದವರೆಗಿದೆ

ಕೃತಿಕಾರ: ?

ಸ್ವರೂಪ: ವಚನ; ಗದ್ಯ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರವೇನಮಃ॥ ಶ್ರೀಗುರುಲಿಂಗಜಂಗಮರ ಪಾದಕ್ಕೆ ಶರಣುಶರಣಾರ್ತ್ತಿ॥ ಲಿಂಗಲೀಲಾವಿಲಾಸಚಾರಿತ್ರ। ಯೀ ಲಿಂಗಲೀಲಾವಿಲಾಸ ಚಾರಿತ್ರದ ಪರಿಯಾಯವೆಂತೆಂದಡೆ ಪ್ರಥಮದಲ್ಲಿ ನಿಃಕಲ ಲಿಂಗಸ್ಥಲ। ದ್ವಿತೀಯದಲ್ಲಿ ಮಹಾಲಿಂಗಸ್ಥಲ। ತೃತೀಯದಲ್ಲಿ ಲಿಂಗಮೂರ್ತಿಸ್ಥಲ। ಚತುರ್ಥದಲ್ಲಿ ಅಂಗಸ್ಥಲ। ಪಂಚಮದಲ್ಲಿ ಸಂಸಾರಸಂಮಂಧಸ್ಥಲ। ಷಷ್ಟಮದಲ್ಲಿ ಪಿಂಡಸ್ಥಲ। ಸಪ್ತಮದಲ್ಲಿ ಪಿಂಡಜ್ಞಾನಸ್ಥಲ। ಅಷ್ಟಮದಲ್ಲಿ ಸಂಸಾರಹೇಯಸ್ಥಲ। ನವಮದಲ್ಲಿ ಗುರುಕರುಣಸ್ಥಲ। ದಶಮದಲ್ಲಿ ಭಕ್ತಿಸ್ಥಲ। ಏಕಾದಶದಲ್ಲಿ ಮಹೇಶ್ವರಸ್ಥಲ। ದ್ವಾದಶದಲ್ಲಿ ಪ್ರಸಾದಿಸ್ಥಲ। ತ್ರಯೋದಶದಲ್ಲಿ ಪ್ರಾಣಲಿಂಗಿಸ್ಥಲ। ಚತುರ್ದಶದಲ್ಲಿ ಶರಣಸ್ಥಲ। ಪಂಚದಶದಲ್ಲಿ ಐಕ್ಯಸ್ಥಲ। ಷೋಡಶದಲ್ಲಿ ಸ್ವಲೀಲಾನಂದಭಕ್ತಿಸ್ಥಲ। ಯಿಂತು ಹದಿನಾಱಱಲ್ಲಿ ಲಿಂಗಲೀಲಾವಿಲಾಸ ಚಾರಿತ್ರ ಸಂಪೂರ್ನ್ನ॥ ಯೀ ಲಿಂಗಲೀಲಾವಿಲಾಸಚಾರಿತ್ರದ ಸ್ಥಲಕುಳಲಿಂಗಾಂಗಸಂಮಂಧ ನಿರ್ನ್ನಯದಲ್ಲಿ ಪರಿಕ್ರಮವೆಂತೆಂದಡೆ।

ಅಂತ್ಯ:

ಶಿವಗಣಂಗಳಿಗೆ ಸಮರ್ಪಿತವಾಯಿತ್ತೆಂದರಿದು ವೊಪ್ಪುಗೊಂಬ ಶಿವಶರಣರಿಗೆ ಶರಣೆನುತ್ತಿರ್ದ್ದೆನು। ಯೀ ಲಿಂಗಲೀಲಾವಿಲಾಸಚಾರಿತ್ರವನು ಬರದು ವೋದಿ

ಕೇಳಿ ಅರಿದ ಆನಂದಿಸುವ ಭಕ್ತಜನಂಗಳಿಗೆ ಯಿಹಪರದ ಸುಖವ ಕೊಡುಮು ಸದಾತ್ಮಕನಪ್ಪ ಶಿವಪದವಂ ಕೊಡುವುದಿ ಪುರಾತರ ವಚನಪ್ರಸಾದ ಶಿವಗಣಂಗಳಿಗ ಶಿವಶರಣನೊಪ್ಪುಗೊಂಬುದು ಲಿಂಗಲೀಲಾವಿಲಾಸಚಾರಿತ್ರ ಸಂಪೂರ್ನ ಮಂಗಳಮಹಾಶ್ರೀಶ್ರೀಶ್ರೀ।। ಶ್ರೀಮತ್ಕರಪೀಠರೂಢ ಗುರು ಗೊಹೇಶ್ವರ ಮಹಾಂತ ಪ್ರಭುವೇ ನಮಃ।।

ವಿಶೇಷವಿಷಯ: ಸವ್ಯಾಖ್ಯಾನ; ಸಮಗ್ರ

****

೧೦೪

ಕಟ್ಟು: ಕೆ ೧೩

ಕೃತಿಕ್ರಮಾಂಕ: ಕೆ ೧೩/೭

ಮನೋವಿಜಯತಾತ್ಪರ್ಯಚಂದ್ರಿಕೆ

ಪತ್ರದ ಅಳತೆ: ೨೦" X ೨.೨"; ಪ್ರತಿಪುಟದಲ್ಲಿ ಸುಮಾರು ೧೩ – ೧೪ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೧೪೦ ಅಕ್ಷರಗಳು; ೨೦೭ನೆಯ ಪತ್ರದಿಂದ ೨೨೦ನೆಯ ಪತ್ರದವರೆಗಿದೆ

ಕೃತಿಕಾರ: ತೋಂಟದ ಸಿದ್ಧಲಿಂಗದೇಶಿಕ

ಸ್ವರೂಪ: ಪದ್ಯ. ಟೀಕಾಗದ್ಯ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರು ಬಸವಲಿಂಗಾಯ ನಮಃ। ಮನೋವಿಜಯದ ವ್ಯಾಖ್ಯಾನಕ್ಕೆ ಶುಭಮಸ್ತು।

ಕಂದ।। ಶ್ರೀವರದಕರಮಹೇಶ್ವರ।
ಪಾವನತರಚಿತ್ಸ್ವರೂಪ ಸಂನುತಜನಸಂ।
ಜೀವದಯಾಮ್ರುತಸಿಂಧುನಿ।
ರಾವರಣನೆ ಸಲಹು ಗುರುನಿರಂಜನಲಿಂಗಾ।।೧।।
ಅನುಪಮನದ್ವಯರೂಪಂ।

ಘನಮಹಿಮಂ ಚಿತ್ಸುಧಾಬ್ಧಿಚಂದ್ರಮನೆಂನಂ।
ಅನಿಶಂ ಪಾಲಿಸುಗೆ ನಿರಂ।
ಜನಲಿಂಗ ಯೆತಿಜನಮನೋಂಬುಜಭೃಂಗ॥೨॥

ಅಂತ್ಯ:

ಕುಸುಮಷಟ್ಪದಿಪದಪ್ರಸರ॥

ಟೀ॥ ಪರಮಮಂಗಳಸ್ವರೂಪನಾದ ಶ್ರೀಗುರುಬಸವೇಶ್ವರನನಿರೂಪದತ್ತಣಿಂ। ಮನೋವಿಜಯವೆಂಬ ಪ್ರಕರಣದಲ್ಲಿ ಕುಸುಮಷಟ್ಪದಿಯಾದ। ಮೂನೂರೈವತ್ತೈದು ಗಣನೆಯನುಳ್ಳ ಪದಗಳಂ ತತ್ತ್ವಜ್ಞಾನಾರ್ಥಮಾಗಿ ಪೇಳ್ದಂ। ಈ ಪ್ರಕರಣಂ ಆಚಂದ್ರಾರ್ಕಮಾಗಿ ಸುಜ್ಞಾನಿಗಳಿಂ ಬಗೆಯಲ್ತಕ್ಕುದೂ ॥೨೯॥ ಅಂತು ಪದ ಸಹ ೩೫೫ಕ್ಕಂ॥

ಚಂಪಕವೃತ್ತ॥

ಗುರುಬಸವೇಶನೊಲ್ದು ಬೆಸಸಿರ್ದ ಮನೋವಿಜಯಪ್ರಬಂಧಮಂ।
ದುರಗಲಿಯಪ್ಪ ಬಿಜ್ಜಪುರವರಾಧಿಪ ತೋಂಟದ ಸಿದ್ಧಲಿಂಗಭೂ।
ವರನಿನನಾರತಂ ವಿವಿಧ ಭಕ್ತಿಯಿನರ್ಚಿತ ತೋಂಟದ ಸಿದ್ಧಲಿಂಗನಾ।
ದರದೆ ಪ್ರಕಾಶಿಸಲ್ಸಕಲಕೋವಿದರಾದವರೆಯ್ದಿರ್ಪರೆ॥೧॥

ಶ್ರೀಮತ್ತೋಂಟದ ಸಿದ್ಧಲಿಂಗಧರಣಿನಾಥಾದಿಕಾಭ್ಯರ್ಚಿತೈ।
ಶ್ರೀಮತ್ತೋಂಟದ ಸಿದ್ಧಲಿಂಗಯತಿಭಿರ್ಯಾಖ್ಯಾಧಿಕಾ ನಿರ್ಮಿತಾ।
ತಾತ್ಪರ್ಯಾದಿಮ ಚಂದ್ರಿಕೆ ತಿವಿಧಿ ತಾನಾಮಹಿಮಂಡಲೆ।
ಟೀಕೈಷಾಂ ಮನೋಜಯಸ್ಯತಾದಾರ್ಕೇಂದು ತಾರಗ್ರಹಂ॥

ಗದ್ಯ॥ ಯಿದು ಸಕಲಮುನಿಜನವಿನತ ನಿರಂಜನಲಿಂಗಚರಣಾರವಿಂದ ಮಂದಮಕರಂದಬಿಂದುಸಂದೋಹ ನಿಷ್ಯಂದಾನಂದಿತ ಮಧುಕರಾಯಮಾನ। ವೀರಶೈವ ಷಟ್ಸ್ಥಲಜ್ಞಾನ ಸುಧಾಸ್ವಾದನಾಸಕ್ತಚಿತ್ತನಾದ ಉದಯಾಚಲ ಚರಮಹೀಧರಹಿಮಾಲಯಮಲಯಪಶ್ಚಾರ್ಥ ವಿಶಂಕಟಕಟಕವಿಹಾರಮಾಣ। ಕಿನ್ನರಯವ್ವತಪರಿಗಿಯ್ಯಮಾನ। ವಿಮಲ ನಿಜಭಕ್ತಿಸ್ತೋಮಪ್ರತಾಪವೈಭವ ಶ್ರೀಮದ್ಬಿಜ್ಜವರಪುರಾಧಿಪ ತೋಂಟದ ಸಿದ್ಧಲಿಂಗಭೂಪಾಲಕನು ಪರಿಪೂಜಿತನಾದ ತೋಂಟದ ಸಿದ್ಧಲಿಂಗದೇಶಿಕನಿಂ ವಿರಚಿತಮಪ್ಪ ಮನೋವಿಜಯದ ತಾತ್ಪರ್ಯಚಂದ್ರಿಕೆಯೆಂಬ ವ್ಯಾಖ್ಯಾನದೊಳ್ ಪೂರ್ಣತ್ವ

ನಿರೂಪಣ ನಾಮ ನವಮಪ್ರಕರಣಂ ಸಮಾಪ್ತಂ॥ ಶ್ರೀಮತ್ ಶಾಲಿವಾಹನ ಸಕ್ಕು ೧೭೦೩॥ ಪಲ್ವನಾಮ ಸಂವತ್ಸರದ ವೈಶಾಖ ಬಹುಳ ಚೌತಿದಿವಸದಲ್ಲಿ ಮನೋವಿಜಯದ ವ್ಯಾಖ್ಯಾನ ಸಂಪೂರ್ಣವಾಗಿ ಮುಗಿಯಿತು ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೧೦೫

ಕಟ್ಟು: **ಕೆ ೧೩**

ಕೃತಿಕ್ರಮಾಂಕ: **ಕೆ ೧೩/೮**

ಶಿವಾನಂದಲಹರಿ

ಪತ್ರದ ಅಳತೆ: ೨೦" X ೨.೨"; ಪ್ರತಿಪುಟದಲ್ಲಿ ಸುಮಾರು ೧೩ – ೧೪ ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೧೪೦ ಅಕ್ಷರಗಳು; ೨೨೧ನೆಯ ಪತ್ರದಿಂದ ೨೩೧ನೆಯ ಪತ್ರದವರೆಗಿದೆ

ಕೃತಿಕಾರ: ?

ಸ್ವರೂಪ: ವೃತ್ತ, ಟೀಕೆ

ವಸ್ತು: ಶಿವಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಶಿವಾನಂದಲಹರಿ ಪ್ರಾರಂಭಃ॥ ಶುಭಮಸ್ತು॥

ವೃ॥ ಕಲಾಭ್ಯಾಂ ಚೂಡಾಲಂಕೃತಶಶಿಕಲಾಭ್ಯಾಂ ನಿಜತಪಃ
ಫಲಾಭ್ಯಾಂ ಭಕ್ತೇಷು ಪ್ರಕಟಿತ ಫಲಾಭ್ಯಾಂ ಭವತು ಮೇ॥
ಶಿವಾಭ್ಯಾಮಸ್ತೋಕಸ್ತ್ರಿಭುವನಶಿವಾಭ್ಯಾಂ ಹೃದಿ ಪುನ
ರ್ಭವಾಭ್ಯಾಮಾನಂದಸ್ಫುರದನುಭವಾಭ್ಯಾಂ ನುತಿರಿಯಂ॥

ಟೀಕಾ॥ ಶಿವಾಭ್ಯಾಂ। ಪಾರ್ವತೀಪರಮೇಶ್ವರರಾದಂಥಾ। ಕಾಲಾಭ್ಯಾಂ। ಕಲಾಸ್ವರೂಪರಾದಂಥಾ। ಚೂಡಾಲಂಕೃತಶಶಿಕಲಾಭ್ಯಾಂ। ಚೂಡಾಯಾಂ

ಅಲಂಕೃತಾಯಾಭ್ಯಾಂ ಚೂಡಾಲಂಕೃತ ಶಶಿಕಲೌ। ಯಯೋಸ್ತೌ। ತಾಭ್ಯಾಂ। ಚೂಡಾಯಾಂ। ಮಸ್ತಕಗಳಲ್ಲಿ। ಅಲಂಕೃತ್ಯ। ಅಲಂಕರಿಸಲುಪಟ್ಟ। ಶಶಿಕಲಾಭ್ಯಾಂ। ಚಂದ್ರಕಳೆಗಳನುಳ್ಳಂಥಾ। ನಿಜತಘಃಫಲಾಭ್ಯಾಂ। ನಿಜಂ ಚ ತತ್ ತಪಶ್ಚ। ನಿಜತಪಃ। ನಿಜತಪಃಫಲರೂಪೌ। ನಿಜತಪಃಫಲೌ। ತಾಭ್ಯಾಂ। ತಂಮತಂಮ ಪರಸ್ಪರ ತಪಸ್ಸಿನ ಫಲರೂಪವಾಗಿದ್ದಂಥಾ॥

ಅಂತ್ಯ:

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ್ಯ ಶ್ರೀಮಚ್ಛಂಕರಾಚಾರ್ಯ್ಯ ವಿರಚಿತಂ ಶಿವಾನಂದಲಹರಿಸ್ತೋತ್ರಂ ಸಂಪೂರ್ಣಂ॥ ಶ್ರೀಶಿವಾರ್ಪಣಮಸ್ತು॥ ಶ್ರೀಶ್ರೀ॥

ಕುಮಾರಗಿರಿನಃ ಶಿಷ್ಯ
ಕಾಳಹಸ್ತಿನ್ಯುಯೋಗತಃ
ವಿವೃತೇಕಾಂಬ್ರಸುಧಿಯಾ
ಬಾಲಾನಾಂ ಹಿತಕಾಮ್ಯಯಾ॥

ಶ್ರೀಶಿವಾನಂದಲಹರಿ ವ್ಯಾಖ್ಯಾನ ಪ್ರಾಕೃತಭಾಷಾಯ ಸಂವಿಧಯಂತುತಾಂ ಸಂತೋಮಾಚ್ಛರ್ಯ್ಯನವದ್ಯಕಾಃ॥ ಶ್ರೀಶ್ರೀಶ್ರೀ॥

ವಿಶೇಷವಿಷಯ: ಶಂಕರಾಚಾರ್ಯವಿರಚಿತ ಶಿವಾನಂದಲಹರಿಯ ಕನ್ನಡ ಟೀಕೆ; ಸಮಗ್ರ.

****

೧೦೬

ಕಟ್ಟು: ಕೆ ೧೪

ಕೃತಿಕ್ರಮಾಂಕ: **ಕೆ ೧೪/೧**

ರುದ್ರೋಪನಿಷತ್ (ಸಂ)

ಪತ್ರದ ಅಳತೆ: ೧೦.೬" X ೧.೮"; ಪ್ರತಿ ಮುಖದಲ್ಲಿ ಎಂಟು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫ರಿಂದ ೫೦ ಅಕ್ಷರಗಳು. ೧ನೆಯ ಪತ್ರದಿಂದ ೧೪ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಮಂತ್ರ

ವಸ್ತು: ಸ್ತುತಿ, ಆಧ್ಯಾತ್ಮಿಕ

ಆದಿ:

ಶ್ರೀಮದ್ಗುರುಲೀಲಾಖ್ಯಸ್ಯ ಮುರಿಗಾದೇಶಿಕೇಂದ್ರೇಭ್ಯೋನ್ನಮಃ।

ಶ್ರೀ ರುದ್ರೋಪನಿಷತ್। ಲೇಖನಪಾಠಕಯೋರ್ಭದ್ರಂ ಭೂಯಾತ್।

ಓಂ ಅಸ್ಯ ಶ್ರೀ ರುದ್ರಮಂತ್ರಸ್ಯ ಪ್ರಶ್ನಸ್ಯಾನುಷ್ಟುಪ್ ಛಂದಸ್ಯ ಅಘೋರಋಷಿಃ। ಸಂಕರ್ಷಣಮೂರ್ತಿ ಸ್ವರೂಪಃ॥ ಯೋಸಾವಾದಿತ್ಯಃ ಪರಮಪುರುಷಃ ಸ ಏಷ ದೇವತಾ। ಅಗ್ನಿಕೃತಚರಮಾಯಾಮಿಷ್ಟಕಾಯಂ ಶತರುದ್ರೀಯ್ಯೇ ಜಪಾಭಿಷೇಕೇ ವಿನಿಂಯೋಗಃ॥ ಸಕಲಸ್ಯ ರುದ್ರಾಧ್ಯಾಯಸ್ಯ ಶ್ರೀರುದ್ರೋದೇವತಾ।

ಅಂತ್ಯ:

ಓಂ ತತ್ಪುರುಷಾಯ ವಿದ್ಮಹೇ
ಮಹಾದೇವಾಯ ಧೀಮಹಿ।
ತನ್ನೋ ರುದ್ರಃ ಪ್ರಚೋದಯಾತ್॥
ಓಂಈಶಾನಸ್ಸರ್ವವಿದ್ಯಾನಾ
ಮೀಶ್ವರಸ್ಸರ್ವ ಭೂತಾನಾಂ
ಬ್ರಹ್ಮಾಧಿಪತಿರ್ಬ್ರಹ್ಮಣಾ
ಧಿಪತಿರ್ಬ್ರಹ್ಮಾ ಶಿವೋಮೇ
ಅಸ್ತು ಸದಾಶಿವೋಂ॥

ಭವೇತಿ ಮಂಗಲಂ ನಾಮ।
ಯಸ್ಯವಾಚಿ ಪ್ರವರ್ತತೇ॥

ಭಸ್ಮೀಭವಂತಿ ತಸ್ಯಾಶು
ಮಹಾಪಾತಕಕೋಟಯಃ॥

ಓಂ ಶಾಂತಿಃಶಾಂತಿಃಶಾಂತಿಃ। ಸರ್ವಶಾಂತಿರಸ್ತು।
ಅಮೃತಾಭಿಷೇಕೋಸ್ತು॥

ಇತಿ ಪಂಚಬ್ರಹ್ಮ ಮಹಾಮಂತ್ರಃ ಪರಿಸಮಾಪ್ತಃ॥

ಮಂಗಲಮಹಾ ಶ್ರೀಮದ್ಗುರುಲೀಲಾಖ್ಯಸ್ಯ ಮುರಿಗಾದೇಶಿಕೇಂದ್ರೇಭ್ಯೋನ್ನಮಃ।
ಶ್ರೀಗುರವೇ ನಮಃ॥

ವಿಶೇಷವಿಷಯ: ಸಮಗ್ರ

****

೧೦೭

ಕಟ್ಟು: ಕೆ ೧೪

ಕೃತಿಕ್ರಮಾಂಕ: ಕೆ ೧೪/೨

ಶಿವಕವಚಂ (ಸಂ)

ಪತ್ರದ ಅಳತೆ: ೧೦.೬" X ೧.೮"; ಪ್ರತಿ ಮುಖದಲ್ಲಿ ಎಂಟು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫ರಿಂದ ೫೦ ಅಕ್ಷರಗಳು. ೧೫ನೆಯ ಪತ್ರದಿಂದ ೧೭ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಸ್ತೋತ್ರ, ಮಂತ್ರ

ವಸ್ತು: ಸ್ತುತಿ

ಆದಿ:

ಶ್ರೀಮದ್ಗುರುಲೀಲಾಖ್ಯಸ್ಯ ಮುರಿಗಾ ದೇಶಿಕೇಂದ್ರೇಭ್ಯೋನ್ನಮಃ॥ ಶಿವಕವಚಂ॥

ಓಂ ದೇವಾನಾಂ ದೇವಮೀಶಾನ
ಮಾದಿಮಧ್ಯಾಂತವರ್ಜಿತಂ।
ಭಾವಗಮ್ಯಂ ನಮಸ್ಕೃತ್ಯ।
ಪಪ್ರಚ್ಛೇದಂ ಷಡಾನನಃ ॥೧॥

ಶಿವ ಶೀತಕರಾರ್ಧಾಂಗ।
ಮಣಿಮೌಲಿವಿರಾಜಿತ॥
ಶಿವಾಖ್ಯಂ ಕವಚಂ ತಾತ।
ಮಮವಕ್ತವ್ಯಮಂಜಿಸಾ ॥೨॥

ಅಂತ್ಯ:

ಇತ್ಯಾದಿತ್ಯಪುರಾಣೇ ಮಾನವಿಸಂಹಿತಾಯಾಂ ನಾರಾಯಣಸ್ಯ ಸುದರ್ಶನ ಪ್ರದಾನಂನಾಮ್ಯೈಕೋನಚತ್ವಾರಿಂಶೋಧ್ಯಾಯಃ।। ಇತಿ ಶಿವಕವಚಂ ಪರಿಸಮಾಪ್ತಂ ಮಂಗಳಮಹಾಶ್ರೀಶ್ರೀಶ್ರೀ।।

ವಿಶೇಷವಿಷಯ: ಸಮಗ್ರ

****

೧೦೮

ಕಟ್ಟು: ಕೆ ೧೪

ಕೃತಿಕ್ರಮಾಂಕ: **ಕೆ ೧೪/೩**

ಶಿವಪೂಜಾವಿಧಾನಂ (ಸಂ)

ಪತ್ರದ ಅಳತೆ: ೧೦.೬" X ೧.೮"; ಪ್ರತಿ ಮುಖದಲ್ಲಿ ಎಂಟು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫ರಿಂದ ೫೦ ಅಕ್ಷರಗಳು. ೧೮ನೆಯ ಪತ್ರದಿಂದ ೩೧ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಮಂತ್ರ

ವಸ್ತು: ಪೂಜಾವಿಧಾನ

ಆದಿ:

ಶ್ರೀಮದ್ಗುರುಲೀಲಾಖ್ಯಸ್ಯ ಮುರಿಗಾದೇಶಿಕೇಂದ್ರೇಭ್ಯೋನ್ನಮಃ।। ಶಿವಪೂಜಾ ವಿಧಾನಂ ಲಿಖ್ಯತೇ।।

ಕೈಲಾಸಾವಸತಿಂ ಶಶಾಂಕಕಲಯಾ ಸ್ಫೂರ್ಜಜ್ಜಟಾಮಾಂಡಲಂ।
ನಾನಾಲೋಕನ ತತ್ಪರಂ ತ್ರಿಣಯನಂ ವೀರಾಸನಾಧ್ಯಾಸನಂ।।
ಮುದ್ರಾಟಂಕಕುರಂಗವಹ್ನಿವಿಲಸದ್ಬಾಹಂ ಪ್ರಸಂನಾನಂ।
ಕಕ್ಷ್ಯಾಬದ್ಧ ಭುಜಂಗಕಂ ಮುನಿವರಂ ವಂದೇ ಮಹೇಶಂ ಪರಂ।।
ಹೃತ್ಪದ್ಮಂ ಶಿವಧರ್ಮಕಂದಸಹಿತಂ ಸುಜ್ಞಾನನಾಳಂ ತಥಾ।।

ನಿತ್ಯೈಶ್ವರ್ಯದಳಾಷ್ಟಕಂ ಶಶಿನಿಭಂ ವೈರಾಗ್ಯಸತ್ಕರ್ಣಿಕಂ।
ಶ್ರೀರುದ್ರೇಶ್ವರಕೇಸರಾನ್ವಿತಮಿದಂ ಸಂಚಿಂತ್ಯ ತನ್ಮಧ್ಯಯೇ।
ಸೂರ್ಯೇಂದೂಜ್ವಲ ವಹ್ನಿಮಂಡಲಗತಂ ಧ್ಯಾಯೇಚ್ಛಿವಂ ಚಿನ್ಮಯಂ॥

ಅಂತ್ಯ:

ಶಿವಪೂಜಾವಿಧಿಸ್ಸಂಪೂರ್ಣಂ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೧೦೯

ಕಟ್ಟು: ಕೆ ೧೫

ಕೃತಿಕ್ರಮಾಂಕ: **ಕೆ ೧೫/೧**

ಭಿಕ್ಷಾಟನಚರಿತ್ರ

ಪತ್ರದ ಅಳತೆ: ೧೧.೫" X ೨"; ಪ್ರತಿ ಮುಖದಲ್ಲಿ ಹತ್ತರಿಂದ ಹನ್ನೆರಡು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೭೬ರಿಂದ ೮೦ ಅಕ್ಷರಗಳು. ೧ನೆಯ ಪತ್ರದಿಂದ ೧೩ನೆಯ ಪತ್ರದವರೆಗಿದೆ.

ಕೃತಿಕಾರ: ಗುರುಲಿಂಗವಿಭು

ಸ್ವರೂಪ: ಷಟ್ಪದಿ

ವಸ್ತು: ಶಿವನ ಭಿಕ್ಷಾಟನಲೀಲೆ

ಆದಿ:

ಶ್ರೀಗುರುಬಸವಲಿಂಗಾಯನಮಃ। ಭಿಕ್ಷಾಟಣದ ಚರಿತ್ರವ ಬರವುದಕ್ಕೆ ಶುಭಮಸ್ತು। ವಾರ್ದ್ಧಿಕಪದ॥ ರಾಗ ನಾಟಿ॥

ಧರೆಯೊಳಗೆ ಗೋಪಾಲಕೃಷ್ಣ ಹದಿನಾರು ಸಾ
ವಿರ ಗೋಪಸತಿಯರೊಳಗುಡ ನೊಡಲೆಂದು
ಪುರಹರನು ದ್ವಾರಾವತಿಗೆ ಬಂದ ಭಿಕ್ಷಾಟಣದ ಚರಿತೆಯಂ ಬೋಧಿಸುವೆನು

।।ಪದ।।

ಶ್ರೀಮದಮೃತಮಯೂಖಲೇಖಾವತಂಸನವಿ
ರಾಮಸುರಗಂಗಾತರಂಗೋತ್ತಮಾಂಗ ಭವ ಗಂ
ಗಾಮನೋಹರಂ ನಿರುತಂ
ಕರ್ಮಾಂಧಕಾರನಿರುಹರಣಪ್ರಚಂಡಸೂರಂ।।
ಸಾಮಗಾನಪ್ರೇಮನಗಣಿತ ಸುರಾಸುರ।
ಸ್ತೋಮವಂದಿತನೆಂನುವಂ ಸಲಹುಗನುದಿನಂ।
ಶ್ರೀಮಹೇಶಂ ಕೈಲಾಸವಾಸಂ ಕೃಪಾಳು ವರ ನಂದಿಗಿರೀಶಂ।।೧।।

ಅಂತ್ಯ:

ಕ್ಷಿತಿಯೊಳೀ ಭಿಕ್ಷಾಟಣದ ಚರಿತೆಯಂಬ ಸ
ತ್ಕೃತಿಯ ಮುದದಿಂದೊದುವರಿಗೆಯು ಕೆಳ್ದರಿಗೆ।
ಪ್ರತಿಯ ಬರವರಿಗಾಯುರಾರೋಗ್ಯವೈಸ್ವರ್ಯವನಿವನಭವನೆಂದೂ।।
ಶೃತಿಮತವಿಡಿದು ಪುರಾತನರ ವಚನರುಷ್ಯೋಕ್ತ।
ಕಥನವಂ ಪೌರಾಣಾದ್ಯಾರ್ಥಗಳನರಿತು ಚದುರ
ರಹಮರಿದು ಪೊಗಳ್ವಂತೆ ಕವಿರಾಯ ಗುರುಲಿಂಗವಿಭು ರಚಿಸಿದನೂ।।೬೫।।

ಸ್ಥಿರಶಾಸನವೆನಿಸಿ ಮೆರವ ಭಿಕ್ಷಾಟಣದ
ಚರಿತೆಗದಿಪತಿಯಾದ ಪರಮೇಶ್ವರಂ ಜಗ
ದ್ಭರಿತನಾಗಿಹನೆಂತದಂತೆ ಗೊಪಾಂಗನೆಯರುಗಳ ಮನೆಮನೆದಪ್ಪದೆ।।
ವರಕೃಷ್ಣನೊಲೆಹನದಂತೆ ಗುರುಲಿಂಗವಿಭು
ವಿರಚಿಸಿದ ಸತ್ಕೃತಿಯು ಮೊಹನಸುರಸಿಕರ್ಗೆ।
ವರಭಾವಕರ ಕೊವಿದರ ಮನವನೊಳಕೊಂಡು
ಕರಸೊಗಸಂಬಿರುತಿಹುದೂ।।೬೬।।

ಚಾರುವಾದಿತ್ಯಶ್ರಿತನ ಸೊಮಕೊಟಿರ।
ಭಾರನಂ ಮಂಗಳಾಕಾರನಂ ವಿಭುಜನ।
ಸಾರನುತಿಪಾತ್ರ ತ್ರಿನೆತ್ರನಂ ಬೃಹಸ್ಪತಿಯ ಕೊಟಿರಸಂಕಾಶನೂ।।
ನಾರಾಯಣಾಕ್ಷಿಪೂಜಿತ ಸುಕ್ರಮನನಶನಿ।
ಧಾರವಂದ್ಯನನಗಣಿತಪ್ರಮಥರುಗಳ ಪರಿ।
ವಾರದೊಡಮನನೆಳುವಾರದಪ್ಪದೆನೆನದು ಬದುಕುವದು
ಸರ್ವಜನರೂ।।೬೭।।

ಗುರುವೆ ಜಯಜಯ ವೇದಶಾಸ್ತ್ರಸಂಸ್ತುತಿಪಾತ್ರ।
ಗುರುವೆ ಜಯಜಯ ನಿಜಾನಂದ ನಿರ್ಮಳಗಾತ್ರ।
ಗುರುವೆ ಜಯಜಯ ವಿಶ್ವತೋರೂಪ ವಿಮಳಪ್ರತಾಪ ಮಾಯಾವಿಲೋಪಾ।।
ಗುರುವೆ ಜಯಜಯ ಪರಮಪಾವನ ಗುಣೋಲ್ಲಾಸ।
ಗುರುವೆ ಜಯಜಯ ನಿರಂಜನ ನಿತ್ಯ ಪರಿತೋಷ।
ಗುರುವೆ ಜಯಜಯ ಶಿವಜ್ಞಾನಿ ಬಸವೇಶ ಮಮ ಹೃದಯಾಬ್ಜ
ಸಂನಿವಾಸಾ।।೬೮।।

ಅಂತು ಸಂಧಿ ೩ಕ್ಕಂ ಪದನು ೧೫೫ಕ್ಕಂ ಮಂಗಳಮಹಾಶ್ರೀಶ್ರೀಶ್ರೀ।।

ವಿಶೇಷವಿಷಯ: ಸಮಗ್ರ

****

೧೧೦

ಕಟ್ಟು: ಕೆ ೧೫

ಕೃತಿಕ್ರಮಾಂಕ: **ಕೆ ೧೫/೨**

ಶಬರಶಂಕರವಿಳಾಸ

ಪತ್ರದ ಅಳತೆ: ೧೧.೫'' X ೨''; ಪ್ರತಿ ಮುಖದಲ್ಲಿ ಹತ್ತರಿಂದ ಹನ್ನೆರಡು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೭೬ರಿಂದ ೮೦ ಅಕ್ಷರಗಳು. ೧೩ನೆಯ ಪತ್ರದಿಂದ ೫೧ನೆಯ ಪತ್ರದವರೆಗಿದೆ.

ಕೃತಿಕಾರ: ಷಡಕ್ಷರದೇವ

ಸ್ವರೂಪ: ಚಂಪೂಕೃತಿ

ವಸ್ತು: ಶಂಕರನ ಶಬರರೂಪದ ವಿಲಾಸ

ಆದಿ:

ಶ್ರೀಗುರುಬಸವಲಿಂಗಾಯನಮಃ। ಶಬರಶಂಕರವಿಳಾಸವ ಬರೆವುದಕ್ಕೆ ಶುಭಮಸ್ತು।

ಶ್ರೀಮತ್ಕಲ್ಯಾಣರೂಪಂಶರಭಪನಗಜೋತ್ಸಂಗನಭ್ರಾಂತಯೋಗಾ।
ರಾಮಾಂಚತ್ಪದಪದ್ಮಂ ಸುರುಚಿಗಣಪವಿಭ್ರಾಜಿತಂ ಸಾರಸ್ವತ

ಆದಿ:

ಶ್ರೀಗುರುವೇ ಗತಿ॥ ಶಬ್ದಾಗಮಕಂದ॥

ಕಮಲಮೆನೆ ಭುವನಮಕ್ಕುಂ।
ಕಮಲಮೆನೆ ಜಲಸೂರ್ಯಶಶಿಯುರಿಹಯಮಕ್ಕುಂ।
ಕಮಲಮೆನೆ ಕುಮುದಮಕ್ಕುಂ।
ಕಮಲಂ ತಾಂ ಕಮಲಮಕ್ಕುಂ। ಶಬ್ದಾಗಮದೊಳ್॥೧॥

ಅಂತ್ಯ॥

ಅಜನೆನೆ ವಾರುಧಿಯಕ್ಕುಂ।
ಅಜನೆಂದೆನೆ ವಾಯಕ್ಕುಮಂಬರಮಕ್ಕುಂ॥
ಅಜನೆನೆ ಶಶಿರವಿಯಕ್ಕುಂ।
ಅಜನೆಂದೆನೆ ಮುಕ್ತಿಯಕ್ಕು ಶಬ್ದಾಗಮದೊಳ್॥೩೦॥

[ಇಷ್ಟಕ್ಕೆ ನಿಂತಿದೆ]

ವಿಶೇಷವಿಷಯ: ಅಸಮಗ್ರ

****

೧೯೪

ಕಟ್ಟು: ಕೆ ೨೭

ಕೃತಿಕ್ರಮಾಂಕ: **ಕೆ ೨೭/೬**

ಸಿದ್ಧರಾಮೇಶ್ವರನ ಮಂತ್ರಗೋಪ್ಯ

ಪತ್ರದ ಅಳತೆ: ೧೦.೫'' X ೨''; ಪ್ರತಿ ಮುಖದಲ್ಲಿ ಒಂಬತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦ರಿಂದ ೪೫ ಅಕ್ಷರಗಳು. ೫೨ನೆಯ ಪತ್ರದಿಂದ ೫೪ನೆಯ ಪತ್ರದವರೆಗಿದೆ.

ಕೃತಿಕಾರ: ಅಲ್ಲಮಪ್ರಭು

ಸ್ವರೂಪ: ಸ್ವರವಚನ

ವಸ್ತು: ಆಧ್ಯಾತ್ಮಿಕ

ಕೃತಿಕಾರ: ಗುಬ್ಬಿಮಲ್ಲಣಾರ್ಯ

ಸ್ವರೂಪ: ವಾರ್ಧಕಷಟ್ಪದಿಕೃತಿ

ವಸ್ತು: ಸತ್ಯೇಂದ್ರಚೋಳನ ಕಥೆ

ಆದಿ:

ಶ್ರೀಗುರುಬಸವಲಿಂಗಾಯನಮಃ।। ಗುಬ್ಬಿಮಲ್ಲಣಾರ್ಯರು ನಿರೂಪಿಸಿದ ಭಾವಚಿಂತಾರತ್ನವ ವೋದುವದಕ್ಕೆ ಬರವುದಕ್ಕೆ ನಿರ್ವಿಘ್ನಮಸ್ತು।।

ಪಲ್ಲ।।

ಶ್ರೀವಿಮಲಗುಹನಮರಗುಂಡಮಲ್ಲೇಶ್ವರನ
ಸೇವಾನಿಮಿತ್ತದಿಂದಿಳೆಯೊಳೊಗೆದಾ ಪ್ರಣವ
ಜೀವ ಪಂಚಾಕ್ಷರಿಯ ಬಿತ್ತರಿಸಿದಂ ಕುಲಚರಿಯಗಾನಂದದಿಂದಾ।। ಪದ।।
ಶ್ರೀಗುರುಸದಾನಂದವಾಗೀಶವರದ ತುಹಿ।
ನಾಗಜಾರ್ದ್ದಂಗಮಹಿಮಾಗರಿಮಚರಣಸಕ
ಲಾಗಮಸ್ತುತ್ಯಶಶಿಭಾಗಭೂಷಿತ ಮಕುಟಯೋಗಿಜನ ಹೃನ್ನಿವಾಸಾ।।
ರಾಗಾದಿರಹಿತ ಸುಖಸಾಗರನಲಾನಿಮ।
ಭೋಗಮಲ್ಲೇಶ ಬಿಡದೀಗಮೆನ್ನ ಕೃತಿಯ।
ಭೂಗಗನದಿಗ್ಭರಿತಮಾಗಿವಸರಿಸುವಿಸಂಸಾಗಿಸುವುದಳ್ಕಱಿಂದೆ।।೧।।

ಅಂತ್ಯ:

ಮಗುಸಂಭವಾಗ್ರದಸಗಿಪಸಿರಾಜಿನ ಚೋಳ।
ಕನದಲಘುಚರ ಮಹಾಸ್ನಿಗ್ಧಮುಖಕಮಲಾಂ ನಿ।
ಆನಪುಂಣ್ಯಕಂಪಾಮಾರ್ದ್ದೊಹದೊಒದ್ಭೂತಮಹನಿಯ್ಯಮಾನಸ್ಥಿರಾ।।
ಘನಭಾರಶತಕೋಟಿಕೋಟಿತೇಜೋವಿರೋ।
ಚನಭೂರಗನಂತಸಂನಯಸುವಿಷ್ವಕ್ತುಂಡ।
ಜನಿತಾಸ್ತ್ರಮಾಲಯನಿಪಮರಗುಂಡದ ಮಲ್ಲಿನಾಥರಕ್ಷಿಪುದೆಂಮನು ।।೭೨।।

ಯಿದು ಸಕಲ ಭಕ್ತಪದಪಂಕೇಜರೇಣುಮಸ್ತ
ಕದಮಲ್ಯಣಾರ್ಯನಾಚೇರಮಾಂಕಂಗೆ ಬೆಸ।
ಸಿದಭಕ್ತ ಸತ್ಯೇಂದ್ರಚೋಳಕೃತಿ ಭಾವಚಿಂತಾರತ್ನಮಮಳಕರ್ನ್ನಾ।।

ಧ್ಯಾನಮೂಲಂ ಗುರೋರ್ಮೂರ್ತಿಃ।
ಪೂಜಾಮೂಲಂ ಗುರೋಜಪಂ॥
ಮಂತ್ರಮೂಲಂ ಗುರೋರ್ವಾಕ್ಯಂ।
ಮುಕ್ತಿಮೂಲಂ ಗುರೋಃ ಕೃಪಾ॥೧॥

ಅಂತ್ಯ॥

ಸಾಕ್ಷಿ॥ ಶ್ಲೋಕ॥

ದೂರ್ವ್ವಸೋಸ್ವುಚ್ಚಿಷ್ಟ ಭುಕ್ತಸ್ಯ।
ಪಾದಬಾಂಹ್ಯಾಂಗ ಲೇಪನಾತ್।
ಸಹಸಾವಜ್ರಕಾಯತ್ವಂ।
ಪ್ರಾಪ್ತವನ್ ವಿಷ್ಣುರವ್ಯತಿ॥೧೭೩॥

ಅಷ್ಟಾವರ್ನದ ಗ್ರಂಥ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೧೯೨

ಕಟ್ಟು: ಕೆ ೨೭

ಕೃತಿಕ್ರಮಾಂಕ: **ಕೆ ೨೭/೪**

ಪ್ರಸ್ತವಾದ (ಸಂ)

ಪತ್ರದ ಅಳತೆ: ೧೦.೫" X ೨"; ಪ್ರತಿ ಮುಖದಲ್ಲಿ ಒಂಬತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦ರಿಂದ ೪೫ ಅಕ್ಷರಗಳು. ೧೪ನೆಯ ಪತ್ರದಿಂದ ೫೦ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಆಧ್ಯಾತ್ಮಿಕ; ಆಚರಣೆ

ಆದಿ:

ಶ್ರೀಗುರುಬಸವಲಿಂಗಾಯನಮಃ। ಪ್ರಸ್ತವಾದಾ ಗ್ರಂಥ ಬರವುದಕ್ಕೆ ಸುಭಮಸ್ತು। ನಿರ್ವಿಗ್ನಮಸ್ತು।

ಅಂತ್ಯ:

ಇದು ಮಧುಭಂಜನಾರ್ಜ್ಜನೊದರ ಪುರಂಧರ ಪುರೊಗಮ ನಾನಾ ಸುರೋರಗನಿಕರ ನವಿನ ಸುರಚಿರ ಪ್ರಚುರಾನರ್ಘ್ಯ ಮಣಿಗಣಖಚಿತ ರಚನೋತ್ತುಂಗ ಶೃಂಗಾರಸಾರ ಕೋಟಿಕೋಟೀರ ಸ್ಫಾರರುಚಿಕದಂಬ ಪ್ರತಿಬಿಂಬಿತ ವಿಮಳ ವಿಳಸಿತ ನಖಮುಕುರರಾಜಿರಾಜಿತ ಸ್ಫುರಣ ಚರಣಾರವಿಂದ ಚಂದ್ರಶೇಖರ ಪರಮಶಿವಶರಣ ರಾಜೇಂದ್ರ ಹಮ್ಮೀರ ವಿಕ್ರಮಾತುಳ ಪ್ರಬಂಧದೊಳ್ಭದ್ರಾಯುಷರಾಜ ಚರಿತ ಬಸವಲಿಂಗನುತಿ ಪ್ರಕಥನಂ ನವಮ ಪ್ರಕರಣಂ ಶಿವಮಸ್ತು ಶ್ರೀ ಗುರುವೇ ಗತಿ॥

ವಿಶೇಷವಿಷಯ: ಸಮಗ್ರ

****

೧೧೩

ಕಟ್ಟು: ಕೆ ೧೫

ಕೃತಿಕ್ರಮಾಂಕ: **ಕೆ ೧೫/೫**

ಗಿರಿಜಾಕಲ್ಯಾಣ

ಪತ್ರದ ಅಳತೆ: ೧೧.೫" X ೨"; ಪ್ರತಿ ಮುಖದಲ್ಲಿ ಹತ್ತರಿಂದ ಹನ್ನೆರಡು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೭೬ರಿಂದ ೮೦ ಅಕ್ಷರಗಳು. ೧೩೭ನೆಯ ಪತ್ರದಿಂದ ೨೨೦ನೆಯ ಪತ್ರದವರೆಗಿದೆ.

ಕೃತಿಕಾರ: ಹರಿಹರ

ಸ್ವರೂಪ: ಚಂಪೂಕೃತಿ

ವಸ್ತು: ಗಿರಿಜಾಕಲ್ಯಾಣದ ಕಥೆ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಹಂಪೆಯ ಹರೀಶ್ವರದೇವರು ನಿರೂಪಿಸಿದ ಗಿರಿಜಾಕಲ್ಯಾಣವ ಬರದೋದಿ ಪಠಿಸುವದಕ್ಕೆ ಶುಭಮಸ್ತು॥

ಗದ್ಯ॥ ಸ್ವಸ್ತಿಸಮಸ್ತಸಮುದ್ರಮುದ್ರಿತಧರಿತ್ರಿಕಾಂತಾನಾಭಿಕಮಲಮಧ್ಯಸ್ಥಿತ ಕರ್ನಿಕೆಯಂತಿಪ್ಪ ಮೇರುವಿನ ಪೂರ್ವಜಲಧಿಯಿಂ ಪಶ್ಚಿಮವಾರ್ಧಿಪರಿಯಂತಂ

ದೇವಿಸ್ತೋತ್ರ ಸಮಾಪ್ತ

ವಿಶೇಷವಿಷಯ: ಇದನ್ನು ದೇವಿಸ್ತೋತ್ರವೆಂದು ಕರೆದಿದೆ: ಆದರೆ ಇಲ್ಲಿರುವುದು ಶಿವಸ್ತೋತ್ರ. ಸಮಗ್ರ

****

೧೯೦

ಕಟ್ಟು: ಕೆ ೨೭

ಕೃತಿಕ್ರಮಾಂಕ: **ಕೆ ೨೭/೨**

ಅಮರಕೋಶ

ಪತ್ರದ ಅಳತೆ: ೧೦.೫'' X ೨''; ಪ್ರತಿ ಮುಖದಲ್ಲಿ ಒಂಬತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦ರಿಂದ ೪೫ ಅಕ್ಷರಗಳು. ೧ನೆಯ ಪತ್ರದಿಂದ ೨೧ನೆಯ ಪತ್ರದವರೆಗಿದೆ.

ಕೃತಿಕಾರ: ಮೂಲ: ಅಮರಸಿಂಹ

ಸ್ವರೂಪ: ಅದ್ಯ, ಟೀಕಾಗದ್ಯ

ವಸ್ತು: ನಾಮಲಿಂಗಾನುಶಾಸನ

ಆದಿ:

ಶ್ರೀಗುರುಬಸವಲಿಂಗಾಯನಮಃ। ಅಮರಸಿಫ್ಯದ ಪುಸ್ತಕಕ್ಕೆ ಸುಭಮಸ್ತು। ನಿರ್ವಿಗ್ನಮಸ್ತು॥ ಶ್ಲೋಕ॥

ಯಸ್ಯಜ್ಞಾನದಯಾಸಿಂಧೋ।
ರಗಾಧಸ್ಯಾನಘಾಗುಣಾಃ॥
ಸೇವ್ಯತಾಮಕ್ಷಯೋಧೀರಾಃ।
ಶಶ್ರಿಯೈಚಮ್ರುತಾಯ ಚ॥

ಟಿಕ್ಕು॥ ಜ್ಞಾನದಯಾಸಿಂಧೋ। ಗ್ನಾನಕ್ಕು ದಯೆಗು ಸಮುದ್ರವೆನಿಸಿದ। ಅಗಾಧಸ್ಯ। ನೆಲೆಯಿಲ್ಲದೆಯಿದ್ಧಂತ। ಯಸ್ಯ। ಆವನಾನೊಬ್ಬ ಪರಮೇಶ್ವರಂಗೆ। ಅನಘಾ॥ ನಿರ್ಮ್ಮಳಂಗಳಪ್ಪ। ಗುಣಾಃ। ಗುಣಂಗಳು। ಸಂತಿ। ವುಂಟು। ಭೋಧೀರಾಃ। ಯೇ

ಕೃತಿಕಾರ: ?

ಸ್ವರೂಪ: ದ್ವಿಪದಕಾವ್ಯ

ವಸ್ತು: ನಳಚಕ್ರವರ್ತಿಯಕಥೆ

ಆದಿ:

ಶ್ರೀಗಣಾಧಿಪತಯನ್ನಮಃ॥ ಶ್ರೀಶಾರದಾಂಬಾಯ್ಯೈನಮಃ॥ ನಳಚಕ್ರವರ್ತಿಕಥಾ ವ್ರಾಶೇಟಂದುಕು ಶುಭಮಸ್ತು॥ ಶೋಭನಮಸ್ತು॥ ಶ್ರೀಗುರುಬಸವಲಿಂಗಾಯ ನಮಃ॥ ಶ್ರೀಗುರುವೇಗತಿ॥ ಶ್ರೀರಸ್ತು॥

ಶ್ರೀಶಾರದಾಧೀಶುಚಿತಕೃಪವೇಶು।
ವಾಸವನುತ ಶೇಷುವಭಕ್ತಪೋಷು॥
ಪರಮದಯಕಾಲ್ಪು ಫಣಿರಾಜತಲ್ಪು।
ಕರಿರಾಜರಕ್ಷು ಶ್ರೀಕಂಸ್ತುಭವಕ್ಷು॥
ಕೌರವಕುಲಶಿಕ್ಷು ಕಂಜಪತ್ರಾಕ್ಷು।
ವಾರಿಜಾಸನಶೇವ್ಯುವರಕೃಪಾಭವ್ಯು॥

ಅಂತ್ಯ:

ಚದುವಿನ ವ್ರಾಶಿನ ಸಕಲಸಂಪದಲು।
ನಾಯುರಾರೋಗ್ಯಂಬುಲಷ್ಟಸಂಪದಲು॥
ಪುತ್ರಪೌತ್ರಾಭಿವೃದ್ಧಿಯು ಸೌಖ್ಯಮುಲುನು।
ಸಕಲಸಂಪದಲುನು ಸರ್ವ್ವಸುಖಂಬ್ಬು।
ಸದಯಾನಿಲಯಮೂರ್ತಿ ಸಾರ್ವಕಾಲಂಬ್ಬು॥
ವಿದಿತಾಂಬುಗಾರಾಮವಿಭುಡನಿಶ್ಯಂಬ್ಬು।
ಕರುಣಿಂಚ್ಚಿ ದಯಸೇಯು ಕಾಮಿತಾರ್ಥಮುಲೂ॥

ಶ್ರೀಗುರುಚರಣಾರವಿಂದಾರ್ಪಣಮಸ್ತು॥ ಕ್ರೋಧನನಾಮಸಂವತ್ಸರ ಫಾಲ್ಗುಣಬ ೧೦ಲ್ಲು ಭಾನುವಾರಂನಾಡು। ಪಾಳ್ಯಂ ಹೋಬಳಿ ಪೈಕ್ಕಿ ಬೈಚಾಪುರಂ ಮಠಂ ಜಂಗಮ ಕರಿಬಸ್ಯೆಯ್ಯ ವ್ರಾಶಿನ ನಳಚಕ್ರವರ್ತಿಕಥಾ। ಸಂಪೂರ್ತಿ॥ ಮಂಗಳಾನಿ ಭವಂತು॥ ಶ್ರೀಗುರು ನಿಡುಮಾಮಿಡಿ ಮರಿಕರಿಬಸವದೇಶಿಕೇಂದ್ರಸ್ವಾಮಿ ಪಾದಾರವಿಂದ್ದವೇ ಗತಿ॥ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

ಹೃದಯಮಸ್ತಕವದನಸರ್ವಾಂಗಸೌಖ್ಯಕಾ।
ಸ್ಪದವಖಿಳಸಜ್ಜನರ್ಗ್ಗಿ ಪಂಚಾಕ್ಷರಿಯ ಮಹ
ತ್ವದ ಬೋಧೆಯೆಂದೋದಿದೊಡೆ ಕೇಳಿದರಿಗಿಷ್ಟಸಿದ್ಧಿ ಸ

[ಇಲ್ಲಿಂದ ಮುಂದಕ್ಕೆ ಪತ್ರವಿಲ್ಲ; ಕೊನೆಯ ಭಾಗ ಲುಪ್ತವಾಗಿದೆ]

ವಿಶೇಷವಿಷಯ: ೮೯ನೆಯ ಪತ್ರ ಕಳೆದುಹೋಗಿದೆ; ೮೮ನೆಯ ಪತ್ರದ ಕೊನೆಗೆ ಈ ಮೇಲಿನ ಭಾಗ ಬಂದಿದೆ.

****

೧೧೨

ಕಟ್ಟು: ಕೆ ೧೫

ಕೃತಿಕ್ರಮಾಂಕ: **ಕೆ ೧೫/೪**

ಹಮ್ಮೀರಕಾವ್ಯ

ಪತ್ರದ ಅಳತೆ: ೧೧.೫" X ೨"; ಪ್ರತಿ ಮುಖದಲ್ಲಿ ಹತ್ತರಿಂದ ಹನ್ನೆರಡು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦ರಿಂದ ೮೦ ಅಕ್ಷರಗಳು. ೯೦ನೆಯ ಪತ್ರದಿಂದ ೧೩೬ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಚಂಪೂಕೃತಿ

ವಸ್ತು: ರಾಜೇಂದ್ರ ಹಮ್ಮೀರನ ಕಥೆ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಹಮ್ಮೀರಕಾವ್ಯ ಬರವುದಕ್ಕೆ ವೊದುವದಕ್ಕೆ ಶುಭಮಸ್ತು॥

ಶ್ರೀಮಕಾಂಡಜಜಾಂಡಮಂಡಲಿ ಪ್ರಚಂಡಾಮಾಯವಾಜಿಸ್ಥಿರಂ।
ಭೂಮಿದ್ರೊಮ್ಮಿರ್ಕನಾಮಯಾಳಿಹರಶಿಷ್ಟಾಪಾಲದುಷ್ಟಾರ್ಥನಂ।
ಸೋಮಂ ಮಂಜುಳನೂರ್ಜ್ಜಿತಂ ಜಯತುನಿತ್ಯಾನಂದಮೌನಿಂದ್ರೋ
ದ್ದಾಮಂ ನಿರ್ಜ್ಜರ ಚಕ್ರವರ್ತ್ತಿಮಹಿಮಂದೆವೆಷ್ಟಲಿಂಗಂ ಕರಂ॥೧॥

ಮೆಚ್ಚಿದಂ। ಪಾಡಲ್ಮೆಚ್ಚಿದಂ। ಇತಿ ಶ್ರೀ ಭಟ್ಟಾಕಲಂಕ ವಿರಚಿತಾಯಾಂ ಭಾಷಾಮಂಜರಿಸಮಾಖ್ಯಾಃಯಾಂ ಶಬ್ದಾನುಶಾಸನವೃತ್ತೌ ಚತುರ್ತ್ಥಃ ಪಾದಃ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀಶ್ರೀಶ್ರೀಶ್ರೀಶ್ರೀ

ವಿಶೇಷವಿಷಯ: ಚತುರ್ಥಪಾದದೊಂದಿಗೆ ಕೃತಿಯು ಸಮಾಪ್ತವಾಗಿದೆ; ಪರಿಪೂರ್ಣವಾಗಿದೆ; ಸುಂದರ ಶುದ್ಧ ಬರವಣಿಗೆ; ಪ್ರತಿಯು ಉತ್ತಮ ಸ್ಥಿತಿಯಲ್ಲಿದೆ.

****

೧೧೬

ಕಟ್ಟು: ಕೆ ೧೮

ಕೃತಿಕ್ರಮಾಂಕ: **ಕೆ ೧೮/೧**

ಧರ್ಮಾಂಗದಚರಿತ್ರ (ತೆ)

ಪತ್ರದ ಅಳತೆ: ೧೪'' X ೧.೫''; ಪ್ರತಿ ಮುಖದಲ್ಲಿ ಆರು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೫ ಅಕ್ಷರಗಳು. ೧ನೆಯ ಪತ್ರದಿಂದ ೪೧ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ದ್ವಿಪದಕಾವ್ಯ

ವಸ್ತು: ಧರ್ಮಾಂಗದನ ಚರಿತ್ರೆ

ಆದಿ:

ಅವಿಘ್ನಮಸ್ತು॥ ಧರ್ಮಾಂಗದಚರಿತ್ರ॥
ಶ್ರೀರುಕ್ಮಿಣೀಶ ರಾಜಿತಕೀರ್ತಿಹಾರ।
ಸಾರಸದಳನೇತ್ರ ಸಜನಾಧಾರ॥
ಧಾರಾಧರ ಶ್ಯಾಮ ಧರ್ಮಸಂಚಾರ।
ಚಾರುಮಂಜುಲಭಾಷ ಜಗದೇಕಪಾಲ॥
ಪಾಲಿತಾಮರ ಸತ್ಯಭಾಮವಿಲೋಲ।
ಲೋಲಮಾನಸದೂರ ಲೋಕಮಂದಾರ॥

ಪರ್ವ್ವದ ಪರ್ವತಾಧೀಶಂಗೆ ಗಿರಿರಾಜನೆಂಬನಾಮದಿಂದೋಷಧಿಪ್ರಸ್ಥವೆಂಬ ಪುರದೊಳಿರ್ದ್ದ ಪಿತೃಗಳ ಮನದೊಳ್ಪುಟ್ಟಿದ ಮೇನಾದೇವಿಯಂ ವಿವಾಹ ವಾಗಿ ಮೈನಾಕನೆಂಬ ಪುತ್ರನಂ ಪಡೆದು ಪಲವು ದಿನಂ ಸುಖದೊಳಿರುತಂದಾಕ್ಷಾಯಣಿ ತಂನ ಬಸುಱೊಳ್ಬರ್ಪ್ಪ ವರವಂ ಬಯಸಿಮೆನೆ ತಪದೊಳಿರಲಿತ್ತಲು ದಾಕ್ಷಾಯಣಿ ದಕ್ಷಯಾಗಕ್ಕೆ ಬಿಜಯಂಗೆಯ್ದು ನಿಜೇಶನಂ ನೀಂದೆಯಂ ಕೆಳವಾಱದೆ ನಿಜಯೊಗಂಗದೊಳ್ ಸಂದು ಮೇನೆಯ ಘನಮನೆರ್ದ್ಯೋದರದೊಳ್ಪೊಕ್ಕು ಕರುಣದಿಂ ಬಂದಪ್ಪನೆಂದು ಬೆಸಸಿಮೆನೆಯಱಿದು ಪರಮಹರುಷದಿಂತಿರಿಗಿ ಪುರಮಂ ಪೊಕ್ಕು ಗಿರಿರಾಜನೊಳ್ ಸಂಗಸುಖಮಂಗಳಾಕಾರೆಯಾಗಿರೆ ಕೆಲವು ದಿನಕ್ಕೆ ಗರ್ಬ್ಭಮುದಯಿಸಿ।

ಅಂತ್ಯ:

ಗದ್ಯ॥ ಯಿದು ಸಮಸ್ತ ಸುರನಿಕರಮಕುಟಖಚಿತದಿನಕರಕರಧಿಕ್ಯಮಾಣಿಕ್ಯ ಪ್ರಭಾಪುಂಜರಂಜಿತ ಸಂಪಚ್ಚರಣನೆನಿಪ ಪಂಪಾವಿರೂಪಾಕ್ಷ ಶ್ರೀಪಾದಕಮಲ ಮಕರಂದಮಧುಕರಾಯಮಾನಂ ಪಾರ್ವ್ವತಿಪರಮೇಶ್ವರವಿವಾಹವರ್ನ್ನನಂ ದಶಮಾಶ್ವಾಸಂ॥೧೧೭॥ ಅಂತು ಆಶ್ವಾಸ ೧೦ಕ್ಕಂ॥ ಕಂದವೃತ್ತದಿಂ ೧೧೯೫ಕ್ಕಂ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

ದ್ವಿತೀಯಶಂಭು ತ್ರಿಣೇತ್ರದೇವರು। ಪಂಚಮದಲ್ಲಿ ಉರಿಲಿಂಗ ಪೆದ್ದಂಣಗಳು। ಷಷ್ಠಮದಲ್ಲಿ ಸರ್ವೇಶ್ವರದೇವರು। ಸಪ್ತಮದಲ್ಲಿ ವಿದ್ದಂಣಗಳು। ಅಷ್ಟಮದಲ್ಲಿ ಸಂಹಿತೆಯ ಕಾಳಿದಾಸಭಟ್ಟರು। ನವಮದಲ್ಲಿ ಸದಾಶಿವದೇವರು। ದಶಮದಲ್ಲಿ ಪ್ರಣಮಿದೇವರು। ಏಕಾದಶದಲ್ಲಿ ಈಶಾನ್ಯದೇವರು। ದ್ವಾದಶದಲ್ಲಿ ಮೊನಿದೇವರು। ತ್ರಯೋದಶದಲ್ಲಿ ಚೆನ್ನಸೋಮೇದೇವರು। ಚತುರ್ದಶದಲ್ಲಿ ಬಾಗಿಯ ಬಂಕನಾಥದೇವರು। ಆ ಕುಮಾರಬಂಕನಾಥದೇವರ ದಿವ್ಯ ಜ್ಞಾನಾನಂದ ಕರಕಮಳದಲ್ಲಿ ಉದಯವಾದ ನಿಜ ತತ್ಶಿಷ್ಯ ಭಕ್ತಿಭಂಡಾರಿ ಜಕ್ಕಂಣನು। ಆ ಗುರುರಾಯಂಗೆ ಬಿನ್ನಪಂಗೈದು। ಪರಮಗುರುವೆ ನಮ್ಮಡಿಗಳು ಯನ್ನ ಪೂರ್ವಜನ್ಮನಿವೃತ್ತಿಯಂ ಮಾಡಿ। ಪುನರ್ಜಾತನೆನಿಸಿ ಅಂಗದಲ್ಲಿ ಲಿಂಗಪ್ರತಿಷ್ಠಿಯಂ ಮಾಡಿ। ಪ್ರಣವ ಪಂಚಾಕ್ಷರಿಯ ಪ್ರಾಣಸ್ಥಲದಲ್ಲಿ ಸ್ಥಾಪಿಸಿ ಯನ್ನ ಕೃತಾರ್ಥನಂ ಮಾಡದಿರಿ ದೇವಾ। ಯಿನ್ನು ಯನ್ನ ಷಡಂಗವು ಲಿಂಗದಲ್ಲಿ ಲಿಯ್ಯವಹ ಭೇದಮಂ ನಿರೂಪಮಂ ಕೊಟ್ಟು ಪಾಲಿಸೂದೆಂದೊಡೆ॥ ಆ ಶ್ರೀಗುರುಸ್ವಾಮಿ ತಮ್ಮ ಪರಮಜ್ಞಾನಾನುಭಾವ ಪ್ರಸಂನ್ನ ಪ್ರಕಾಶದಿಂದ ಷಟ್ಸ್ಥಲವನು ಪ್ರಭುದೇವರ ವಚನಂಗಳಿಂದ ಸಂಕಲ್ಪಿಸಿ ಸುಲೀಲಾವಾಕಾ.......ನು ಟಿಕಿಸಿ ಪರಮಾರ್ಥತತ್ವಬೋಧೆಯನು ನಿರೂಪಿಸಿದ ಭೇದವೆಂತಿರ್ದುದೆಂದೊಡೆ ಮುಂದೆ ಪ್ರಥಮದಲ್ಲಿ ಪಿಂಡಸ್ಥಲ॥

ಅಂತ್ಯ:

ಗದ್ಯ॥ ಸ್ವಸ್ತಿ ಸಮಸ್ತ ಭುವನಜನತಿಮಿರಹರಕಾರಣಸ್ವರೂಪರುಂ ಭಕ್ತದೇಹಿಕದೇವರುಂ। ಭಕ್ತವತ್ಸಲರುಂ। ಸರ್ವಾಂಗ ಪ್ರಾಣಲಿಂಗಮೂರ್ತಿ ವಿಳಾಸರುಂ। ಪುಲಿಗೆಱೆಯ ಪುರವರಾಧೀಶ್ವರರುಂ। ಅಪೂರ್ವ ಸ್ವಯಂಭು ಪ್ರಸನ್ನ ಚೆನ್ನ ದಕ್ಷಿಣ ಶ್ರೀ ಸೋಮನಾಥ ದೇವರ ದಿವ್ಯ ಶ್ರೀಪಾದಪದ್ಮಾರಾಧಕರುಂ। ತ್ರಿಕಾಂಡ ನಿಷ್ಠರುಂ। ಋಗ್ಯಜುಃಸಾಮಾಥರ್ವಣಾಂತರ್ಗತ ಪ್ರತಿಪಾದ್ಯ ಪ್ರಮುಖರುಂ। ಶ್ರುತಿಸ್ಮೃತಿ ಪುರಾಣಾಗಮ ಇತಿಹಾಸಾದಿ ನಾನಾ ಶಾಸ್ತ್ರ ಕೋವಿದರುಂ। ಪರಮ ವೀರಶೈವಾಗಮಾಚಾರ್ಯರುಂ। ಸಕಲ ಪ್ರಸಾದ ಪಂಚಾಕ್ಷರಿಮಂತ್ರ ಸಿದ್ಧರುಂ। ನಿತ್ಯಪರಿಪೂರ್ಣ ಸಚ್ಚಿದಾನಂದ ನಿರಂಜನ ಪರಂಜ್ಯೋತಿಸ್ವರೂಪರುಮಪ್ಪ ಮಹಾಲಿಂಗದೇವರು ತಮ್ಮ ದಿವ್ಯಜ್ಞಾನಾನಂದ ಸಿದ್ಧವರ ಪ್ರಸಂನ ಪ್ರಸಾದವನೂ ನಿಜತತ್ಶಿಷ್ಯ ಭಕ್ತಿಭಂಡಾರಿ ಜಕ್ಕಣಾಚಾರ್ಯಂಗೆ ಸತ್ಪ್ರೇಮ ಮಹಾನುಭಾವಸಂಬೋದಿ

ಸಂಬಂಧ ನಿರೂಪಣಕಾರಣಾರ್ಥ ವಿರಚಿತಮಪ್ಪ ಪ್ರಭುದೇವರ ಷಡುಸ್ಥಲದೊಳು ಐಕ್ಯನ ವರ್ಗಂ ಷಷ್ಟಮಂ ಪರಿಛೇದಃ॥ಶ್ರೀ॥ ಶ್ರೀಮದ್ದೇಶಿಕಚಕ್ರವರ್ತಿ ಬ್ರಹ್ಮಾನಂದ ಪರಶಿವಮೂರ್ತಿ ವಿರಕ್ತಶಿಖಾಮಣಿ ಮಾಯಾಕೋಳಾಹಳ ಪ್ರಭುದೇವರು ನಿರೂಪಿಸಿದ ವಚನಂಗಳು ಸಮಾಪ್ತ ಮಂಗಳಮಹಾ ಶ್ರೀ ಅಂತು ಸ್ಥಲ ೭ಕ್ಕಂ ಸಂಬಂಧಿಸಿದ ವಚನ ೬೯೪ಕ್ಕಂ ಮಂಗಳಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೩೯೦

ಕಟ್ಟು: ಕೆ ೩೯

ಕೃತಿಕ್ರಮಾಂಕ: **ಕೆ ೩೯/೨**

ಏಕೋತ್ತರಶತಸ್ಥಲ

ಪತ್ರದ ಅಳತೆ: ೧೦.೫" X ೧.೮"; ಪ್ರತಿ ಮುಖದಲ್ಲಿ ಸುಮಾರು ಒಂಬತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೫೦-೫೫ ಅಕ್ಷರಗಳು. ಪತ್ರ ೧೮೭ರಿಂದ ಪತ್ರ ೨೦೦ರವರೆಗಿದೆ.

ಕೃತಿಕಾರ: ?

ಸ್ವರೂಪ: ವಚನ

ಆದಿ:

ಶ್ರೀಗುರು ಬಸವಲಿಂಗಾಯನಮಃ॥ ಏಕೋತ್ತರಶತಸ್ಥಲ ವಾರ್ಧಿಕಷಟ್ಪದ।

ಶ್ರೀಮದಮರೇಂದ್ರಾದಿವಂದಿತಪಾದಾಂಭೋಜ।
ಸಾಮಗಾನಪ್ರೇಮನತುಳಬಳನಿಃಸೀಮ।
ಭೀಮ ಗಿರಿಜಾವಾಮಭಾಗ ಭೋಗೀಂದ್ರೋರು ಭೀಷಣೋನ್ನತಭೂಷಣಾ।
ಕಾಮವೈರಿ ಪುರಾರಿ ಭರ್ಗನುಗ್ರಂ ಪಶುಪ।
ವ್ಯೋಮಕೇಶಮದೀಶ ನಿತ್ಯ ನಿರ್ಮಳನಿಳಯಾ।
ಸೋಮಶೇಖರಪ್ರಭುವೆ ವಿಭುವೆ ಶ್ರೀಗುರುನಾಥ ಮತಿಗೆ ಮಂಗಳವೀವುದೂ॥೧॥

ಅಂತ್ಯ:

ವೀರಶೈವಾಂಬುರಾಸಿಯೊಳೆಸೆವ ವ್ರತನಿಯಮು।
ಪಾರ ರತ್ನಂಗಳೊಳನರ್ಘ್ಯಮಣಿ ನೂರೊಂದ।
ನಾರೈದು ತೆಗೆದು ಪರಿವಿಡಿದೋರಣಂಗೊಳಿಸಿಸ್ತಾರದನುಭವಸೂತ್ರದಿಂ॥
ಹಾರವಿಸಿ ಹರುಷದಿಂ ಪವಣಿಸಿದ ಹಾರವ ವಿ।
ಕಾರವಳಿದಿರ್ಪ ಶರಣರ್ಗೆ ತೊಡಲಿತ್ತನು।
ಧಾರ ಬಸವೇಶ ನಂಬಿದ ಶರಣಸಹವಾಸರಾರೈದು ಚಿತ್ತವಿಪುದೂ॥೬೨॥

ಅಂತು ಲಿಂಗಸ್ಥಲ ೫೭॥ ಅಂತು ಉಭಯಸ್ಥಲ ಯೇಕೋತ್ತರಶತಸ್ಥಲದ ಪದಂಗಳು ೧೧೫ಕ್ಕಂ ಸಮಾಪ್ತ ಮಂಗಳ ಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೩೯೧

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೧**

ಚಿಕ್ಕನೀಲಮ್ಮನ ಸ್ತೋತ್ರ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦–೪೫ ಅಕ್ಷರಗಳು. ೧ನೆಯ ಪತ್ರದಿಂದ ೩ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಶುಭಮಸ್ತು॥ ಚಿಕ್ಕನೀಲಮ್ಮನ ಸ್ತೋತ್ರವ ಬರವುದಕ್ಕೆ ಶುಭಮಸ್ತು॥

ಶರಣು ಶರಣು ಹಿತಮತಹತ ಕಾಲಜಿತ ನಿಮಗೆ।
ಶರಣು ಶರಣೂ ಹರ ನಿಂಮ ಮೃದುಪದಂಗಳಿಗೆ।
ಶರಣೆಂದು ದುರಿತವನು ಕಳವನೆನ್ನಯ ಜಗದ್ಗುರು ಬಸವರಾಜನರಸಿ॥

ಪದ॥

ಪತ್ರಜಾತನ ಶಿರಃಪತ್ರಕರಪಾತ್ರನಂ।
ಪತ್ರವೈರಿಯು ಪತ್ರಮಿತ್ರಾಗ್ನಿಯಾವಾಗ್ರ।
ಗಮನನನಯನಪತ್ರವಿಕಸಿತಭಾನು।
ಪತ್ರವೈರಿಯು ಪತ್ರಮಿತ್ರಾಗ್ನಿಯಾವಾಗನೇತ್ರನಾಗಿರುತಿರ್ಪ್ಪನಾ॥
ಪತ್ರಾತಪತ್ರಬೌಲೊಕುಲಿಶಕುದರತಾ।
ಪತ್ರನಯನೊಪಾದಪತ್ರನಂ ಸದ್ಭಕ್ತಿ।
ಗೋತ್ರನಂ ಭವಲತಲವಿತ್ರ ಸದ್ಧರ್ಮಗಾತ್ರ ಬಸವೇಶನರಸಿ॥೧॥

ಅಂತ್ಯ:

ಉರಿಯೊಳಗೆ ಕರ್ಪ್ಪುರಂ ಬೆರದಂತೆ ತಂನಮಳ।
ಕರಕಂಜವರವಾಸವರದಿಷ್ಟಲಿಂಗದೊ।
ಳ್ಬೆರದು ಬೇರಿಲ್ಲದಿಹ ನೀಲಾಂಬಿಕಾ ಲಲಿತ ಪಂಚವಿಂಶತಿನುತಿಗಳಂ॥
ಬರದೋದಿ ಕೇಳಲರಿವರ್ಗವ್ಯೆಕಾರಮದ।
ಕರಣಂಗಳಳಿದು ವರಭಕ್ತಿಷಟ್ಸ್ಥಲಾಷ್ಟ।
ಪರತರಾವರಣ ಪಂಚಾಚಾರವಳವಟ್ಟು ನಿಜಮುಕ್ತರಾದರು ನಿರುತಂ॥೨೫॥

ನಿಲಂಮನ ಸ್ತೋತ್ರ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೨**

ಸಿದ್ಧೇಶ್ವರನ ಪುರಾಣದ ನಾಂದ್ಯ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೩ನೆಯ ಪತ್ರದಿಂದ ೪ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಸಿದ್ಧಲಿಂಗೇಶ್ವರಾಯನಮಃ।। ಸಿದ್ಧೇಶ್ವರನ ಪುರಾಣದ ನಾಂದ್ಯ ಭಾವಿನಿ।।

ಶ್ರೀವಿಮಲಕಾತ್ಯಾಯನೀಶ್ವರ।
ದೇವಿಯಾನನಪದ್ಮಮಧುಕರ।
ಪಾವನಾತ್ಮಕ ಗಿರಿಶ ಶಂಕರ ಕರುಣಘನವಾಸಾ।।
ದೇವದೇವೇಶ್ವರ ನವೀನ ನಿರ್ಮಲ।
ಜೀವಿತೇಶ್ವರ ಕೈರವಾರುಣ।
ಭೂವಳಯಮಂ ಪಾಲಿಪುದು ಸಿದ್ಧೇಶ ಚಿತ್ಕೋಶಾ।।೧।।

ಅಂತ್ಯ:

ಯಿದು ವಿಮಲಗುರು ತೋಂಟದಾರ್ಯನ।
ಪದಪಯೋಜ ಷಟ್ಚರಣನೆನಿಸುವ।
ಸದಮಳದ ಸನ್ಮಲ್ಲಣಾರ್ಯನ ಕುಲಶರಧಿಚಂದ್ರಾ।।
ಪದುಳದಿಂ ಶಾಂತೇಶನೊರೆದಂ।
ವಿದಿತ ಸಿದ್ಧೇಶ್ವರಪುರಾಣವ।
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವದೂ।।೩೫।।

ಸಿದ್ಧೇಶ್ವರನ ಪುರಾಣದ ನಾಂದಿ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೩೯೩

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೩**

ಶಿವಲಿಂಗ ನಾಂದ್ಯ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೪ನೆಯ ಪತ್ರದಿಂದ ೫ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಶಿವಲಿಂಗ ನಾಂದ್ಯ। ಭಾಮಿನಿ॥

ಶ್ರೀಮದಚಲಕುಮಾರಿಕಾಮುಖ।
ತಾಮರಸಮಕರಂದ ಮಧುಕರ।
ಸೋಮಶೇಖರ ಶತಮಖಾಚ್ಯುತ ಕಂಜಸುತವರದಾ॥
ಭೂಮಿಜಲಶಿಖಿಮಾರುತಾಂಬರ।
ಸೋಮಯಾಜಿದಿನೇಶವಿಧುತನು।
ಸಾಮದಿಂ ಸಲಹೆಂಮನತಿಶಯವೆರಸಿ ಶಿವಲಿಂಗಾ॥೧॥

ಅಂತ್ಯ:

ಸಲೆ ನಿನ್ನ ಪಂಚವಿಂಶತಿ ....ನಿದನಾವ।
ನೊಲಿದೋದಿದಪನವಗೆ ಭವಬಂಧನವದಿಲ್ಲ

ಸುಲಭದಿಂದರ್ಚವನು ಮಾಡಿದಾತಗೆ ಅಂತೆ ಕೇಳ್ವನಿಗದೆ ತೆರದಲ್ಕೆ॥
ಚಿಲುಪಾಲು ಸರ್ಕ್ಕರೆಯ ಬೆರಕೆಯನು ಸವಿದನಿಗೆ।
ನೆಲೆಯಾದಪುದೆಯಂಬಿಲದ ರುಚಿಯದರ ತೆರದಿ।
ಚೆಲಿತಾಂನ್ಯನುತಿ ನಿನ್ನ ನುತಿಯೆನುತಿಯಿದಕೆ ಬೆಲೆಯಿಲ್ಲ ಶಿವಲಿಂಗೇಶ್ವರಾ॥೨೫॥

ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೩೯೪

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೪**

ಮುರಿಗಾಸ್ವಾಮಿಗಳ ನಾಂದ್ಯ

ಪತ್ರದ ಅಳತೆ: ೬'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೫ನೆಯ ಪತ್ರದಿಂದ ೧೧ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಮುರಿಗಾಸ್ವಾಮಿಗಳ ನಾಂದ್ಯ। ವಾರ್ಧಿಕ।

ಶ್ರೀಮದಭ್ರಾಳಕಭಾಜಿತಾಭ..ವಿಂಶತಿನುತಿಯು ಸರಭೃ।
ದ್ಧಾಮವಿಧಿಧವಳರುದಗ್ಧೂಮಕೆತ್ವ ಒಕ್ಷಸ।
ದ್ವ್ಯೋಮಹೃದ್ಭೀಮಭಿತ್ಕಾಮಜಿದ್ಧೇಮಾದಿಧರ್ಮಕೃತ್ಕರ್ಮಭೇದಿ॥
ಭಾವಕೋದ್ಧತ ಪಂಚಮೇಢ್ರಾಭ ದೈತ್ಯದಿ।
ಭೂಮಿಭಾರಕ ಬಲಾಖರ್ವ್ವಗರ್ವ್ವಾಪಹ।
ಸ್ವಾಮಿ ಶಾಶ್ವತಮಹತ್ಪ್ರೇಮಿ ಪಾಲಯ ಸದಾ ಶ್ರೀಶಾಂತವೀರೇಶ್ವರಾ॥೧॥

ಅಂತ್ಯ:

ಕ್ಷಿತಿಜಲಾನಲಶೀಘ್ರಗಾಭ್ರ।
ಶ್ರಿತಗುಣಂಗಳ್ಪಂಚವಿಂಶತಿ।
ವಿತತವಿಂಶತಿಪಂಚದಶದಶಪಂಚಕಂಗಳೊಳಂ॥
ಹಿತವಿಷಮ ಷಡ್ವರ್ನ್ನಮಿಶ್ರಿತ।
ನುತವಿಮಲಮಂತ್ರಾಂಗಸುಸ್ಥಿತ।
ಜಿತಶಮನಕಲಿಕಾಮದೇವನತಕುಧರಧಾರಾ॥೨೩॥

ಅಂಗಲಿಂಗಾನನ ಕರಂಗಳ।
ಸಂಗಶಕ್ತಿಸುಭಕ್ತಿಮನುಗಳ।
ಮಂಗಳಾರ್ಪ್ಪಿತ ತತ್ಪ್ರಸಾದಂಗಳನು ನೆರೆಯರಿದಾ॥
ಲಿಂಗಸಂಗಾನಂದಸುಖಿಗಳ।
ತುಂಗಮಾನಸರಂಗಮಂಟಪ।
ರಂಗಿತಾತುಳವಿಜೆಯರಾಮಂಗಾಭಿಗುಣಧಾಮಾ॥೨೪॥

ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೩೯೫

ಕಟ್ಟು: ಕೆ ४೦

ಕೃತಿಕ್ರಮಾಂಕ: **ಕೆ ४೦/೫**

ಸಿದ್ಧೇಶ್ವರನ ಪುರಾಣದ ನಾಂದ್ಯ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೆರಡು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೫೦–೫೫ ಅಕ್ಷರಗಳು. ೧೨ನೆಯ ಪತ್ರದಿಂದ ೧೫ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಸಿದ್ಧೇಶ್ವರನ ಪುರಾಣದ ನಾಂದ್ಯ ವಾರ್ಧ್ದಿಕ॥

ಶ್ರೀರಮಣವಿಧಿವಾಸವಪ್ರಮುಖವಿಬುಧಕೋ।
ಟೀರಮಾಣಿಕ್ಯಪ್ರಭಾರಂಜಿತಾಂಘ್ರಿಪಂ।
ಕೇರುಹಯುಗಂ ವಿಯತ್ಕೇಶನಹಿಭೂಷನಾನಂದ ಸಂದೋಹಯುಕ್ತಂ॥
ತಾರಕಾಚಲಮಂದಿರಂ ಸಕಲಲೋಕವಿ।
ಸ್ತಾರನೆನಿಪ್ಪ ಶ್ರೀಗುರುನಿರಂಜನಲಿಂಗ।
ನೋರಂತೆಶರಣಮಂದಾರನಗಣಿತಕೃಪಾಪೂರನೆಂಮಂ ಸಲಹಲಿ॥೧॥

ಅಂತ್ಯ॥

ಜಯಜನಾರ್ಧನ ಘನಪ್ರೀತ ಶರಣವ್ರಾತ।
ಜಯ ಜಂಗಮಾಕಾರ ಸಕಲ ಜಗದಾಧಾರ।
ಜಯಜಟಾಮಕುಟಾಂಕ ನಿರ್ಮಲ ನಿರಾತಂಕ।
ಜಯಪರಂಜ್ಯೋತಿ ಪ್ರಕಾಶಗುರು ಸಿದ್ಧಲಿಂಗೇಶ ಸುಜ್ಞಾನಕೋಶಾ॥೪೫॥

ಸಿದ್ಧೇಶ್ವರನ ಪುರಾಣದ ನಾಂದ್ಯದ ಪದ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೩೯೬

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೬**

ಕಪ್ಪಿನ ನಂಜೈಯ್ಯನವರು ಮಾಡಿದ ನಾಂದ್ಯ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೧೫ನೆಯ ಪತ್ರದಿಂದ ೧೬ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಕಪ್ಪಿನ ನಂಜೈಯ್ಯನವರು ಮಾಡಿದ ನಾಂದ್ಯ। ವಾರ್ಧಿಕ ಷಟ್ಪದಿ।

ಶ್ರೀಮದಮರೇಂದ್ರ ವೈಕುಂಠವಿಧಿಕ್ಷೇಮಹಿ।
ಭೂಮಿಭೃದ್ವರತನುಜೆಯರ್ಧಾಂಗ ಯಮಿಜನ।
ಪ್ರೇಮಿ ಧೂಮಧ್ವಜಹಿಮಾಂಶುದಿನಕರಸುಲೋಚನ ಸಾಂದ್ರಮಹಿಮಾಸುಗುಣ।
ಸ್ತೋಮವಪೂರ್ವಾಮರಶಿರೋಮಾಲೆದಳೆದ ವರ।
ಕಾಮಾಂಗದಹನಭಸಿತವಿಲೇಪಕಾಯ ಮ।
ತ್ಸ್ವಾಮಿ ರಕ್ಷಿಸು ಮಹೋಕ್ಷನ ಶಾಂತವೀರೇಶ ನರಗಿಷ್ಟದಾತ ಮುದದಿಂ॥೧॥

ಅಂತ್ಯ:

ವರಹರಸ್ತುತಿಗಳನಿದಂ ಮಿಗೆ।
ಬರದು ನಿಶ್ಚಂ ಪಠಿಸಿದ ಗರ್ಣ।
ದುರಿತ ಸಂಕುಳಮರ್ದನಾಭಯಕರವರದಕರನೂ॥
ಚಿರತರಾಯುಶ್ರೀಯುಮಂ ಸ।
ದ್ಗುರುಚರಾಮಳಲಿಂಗಭಕ್ತಿಯ।
ನಿರದೆ ಕರುಣಿಸಿ ಸಲಹುವಂ ಶ್ರೀಶಾಂತವೀರೇಶಾ॥೨೫॥

ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೭**

ಸೌಂದರಪುರಾಣದ ನಾಂದ್ಯದ ಪದ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೩೮ನೆಯ ಪತ್ರದಿಂದ ೪೪ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಸೌಂದರಪುರಾಣದ ನಾಂದ್ಯದ ಪದನು।

ಶ್ರೀವರಸರೋಜಭವದೇವೇಂದ್ರ ಮುಖ್ಯ ನಾ
ನಾವಿಬುಧಮಕುಟಮಣಿರತ್ನಗಣವಿಮಳಪ್ರ।
ಭಾವಿರಾಜಿತಚರಣನಮತಕರಶೇಖರನು ಶಂಕರನು ಸೌಖ್ಯಕರನೂ॥
ಪಾವನಚರಿತ್ರನುಜ್ಜ್ವಳಭಾಳನೇತ್ರನಗ
ಜಾವಲ್ಲಭಂ ನಿಗಮದುರ್ಲಭಂ ರಕ್ಷಿಸುಗೆ।
ಭೂವಳೆಯವನು ನೀಲಕಂಠಲಿಂಗ ಸುಜನಹೃದಯಸರಸಿಜಭೃಂಗನೂ॥೧॥

ಅಂತ್ಯ:

ದಾರಿದ್ರ್ಯೋದ್ರೇಕಭದ್ರದ್ವಿಭವಿದಳನ ಕಂಠೀರವಂ ಸರ್ವ ವಿದ್ಯಾ।
ಧಾರ ಶ್ರೀನೀಲಕಂಠೇಶ್ವರನ ಕರುಣಸತ್ಪಾರದುಗ್ಧಾಬ್ಧಿ ಸಮ್ಯ।
ಕ್ತಾರಾದಿಶ ಪ್ರಭಾಸಂಚಯ ವಿಧುವಿದಿತಂ ಸೌಂದರಾಧೀಶನೆಂದೆಂ।
ಬಿರಮ್ಯಂಬೆತ್ತ ಪಂಚಾಕ್ಷರವನನವರತಂ ಭಾವಿಸಲ್ ಶ್ರೀವಾಸಂ॥೩೦॥

ಸೌಂದರಪುರಾಣದನಾಂದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೮**

ಬಸವೇಶ್ವರಪುರಾಣದ ನಾಂದ್ಯ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೧೯ನೆಯ ಪತ್ರದಿಂದ ೨೧ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಗುರುಚೆನ್ನಮಲ್ಲಿಕಾರ್ಜುನಾಯನಮಃ॥

ಶ್ರೀಗುರುವೆ ದೀಕ್ಷಾಗುರುವೆ ಸಿ।
ಕ್ಷಾಗುರುವೆ ಸರ್ವಾಗಮೋಕ್ತಕ।
ಳಾಗುರುವೆ ಶಿವಯೋಗ ಧರ್ಮತ್ಥಾಭೋಗಗುರುವೆ ॥
ತ್ಯಾಗಗುರುವೆಸುಧಿಗುರುವೆ ವಾ।
ಚಗುರುವೆ ಭವರೋಗಹರಶರ।
ಣಾಗು ಬಸವ ಮಹಾಗುರುವೆ ಯಮಗೆ॥೧॥

ಶ್ರೀಮದಗಜಾವಾಮಭಾಗೋ।
ದ್ಧಾಮವಪುರಭಿರಾಮನಭಿನುತ।
ಸಾಮಗಾನಸ್ತೋಮಸರಸಪ್ರೇಮನರಿಭೀಮಾ॥
ಕಾಮತಾತಪಿತಾಮಹಪ್ರಮು।
ಖಾಮರೇಂದ್ರಕ್ಷೇಮನಪ್ರತಿ।
ನಾಮನೊಸೆದುದ್ಧರಿಸುಗೆಂಮಂ ಸಿದ್ಧವಟಧಾಮಾ॥೨॥

ಶ್ರೀಗುರುಪರಂಜ್ಯೋತಿರಂಗ।
ನಾಗಮುಖಮುಖನಳಿನಭೃಂಗಂ।

ಭೋಗಿಶಯನನಸುಹೃದಯಸರಸಿಜಸಮುದಯ ಪತಂಗಂ।
ರಾಗತುಂಗಜಟಾಮಕುಟತರನ।
ಯೋಗಗಂಗಾಭಂಗನೊಸೆದೆಮ।
ಗೀಗೆ ಬಸವನ ಕೃತಿಯನೊರೆವ ಸುಮತಿಗೆ ಸಮತೆಯನೂ॥೩॥

ಅಂತ್ಯ:

ಯಿದು ಸಕಳ ಮಾಹೇಶ್ವರಾಮಳ।
ಪದಪಯೋಜಪರಾಗಮದಷ।
ಟ್ಪದಿಯೆನಿಪ ಪಾಲ್ಕುರಿಕೆ ಸೋಮೇಶ್ವರನ ಕಾರುಣ್ಯ॥
ವದವಿದಖಿಳಕಳಾಪ್ರಪೂರಿತ।
ಹೃದಯಭೀಮಕವಿಪ್ರಣೀತಾ।
ದ್ಬುದಯ ಬಸವಪುರಾಣಕಥೆಯೊಳಗಷ್ಟಮಾಶ್ವಾಸಾ॥೩೫॥

ಬಸವೇಶ್ವರಪುರಾಣದ ಬಾವಿನಿನಾಂಧ್ಯ ಸಂಪೂರ್ನ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೩೯೯

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೯**

ಮುರಿಗಾಶಾಂತವೀರೇಶ್ವರಸ್ವಾಮಿಗಳ ಸ್ತೋತ್ರ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೨೧ನೆಯ ಪತ್ರದಿಂದ ೩೩ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಗುರುಭ್ಯೋಂನಮಃ।। ಸ್ವಾಮಿಗಳು ಮಾಡಿ ನಿರೂಪಿಸಿದ ಸ್ತೋತ್ರ। ವಾಕ್ಸಿದ್ಧಿರಸ್ತು। ಭಾವಿನಿ। ರಾಗ ನಾಟಿ।।

ಶ್ರೀಮದನುಪಮಸತ್ಯನಿಪುಣ।
ಸೋಮಶೇಖರ ಕಾಮಸಂಹಾರ।
ಸ್ವಾಮಿ ಶಾಶ್ವತಶರಣಜನಸತ್ಪ್ರೇಮ ಗುಣಧಾಮಾ।।
ಹೇಮಗಿರಿನಿಜವಾಸ ಶಂಕರ।
ನಾಮಕರಣಾಸಾರಕೋವಿದ।
ರಾಮಣೀಯಕ ಶಾಂತವೀರ ಚಿದಂಗ ಪಾಲಿಪುದೂ।।೧।।

ಅಂತ್ಯ:

ಯಿಂತು ನಿಂಮಯಮಹಿಮೆ ನುತಿಯನು।
ಸತತಂ ಬರದೋದಿದವರುಂ।
ಚಿಂತೆಯಳಿದುಂನತದ ಮುಕ್ತಿಯನೆಯ್ದಿ ನಿಜವಹರುಂ।।
ಅಂತುಮಲ್ಲದೆಸಕಲಸಿದ್ಧಿಯ।
ಸಂತಸದೊಳ್ಪ್ರೀತಂದುಪಡವರು।
ಕಾಂತಮುರಿಗೆಯಶಾಂತವೀರನಿಜೇಶಪಾಲಿಪುದೂ।।೨೫।।

ಮುರಿಗಾಶಾಂತವೀರೇಶ್ವರಸ್ವಾಮಿಗಳ ಸ್ತೋತ್ರ ಸಮಾಪ್ತ ಮಂಗಳಮಹಾ ಶ್ರೀ।।

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೧೦**

ವೃಷೇಂದ್ರಸ್ತುತಿ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೨೩ನೆಯ ಪತ್ರದಿಂದ ೨೯ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಮೃತ್ಯುಂಜಯಲಿಂಗಾಯನಮಃ।। ವೃಷೇಂದ್ರಸ್ತುತಿ।।
ಶ್ರೀಕರಗುಣಾಂಬುಧಿಸುಧಾಕರ ಕಳಾಧರ ಕೃಪಾಕಲಿತಲೋಚನ ದಿವಾಕರ ಸಹಸ್ರಾ।
ಲೋಕಂರುಚಿವಿಗ್ರಹಪಿನಾಕಧರದರ್ಶನಕಳಾಕರ ಸುಪುಂಣ್ಯಪರಿಪಾಕಯುತಸೇವ್ಯ।
ಭೀಕರಯಮಪ್ರಹಾರ ಸಾಕಸದನಾರ್ಚಪದ ಕೋಕನದ ನಿರ್ಜಿತವರಾಕಪರವರದಾ।।
ನಿಕವಿನುತಾಸುತಪತಾಕನುತ ಪಾಲಿಸು ಗಣ್ಯೈಕಪತಿ ಪಾಲಿತ ಸುಲೋಕಬಸವೇಶಾ।।೧।।

ಅಂತ್ಯ:

ಪಕ್ಷಿಪರಧಾಕ್ಷಿಪದಭುಕ್ಷಪವಳಕ್ಷಕವಿದ್ಯಕ್ಷುವಿಜಿತಾಕ್ಷ ಸುಮುಮುಕ್ಷುಜನವಿಕ್ಷಾ।
ಲಕ್ಷಿತತರಕ್ಷುತನುರಾಕ್ಷಸವಿಪಕ್ಷಬಲದಕ್ಷಮಕಶಿಕ್ಷ ನಿಟಲಾಕ್ಷಗಮಹೋಕ್ಷ।
ಯಕ್ಷಪತಿಪಕ್ಷಮಿಳದಕ್ಷಯಗುಣಾಕ್ಷರದುರಿಕ್ಷ ಗರಭಕ್ಷ ಶುಭಲಕ್ಷಣ ಗಣೇಂದ್ರಾ।
ದ್ಯಕ್ಷರಿಪುಕಕ್ಷದವಸಾಕ್ಷರಕೃತೇಕ್ಷಣಕಟಾಕ್ಷ ಪೊರೆ ಸಕ್ಷಮವಿಚಕ್ಷಣವೃಷೇಂದ್ರಾ।।೫೭।

ವೃಷೇಂದ್ರಸ್ತುತಿ ಸಮಾಪ್ತಮಂಗಳಮಹಾಶ್ರೀಶ್ರೀಶ್ರೀ।।

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೧೧**

ವಸ್ತುಕಪುರಾಣದ ನಾಂದ್ಯ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೩೦ನೆಯ ಪತ್ರದಿಂದ ೩೧ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಶಾಂತಮಲ್ಲೇಶ್ವರಾಯನಮಃ॥ ವಸ್ತುಗಪುರಾಣದ ಕಂದ ನಾಂದ್ಯ॥

ಶ್ರೀಮತ್ಕಲ್ಯಾಣಭೂಭೃನ್ನುತ ಸುಖರಪದಂ ದಿವ್ಯಗಂಗಾಂಬಿಕಾಸ।
ತ್ಪ್ರೇಮಾವಾಸಂಗಣೇಂದಾನ್ವಿತನುರುಮಹಿಮಾಧಾರನಶ್ರಾಂತಸತ್ವಾ॥
ರಾಮಂ ಭೂತಿಪ್ರಯುಕ್ತಂ। ಪ್ರಣವರುಚಿಪರಾನಂದ ಧರ್ಮಂ। ಸಲಿಲೋ।
ದ್ದಾಮಂ ರಕ್ಷಿಪ್ಪುದೆಂಮಂ ಬಿಡದನವರತಂ ನಂದಿಕೇಶಂ ಮಹೇಶಂ॥೧॥

ಅಂತ್ಯ:

ಶ್ರೀಮದಜಭಾಮಿನಿನುತ।
ಹೈಮವತಿಮಧುರಗಾನನವರಸಲೋಲಂ॥
ಸೋಮಾಕಳಾಧರನತುಳಕ।
ಳಾಮಂದಿರನೀಗೆ ಸೌಖ್ಯಮಂ ಶಿವಲಿಂಗಂ॥೪೧॥

ಶ್ರೀಶಾಂಭವೀಶುಭಾಂಗನಿ।
ವೇಶಿತವಾಮಾಂಗನಂಗಜಾಹಿತನುರುನಾಗಾ॥
ಧೀಶಧರನಮಳಗುಣನೀ
ಣ್ಗೆ ಸೌಖ್ಯಮಂ ಶಿವಲಿಂಗಂ॥೪೨॥

ಕಂದನಾಂದ್ಯ ಸಮಾಪ್ತಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೦೨

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೧೨**

ದೇವಿ ನಾಂದ್ಯ

ಪತ್ರದ ಅಳತೆ: ೬" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೩೧ನೆಯ ಪತ್ರದಿಂದ ೩೪ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಗುರುಭ್ಯೋಂನಮಃ॥ ದೇವಿ ನಾಂದ್ಯ॥ ಶ್ರಗ್ಧರವೃತ್ತ॥

ವ್ಯಾನಮ್ರಾಮರ ಕಾಮಿನಿಜನಗಳದ್ದಮ್ಮಿಲ್ಲಪುಷ್ಪಾಸವಂ।
ತಾನಕ್ಕೊಪ್ಪಿರೆ ಪಾದಪೀಠದೊಳದಂತಳ್ತುಂಬಭೃಂಗಾಳಿಬೆ॥
ಳ್ಪಾನುತ್ತಂ ನಖರೋಚಿಯಿಂ ತೊಳಬೊಲ್ಗೆಯ್ದಾನತಬ್ರಾತದೋ।
ಷಾನ್ವಿತ ಕಾವನಯ ಪ್ರದರ್ಶನಿಯನಿಪ್ಪೇಶಾನಿಗಾಂ ವಂದಿಪೆಂ॥೧॥

ಅಂತ್ಯ:

ಪೃಥ್ವೀವೃತ್ತಂ॥

ಸುಪರ್ಣರಥಪೂಜಿತೆ ಸುಕರಕೀರ್ತಿವಿಭ್ರಾಜಿತೆ।
ಕೃಪಾರಸಸತರಂಗಿಣಿಕುಪಿತದೈತ್ಯರಿಸಂಹಾರಿಣಿ॥

ಕಪರ್ದಿಹೃದಯಪ್ರಿಯೆ ಕನಕವರ್ಣೆ ಸಚಿನ್ಮಯೆ।
ಜಪಾಸುಮರುಚಿವ್ರಜೆ ಜನನಿ ಪಾಲಿಸದ್ರೀಂದ್ರಜೆ॥೪೫॥

ದೇವಿನಾಂದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೦೩

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೧೩**

ಚೇರಮಾಂಕನ ಕಾವ್ಯದ ನಾಂದ್ಯ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೩೫ನೆಯ ಪತ್ರದಿಂದ ೩೯ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಚಾರಮಾಂಕನ ಕಾವ್ಯದ ನಾಂದ್ಯ॥
ಭೂವಳಯದನುವನಾ ನಾರದಂ ಬಿನ್ನವಿಸೆ।
ಪಾವನಚರಿತ್ರನೆನಿಸುವ ಭಸಿತಕಾಯನಂ।
ದೇವದೇವಂ ಕಳುಪೆ ಧರಣೀತಳಕ್ಕೆ ಚೇರಮನಾಗಿ ನಡೆತಂದನೂ॥

ಪದ॥

ಶ್ರೀಮದಗಜಾನನತಾಮರಸದಿನಾಂಕರಥ।
ಕಾಮಿತಫಲಪ್ರದಾಯಕ ಸಕಲಸದ್ರಾಮಂಜುಲಾಂಗನಿ।
ಸ್ತೀಮ ನಿರ್ಮ್ಮಳಮೂರ್ತಿ ಸಾಮವೇದಸ್ತುತ್ಯ ರಾಮಣೀಯ್ಯಕ ಸುಭಕ್ತಾ॥

ಪ್ರೇಮಿಯಾನತ ಕಲ್ಪಭೂಮಿರುಹಸಕಲಸುಖ।
ಧಾಮಜ ಪರ್ವತಸಾರ್ವಭೌಮಸೌಂದರಿರದಿವ್ಯ।
ಜಾಮಾತೃವೆನಿಪ ಗಂಗಾಮಕುಟರಕ್ಷಿಸಾ ಪ್ರೇಮದಿಂಭೋಗಮಲ್ಲಾ॥೧॥

ಅಂತ್ಯ:

ಇದು ಸಕಲಭಕ್ತಪದಪದ್ಮಮಧುಕಪುಂಣ್ಯ।
ಸದನ ಗುಬ್ಬಿಯ ಮಲಣಾರ್ಯರಕೃಪಾಪಾತ್ರ।
ಮುದಿತನವರಸಭಾವಲಕ್ಷಣಾಲಂಕಾರನಿಪುಣಯಂದೆನಿಸಿ ಮೆರವಾ॥
ಚದುರಚಾರಮನೊರೆದ ಚಾರಮಚರಿತ್ರಮಂ।
ಪದಪಿಂದಬರದೋದಿ ಕೇಳಿ ವಿಸ್ತರಿಸುವ।
ಗ್ಗೊರ್ದವಿಪ್ಪುರ್ದಾಯುರಾರೋಗ್ಯಸಂಪದಸರ್ವಸಿದ್ಧಿಸತ್ಯಂ ಸತ್ಯವೂ॥೩೫॥

ಚಾರಮನ ಕಾವ್ಯದ ನಾಂದ್ಯ ಸಮಾಪ್ತಂ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೦೪

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೧೪**

ಚೆನ್ನಬಸವೇಶ್ವರನ ಪುರಾಣದ ನಾಂದ್ಯ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೩೯ನೆಯ ಪತ್ರದಿಂದ ೪೭ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಗುರುಚೆನ್ನವೀರೇಶ್ವರಾಯನಮಃ॥ ಚೆನ್ನಬಸವೇಶ್ವರನ ಪುರಾಣದ ನಾಂದ್ಯ॥

ಶ್ರೀಪರಮಸದ್ಗುರುಪರಂಪರಂಜ್ಯೋಶ್ವ
ರೂಪನಾದ್ಯಂತರಹಿತಂ ನಿತ್ಯನದ್ವಯಂ
ಪಾಪರಹಿತಂಪರಬ್ರಹ್ಮಬ್ರಹ್ಮಜ್ಞಾನಬೋಧಾಸುಕ್ತ್ರುವೆಂದೂ।
ಗೋಪವಾಹನರಾವಗಂ ಬಿಡದೆ ಸುಮಯ
ಶ್ರೀಪಾದಪದಂಗಳಂ ಭಜಿಸುತ್ತಿಹರೆನ್ನ
ತಾಪತ್ರಯಂಗಳಂ ಹರಿಸಿ ರಕ್ಷಿಸು ನಿಂಮಯನಾಂ ಪೊಗಳ್ವೆನಳ್ಕರಿಂದೆ॥೧॥

ಅಂತ್ಯ:

ಇದು ಸಕಲ ವೀರಮಾಹೇಶ್ವರರಸದ್ವಿಮಲ।
ಹೃದಯಾಬ್ಜಮಿತ್ರನುರುಷಟ್ಸ್ಥಲಬ್ರಹ್ಮವೆಂ
ಬುದಧಿವರ್ಧನಪೂರ್ನ್ನ ಸೋಮಸಿದ್ಧವೀರೇಶ್ವರನ ಕರಜಾತನೂ॥
ಸದಮಲಜ್ಞಾನಿ ಸಕಲಾಗಮಪುರಾಣಕೋ
ವಿದನೆನಿಪ ವಿರೂಪಾಕ್ಷಪಂಡಿತಾರಾಧ್ಯರತಿ
ಮುದದಿ ಪೇಳಿದ ಚೆನ್ನಬಸವಪುರಾಣಸತ್ಕಥೆಯೊಳೊಂದನೆಯ ಖಾಂಡಂ॥೮೫॥

ಯಿಂತೆಸೆವ ಚೆಂನಬಸವೇಶನ ಪುರಾಣಮಂ
ಸಂತಸದಿತಂ ಬರೆದವರ್ಗೋದಿದವರ್ಗ್ಗರ್ತ್ಥವಾ।
ದ್ಯಂತಮಂ ಬಿಡದೆ ಪೇಳ್ದರ್ಗ್ಗೆ ಪಠಿಸಿದವರ್ಗ್ಗೆ ಭಕ್ತಿಯಿಂ ಕೇಳ್ದವರ್ಗ್ಗೆ॥
ಸಂತತಂ ಸಕಲ ಸುಖಮಂ ಸಕಲಭೋಗಮನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ।
ಕಂತುಹರನಪರಾವತಾರನೆನಿಸುವ ಚೆಂನಬಸವೇಶನಳ್ಕರಿಂದಾ॥೮೬॥

ಚೆನ್ನಬಸವೇಶನ ಪುರಾಣದ ನಾಂದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೧೫**

ಪ್ರಭುದೇವರ ಪುರಾಣದ ನಾಂದ್ಯ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೪೮ನೆಯ ಪತ್ರದಿಂದ ೫೬ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಶ್ರೀಮುರಿಗಾಶಾಂತವೀರೇಶ್ವರಾಯನಮಃ॥ ಪ್ರಭುದೇವರ ಪುರಾಣದ ನಾಂದ್ಯ॥ ಷಟ್ಪದಿ॥ ರಾಗ ಕಲ್ಯಾಣಿ। ಪರಿವರ್ದನಿ॥

ಶ್ರೀಮದ್ಭಸಿತಾಂಗವಿಹೃದ್ಭೂಭಂಗಲ।
ಸದ್ಭಕ್ತಿದಕುದರೋದ್ವಾದದಭಯ।
ಭಿದ್ಭೀಮಾರ್ಜುನಹಾರವಿಕಾಶಸರೋದ್ಭವಪತ್ಯರ್ಥಿ॥
ಸದ್ಭಾಕುಂದಮರುದ್ಭಾಜೋತ್ಸ್ವರು
ಸದ್ಭವ್ಯವಯಹೃದ್ಭಂಜಗ ಜ।
ಗದ್ವಯಕೃಂತನಮದ್ಭಯಹತಂ ಬೃಹದ್ಭಾನ್ವಕ್ಷೀ ಜಯತು॥೧॥

ಅಂತ್ಯ:

ಪರಧರತಪಸರದಮಸಕಮು
ನರಸರಸಪದ್ಮನವರನಂದನವನವಂ
ತರತರತನೃತವನವಂ ಸುರ
ಪುರವಂ ಹರನ ಕಂಗಳಕಂಡನೂವನಂ॥೭೩॥

ಪ್ರಭುದೇವರಪುರಾಣದ ನಾಂದ್ಯ ಸಮಾಪ್ತಂ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೦೬

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೧೬**

ಬಸವಸ್ತುತಿ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೫೬ನೆಯ ಪತ್ರದಿಂದ ೫೮ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಟೀಕಾಗದ್ಯ

ವಸ್ತು: ಸ್ತುತಿ

ಆದಿ:

ಭೂಯೆಂದರೆ ಭೂಮಿ। ಆ ಭೂಮಿಯ ಧರಿಸಿಹುದು ಮಂದರಪರ್ವತ। ಆ ಮಂದರಾದ್ರಿಯ ಧರಿಸಿದಾತನೆವಿಷ್ಣು। ಆ ವಿಷ್ಣುವ ಧರಿಸಿಹುದೆ ಉದಕ। ಆ ಉದಕವ ಧರಿಸಿಹುದೆ ಮೇಘ। ಆ ಮೇಘವೆ ದೇವೇಂದ್ರನ ಧರಿಸಿಹುದು। ಆ ದೇವೇಂದ್ರನ ಭಂಡಾರವ ಧರಿಸಿದಾತನೆ ಷಣ್ಮುಖ। ಆ ಷಣ್ಮುಖಂಗೆ ಗುರುವಾದಾತ ಬಸವೇಶ್ವರನು। ಯಿದು ಗುರುಶಬ್ದನಿರ್ವ್ವಚನ॥

ಅಂತ್ಯ:

ಕಾಲನ ಕೋಪಾಗ್ನಿಯಂಬ ದುಷ್ಕವನುದ್ರಾಂಯಂತಿ ವೋಡಿಸುವನಾಗಿ ಕಾಲಾಗ್ನಿರುದ್ರನೆಂಬ ಶಬ್ದಕ್ಕರ್ಥ॥ ಅಂತಾ ಬಸವೇಶ್ವರನ ಶ್ರೀಪಾದಕ್ಕೆ ನಮಸ್ಕರಿಸಿದೆನೆಂಬುದೀಗ ಬಸವದಂಡೇಶ ಶರಣುಶರಣಾರ್ತ್ರಿ ಯೆಂಬ

ಪದಕ್ಕರ್ಥ॥ ಭೂಧರವೆಂಬ ಪದದರ್ತ್ಥ ಪರಿಸಮಾಪ್ತಂ ಮಂಗಳಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೦೭

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೧೭**

ಶಂಕರಸಂಹಿತೆಯ ನಾಂದ್ಯ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೫೮ನೆಯ ಪತ್ರದಿಂದ ೭೨ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀನಗಸುತಾರಮಣ ಸೋಮಾನಿತಕೃಪಾಭರಣ।
ಮೌನಿಸನ್ನುತಪಾದ ಗಾನನಿಗಮಾಮೋದ।
ಸಾನುರಾಗಸ್ವಾಂತಭಾನುಬಿಂಬನಿಶಾಂತ ಸೂನುತ್ಕುವೆಲಕಾಂತಾ॥
ಜ್ಞಾನಸುಖದ್ರೂಮನಾನಾಗುಣಾರಾಮ।
ಜಾನಕೀಪತಿಪಕ್ಷಭೂನಿಲಿಂಪಾಧ್ಯಕ್ಷ।
ದಾನಕಲಿತಾಟೋಪವೈನತೇಯಗರೊಪಸಾನುಮಚ್ಚಾಪಶರಣೂ॥೧॥

ಅಂತ್ಯ:

ಅಸಮನಯನಾಕಾರ ಪಶುಪವಾಹನಶೂರ।
ಪಶುಪಸಮಯೋದ್ಧಾರ ವಿಷದವಿಭವಾಸ್ಫಾರ।

ದಶದಿಗ್ಯಶಃಪೂರ ಕುಸುಮಬಾಣಶರೀರಭಸಿತಾಂಗಮೋದಕಾರಾ॥
ಅಸಮಪುಣ್ಯಶರೀರಬಿವಧಾಚಯಾಸಾದರ।
ಭಸಿತಕಾಯಕುಮಾರ ಪರೆತಾಶನೊಸ್ಮಾರ।
ಲಸಿತಶೈವಾಚಾರ ಸುಶರೀರ ನಿತ್ಯುದ್ಧಾರ ಬಸವರಣಧೀರ ಶರಣಾ॥೧೦೦॥

ಶಂಕರಸಂಹಿತೆಯ ಲಿಂಗಸ್ತೋತ್ರದ ಷಟ್ಪದಂಗಳು ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೦೮

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೧೮**

ಸೋಮನಾಥನ ಕಾವ್ಯದ ನಾಂದ್ಯ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೭೩ನೆಯ ಪತ್ರದಿಂದ ೭೫ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಸೋಮನಾಥನ ಕಾವ್ಯದ ನಾಂದ್ಯ॥

ಪದ॥

ದೇವಸಭೆಯೊಳಗಿಂದುಧರನ ಬೆಸನವಂ ಪಿಡಿದು।
ಭೂವಳೆಯಕೆ ನವ ಸೌರಾಟ್ಟದೊಳು ಜನಿಸಿ ಬಳೆ।
ದಾವಗಂ ವ್ಯವಹಾರರೂಪಿಂದ ಹುಲಿಗೆರೆಗೆ ನಡೆತಂದನಾದಯ್ಯನಾ॥

ಅಂತ್ಯ:

ಮೀರಿ ಕಂಡಂ ಕಂಡು ತನುವಿನೊಳು ಪುಳಕಮಂ।
ತೋರಿದಂ ಸಂತೋಷವೇರಿದಂ ಜನನಯಂ।
ಮಾರಿದಂ ಕಳೆಗಳಂ ಬೀರಿದಂ ವಿಪುಳಡಗೆಯಾರಿದಂ ಸಂಸಾರದಿಂ।
ಜಾರಿದಂ ನಿಷ್ಟೆಯಂ ಸಾರಿದಂ ಭಕ್ತಿಯಂ।
ತೋರಿದಂ ಹಗೆಗಳಂ ಕೇರಿದಂ ಚಿತ್ತಮಂ।
ಮಾರಿದಂ ಶಿವನಡಿಗೆ ಸೂರೆಗೊಟ್ಟಂಮನಮನಪ್ರತಿಮನಾದಯ್ಯನೂ॥೨೧॥

ಶ್ರೀ ಆದಯ್ಯಗಳ ನಾಂದ್ಯ ಸಮಾಪ್ತಂ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೦೯

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೧೯**

ಷಟ್ಸ್ಥಲತಿಲಕದ ನಾಂದ್ಯ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೭೫ನೆಯ ಪತ್ರದಿಂದ ೮೧ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯ ನಮಃ॥ ಷಟ್ಸ್ಥಲತಿಲಕದ ನಾಂದ್ಯವ ಬರವುದಕ್ಕೆ ಶುಭಮಸ್ತು॥

ಪದ॥

ವಲ್ಲಕೀಮೃದಂಗಾದಿವಾದ್ಯಭೇದಂಗಳಂ।
ಬಲ್ಲ ಜಾಣರ್ನುಡಿಸೆ ನುಡಿವಂತೆ ಮನ್ಮನೋ
ವಲ್ಲಭಂ ವೃಷಲಿಂಗನುಡಿಸಲೀ ಕೃತಿಯಂ ಮಾಡುವೆ ಕೇಳಿ ಶರಣಜನರೂ॥

ಪದ॥

ಶ್ರೀಗುರುವೆ ವಿಪುಲಾಮೃತಾಗುರುವೆ ಜ್ಞಾನಕ್ರಿ।
ಯಾಗುರುವೆ ಭೋಗಪ್ರದಾಗುರುವೆ ಸತನ್ಯರ।
ಕ್ಷಾಗುರುವೆ ದುರಿತಶಿಕ್ಷಾಗುರುವೆ ಶಿಷ್ಯದೀಕ್ಷಾಗುರುವೆ ನೈಜಮುಕ್ತಿ॥
ತ್ಯಾಗಗುರುವೆ ಲಿಂಗಯೋಗಗುರುವೆ ಭವವಿಯೋ।
ಗಗುರುವೆ ಜೀವಶಿವರೇಕ ಸಮರಸವಿದಾ।
ಗುರುವೆ ಪರಿಪೂರ್ನ್ನರ್ಥೀಗುರುವೆ ವೃಷಲಿಂಗ ಭೋ ಗುರುವೆ ಶರಣು ನಿಮಗೆ॥೧॥

ಅಂತ್ಯ:

ಯಿದುಬಸವಲಿಂಗೇಶನಳಿಕ ಷಡುಸ್ಥಲತಿಲಕ।
ಮಿದು ನಿಜಾನಂದರಸಚುಳಕ ಶರಣರ ಪುಳಕ।
ಮಿದು ಮುಕ್ತಿಕರತಳಮಳಕ ವಿರಚಿತಕುಳಕ ವಿಮಲವಚನದ ರಚನೆಯು॥
ಯಿದು ಮುಕ್ತಿಸುಜ್ಞಾನಧೀರಸಾರೋದ್ಧಾರ।
ಮಿದು ಲಿಂಗವಂಗಸಮರಸಪೂರ ವಿಸ್ತಾರ।
ಮಿದು ಮಹಾಲಿಂಗೈಕ್ಯನಮಳ ಪೂರ್ನಸ್ಥಳಂ ವಿಂಶತಿ ವಿರಾಜಸ್ಥಳಂ॥೩೫॥

ಷಟ್ಸ್ಥಲಬಸವಪ್ರಭುದೇವರು ಸೆರಿಸಿದ ಕೊಟ್ಟೂರಯ್ಯನವರ ಪುರಾಣದ ನಾಂದ್ಯ ಸಮಾಪ್ತಂ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೪೦

ಕೃತಿಕ್ರಮಾಂಕ: **ಕೆ ೪೦/೨೦**

ಲಿಂಗಸ್ತೋತ್ರದ ಷಟ್ಪದಂಗಳು

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹದಿನೈದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೫೫-೬೦ ಅಕ್ಷರಗಳು. ೮೨ನೆಯ ಪತ್ರದಿಂದ ೮೯ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಲಿಂಗಸ್ತೋತ್ರದ ಷಟ್ಪದಂಗಳೂ। ಭಾವಿನಿ।

ಶ್ರೀಮದಗಜಾವಾಮಭಾಗೋದ್ದಾಮವಪುರಭಿರಾಮನಭಿನುತ।
ಸಾಮಗಾನಸ್ತೋಮ ಸಮರಸಪ್ರೇಮನರಿಭೀಮಾ॥
ಕಾಮತಾತಪಿತಾಮಹ ಪ್ರಮುಖಾಮರೇಂದ್ರಕ್ಷೇಮನಪ್ರತಿ।
ನಾಮನೊಸೆದುದ್ಧರಿಸುಗೆಂಮಂ ಸಿದ್ಧವಟಧಾಮಾ॥೧॥

ಅಂತ್ಯ:

ವೊಪ್ಪಿದಂ ವಿಶ್ವಸಿದಂ ಚಿದಾನಂದಮಯ
ನೊಪ್ಪಿದಂ ಪ್ರಮಥಂ ಕೃಪಾಂಬುಧಿಚಂದ್ರ।
ನೊಪ್ಪಿದಂ ನಿಜಕುಕ್ಷಿನಿಕ್ಷಿಪ್ತಲೋಕತ್ರಯಂ ಸದಾಶಿವ
ನೊಪ್ಪಿದಂ ವೊಪ್ಪಿದಂ ಖಂಡೇಂದುಕೋಟಿಯಂಗಜವಿಹಂ
ನೊಪ್ಪಿದಂ ಮಂದಾಕಿನೀಧೃತಪಪಾಜಟಲಂ
ನೊಪ್ಪಿದಂ (ನಿಜಕುಕ್ಷಿ ನಿಕ್ಷಿಪ್ತ ಲೋಕತ್ರಯಂ ಸದಾಶಿವ) ಪರಮಪಾವನ
ಕರುಣನೊಪ್ಪಿದಂ ವೀರಸೋಮೇಶಲಿಂಗಂ॥೧೧೧॥

ಲಿಂಗಸ್ತೋತ್ರದ ಷಟ್ಪದ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ; ಮುಂದಕ್ಕೆ ಮೂರು ಬಿಡಿಪತ್ರಗಳಿವೆ; ಇದೇ ರೀತಿ ಕಟ್ಟಿನ ಆದಿಯಲ್ಲಿ ಕೂಡ ಮೂರಿವೆ; ಇವು ಎಲ್ಲಿಯವೋ ತಿಳಿಯದು

****

೪೧೧

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೧**

ಗುರುರಗಳೆ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೧ನೆಯ ಪತ್ರದಿಂದ ೨ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ರಗಳೆ

ವಸ್ತು: ಗುರು ವಿಚಾರ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಗುರುರಗಳೆ।

ಕಂದ। ....ದವೆಂಬುದನಱಿಯದೆ।
ಗುರುಚರಣವ ಭಜಿಸು ಮನವೆ ಸಂ....
ಪರಮಾರ್ಥದಿಂದೊಲಿದು ಬಗೆವುದು।
ಹರನೆ ಗುರುಮೂರ್ತಿ ....ಗುರುವಿಶ್ವೇಶಾ॥

ಮಂದಾನಿಲರಗಳೆ॥
ಸ್ವಸ್ತಿಶ್ರೀನಿ.......ಪರಮಪ್ರತ್ಯ......ಗುರುಶರಣರು॥೧॥

ಅಂತ್ಯ:

ಮಾರಾರಿಯೆನಿಪ ಗುರು ವಿಶ್ವೇಶ ಗುರು ಶರಣು॥೬೦॥

ಕಂದ॥ ಆದಿಅನಾದಿಗಳೆಂಬಿವ
ಭೇದಿಸಿ ತಂದು ಯೋಗಸಾಧ್ಯದೊಳಿರಿಸಿ।
ಬೋಧಿಸಿ ಗುರು ಸುಜ್ಞಾನದ
ಹಾದಿಯ ತೋಱುಸಿದನೆಂಮಯ ಗುರು ವಿಶ್ವೇಶ॥

ಗುರುರಗಳೆ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ; ನಡುನಡುವೆ ತ್ರುಟಿತ

****

೪೧೨

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೨**

ಷಡಕ್ಷರಿಯ ರಗಳೆ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೨ನೆಯ ಪತ್ರದಿಂದ ೪ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ರಗಳೆ

ವಸ್ತು: ಶಿವಷಡಕ್ಷರಮಂತ್ರಮಹಿಮೆಯ ವರ್ಣನೆ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಷಡಾಕ್ಷರಿಯ ರಗಳೆ॥

ಕಂದ॥ ಭವತಿಮಿರ ಕಮಲಮಿತ್ರಂ।
ಭವವಾರುಧಿವಡಬವಹ್ನಿ ಭವತರು ಪರಷುಂ॥
ಶಿವಷಡಾಕ್ಷರಿಯ ಮಂತ್ರಂ।
ಭವಗೋವಜ್ರ ಪ್ರಸಂನಶಂಕರಲಿಂಗಾ॥

ಉತ್ಸಾಹರಗಳೆ॥

ಶ್ರೀಗುರುಪ್ರಸಂನಮೂರ್ತಿ। ದಶದಿಶಾಮಯಪ್ರಕೀರ್ತಿ॥
ನಾಗರಾಜಕಟಕಕಿಂಕರಾಯ। ಓಂ ನಮಃ ಶಿವಾಯ॥೧॥

ಅಂತ್ಯ:

ಗತಿಯೆ ಓಂ ನಮಃಶಿವಾಯ।
ಮತಿಯೆ ಓಂ ನಮಃಶಿವಾಯ॥೭೦॥
ಓಂ ನಮೋನಮಃಶಿವಾಯ।
ಓಂ ನಮಃ ನಮಃ ಶಿವಾಯ।
ಗುರುಪ್ರಸಂನ ಶಂಕರಲಿಂಗಾ॥೩॥

ಕಂದ॥ ಯೀ ಶಿವಷಡಾಕ್ಷರಿಯ ಮಂತ್ರವ।
ನೋಸರಿಸದೆ ಪೇಳ್ವ ಕೇಳ್ವ ಶಿವಭಕ್ತರ್ಗಂ॥
ದಾಸಭಾವದೊಳು ನಿತ್ಯ ನಾ
.... ಶರಣ ..... ಗುರು ಪ್ರಸಂನ ಶಂಕರಲಿಂಗಾ॥

ಷಡಾಕ್ಷರಿಯ ರಗಳೆ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ; ನಡುನಡುವೆ ತ್ರುಟಿತ

****

೪೧೩

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೩**

ಶರಣುಬಸವರಗಳೆ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೪ನೆಯ ಪತ್ರದಿಂದ ೭ನೆಯ ಪತ್ರದವರೆಗಿದೆ.

ಕೃತಿಕಾರ: ಪಾಲ್ಕುರಿಕೆ ಸೋಮನಾಥ

ಸ್ವರೂಪ: ರಗಳೆ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಶರಣುಬಸವರಗಳೆ ॥ ಉತ್ಸಾಹವೃತ್ತ॥

ದೇವರಾಜಸಿದ್ಧಸಾಧ್ಯಯಕ್ಷ ರಾ।ಕ್ಷಾವಿಹಂಗರಾಟ್ಪತಂಗ ಸೊಮಧೂಮ ...
.... ತಳಿವಿದ್ರುತ ಪಾಶ। ಸೇವಿತೋವಿದ್ಯಾಂಘ್ರಿರಾ। ಜೀವ ನಿಂಮ ನಾಂ
ಪೊಗಳ್ವೆ। ಶ್ರೀವೃಷಾಧಿನಾಯಕ ಪ್ರಸಿದ್ಧ ಭಾವ ಶರಣು ಬಸವ॥೧॥

ಅಂತ್ಯ:

..ರಾತ್ಸಹರಗಳೆಯಂ ಪಟಿಸಿದೆ।
ವಿಸ್ತರಿಸಿದಡೆ ತಾಂ ಬರದೋದಿದಡೆ ಸದ್ಭಕ್ತಿಯನೀವಂ ಕಾಯ್ವಂ॥೧೫॥

ಶರಣುಬಸವರಗಳೆ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ; ನಡುನಡುವೆ ತ್ರುಟಿತ.

****

೪೧೪

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೪**

ಮನೋವಿಕಾರನಿರಸನರಗಳೆ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ౭ನೆಯ ಪತ್ರದಿಂದ ೧೧ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ರಗಳೆ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಮನೋವಿಕಾರನಿರಸನರಗಳೆ॥ ವೃತ್ತ॥

ದಪ್ಪಮನಂ ಕನಿಷ್ಟ .... ಮಹೇಶ ನಿಮ್ಮನೊಲಿದರ್ಚ್ಚಿಸಲೊಲ್ಲದೆ

ಕೆಟ್ಟೆ ಕೆಟ್ಟೆ ನಾಂ। ಬಟ್ಟೆಯ ಕಾಣದೆ ಬಾಯ ಬಿಡುತ್ತೈದೆನೆ ಚಿತ್ತವಿಕಾರದೆಳೆ
.... । ಮೆಟ್ಟಿ ಕೆ....... ನಿಜಾಂಘ್ರಿಯ ತೋಱಿಸು ತಂದೆ ಶಂಕರಾ॥೧॥

ಲಲಿತರಗಳೆ॥

ಅಂತ್ಯ:

ಭಕ್ತರಿಗೆ ವಸವಾಗಿ ತೋರ್ಪ ಶಂಕರಲಿಂಗಾ॥೧೨೭॥

ದಾನಿಶಂಕರಲಿಂಗಾ। ಧರ್ಮಿ ಶಂಕರಲಿಂಗಾ।
ಮಾನಿಶಂಕರಲಿಂಗಾ। ಮಹಿಮ ಶಂಕರಲಿಂಗಾ।
ಕರುಣಿ ಶಂಕರಲಿಂಗಾ। ಶರಣು ಶರಣಾರ್ತಿ ಪ್ರಸನ್ನ ಶಂಕರಲಿಂಗಾ॥

ಕಂದ॥

ಜನನಕಾಲದೊಳಗೊಂಡಿಸಿ।
ಘನಯೌವನದೊಳಗೆ ವೊಂದಿಸಿಯು ನಿಮಗೆ ನಾಂ ಮು॥
ಪ್ಪಿನಲಿ ವಂದಿಸುವೆ ನೀವಿದ।
ಮನಸಿಗೆ ತಾರದಿರ ತಂದೆ ಶಂಕರಲಿಂಗಾ॥

ಮನೋವಿಕಾರನಿರಸನರಗಳೆ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ; ನಡುನಡುವೆ ತ್ರುಟಿತ

****

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೫**

ಭಕ್ತಿಬಿನ್ನಹದ ರಗಳೆ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೧೧ನೆಯ ಪತ್ರದಿಂದ ೧೫ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ರಗಳೆ

ವಸ್ತು: ಭಕ್ತಿ, ಆಧ್ಯಾತ್ಮ

ಆದಿ:

ಶ್ರೀಗುರು ಬಸವಲಿಂಗಾಯನಮಃ।। ಭಕ್ತಿಬಿಂನಹದ ರಗಳೆ।।

.... ಹಿಂದೆ ಸಹಸ್ರಲಕ್ಷ ಸತಕೋಟಿ ಭವಂತರ ಹಿನ ಯೋನಿಯೊಳ್ಬಂದೆನು ಭಾಗ್ಯದಿಂ ದೊರಕಿದ್ಯೇಕೆ ಮಾನುವ ಜಲ್ಮದಿಂನು ನಾಂ। ಮುಂದಿದರಿಂದ। ಸದ್ಗತಿಯನ್ಯೆದುವೆನೊ ಕದಿಗೆಯ್ದಾದಿರ್ಪ್ಪೆನೊ। ಯೆಂದಿರುಳಂ ಪಗಲ್ಮರುಗಿ ಚಿಂತಿಸುತ್ಯೆದೆನೆ ತಂದೆ ಶಂಕರಾ।।

ಲಲಿತರಗಳೆ।।

ಶ್ರೀಮನ್ಮಹಾಪ್ರಮಥರಾಯನಿರೂಪಮಕಾಯ
ನಾಮರೂಪಕ್ರಿಯೆದೂರ ವಿರಹಿತ ಮಾಯ।।೧।।

ದೇವ ಭಯಭವರೋಗವ್ಯೆದ್ಯ ನಿಗಮಾಭೇದ್ಯ।
ದೇವಲೋಕಾದಿ ಲೋಕಕ್ಕೆ ಪರಮಾರಾಧ್ಯ।।೨।।

ಅಂತ್ಯ:

ಶರಣುಶರಣಾರ್ತಿ ಶರಣಾರ್ತಿ ಶಂಕರಲಿಂಗ।
ಶರಣು ಶರಣಾರ್ತಿ ಶರಣಾರ್ತಿ ಶಂಕರಲಿಂಗಾ।।೧೩೯।।

ಕಂದ||

ಅಗಜೇಶ ನಿಂಮ ಪಾದವ|
ಮಿಗೆ ಸಾರುತಿವೆನೆಂಬ ಸರ್ವ್ವ ಜೀವರ ಮನಸಂ|
ತಗದುಕೊಂಡಿರ್ಪ್ಪ ಮಾಯಯಾ|
ತಗಹಂ ಬಿಡಿಸಾ ಪ್ರಸನ್ನ ಶಂಕರಲಿಂಗಾ||೧೪||

ಭಕ್ತಿಬಿಂನಹರಗಳೆ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ||

ವಿಶೇಷವಿಷಯ: ಸಮಗ್ರ

****

೪೧೬

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೬**

ಬಸವಸ್ತೋತ್ರದ ತ್ರಿವಿಧಿ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦–೪೫ ಅಕ್ಷರಗಳು. ೮ ಪತ್ರಗಳಷ್ಟಿದೆ.

ಕೃತಿಕಾರ: ?

ಸ್ವರೂಪ: ತ್ರಿವಿಧಿ

ವಸ್ತು: ಸ್ತುತಿ

ಆದಿ:

ಶ್ರೀಗುರು ಬಸವಲಿಂಗಾಯನಮಃ|| ಬಸವಸ್ತೋತ್ರದ ತ್ರಿವಿಧಿ||

ಕಂದ||

ಬಸವೇಶನೆ ಬಸವರಾಜನೆ|
ಬಸವಂಣನೆ ಬಸವ ತಂದೆ ಬಸವಕೃಪಾನಿಧಿ|
ಬಸವ ಪರಮೇಶ್ವರೀಶ್ವರ|
ಬಸವ ಪ್ರಮಥಾದಿದೇವ ರಕ್ಷಿಸು ಬಸವಾ||೧||

ತ್ರಿವಿಧಿ॥

ಪ್ರಥಮಂತು ಬಸವಂಣ। ದ್ವಿತಿಯಂತು ಲಿಂಗಾವು।
ತೃತೀಯಂತು ತತ್ವ ಬ್ರಹ್ಮಾಂಡವೆಲ್ಲಾ।
ಅಕಳಂಕ ಗುಣನಿಧಿ ಚಿದಾನಂದ ಬಸವಂಗೆ।
ಭಕ್ತನಾದೆನು ಗುರುವೆ ಯೋಗಿನಾಥಾ॥೧॥

ಅಂತ್ಯ:

ಯಿಂತು ಬಸವಸ್ಥವವ ಸಂತತಂ ನೆನದಿಗ ನಿ।
ಶ್ಚಿಂತನಾದೆನ್ನೈ ಸುಖತರದಲ್ಲಿ।
ಸಶ್ಚಿದಾನಂದ ಗುರುಬಸವನಾಣತಿಯಲ್ಲಿ।
ವೊಚ್ಚತ ನಿನಗಾನು ಯೋಗಿನಾಥಾ॥೧೨॥

ಬಸವತ್ರಿವಿಧಿ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೪೧೭

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೭**

ಮಿಶ್ರತ್ರಿವಿಧಿ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು.

ಕೃತಿಕಾರ: ?

ಸ್ವರೂಪ: ತ್ರಿವಿದಿ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಮಿಶ್ರತ್ರಿವಿಧಿ॥
ಶರಣು ಸತ್ಪಥ ಬಸವ ಶರಣು ನಿಜಗುರು ಬಸವ।
ಶರಣು ಬಸವಗ್ನಾನ ಶರಣು ಬಸವ॥
ಶರಣು ನಿರ್ಮಲ ನಿಜಗುರುಲಿಂಗ ಬಸವೇಶ।
ಶರಣೆಂಬೆ ನಿಮ್ಮಡಿಗೆ ಯೋಗಿನಾಥಾ॥೧॥

ಅಂತ್ಯ:

ಬಸವಮಡಿವಳ ಚೆನ್ನಬಸವ ಪ್ರಭು ಮುಖ್ಯವಾ।
ದಸಮ ಶಿವಗಣ ಮಿಶ್ರಸ್ತೋತ್ರದ।
ಯೆಸೆವ ತ್ರಿವಿಧಿಯ ಮನವೊಸೆದೋದಿ ಕೇಳಿದಡೆ।
ಶಶಿಧರನೊಳೈಕ್ಯ ದಿಠ ಯೋಗಿನಾಥಾ॥೧೯॥

ಮಿಶ್ರತ್ರಿವಿಧಿ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೧೮

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೮**

ಅಷ್ಟಾವರಣಸ್ತೋತ್ರದ ತ್ರಿವಿಧಿ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೧೫ನೆಯ ಪತ್ರದಿಂದ ೨೨ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ತ್ರಿವಿಧಿ

ವಸ್ತು: ಭಕ್ತಿ, ಆಧ್ಯಾತ್ಮ

ಆದಿ:

ಶ್ರೀಗುರು ಬಸವಲಿಂಗಾಯನಮಃ॥ ಅಷ್ಟಾವರಣಸ್ತೋತ್ರದ ತ್ರಿವಿಧಿ॥

ಶ್ರೀಗುರುವೆ ಶ್ರೀಗುರುವೆ ಭವಪಾಶದೂರನೆ।
ಶ್ರೀಗುರುವೆ ಅಂತರಶೂನ್ಯನೆ।
ಶ್ರೀಗುರುವೆ ಆನಂದಮಯರೂಪನೆ ಗತಿಯೆಂದು।
ಆನತವನೆಯ್ದುವೆನು ಯೋಗಿನಾಥಾ॥೧॥

ಅಂತ್ಯ:

ಮಂತ್ರಮನವಾವರಿಸಿ ಭ್ರಾಂತುಗೆಟ್ಟುದು ನೋಡಾ
ಶಾಂತಿಶಲಿಲದಿಯೆಂನಮೈನನದುದೂ॥
ಕಂತುಕಾಲರನೊದೆದು ಮಹಾಂತಮರಣವ ಗೆಲಿದು ನಿ
ಶ್ಚಿಂತಸುಖಿಯಾದೆ ಯೋಗಿನಾಥಾ॥೧೭೧॥

ಅಷ್ಟವರಣದ ತ್ರಿವಿಧಿ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೧೯

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೯**

ಶೀಲವಂತನ ತ್ರಿವಿಧಿ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦–೪೫ ಅಕ್ಷರಗಳು. ೨೨ನೆಯ ಪತ್ರದಿಂದ ೨೬ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ತ್ರಿವಿಧಿ

ವಸ್ತು: ಸ್ತುತಿ, ಆಧ್ಯಾತ್ಮಿಕ

ಆದಿ:

ಶ್ರೀಗುರು ಬಸವಲಿಂಗಾಯನಮಃ॥ ಶೀಲವಂತನ ತ್ರಿವಿಧಿ॥

ಕಂದ॥

ನಮವಾತ್ಮಲಿಂಗಶಿವಯನ।
ಲಮಲತತರದ। ನಂಗ ಆಯಗಳೆರಡಾರ್ನಂ ಚಿ॥
ದ್ರಮನೊಲಿಂಗಾಂಗಸಂಗ।
ಕ್ರಮವಾತ್ಮಸುಲಿಂಗಪ್ರಣಮಸಂಯೋಗಮಿದಂ॥೧॥

ಅಂತ್ಯ:
ಕಂದ॥

ಯೀ ಗುರುಥವವನಾವವ।
ರಾಗದಿ ಬರದೋದಿ ಕೇಳಿ ತಿಳಿದರ್ತ್ಥಯಿಸ।
ಲ್ಭೋಗಮೋಕ್ಷಗಳು ಪರಶಿವ।
ಯೋಗಾನುಭವಪ್ರಸಾದಸುಖದೊರೆಕೊಳ್ಗುಂ॥೧೧೩॥

ಶೀಲವಂತಯ್ಯನ ತ್ರಿವಿಧಿ ಸಮಾಪ್ತಃ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೨೦

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೧೦**

ಶಂಕರದೇವರ ಕಂದ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೨೬ನೆಯ ಪತ್ರದಿಂದ ೩೨ನೆಯ ಪತ್ರದವರೆಗಿದೆ.

ಕೃತಿಕಾರ: ಶಂಕರದೇವ

ಸ್ವರೂಪ: ಕಂದ

ವಸ್ತು: ಭಕ್ತಿ, ಆಧ್ಯಾತ್ಮಿಕ

ಆದಿ:

ಶ್ರೀಗುರು ಬಸವಲಿಂಗಾಯನಮಃ॥ ಶಂಕರದೇವರ ಕಂದ ॥

ಶರಣೆಂಬೆ ಶರಣೆಂಬೆ
ಶರಣೆಂಬೆ ನಿಚ್ಚ ನಿಚ್ಚ ಶರಣೆನುತಿಹೆ ನಾಂ॥
ಗುರುಲಿಂಗಜಂಗಮಶ್ರೀ
ಚರಣತಳಕಂ ಪ್ರಸನ್ನಶಂಕರಲಿಂಗಾ॥೧॥

ಅಂತ್ಯ:

ಶ್ರೀರಾಜನಾಗಕಂಕಣಂ।
ದಾನವರಿಪುನಯನಚರಣನಿರುಪಮಭಕ್ತಿ॥
ಜ್ಞಾನವೈರಾಗ್ಯಮಂ ಕೊಡು।
ನೀನೆನಗೊಲವಿಂ ಪ್ರಸನ್ನಶಂಕರಲಿಂಗಾ॥೧೨೧॥

ಶಂಕರದೇವರಕಂದ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೨೧

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೧೧**

ಮರುಳುದೇವರ ಕಂದ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦–೪೫ ಅಕ್ಷರಗಳು. ೩೨ನೆಯ ಪತ್ರದಿಂದ ೩೮ನೆಯ ಪತ್ರದವರೆಗಿದೆ.

ಕೃತಿಕಾರ: ಮರುಳುದೇವ

ಸ್ವರೂಪ: ಕಂದ

ವಸ್ತು: ಭಕ್ತಿ, ಆಧ್ಯಾತ್ಮ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಮರುಳುದೇವರ ಕಂದ॥

ಶ್ರೀಮಚ್ಛಾಂಭವಭಕ್ತಿ
ಪ್ರೇಮಾನಂದಾಬ್ಧಿಸೋಮನತಜನಜಯವಿ॥
ಶ್ರಾಮನರಿಭೀಮನಗಜಾ।
ವಾಮಾಂಗೋದ್ದಾಮನೆಮಪರಮಪ್ರಭುವೆ॥೧॥

ಅಂತ್ಯ:

ವರಬಸವ ಚೆಂನಬಸವೇ।
ಶ್ವರಪ್ರಭು ಮಹದೇವಿಸಿದ್ಧರಾಮೇಶ್ವರಮು॥
ಖ್ಯರ ಪ್ರಮಥರಡಿಗಳನು ಹೃ।
ತ್ಸರಸಿಜದೊಳು ತಾಳ್ದು ಬಾಳ್ದೆ ಪರಮಪ್ರಭುವೆ॥೧೩೪॥

ಮರುಳುದೇವರಕಂದ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೨೨

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೧೨**

ಷಡಕ್ಷರಿಯ ಕಂದ

ಪತ್ರದ ಅಳತೆ: ೬'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦--೪೫ ಅಕ್ಷರಗಳು. ೩೮ನೆಯ ಪತ್ರದಿಂದ ೪೪ನೆಯ ಪತ್ರದವರೆಗಿದೆ.

ಕೃತಿಕಾರ: ಕೇಶಿರಾಜದಂಡಾಧೀಶ

ಸ್ವರೂಪ: ಕಂದ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರು ಬಸವಲಿಂಗಾಯನಮಃ।। ಷಡಕ್ಷರಿಯ ಕಂದ।।

ಶ್ರೀಯಂ ಪಡೆವಡೆ ಶಾಶ್ವತ।
ದಾಯುಷ್ಯದಪೇಕ್ಷೆ ತನಗೆ ಕೈಗೂಡುವಡಿ।
ಮಾಯಕೊಳಗಾಗದಿರ್ಪಡೆ।
ಜಿಯನ ಜಪ ಓಂ ನಮಃಶಿವಾಯಂಬ ಪದಂ।।೧।।

ಅಂತ್ಯ:

ಆಱಕ್ಕರದಿಂ ಮಂತ್ರಂ।
ಮೂಱುಕಂಣುಳ್ಳಭವನಿಂದವೆಗ್ಗಳದೈವಂ।।
ಬೇಱಿಲ್ಲವೆಂದು ಧರಿತ್ರಿಗೆ।।
ಸಾಱಿದೆ ನಾಂ ಕೇಶಿರಾಜದಂಡಾಧೀಶಂ।।೧೧೦।।

ಮಂತ್ರಮಹತ್ವದ ಕಂದ ಸಮಾಪ್ತ।। ಮಂಗಳಮಹಾಶ್ರೀಶ್ರೀಶ್ರೀ।।

ವಿಶೇಷವಿಷಯ: ಸಮಗ್ರ

****

೪೨೩

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೧೩**

ಪ್ರಭುಲಿಂಗದ ಕಂದ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦–೪೫ ಅಕ್ಷರಗಳು. ೪೪ನೆಯ ಪತ್ರದಿಂದ ೪೬ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಕಂದ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಪ್ರಭುಲಿಂಗದ ಕಂದ॥

ಶ್ರೀಮತ್ಸಮಂತ್ರಮಂತ್ರ।
ಸ್ತೋಮ ಪ್ರಭುಲಿಂಗರಾಜ ಕರಕಂಜಪುರ॥
ಸ್ವಾಮಿ ಸ್ವತಂತ್ರನಿಜನಿ।
ಸ್ಸಿಮಾತುಳಶಾಂತವೀರ ಶಿವ ಜಯರುದ್ರಾ॥೧॥

ಅಂತ್ಯ:

ಪ್ರಭುಲಿಂಗದ ಬಾವನ್ನದ।
ಶುಭನುತಿಗಳ ಪಠಿಸಿ ಕೋಪದ ತಾಪನಿಷೆದಾ॥
ದಿಭವಪ್ರಕೃತಿಗಳಳಿದಾ।
ಭವದ ನಿಜಭಕ್ತಿ ಮುಕ್ತಿ ಸುಖಪದಮಕ್ಕುಂ॥೫೨॥

ಪ್ರಭುಲಿಂಗದ ಕಂದ ಸಮಾಪ್ತಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೨೪

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೧೪**

ಅಕ್ಷರಮಾಲಿಕಾಗದ್ಯ (ಸಂ)

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೪೬ನೆಯ ಪತ್ರದಿಂದ ೪೭ನೆಯ ಪತ್ರದವರೆಗಿದೆ.

ಕೃತಿಕಾರ: ಪಾಲ್ಕುರಿಕೆ ಸೋಮನಾಥ

ಸ್ವರೂಪ: ಪದ್ಯ, ಪದ್ಯಗಂಧಿ ಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ।। ಅಕ್ಷರಮಾಲಿಕಾಗದ್ಯ।।

ಓಂ ಜಯಜಯಬಸವಾಖ್ಯಸ್ವಾನುಭೂತ್ಯೈಕಸೌಖ್ಯ
ಪ್ರಮಥಗಣಪವಿತ್ರ ಪ್ರಸ್ಫುರದ್ಭಕ್ತಿಗೋತ್ರಾ।।
ಪ್ರಣಮಿತ ಬುಧಶಮಿತ
ಬುಧವಾರ್ಯ್ಯಸ್ಫಾರದೈಶ್ವರ್ಯ್ಯದೂರ್ಯ
ಪ್ರಥಿತ್ವ ವೃಷಭರೂಪಃ ಭ್ರಾಜಮಾನಃ ಪ್ರತಾಪಃ।।

ಅಂತ್ಯ:

ಷಡ್ವರ್ಗ ನಿರ್ಮುಕ್ತ।
ಸಹಜ ಜಂಗಮಭಕ್ತ।
ಹರಗನಸಿತಚ್ಛತ್ರ।
ಳಳಿತಕೀರ್ತಿಕಳತ್ರ।
ಕ್ಷರಸ್ತುತಿಪಾತ್ರ।।
ಕ್ಷರವಿಮುಖನಿಜಗಾತ್ರ।
ಅಕ್ಷರಸ್ತುತಿಪಾತ್ರ।
ಯಿತಿ ಶಿವಕರಂ ಶ್ರೀ ಬಸವದಂಡನಾಥ ನಮಸ್ತೆ ನಮಸ್ತೆ ನಮಃ।।

ಗ್ರಂಥ।।

ಅಕಾರಾದಿಕ್ಷಕಾರಾಂತಂ।
ಮಕಾರಾದ್ಯಕ್ಷಮಾಲಿಕಾ।।
ಪ್ರಸಾದಿ ಸೋಮನಾಥಾಖ್ಯ।
ಬಸವಸ್ಯ ಕೃಪಾನಿಧೇ।।

ಅಕ್ಷರಮಾಲಿಕಾಗದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ।।

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೧೫**

ಪಂಚಪ್ರಕಾರಗದ್ಯ (ಸಂ)

ಪತ್ರದ ಅಳತೆ: ೬'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೪೭ನೆಯ ಪತ್ರದಿಂದ ೪೯ನೆಯ ಪತ್ರದವರೆಗಿದೆ.

ಕೃತಿಕಾರ: ಪಾಲ್ಕುರಿಕೆ ಸೋಮನಾಥ

ಸ್ವರೂಪ: ಪದ್ಯ, ಪದ್ಯಗಂಧಿಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ।। ಪಂಚಪ್ರಕಾರದ ಗದ್ಯ।।

ಶಾರ್ದೂಲ।।

ಸ್ವಸ್ತಿಶ್ರೀಪ್ರಮಥಾನ್ವಯೋತ್ತಮ ಶಿಲಾದ ಶ್ರೀಮುನೀಂದ್ರಾತ್ಮಜಾ।
ಶ್ರೀಕಂಠಪ್ರತಿಬಿಂಬಮೂರ್ತಿರನಘಾ ಶ್ರೀನಂದಿನಾಥಾ ವಿಭೋ।।
ಸ್ತುಸ್ಯಾರಿಂಸೋದ್ಭವದಂಡಬಸವಾಶ್ರೀ ನಾಮಧೇಯಪ್ರಭೋ।
ತ್ವತತ್ಕಾರುಣ್ಯತರಂಗಿತಂ ಮಯಿ ಸದಾ ನಿಕ್ಷೇಪ್ಯತಾಂ ನಿಕ್ವಣಂ।।೧।।

ಅಂತ್ಯ:

ಜಯಗುಣರಾಜಿತ।
ಜಯಗಣಪೂಜಿತ।
ಜಯಜಯಶ್ರೀ ಬಸವದಂಡನಾಥ ನಮಸ್ತೇ ನಮಸ್ತೇನಮಃ।।

ಗ್ರಂಥ।।

ಬಸವಸ್ಯ ಕೃಪಾಮೂರ್ತಿ।
ಸೋಮನಾಥಪ್ರಸಾದಿನಾಂ।।

ವಿವರಣಾತ್ಮಕ ಹಸ್ತಪ್ರತಿ ಸೂಚಿ/೫೮೩

ಅನವದ್ಯಮಿದಂ ಗದ್ಯಂ।
ಮಮಗದ್ಯಂ ಜಗಂನುತಂ॥

ಪಂಚಪ್ರಕಾರಗದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೨೬

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೧೬**

ನಮಸ್ಕಾರಗದ್ಯ (ಸಂ)

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೪೯ನೆಯ ಪತ್ರದಿಂದ ೫೧ನೆಯ ಪತ್ರದವರೆಗಿದೆ.

ಕೃತಿಕಾರ: ಪಾಲ್ಕುರಿಕೆ ಸೋಮನಾಥ

ಸ್ವರೂಪ: ಪದ್ಯ, ಪದ್ಯಗಂಧಿಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ನಮಸ್ಕಾರಗದ್ಯ॥

ವೃ॥

ಸ್ರಿನಂಲೋದ್ಭವವೇದಬೋಧಿತಲಸದ್ವೀರವ್ರತಪ್ರಕ್ರಿಯಾ।
ಚರ್ಯ್ಯಾದೇಶಿಕಾಯಾ ಭುವನಸ್ತುತ್ಯಾಯ ನಿತ್ಯಾಯ ಸ॥
ದ್ಭಾಂಡಾಗಾರ ಧುರಂಧರಾಯ ಸುಮಹದ್ರುದ್ರಾಯ ಭದ್ರಾಯತೇ।
ಸಾಕ್ಷಾಚ್ಛ್ರೀವೃಷಭಾಧಿಪಾಂಶ ಬಸವಾಧೀಶಾಯ ತಸ್ಮೈ ನಮಃ॥೧॥

ಅಂತ್ಯ:

ಗ್ರಂಥ॥

ಬಕಾರಾಯ ಸಕಾರಾಯ।
ವಕಾರಾಯ ನಮೋನಮಃ॥
ನಮೋ ವೃಷಭಜಾತಾಯ।
ಬಸವಾಯತೇ ನಮೋನಮಃ॥೧೭॥

ಕಂದ॥

ಸರಸನಮಸ್ಕೃತಿಗದ್ಯಾಂ।
ತರಪದಮಣಿತಖಚಿತವಾಕ್ಸುವರ್ಣಾಬ್ಜಷ್ಟೋ॥
ತ್ತರ ಶತಕುಸುಮಂಗಳ ಬಸ।
ವರಸರಿಗರ್ಪಿಸಿದ ಪಾಲ್ಕುರಿಕೆ ಸೋಮಾಂಕಂ॥೧೮॥

ನಮಸ್ಕಾರಗದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೨೭

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೧೭**

ಅಷ್ಟೋತ್ತರಶತನಾಮಗದ್ಯ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೩೮ನೆಯ ಪತ್ರದಿಂದ ೪೪ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ; ಪದ್ಯಗಂಧಿಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರು ಬಸವಲಿಂಗಾಯನಮಃ।। ಅಷ್ಟೋತ್ತರಶತನಾಮಗದ್ಯ।।

ಉ।। ಚಿತ್ಕಬಳಿಕೃತಾಂಗ ಜಯಚಿನ್ಮಯ ಚಿತ್ಸುಖಾವಭೃತ್।
ಚಿತ್ಕಮಳಾರ್ಕ ಚಿದ್ಘನ ಚಿದಾತ್ಮ ಚಿದದ್ವಯ ಚಿದ್ವಿಶೇಷ ವಿತ್।
ಚಿತ್ಕೃತಾಹಂಬ್ರಹ್ಮ ಸಂಸೂಕ್ಷ್ಮ ನಮಸ್ತೇ।
ಬಿಂಬ ಸಮಸ್ತಾಪೂರ್ನ ನಮಸ್ತೆ।
ವೆಸ್ತ ಸಮಸ್ತ ನಿಜಾಂತ ನಮಸ್ತೆ।।

ಅಂತ್ಯ:

ಆದ್ಯ ನಮಸ್ತೆ ವೇದ್ಯನಮಸ್ತೆ
ತತ್ವನಮಸ್ತೆ ಚಿತ್ತ ನಮಸ್ತೆ।
ಭಾವ ನಮಸ್ತೆ। ಭವ್ಯ ನಮಸ್ತೆ।
ಸದ್ಗುರು ಬಸವಾ ಶ್ರೀಮನಮಸ್ತೆ।
ಮದ್ಗುರು ಬಸವಾ ಸ್ವಾಮಿ ನಮಸ್ತೆ।
ನಮಸ್ತೆ ನಮಸ್ತೆ ನಮಃ।।೧೨।।

ಯತ್ತವ್ಯಾಪಿನಾಂಮಷ್ಟೋತ್ತರ ಶತಕಂ ಬಸವ್ಯಾ ಮಹಾತ್ಮನೋ।
ನಮಸ್ಕಾರ ಗದ್ಯಂ। ಪಠತಿ ಸತ್ಕೃತೋ ಸಯಾತಿ ಪರಮಾಂಗತಿಂ।
ಸದ್ಭಕ್ತಿ ಸ್ವಾಮಿ ಶ್ರದ್ಧಯಾ ಸ್ವಾಮಿ। ಸಾಕ್ಷಾಚ್ಛತಕಂ ಮುಕ್ತಿ ಭಕ್ತಿದಂ।।೧೩।।

ಅಷ್ಟೋತ್ತರಗದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ।।

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೧೮**

ಷಟ್ಸ್ಥಲಗದ್ಯ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೫೨ನೆಯ ಪತ್ರದಿಂದ ೫೪ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ, ಪದ್ಯಗಂಧಿಗದ್ಯ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರು ಬಸವಲಿಂಗಾಯನಮಃ।। ಷಟ್ಸ್ಥಲಗದ್ಯ।। ವೃ।।

ಸ್ವಸ್ತಿಶ್ರೀಷಡ್ವಿಧಾಂಗಸ್ಥಲವೆನಿಪಲಸದ್ಭವ ಮಾಹೇಶ್ವರಾಂಪ್ತ್ವಯ।
ಹಸ್ತವ್ಯಾಪ್ತಿಪ್ರಸಾದಿ ವಿಮಲಹೃದಯಪ್ರಾಣಲಿಂಗಿ ಸ್ವಯಂಜ್ಯೋ।
ತಿಸ್ತತ್ವಾವಾಶಭೂತಬಪ್ರಬಲಶರಣಲಿಂಗೈಕ್ಯತ ದಿವ್ಯಮಹಾತ್ಮ್ಯೆ।
ಯ ಸ್ತೋತ್ರಂ ಮಾಳ್ಪೆನಾಹಾ ಕರುಣಿಸೆನಗೆ ನೀನೊಪ್ಪೆ ಸೋಮೇಶಲಿಂಗಾ।।೧।।

ಅಂತ್ಯ:

ವೃ।। ನಿರವದ್ಯಾಮಲಷಡ್ವಿಧಸ್ಥಲದ ದಿವ್ಯ ಸ್ತೋತ್ರಮಂ ಭಕ್ತಿಯಿಂ।
ನಿರುತಂ ಕೇಳ್ದೊಡೆ ಪೇಳ್ದೋದಿದೊಡೆ ತಚ್ಛಬ್ದಾರ್ಥಮಂ ಭಕ್ತಿಯಿಂ।
ಪಿರಿದುಂ ತಾಳ್ದೊಡೆ ಪೇಳ್ದ ಪೆಂಪರಮಸಂಮ್ಯಜ್ಞಾನಮಂ ಮಾಳ್ಪನೈ।
ಪುರಸೋಮೇಶ್ವರದೇವರೆಂದೆನಲಿಕೆ ಛೋದ್ಯಂಮಹಾಪಾದ್ಯಮೆ।।೮।।

ಕಂದ।।

ಅಷ್ಟೋತ್ತರಶತವಿಧದಿಂ।
ದಿಷ್ಟಸುಷಟ್ಸ್ಥಲದ ಸುಪ್ರಸಂಗವನೊರೆವೆಂ।।

ಸ್ಪಷ್ಟತರೋಕ್ತಿಗಳಿಂದಂ।
ಶ್ರಿಷ್ಟಶ್ರೀಸೋಮನಾಥಸದ್ಗುಣಯೂಥಂ॥೯॥

ಷಟ್ಸ್ಥಲಗದ್ಯಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೨೯

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೧೯**

ಉದಾಹರಣಗದ್ಯ (ಸಂ)

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೫೪ನೆಯ ಪತ್ರದಿಂದ ೫೭ನೆಯ ಪತ್ರದವರೆಗಿದೆ.

ಕೃತಿಕಾರ: ಪಾಲ್ಕುರಿಕೆ ಸೋಮನಾಥ

ಸ್ವರೂಪ: ಪದ್ಯ, ಪದ್ಯಗಂಧಿಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರು ಬಸವಲಿಂಗಾಯನಮಃ॥ ಉಧಾರಣಗದ್ಯ॥

ವೃ॥ ಜಯತು ಬಸವರಾಜಃ। ಪ್ರಾಣಲಿಂಗಾಂತಪೂಜಃ।
ಶರಣು ದಿವಿಜಭೂಜಃ ಸ್ಮೇರಸಂವಿತ್ಸರೋಜಃ।
ಗಣಪರಿಷದಧಿನಃ ಖ್ಯಾತಧಾನಾಪದಾನಃ।
ಸರಸಮಹಿತ ಗಾನಃ ಸ್ವಾನುಭೂತ್ಯೈಕ್ಯಮಾನಃ॥೧॥

ಅಂತ್ಯ:

ಆರೆವೃತ್ತ॥

ಶ್ರೀಬಸವರಾಜ ಗುಣಮಣಿ।
ಖಚಿತಂ ಜಯತಾತ್ಸುವರ್ನಮಯಮೇತತ್।

ಸೊಮಸುಕವಿನಾ ರಚಿತಂ।
ಹೃದಯಾಭರಣಂ ಸದಾಮುದಾಹರಣಂ॥೧೭॥

ಉಧಾರಣಗದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೩೦

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೨೦**

ಅಕ್ಷರಾಂಕನಗದ್ಯ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೫೭ನೆಯ ಪತ್ರದಿಂದ ೬೦ನೆಯ ಪತ್ರದವರೆಗಿದೆ.

ಕೃತಿಕಾರ: ಪಾಲ್ಕುರಿಕೆ ಸೋಮನಾಥ

ಸ್ವರೂಪ: ಪದ್ಯ, ಪದ್ಯಗಂಧಿಗದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರು ಬಸವಲಿಂಗಾಯನಮಃ॥ ಅಕ್ಷರಾಂಕನಗದ್ಯ॥

ಕಂದ॥

ಶ್ರೀಯುತನಮಃ ಶಿವಾಯೆ।
ತ್ಯಾಯತಪಂಚಾಕ್ಷರಿ ಪ್ರಣಮಶಂಭೂತ।
ಸ್ವಾಯತಭಾವಾನಕ್ಷರ।
ಬಸವೇಶಾ॥೧॥

ಅಂತ್ಯ:

ಕ್ಷರ ದುರಿತಾಕ್ಷಮಕ್ಷಯ ಜನಸ್ಥಿತಿಕಾರಣಕ್ಷಯಾ।
ದ್ವರಗಣನಾಯಕ ಕ್ಷಯಭವಕ್ಷಣಗರಭೀಷ್ಟಕ್ಷಮಕ್ಷಪಾ।

ಕ್ಷರಸಕಲಾಂಕಜೂಟ ಕ್ಷಪಿತ ಪ್ರೀತಿಪಕ್ಷ ಸುರಾಸುರಕ್ಷಮಾಂ।
ಕುರಿತಕಟಾಕ್ಷವಿಲಕ್ಷಣಾಕ್ಷಮಕಾರನುತಾಂ ಬಸವೇಶ ಪಾಹಿಮಾಂ॥೩೮॥

ಕಂದ॥

ಇತಿ ಭಾವಂನಕ್ಷರಸ್ತಂ।
ಸ್ತುತಿಸಂಕಲಿತಾಕ್ಷರಾಂಕಿತಸ್ತೋತ್ರವಮಂ॥
ಪತಿನಿಗರ್ಪಿಸಿದೆಂ ಸ।
ದೃತಿಯಿಂ ಪಾಲ್ಕುರಿಕೆ ಸೋಮಕೃತಿ ಬಸವೇಶಾ॥೩೯॥

ಲಕ್ಷಣಪದಯತಿ ಸಂಧಿವಿ।
ಲಕ್ಷಣ ಪೂರ್ವಸ್ವರಾದ್ಯಕ್ಷರಕಾಂ।
ದಿಕ್ಶಾಂತಾಕ್ಷರಮಾಲಾ।
ದ್ಯಕ್ಷರಸ್ಥಲ ರಕ್ಷಿಸೆಂನುವಂ ಬಸವೇಶಾ॥೪೦॥

ಕಂ॥

ಶಿವಮಸ್ತು ಭಕ್ತಿವಿಭವೋ।
ದ್ಭವಮಸ್ತುವಕ್ಷರಾಂಕಪಠಣಶ್ರವಣಾ।
ಸ್ತವನಾಶಕ್ತರಿಗೆ ಮಹೋ।
ತ್ಸವವಸ್ತು ವಾಕ್ಸಿದ್ಧಿರಸ್ತು ಶಿವಬಸವೇಶಾ॥೪೧॥

ಅಕ್ಷರಾಂಕನಗದ್ಯ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: "ಬಸವೇಶ ಪಾಹಿ ಮಾಂ" ಎಂಬ ಅಂಕಿತದಿಂದ ಕೂಡಿದೆ; ಸಮಗ್ರ

****

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೨೧**

ಶಿವಾಧವಶತಕ

ಪತ್ರದ ಅಳತೆ: ೬" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೬೧ನೆಯ ಪತ್ರದಿಂದ ೬೯ನೆಯ ಪತ್ರದವರೆಗಿದೆ.

ಕೃತಿಕಾರ: ಮಾಯಿದೇವ

ಸ್ವರೂಪ: ಪದ್ಯ, ಶತಕ

ವಸ್ತು: ಸ್ತುತಿ

ಆದಿ:

ಶ್ರೀಗುರು ಬಸವಲಿಂಗಾಯನಮಃ।। ಶಿವಾಧವಶತಕ।। ವೃತ್ತ।।

ಶ್ರೀಗುರುವೆ ಮಹಾಗುರುವೆ ಶಾಂತಿಕಳಾಗುರುವೆ ಶಿವಾತ್ಮವಿ।
ದ್ಯಾಗುರುವೆ ಪುರಾಗುರುವೆ ವಿಶ್ವಜಗದ್ಗುರುವೆ ವಿಶುದ್ಧಚೇ।
ಷ್ಟಾಗುರುವೆ ಸುಧಿಗುರುವೆ ಭಕ್ತಿಯಶೋಗುರುವೆ ಪ್ರಸಾದತೇ।
ಜ್ಯೋಗುರುವೆ ಕೃಪಾಗುರುವೆ ಮದ್ಗುರುವೆ ಶಿವಾಧವಾ।।೧।।

ಅಂತ್ಯ:

ತುದಿಮೊದಲಿಲ್ಲದಿಂದ್ರಧನು ಮೂಡಿದಹಾಂಗೆ ಶರಿರಭಾವಮೆಂ।
ಬುದಸಹಜಂ ಪರಾಪರ ವಿಕಲ್ಪವಿಹೀನ ಶಿವೈಕ್ಯ ಭಕ್ತಿಯೊ।।
ಗದ ಪರಮಾರ್ತ್ಥಮಂ ತಿಳಿದ ಲಿಂಗ ನಿಜೈಕ್ಯ ಸುಖಾಸ್ಪದಂಗೆ ತ।
ಪ್ಪದು ಭಯಕರ್ಮಭೋಗಫಲಮಿಲ್ಲದೆ ಪೋಪುದಱಿಂ ಶಿವಾಧವಾ।।೧೦೦।।

ಈ ಪರಿಷಟ್ಸ್ಥಲಾತ್ಮಕ ವಿಶಿಷ್ಟ ಮಹಾತ್ತರ ಭಕ್ತಿಯೋಗವಿ।
ದ್ಯಾಪರಮಾರ್ತ್ಥತತ್ವಮಯಮಪ್ಪಲಸಚ್ಛತಕಪ್ರಬಂಧಮಂ।।
ರೂಪಿಸಿ ಮಾಯಿದೇವವಿಭು ಲಕ್ಷಣಲಕ್ಷಿತಮಾಗಿ ಪೇಳ್ದನೊ।
ಲ್ದೈಲಪುರ ಸೋಮನಾಥಚರಣಾಂಬುಜಷಟ್ಚರಣಂ ಶಿವಾಧವಾ।।೧೦೧।।

ವಿವರಣಾತ್ಮಕ ಹಸ್ತಪ್ರತಿ ಸೂಚಿ/೫೯೧

ಶಿವಾಧವಶತಕ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೩೨

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೨೨**

ಶಿವಾವಲ್ಲಭಶತಕ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೭೦ನೆಯ ಪತ್ರದಿಂದ ೭೮ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರು ಬಸವಲಿಂಗಾಯನಮಃ॥ ಶಿವಾವಲ್ಲಭಶತಕ॥ ವೃ॥

ಶ್ರೀಮಚ್ಛಾಂಭವಭಕ್ತಿಯೋಗದಿಂ ಸನ್ನಿರ್ವಾಣನಿತ್ಯೋತ್ಸವ।
ಪ್ರೇಮಾನಂದರಸಾಬ್ಧಿವರ್ಧನಸದಾಚಾರಕ್ರಿಯಾಕೌಶಲಾ॥
ರಾಮೋದ್ದಾಮಗುಣಪ್ರಭೂತಮಹದೈಶ್ವರ್ಯ್ಯಾನುಭೂತಿಪ್ರಭಾ।
ಧಾಮಂ ತತ್ಪದಂ ಗುರುಪದಂ ವಂದೇ ಶಿವಾವಲ್ಲಭಾ॥೧॥

ಅಂತ್ಯ:

ಓಮಿತ್ಯಕ್ಷರಮಾತೃಕಾತ್ರಯದ ತದ್ವಾಕ್ಯಸ್ಥಮಾತ್ರಾತ್ರಯಂ।
ನಾಮಂ ಶ್ರೀಮದು ಮಾಯೆನಲ್ಪರತರಂ ದೀರ್ಘಂ ಮಕಾರಂ ದ್ವಿತೀ।
ಯಾಮಾನ ಪ್ರಥಮಾ ಉಕಾರಮುಭಯಂಗೂಡಿರ್ದುಮಾ ಸಾರ್ಥಕಂ॥
ಸೋಮಂ ಮತ್ಪ್ರಭುವೈಪುರೀಶನೆನಲಾಂ ಧನ್ಯಂ ಶಿವಾವಲ್ಲಭಾ॥೧೦೨॥

ಇದನಾರೋದಿದವರ್ಗೆ ಕೇಳ್ದವರಿಗುದ್ಯದ್ಭಕ್ತಿಯೋಗಕ್ರಿಯಾ।
ಸ್ಪದಸಮ್ಯಕ್ಷರಮಪ್ರಸಂನಪರಿಪೂರ್ಣೈಕಾಗ್ರನಿಷ್ಠಾನುಭೂ।
ತಿದುಸಚ್ಚಿತ್ಸುಖರೂಪನಿಃಕಳ ಮಹಾಲಿಂಗೈಕ್ಯ ನಿರ್ವಾಣಸಂ।
ಪದನಿತ್ಯತ್ವಮನೀವುದೈಯ್ಯ ಕೃಪೆಯಿಂ ನೀನೇ ಶಿವಾವಲ್ಲಭಾ॥೧೦೩॥

ಶಿವಾವಲ್ಲಭಶತಕ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಾಗ್ರ

****

೪೩೩

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೨೩**

ಮಹದ್ಯೈಪುರೀಶ್ವರ ಶತಕ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦–೪೫ ಅಕ್ಷರಗಳು. ೭೬ನೆಯ ಪತ್ರದಿಂದ ೮೭ನೆಯ ಪತ್ರದವರೆಗಿದೆ.

ಕೃತಿಕಾರ: ಮಾಯಿದೇವ

ಸ್ವರೂಪ: ಪದ್ಯ-

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಮಹದ್ಯೈಪುರೀಶ್ವರ ಶತಕಂ॥ ವೃ॥

ಶ್ರೀಮದಪಾರಸಾರಕರುಣಾಮೃತಸಾಗರಭಕ್ತಲೋಕಚಿಂ।
ತಾಮಳ ನೂತನರತ್ನ ದಿವಿಜೇಂದ್ರ ಮುನೀಂದ್ರಗಣೇಂದ್ರ ದಿವ್ಯತೇ॥
ಜೋಮಯ ಮೌಳಿಮಂಡಿತ ಪದಾಂಬುಜ ಸರ್ವಗುಣಾಭಿರಾಮ ನಿ।
ಸ್ಸೀಮದ್ರತೇಂದು ನೇಮ ಪರಮಪ್ರಭುವೆ ಮಹದ್ಯೈಪುರೀಶ್ವರಾ॥೧॥

ಅಂತ್ಯ:

ಉ॥ ಅಪ್ರತಿಮಪ್ರತಿಷ್ಠಪರಿಪೂರ್ನಪರಾನುಭವಪ್ರಭಾವಭ।
ವ್ಯಪ್ರತಿತಾರ್ಥಮಾದಪದಬಂಧಪದೋತ್ತರ ಭಕ್ತಿಯೋಗ ಸಾ।
ಖ್ಯಪ್ರದ ಸದ್ಗುರೂಕ್ತಿಮತ ಸಿದ್ಧಿವಿಧಿಶತಕಕ್ಕೆ ಮಾಯಿದೇ।
ವಪ್ರಭುವಿಗ ಕರ್ತೃ ಪರಮಪ್ರಭುವೆ ಮಹದೈಪುರೀಶ್ವರಾ॥೧೧೩॥

ಮಹದೈಪುರೀಶ್ವರ ಶತಕ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೩೪

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೨೪**

ಮಹಿಮಾಶತಕ

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦–೪೫ ಅಕ್ಷರಗಳು. ೮೬ನೆಯ ಪತ್ರದಿಂದ ೯೩ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಮಹಿಮಾಶತಕ। ಮತ್ತೇಭವಿಕ್ರೀಡಿತ ವೃತ್ತ॥

ಶ್ರೀಮತ್ಪದ್ಮಜಪದ್ಮನಾಭವಿನುತ ಶ್ರೀಪಾದಪದ್ಮದ್ವಯಂ।
ಕಾಮೋದ್ಗರ್ವತಮಃಪ್ರಚಂಡತರಮಾರ್ತ್ಥಂಡ ಪ್ರಶಸ್ತವ್ರತಿ।
ಸ್ತೋಮಂ ಸ್ವಾಂತನಿಶಾಂತಕಾಂತನಿರೂಪಾದಿ ಜ್ಯೋತಿಮೋಕ್ಷಪ್ರದಾ।
ಸ್ವಾಮಿಶ್ರೀ ಗಿರಿನಾಥ ರಕ್ಷಿಸೊಲವಿಂ ಶ್ರೀಚೆನ್ನಮಲ್ಲೇಶ್ವರಾ॥೧॥

ಅಂತ್ಯ:

||೯೯||

ಮಲಮೂತ್ರಕ್ರಿಮಿಜಂತುಸಂತತಿಯಿನಾಪೂರ್ಣತ್ವಮಾಗಿರ್ಪವೊ।
ಲೆಲುನೆತ್ತರ್ನೆಣಮಜ್ಜೆಮಾಂಸ ಮೊದಲಾದ ಸ್ಪರ್ಶದ್ರವ್ಯದಿಂ।
ಬಲಿದೆಗುಂ ಕೊಳೆ ಸೂಸುತಿರ್ಪ ಕಿವಿಕಣ್ಪಲ್ಲೂಗುಣಾಣಗಳ್।
ವೆಲಿ....

ವಿಶೇಷವಿಷಯ: ನಿಜವಾಗಿ ಇದು ೯೪ನೆಯ ಪತ್ರಕ್ಕೆ ಮುಗಿಯುತ್ತದೆ; ಆದರೆ ೯೪ನೆಯ ಪತ್ರ ಕಳೆದುಹೋಗಿದೆ. ೯೩ನೆಯ ಪತ್ರದ ಕೊನೆಯ ಭಾಗ ಮೇಲಿನಂತಿದೆ. ಅಸಮಗ್ರ.

****

೪೩೫

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೨೫**

ಮಹಿಮ್ನಸ್ತೋತ್ರ (ಸಂ)

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೯೫ನೆಯ ಪತ್ರದಿಂದ ೯೭ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಮಹಿಮ್ನಸ್ತೋತ್ರ॥

ಮಹಿಮ್ನಃ ಪಾರಂ ತೇ ಪರಮ ವಿದುಷಾ ಯದ್ಯ ಸದೃಶಿ।
ಸ್ತುತಿರ್ಬ್ರಹ್ಮಾದಿನಾಂಮಪಿ ತದವಸಂ ನಾಸ್ತ್ವಯಿ ಗಿರಃ।

ಅಥಾ ವಾಚ್ಯಸ್ಸರ್ವಸ್ಸ್ವಮತಿ ಪರಿಣಾಮಾವಧಿಗುಣಾನಾ।
ಮಮಾಪ್ಯೇಷಃ ಸ್ತೋತ್ರೇ ಹರನಿರಪವಾದಃ ಪರಿಕರಃ॥೧॥

ಅಂತ್ಯ:

ಇಹ ಭುಕ್ತ್ವಾಖಿಲಾನ್ ಭೋಗಾನ್।
ಸರ್ವವ್ಯಾಧಿ ನಿವರ್ಜಿತಃ।
ದೇಹಾಂತೇ ಮುಕ್ತಿಮಾಪ್ನೋತಿ।
ಮಹಿಮ್ನಃ ಸ್ತವಪಾಠಕಃ॥೪೦॥

ಮಹಿಮ್ನಸ್ತೋತ್ರಂ ಸಮಾಪ್ತಂ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೩೬

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೨೬**

ಮಲುಹಣಸ್ತೋತ್ರ (ಸಂ)

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦–೪೫ ಅಕ್ಷರಗಳು. ೯೭ನೆಯ ಪತ್ರದಿಂದ ೯೯ನೆಯ ಪತ್ರದವರೆಗಿದೆ.

ಕೃತಿಕಾರ: ಮಲ್ಹಣ

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಮಲುಹಣಸ್ತೋತ್ರಂ।

ಕಾಂತಾಕಚಪ್ರಚಯ ಪುಷ್ಪಸುಗಂಧಿಗಂಧ
ಲುಬ್ಧ ಭ್ರಮದ್ಭ್ರಮರ ಕರ್ಬುರಕಂಧರಾಯ।

ಗಂಧರ್ವಯಕ್ಷಸುರಸಿದ್ಧ ಕಿರೀಟಕೋಟಿ।
ಸಂಘಟ್ಟ ಘೃಷ್ಟ ಚರಣಾಯ ನಮಃ ಶಿವಾಯ॥೧॥

ಅಂತ್ಯ:

ಸ್ತೋತ್ರಂ ಮಯಾಕೃತಮಿದಂ ಭವತೋ ಗಣೇನ
ವೃತ್ತೈರ್ವಸಂತತಿಲಕೈಃ ಶಿವ ಮಲ್ಲಣೇನ।
ಆಯಾಸಮತ್ರ ಭಗವನ್ ಗದಿತಂ ದುರುಕ್ತಂ।
ಭಕ್ತಿಪ್ರಮಾಣಮಿತಿಸರ್ವಮಿದಂ ಕ್ಷಮಸ್ವ॥೪೦॥

ಮಲ್ಲಣಸ್ತವ ಪರಿಸಮಾಪ್ತ ಮಂಗಲಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೩೭

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೨೭**

ಮಲೆಯರಾಜಸ್ತೋತ್ರ (ಸಂ)

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೯೯ನೆಯ ಪತ್ರದಿಂದ ೧೦೨ನೆಯ ಪತ್ರದವರೆಗಿದೆ.

ಕೃತಿಕಾರ: ಮಲಯರಾಜ

ಸ್ವರೂಪ: ವೃತ್ತ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಮಲೆಯರಾಜಸ್ತೋತ್ರ॥

ಯೇನ ಧಿಯಾಮಧಿಗಮ್ಯ।

ಸ್ತಸ್ಯ ಕುತಃ ಸಂಭವೋ ಗಿರಾಂ ವೃತ್ತೈಃ।
ಸ್ತೌಮಿ ತಥಾಪಿ ಭವಂತಂ।
ಮನೋರಥಯಾತ್ಯಭೂಮಿಮಪಿ॥೧॥

ಅಂತ್ಯ:

ಇತಿ ರಚಯತಿ ಸ್ಮ ಭಗವತ।
ಇಂದುಕಲಾಶೇಖರಸ್ಯ ಮಲಯಾಖ್ಯಃ।
ಭಕ್ತ್ಯಾಭಕ್ತಿಸ್ತೋತ್ರಂ ಭವೇಭವೇ ಭಕ್ತಿವಾಪ್ತುಂ॥೭॥

ಇತಿ ಮಲಯರಾಜಸ್ತವ ಪರಿಸಮಾಪ್ತಂ ಮಂಗಲಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೩೮

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೨೮**

ಅನಾಮಯಸ್ತೋತ್ರಂ (ಸಂ)

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೧೦೩ನೆಯ ಪತ್ರದಿಂದ ೧೦೪ನೆಯ ಪತ್ರದವರೆಗಿದೆ.

ಕೃತಿಕಾರ: ದಂಡಿ

ಸ್ವರೂಪ: ವೃತ್ತ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಅನಾಮಯಸ್ತೋತ್ರಂ।

ತೃಷ್ಣಾತಂತ್ರೇ ಮನಸಿ ತಮಸಾ ದುರ್ದಿನೆ ಬಂಧವರ್ತೀ।
ಮಾದೃಗ್ಜಂತುಃ ಕಥಮಧಿಕರೋತ್ಯೇಶ್ವರಂ ಜ್ಯೋತಿರಗ್ರ್ಯಂ।

ವಾಚಸ್ತ್ವಿತಾ ಭಗವತಿ ಹರಿಸನ್ನಿಕೃಷ್ಟಾತ್ಮರೂಪಾಃ।
ಸ್ತುತ್ಯಾತ್ಮಾನಂ ಸ್ವಯಮಿವ ಮುಖಾದಸ್ಯಮೇ ನಿಷ್ಪತಂತಿ॥೧॥

ಅಂತ್ಯ:

ಸ್ತೋತ್ರಂ ಸಮ್ಯಕ್ಷರಮವಿದುಷಾಂ ದಂಡಿನಾ ವಾಚ್ಯ ವೃತ್ತೈಃ।
ಮರ್ಣಂದಾಕ್ರಾಂತೈಸ್ತ್ರಿಭುವನ ಗುಣಃ ಪಾರ್ವತೀವಲ್ಲಭಸ್ಯ॥
ಕೃತ್ವಾಸ್ತೋತ್ರಂ ಯದಿ ಶುಭಗಮಾಪ್ನೋತಿ ನಿತ್ಯಂ ಹಿ ಪುಣ್ಯಂ।
ತೇನ ವ್ಯಾಧಿಂ ಹರಹರನ್ನೃಣಾಂ ಸ್ತೋತ್ರಪಾಠೇನ ಸತ್ಯಂ॥೩॥

ಅನಾಮಯಸ್ತವ ಪರಿಸಮಾಪ್ತಂ ಮಂಗಲಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೩೯

ಕಟ್ಟು: ಕೆ ೪೧

ಕೃತಿಕ್ರಮಾಂಕ: **ಕೆ ೪೧/೨೯**

ಹಲಾಯುಧಸ್ತೋತ್ರ (ಸಂ)

ಪತ್ರದ ಅಳತೆ: ೯'' X ೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೦-೪೫ ಅಕ್ಷರಗಳು. ೧೦೪ನೆಯ ಪತ್ರದಿಂದ ೧೦೯ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಹಲಾಯುಧಸ್ತೋತ್ರ॥

ವಿಘ್ನನಿಘ್ನನ್ ದ್ವಿರದವದನಃ ಪ್ರೀತಯೇವೋಸ್ತು ನಿತ್ಯಂ।
ವಾಮೇ ಕುಂಠತ್ಪ್ರಕಟಿತ ಬೃಹದ್ದಕ್ಷಿಣೇ ಸ್ಥೂಲದಂತಃ॥

ಯಃ ಶ್ರೀಕಂಠಂ ಪಿತರಮುಮಾಯಾಶ್ಲಿಷ್ಟ ವಾಮಾರ್ಧದೇಹಂ।
ದೃಷ್ಟ್ವಾನೂನಂ ಸ್ವಯಮಪಿ ದದಾವರ್ಧನಾರೀಶ್ವರತ್ವಂ॥೧॥

ಅಂತ್ಯ:

ಶಂಭೋಃ ಪ್ರೀತಿಕರಃ ಸದ್ಯಃ।
ಸರ್ವಪಾಪ ನಿಕೃಂತನಃ।
ಹಲಾಯುದಸ್ತವಃ ಪಾಠ್ಯಃ।
ಕಿಮನ್ಯೈರ್ಗ್ರಂಥ ವಿಸ್ತರೈಃ ॥೬೨॥

ಲೇಖಕಪಾಠಯೋರ್ಭದ್ರಂ ಭೂಯಾತ್। ಹಲಾಯುಧಸ್ತೋತ್ರಂ ಪರಿಸಮಾಪ್ತಂ ಮಂಗಲಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ. ಕೊನೆಗೆ ಕೆಲವು ಬಿಡಿಪತ್ರಗಳಿವೆ; ಅವುಗಳಲ್ಲಿ ಒಂದು ಯೋಗಿನಾಥಾಂಕಿತದ ಪದ್ಯಗಳದ್ದು; ಇನ್ನೊಂದು ಶಿವನಾಮಾವಳಿ ಸ್ತೋತ್ರದ್ದು (ಸಂ)

****

೪೪೦

ಕಟ್ಟು: ಕೆ ೪೨

ಕೃತಿಕ್ರಮಾಂಕ: **ಕೆ ೪೨/೧**

ಶಬರಶಂಕರವಿಳಾಸ

ಪತ್ರದ ಅಳತೆ: ೧೩.೮'' X ೨.೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೭೫-೮೦ ಅಕ್ಷರಗಳು. ೧ನೆಯ ಪತ್ರದಿಂದ ೩೦ನೆಯ ಪತ್ರದವರೆಗಿದೆ.

ಕೃತಿಕಾರ: ಷಡಕ್ಷರದೇವ

ಸ್ವರೂಪ: ಚಂಪೂಕಾವ್ಯ

ವಸ್ತು: ಶಬರಶಂಕರನ ವಿಳಾಸ

ಆದಿ:

ಶ್ರೀಗುರು ಬಸವಲಿಂಗಾಯ ನಮಃ। ಶಬರಶಂಕರವಿಳಾಸವ ಬರವುದಕ್ಕೆ ಶುಭಮಸ್ತು।

ಶ್ರೀಮತ್ಕಲ್ಯಾಣರೂಪಂ ಶರಭವನಗಜಾಸಂಗನಭ್ರಾಂತಯೋಗಾ।
ರಾಮಾಂಚತ್ವ.. ಸಾರಸತ್ವ।
ವ್ಯಾಮಿಶ್ರಾಹಿನಚಂಚತ್ಕಟಕನಧೀಶ ದಿವ್ಯಾಗಮಂ ಸ್ವಸ್ಥಲೋಕ।
ಸ್ತೋಮ ಭ್ರಾಜಿಷ್ಣುವೆಂದು ಪೊರಗೆ ವಿತತ ಭಾಸ್ವತ್ಪ್ರಕಾಶಂ ಗಿರೀಶಂ॥೧॥

ಅಂತ್ಯ:

.... ಮಳ ರಾಜಶೇಖರವಿಳಾಸಮಹಾಕೃತಿಯಂ ವೃ
ಷಾಧಿರಾಜವಿಜಯಸತ್ಪ್ರಬಂಧಮುಮನೊಪ್ಪುವ.....
..ಂಸ್ಕೃತೋಕ್ತಿಯೊಳೊಡರ್ಚಿದನಲ್ತೆ ಷಡಕ್ಷರಾಹ್ವಯಂ॥೬೩॥

ಗದ್ಯ ಇದು ನಿಖಿಳ ಸುರಾಸುರೇಂದ್ರವರದನಿಜ.......ಯಾರವಿಂದಬಂಧುರ ಸರಸಜನಮಾನಿತೋಭಯಕವಿತಾವಿಚಕ್ಷಣ ಶ್ರೀಷಡಕ್ಷರದೇವ ವಿರಚಿತಮಾದ ....ಶ್ವಾಸಂ ಪರಿಸಮಾಪ್ತಂ ಮಂಗಲಮಹಾಶ್ರೀಶ್ರೀಶ್ರೀ॥ ಆಶ್ವಾಸಂ ೫೮೦ ವಚನವಿರಹಿತವಾಗಿ ವೃತ್ತಪದ್ಯಂಗಳ....ಘನಸುಖವಿಚಕ್ಷಣ ಸ್ವಶ್ರಿಯಶಮಸ್ತು॥ ಶ್ರೀಶ್ರೀಶ್ರೀ॥

ವಿಶೇಷವಿಷಯ: ಆದಿ ಅಂತ್ಯಗಳಲ್ಲಿ ಕೆಲವು ಭಾಗಗಳು ತ್ರುಟಿತ; ಉಳಿದಂತೆ ಸಮಗ್ರ; ಸ್ಪಷ್ಟ ಬರವಣಿಗೆ

****

೪೪೧

ಕಟ್ಟು: ಕೆ ೪೨

ಕೃತಿಕ್ರಮಾಂಕ: **ಕೆ ೪೨/೨**

ರಾಜೇಂದ್ರಹಮ್ಮೀರ ವಿಕ್ರಮಾತುಳಪ್ರಬಂಧ

ಪತ್ರದ ಅಳತೆ: ೧೩.೮'' X ೨.೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೭೫–೮೦ ಅಕ್ಷರಗಳು. ೩ನೆಯ ಪತ್ರದಿಂದ ೭೧ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಚಂಪೂಕಾವ್ಯ

ವಸ್ತು: ಬಸವೇಶ್ವರನ ಚರಿತ್ರೆ

ಆದಿ:

ಶ್ರೀಗುರುಬಸವಲಿಂಗಾಯ ನಮಃ। ....ಂದ್ರವಿಜಯವ ಬರವುದಕ್ಕೆ ಶುಭಮಸ್ತು। ಶಾರ್ದೂಲವಿಕ್ರೀಡಿತವೃತ್ತ॥

ಶ್ರೀಮತ್ಕಾಂಡಜಜಾಂಡಮಂಡಲಪಿಚಂಡಾಮ್ನಾಯವಾಜಿಸ್ಥಿರ।
.... ಪಾಲದುಷ್ಪ್ರಾರ್ಥನಂ॥
ಸೋಮಂ ಪ್ರಾಂಜುಳನೂರ್ಜಿತಂ ಜಯತು ನಿತ್ಯಾನಂದಮೌನೀಂದ್ರಹೃ।
ದ್ಧಾಮಂ ನಿರ್ಜರಚಕ್ರವರ್ತಿಮಹಾಮಂದೇವೇಷ್ಟಲಿಂಗೇಶ್ವರ ....
ರಮುನಿಖಿಮಭಾರತಿಯರಿಷ್ಟವನಿತ್ತನುತಾಕ್ಷಪಾದಶಂಕರಸರಸಾಭಿರಾಮಗುಣ
ಧಾಮಪರಾಪರಕಾಲಕಾಮಜಿ।ದ್ಧರರಜತಾದ್ರಿಮೂಡಿರವಿಲೋಚನದೇವ..

ಅಂತ್ಯ:

ಗದ್ಯಂ॥ ಇದು ಮಧುಭಂಜನಾರ್ಜುನೋಧರಪುರಂದರಪುರೋಗಮನಾಸಾ ಸುರೋರಗನಿಕರ ನವೀನ ಸುರುಚಿರ ಪ್ರಚುರಾನರ್ಘ್ಯಮಣಿಗಣಖಚಿತ ರಚನೋತ್ತುಂಗ ಶೃಂಗಾರಸಾರ ಕೋಟಿರ ಕೋಟೀರಸ್ಫಾರರುಚಿಕದಂಬ ಪ್ರತಿಬಿಂಬಿತ ವಿಮಳವಿಳಸಿತ ನಖಮುಕುರ ರಾಜಿರಾಜಿತ ಸ್ಫುರಣ ಚರಣಾರವಿಂದ ಚಂದ್ರಶೇಖರ ಪರಮಶಿವಶರಣ ರಾಜೇಂದ್ರ ಹಂಮೀರ ವಿಕ್ರಮಾತುಳ ಪ್ರಬಂಧದೊಳ್ಭದ್ರಾಯುಷ್ಯರಾಜಚರಿತ ಬಸವಲಿಂಗನುತಿ ಪ್ರಕಥನಂ ನವಮಪ್ರಕರಣಂ ಸಮಾಪ್ತಂ ಶಿವಮಸ್ತು॥ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ; ಅಲ್ಲಲ್ಲಿ ತ್ರುಟಿತ; ಸ್ಪಷ್ಟ ಬರವಣಿಗೆ

****

೪೪೨

ಕಟ್ಟು: ಕೆ ೪೨

ಕೃತಿಕ್ರಮಾಂಕ: **ಕೆ ೪೨/೩**

ಗಿರಿಜಾಕಲ್ಯಾಣ

ಪತ್ರದ ಅಳತೆ: ೧೩.೮''X೨.೨''; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೭೫-೮೦ ಅಕ್ಷರಗಳು. ೭೨ನೆಯ ಪತ್ರದಿಂದ ೧೩೭ನೆಯ ಪತ್ರದವರೆಗಿದೆ.

ಕೃತಿಕಾರ: ಹಂಪೆಯ ಹರಿಹರದೇವ

ಸ್ವರೂಪ: ಚಂಪೂಕಾವ್ಯ

ವಸ್ತು: ಗಿರಿಜಾಕಲ್ಯಾಣದ ಕಥೆ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಗಿರಿಜಾಕಲ್ಯಾಣವ ಬರವುದಕ್ಕೆ ಶುಭಮಸ್ತು। ನಿರ್ವಿಘ್ನಮಸ್ತು।

ಗಿರಿಜಾಕಲ್ಯಾಣದ ಕಥಾಗರ್ಭವೆಂತೆಂದೊಡೆ॥ ಗದ್ಯ॥ ಸ್ವಸ್ತಿ ....ತ ಧರಿತ್ರಿಕಾಂತಾನಾಭಿಕಮಲಮಧ್ಯಸ್ಥಿತ ಕರ್ನಿಕೆಯಂತಿರ್ಪ್ಪ ಮೇರುವಿನ ದಕ್ಷಿಣದಿಕ್ಕಿನಲಿ ಪೂರ್ವ್ವಜಲಧಿಯಿಂ। ಪಶ್ಚಿಮವಾರ್ದ್ಧಿಪರಿಯಂತಂ ಪರ್ವಿದ ಪರ್ವತಾದಿಶಂಗೆ ಗಿರಿರಾಜನೆಂಬ ನಾಮದಿಂ ಪೊಪ್ಪು ..... ರಿಪ್ರಸ್ಥವೆಂಬ ಪುರದೊಳಿರ್ದು ಪಿತೃಗಳ ಮನದೊಳ್ಪುಟ್ಟಿದ ಮೇನಾದೇವಿಯುಂ ವಿವಾಹವಾಗಿ ಮೈನಾಕನೆಂಬ ಪುತ್ರನಂ ಪಡೆದು ಪಲವು ದಿನಂ ಸುಖದೊಳಿರುತಂ ದಾಕ್ಷಾಯಣಿ ತಂನ ಬಸುರೊಳ್.......

ಅಂತ್ಯ:

ತರದಿಂದಂ ಶಬ್ದವರ್ತ್ಥಂ ರಸವಿಸರಸವಲಂಕಾರದಿಂತಿಮತ್ಪೊಂ।
ದರೆಯೊಳ್ಕೈಕೊಂಡುಪಂಪಾಪುರದಧಿಪತಿ ವಿರೂಪಾಕ್ಷನಿತ್ತಾಜ್ಞೆಯಿಂದಂ॥
ಹರಿದೇವಂ ಭಕ್ತಿಯಿಂದಂ ಗುರುಕರುಣದಿನುತ್ಸಹದಿಂ ಮೆಚ್ಚಿಸಿ ಪೇಳ್ದಾ।
ಗಿರಿಜಾಕಲ್ಯಾಣಕಾವ್ಯಂ।ರವಿಶಶಿವರೆಗಳ್ನಿಲ್ವಿನಂ ನಿಲ್ಕೆಸಂತಂ॥೧೧೨॥

ಇಳೆಯೊಳ್ಪೆರ್ಮೆಳೆಯುಂ ಸಮಸ್ತ ಫಳಮುಂ ಸಂತೋಷಮುಂ ಧರ್ಮ ಸಂ।
ಕುಳಮುಂ ಸತ್ಯಮುಮೀಶ್ವರಾರ್ಚ್ಚನೆಯ ಪೊಂಪುಂ ಶ್ರೀಯುಮಾಯುಂ ನಿರಾ॥
ಕುಳಮ್ಮೈತಂದು ನೆಲಸಿಪ್ಪುದೊಂದು ಸರಂ ತಾಂ ಮಾಳ್ಕೆ ಸರ್ವೇಶ್ವರಂ।
ವಿಲಸತ್ಸಂಗಸುಖಾಬ್ಧಿಶಿತಕಿರಣಂ ಪಂಪಾಪುರಾಧೀಶ್ವರಂ॥೧೧೩॥

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲ।
ಸಂಹನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂಶಂಭುಶಂ॥
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ।
ಕರುಣಂಗೆಯೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ॥೧೦೪॥

ಗದ್ಯ॥ ಇದು ಸಮಸ್ತ ಸುರನಿಕರ ಮಣಿಮುಕುಟಖಚಿತದಿನಕರಾದಿತ್ಯಾಖ್ಯ ಮಾಣಿಕ್ಯಪ್ರಭಾಪುಂಜರಂಜಿತಸಂಪಚ್ಚರಣನೆನಿಪ ಪಂಪಾವಿರೂಪಾಕ್ಷ ಶ್ರೀಪಾದ ಯುಲಮುಕರಂದಮತ್ತಮಧುಕರಾಯುಮಾನ ಸತ್ಕವೀಶ್ವರ ಹಂಪೆಯು ಹರಿಹರ ದೇವ್ ವಿರಚಿತಮಪ್ಪ ಗಿಜಾಕಲ್ಯಾಣ ಮಹಾಪ್ರಬಂಧದೊಳ್ಪಾರ್ವತಿಪರಮೇಶ್ವರ ವಿವಾಹವರ್ನನಂ ದಶಮಾಶ್ವಾಸಂ ಸಂಪೂರ್ನ್ನ ಮಂಗಳಮಹಾಶ್ರೀಶ್ರೀಶ್ರೀ। ಅಂತಾಶ್ವಾಸಂ ಹತ್ತಕ್ಕಂ ಪದ್ಯವೃತ್ತಗಣನೆಗಿರಿಜಾಕಲ್ಯಾಣ ಸಮಾಪ್ತಂ ಮಂಗಲಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ; ಆದಿಯಲ್ಲಿ ಕೆಲವು ಪತ್ರಗಳ ಮೂಲೆ ಮುಕ್ಕಾಗಿದೆ; ಸ್ಪಷ್ಟ ಬರವಣಿಗೆ

****

೪೪೩

ಕಟ್ಟು: ಕೆ ೪೨

ಕೃತಿಕ್ರಮಾಂಕ: **ಕೆ ೪೨/೪**

ಭಿಕ್ಷಾಟಣದ ಕಾವ್ಯ

ಪತ್ರದ ಅಳತೆ: ೧೩.೮" X ೨.೨"; ಪ್ರತಿ ಮುಖದಲ್ಲಿ ಏಳರಿಂದ ಒಂಬತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೬-೫೦ ಅಕ್ಷರಗಳು. ೧೩೮ನೆಯ ಪತ್ರದಿಂದ ೧೬೦ನೆಯ ಪತ್ರದವರೆಗಿದೆ.

ಕೃತಿಕಾರ: ಗುರು ಲಿಂಗಣಾರ್ಯ

ಸ್ವರೂಪ: ಷಟ್ಪದಿ

ವಸ್ತು: ಶಿವನ ಭಿಕ್ಷಾಟನಲೀಲೆ

ಆದಿ:

ಶ್ರೀಗುರು ಬಸವಲಿಂಗಾಯ ನಮಃ। ಗುರುಲಿಂಗಣಾರ್ಯ ನಿರೂಪಿಸಿದ ಭಿಕ್ಷಾಟಣದ ಕಾವ್ಯ ಬರವುದಕ್ಕೆ ಶುಭಮಸ್ತು। ಶೋಭನಮಸ್ತು। ರಾಗ .... ವಾರ್ಧಿಕ ಷಟ್ಪದಿ।।

ಪಲ್ಲ।।

ಧರೆಯೊಳಗೆ ಗೋಪಾಲಕೃಷ್ಣ ಹದಿನಾರು ಸಾ।
ವಿರ ಗೋಪಸತಿಯರೊಳಿಹುದ ನೋಡಲೆಂದು ಪುರ।
ಹರನು ದ್ವಾರಾವತಿಗೆ ಬಂದ ಭಿಕ್ಷಟಣದ ಚರಿತಮಂ ಬಣ್ಣಿಸುವೆನೂ।।

ಪದ।।

ಶ್ರೀಮದಮೃತ ಮಯೂಖಲೇಖಾವತಂಸನಭಿ।
ರಾಮ ಸುರಗಂಗಾತರಂಗೋತ್ತಮಾಂಗನಗ।
ಜಾಮನೋಹರ ನಿರುತ ಕರ್ಮಂಧಕಾರ ನಿರುಹರಣ ಪ್ರಚಂಡಸೂರಾ।
ಸಾಮಗಾನಪ್ರೇಮ ನಗಣಿತ ಸುರಾಸುರ।
ಸ್ತೋಮವಂದಿತಮೆನ್ನುವಂ ಸಲಹುಗನುದಿನಂ।
ಶ್ರೀಮಹೇಶಂ ಸದಾಕೈಲಾಸವಾಸಂ ಕೃಪಾಳುವರನಂದಿಗಿರೀಶಂ।।೧।।

ಅಂತ್ಯ:

ಗುರುವೆ ಜಯಜಯ ವೇದಶಾಸ್ತ್ರ ಸನ್ನುತಿಪಾತ್ರ।
ಗುರುವೆ ಜಯಜಯ ನಿಜಾನಂದ ನಿರ್ಮಳಗಾತ್ರ।
ಗುರುವೆ ಜಯಜಯ ವಿಶ್ವತಾರೂಪವಿಮಳಪ್ರತಾಪ ಮಾಯಾವಿಲೋಪಾ।
ಗುರುವೆ ಜಯಜಯ ಪರಮಪಾವನ ಗುಣೋಲ್ಲಾಸ।
ಗುರುವೆ ಜಯಜಯ ನಿರಂಜನ ನಿತ್ಯ ಪರಿತೋಷ।
ಗುರುವೆ ಜಯಜಯ ಶಿವಜ್ಞಾನಿಬಸವೇಶ
ಮಮಹೃದಯಾಬ್ಜಸನ್ನಿವಾಸಾ।।೬೮।।

ಅಂತು ಸಂಧಿ ೩ಕ್ಕಂ ಪದಂ ೧೫೫ಕ್ಕಂ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ; ಸ್ಪಷ್ಟ ಬರವಣಿಗೆ

****

೪೪೪

ಕಟ್ಟು: ಕೆ ೪೨

ಕೃತಿಕ್ರಮಾಂಕ: **ಕೆ ೪೨/೫**

ಭೈರವೇಶ್ವರನ ಕಾವ್ಯ

ಪತ್ರದ ಅಳತೆ: ೧೩.೮" X ೨.೨"; ಪ್ರತಿ ಮುಖದಲ್ಲಿ ಹನ್ನೊಂದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೭೫-೮೦ ಅಕ್ಷರಗಳು. ೧೬೧ನೆಯ ಪತ್ರದಿಂದ ೨೨೨ನೆಯ ಪತ್ರದವರೆಗಿದೆ.

ಕೃತಿಕಾರ: ನಂಜುಂಡ

ಸ್ವರೂಪ: ಷಟ್ಪದಿ

ವಸ್ತು: ಭೈರವೇಶ್ವರನ ಕಥೆ

ಆದಿ:

ಶ್ರೀಗುರು ಬಸವಲಿಂಗಾಯ ನಮಃ। ಶ್ರೀಗುರು ಸಿದ್ಧಲಿಂಗಾಯ ನಮಃ। ಭೈರವೇಶ್ವರನ ಕಾವ್ಯವ ಬರೆವುದಕ್ಕೆ ಶುಭಮಸ್ತು। ಶೋಭನಮಸ್ತು। ನಿರ್ವಿಘ್ನಮಸ್ತು। ವೃತ್ತ।

ಶ್ರೀಮದನೇಕಲೋಕಜನಕಂ ಹರಿಮುಖ್ಯ ಸುರಾಳಿಸೇವಿತಂ।
ಕಾಮಮದಾಪಹಾರಿ ವರ ಸಾಸಲ ಸೋಮಯನಂಘ್ರಿಪೂ।
ಜಾಮಹಾಚಿತ್ತಮಂ ನತಗುಣಾಂಬುಧಿ ಭೈರವದೇವನಂ ಸದಾ।
ಶ್ರೀಮದೊಳೊಲ್ದುಕೀರ್ತಿಸುದನಾವವನಾತನೆ ಮುಕ್ತಿಮುಲಿಗಂ॥

ಸರಷಟ್ಪದ॥

ಅಂತ್ಯ:

ಸಾಸಲುಪುರದ ಸೋಮೇಶನು ಭಕ್ತಭೈರ

ವೇಶನಿಗೊಲಿದುಕೈಲಾಸಾ।
ವಾಸಕೊಯ್ದುದನು ಪೇಳ್ದ ಕ
ವೀಶ ನಂಜುಂಡನರ್ತಿಯಲಿ॥೧೫೭॥

ಶಶಿರವಿಮಾತವಾಗಸನೆಲನಿರಗಿ
ಸ್ವಸನರುಳ್ಳಂನಕಿ ಚರಿತೆ॥
ರಸೆಯೊಳಗತಿ ಶೋಭಿಸಲಿ ಸೋಮೇಶ ಪಾ
ಲಿಸಲಿ ತನುರುಸಮೆಯುವನೂ॥೧೫೮॥

ಹರುಷದಿಂದವೆ ನೋಡಿ ಬರೆದೋದಿದಡೆ ವಿ।
ಸ್ತರದಿ ಪೇಳ್ದಡೆ ಪಠಿಸಿದಡೆ
ಗುರು ಸೋಮನಾಥನ ಕರುಣಸಂಭವಿಪುದು।
ಧರೆಯೊಳಗಿದು ಸಿದ್ಧವೆಂದೂ॥೧೫೯॥

ಪೇಳಿದ ಶಿವಭಕ್ತರೊಳು ನಂಜುಂಡೇಶ।
ಕೇಳುವುದಧಿಕ ಸಜ್ಜಜ್ಜನರು:।
ಭಾಳನೇತ್ರನ ಕೃಪೆಯೋಳಿಗೆಯೊಡನೆ ಸ
ಮ್ಮೇಳವಪ್ಪುದು ಶರಣಾರ್ತಿ॥೧೬೦॥

ಗುರು ಸೋಮನಾಥನ ಕರುಣದಿಂ
ಭೈರವೇಶ್ವರನ ಚೆರಿತೆ ಪಂಚಸಂದಿ।
ವರವೃತ್ತವೈದುಸಾವಿರದ ಮೇಲಿನ್ನೂರು।
ಭರಿತಪಟ್ಟದದಿದುಗಣನೆ।೧೬೧॥

ವಿಶೇಷವಿಷಯ: ಸ್ಪಷ್ಟ ಬರವಣಿಗೆ. ಕೊನೆಗೆ ಮೂರು ಬಿಡಿ ಪತ್ರಗಳಿವೆ; ಯಾವುದರವೋ ತಿಳಿಯದು.

****

ಗುಡಿನೆಫಿನಾಡನಾಳವಂ
ಜರಾರ್ಚಿನಸ್ಯ ಕಂಬಳಂ॥
ವಾತುಲದ॥ [ಇಲ್ಲಿಗೆ ನಿಂತುಹೋಗಿದೆ]

ವಿಶೇಷವಿಷಯ: ಅಸಮಗ್ರ; ಭಾಷೆ ಬರವಣಿಗೆಗಳು ಬಹಳ ಅಶುದ್ಧವಾಗಿವೆ.

****

೪೪೬

ಕಟ್ಟು: ಕೆ ೪೪

ಕೃತಿಕ್ರಮಾಂಕ: **ಕೆ ೪೪**

ಏಕೋತ್ತರಶತಸ್ಥಲ

ಪತ್ರದ ಅಳತೆ: ೧೦.೨''X೧.೧''; ಪ್ರತಿ ಮುಖದಲ್ಲಿ ಐದು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦-೩೫ ಅಕ್ಷರಗಳು. ೧ನೆಯ ಪತ್ರದಿಂದ ೯೮ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ವಚನ, ಸ್ವರವಚನ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯ ನಮಃ॥ ಯೇಕೋತ್ತರಶತಸ್ಥಲ॥ ಪಿಂಡಸ್ಥಲ। ರಾಗ ಮಧುಮಾಧವಿ। ತಾಳ ರೂಪಕ॥

ಪಲ್ಲವ॥

ಬಿಂದು ಬಿಂನಾಣದೊಳೆ।
ಗಂದವಿಷ್ಟಿಹಕಳಾ।
ನಂದಬಂದುದಯದ ಜ್ಞಾನ ನೀಗುತಾ॥

ಪ॥

ಕಾರಮೇಘದೊಳು ಮಿಂಚಡಗಿ ತೋಱದ ತೆಱದಿ
ನಿರೊಳಡಕಂಗಯ್ದು ಕಿಚ್ಚಿನಂತೆ॥

ಅವಾಚಾತ್ಮ ಸ್ವರೂಪಾಯ।
ಶಿವಭಾವ ಪ್ರದಾಯಿನೇ।
ನಮಃ ಸದ್ಗುರುನಾಥಾಯ।
ಷಟ್ಸ್ಥಲಬ್ರಹ್ಮಮೂರ್ತಯೇ।

ಯೆಂದು। ಶ್ರೀಮತ್ ಸಚ್ಚಿದಾನಂದ ನಿತ್ಯಪರಿಪೂರ್ನ ಅವಿಲಕ್ಷಣಲಕ್ಷಿತಾ ಶ್ರೀ ವೀರಶೈವೋದಾರಪೂರ ಯೋಗಿಜನಮನೋಮಂದಿರ ಪ್ರಭಪುಂಜರಂಜಿತ ಕಾಯ ಸರ್ವಾಂತರ್ಯಾಮಿ ಸರ್ವವರಪ್ರದ ಮಾಯಾಕೋಳಾಹಳ ಮದನ ಮರ್ಧನ ಪರಸಮಯಾಂಬುರಾಸಿವಡಬಾನಲ ಭಕ್ತಜನಹೃದಯಾರವಿಂದ ವಿಕಸಿತಯಿನ ಷಟ್ಸ್ಥಲಗ್ನಾನಸಾರಾಮೃತದಾಯಕ। ಕತ್ತುರ್ತಿ ತೋಂಟದ ಸಿದ್ಧಲಿಂಗಪ್ರಭುವಿನ ಸಂಪ್ರದಾಯವಿಡಿದೊಪ್ಪುವ ಅನುಭಾವಿಗಳ ವಾಗ್ಯಮೃತ ಶೇಷದ ಸ್ವಾಂತವಲ್ಲರಿವಂತೆ ಸಂತೋಷವಾಗಿ ಸ್ವೀಕರಿಸಿದಂಥಾ ಶಾಂತಮಲ್ಲ ದೇವನು ಸಕಲಸದ್ಭಕ್ತ ಮಹೇಶ್ವರಾಂಗ್ರಿಪಂಕಜಮಕರಂದ ಪಾನಮದಾಳಿ ಯಾಗಿ। ಕ್ರಿಯಾಸಾಧನ ಮುಕ್ತಿಸೋಪಾನವಪ್ಪ ಮುಂನುಳ್ಳ ಗುರುಸ್ಥೌತವನು ಟಿಪ್ಪಣಿಸುತ್ತಿದ್ದವೀಂ॥ ವೃ॥

ಅಂತ್ಯ:

ಯತ್ಥಶಿವಂ ಕುಲಶ್ಚೈಲವ
ಗೋತ್ರ ನಂದೀಶ್ವರಸ್ತಥಾ।
ಪ್ರವರಂ ವೀರಶೈವಾನಾಂ
ಶಾಖಾಯ ಪ್ರಮಥಾನ್ವಿತಾ॥೭॥

ತಸ್ಮಾತ್ ಕ್ರೌಂಚದೇಶಾನಾಂ
ಅಯ್ಯಾವಳಿ ಪುರಾಧಿಪಂ॥
ರಕ್ಷಿತಂ ವೀರಗಾಂಧರ್ವಂ
ಜಾಯತೇ ಶಿವಶಂಭವಂ॥೮॥

ತಸ್ಯ ಪುತ್ರ ಮುಖಾರಿನಾಂ
ಜಾಯತೇ ಪಂಚವಾಣಿಜಂ॥
ಪುರಾವಿಟಾಪಿಕುದ್ಧಾಲಂ
ಸಘಿಗುತ್ತ ಭವೇಸ್ತಥಾ॥೯॥

ಕೃತಿಕಾರ: ನಿಜಗುಣಶಿವಯೋಗಿ

ಸ್ವರೂಪ: ತ್ರಿವಿಧಿ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ। ಶ್ರೀನಿಜಗುಣಶಿವಯೋಗಿವಿರಚಿತನುಭವಸಾರ। ಸೂತ್ರ॥

ಪರತರಾನಂದಮಯಗುರುಶಂಭುಪದವೆನ್ನ।
ಶಿರದೊಳಿರುತಿರ್ಕ್ಕೆ ನಿಜಕರುಣದಿಂದಾ॥

ತ್ರಿವಿಧಿ॥

ಶ್ರೀಗುರುವೆ ನಿಜಸುಖದ ಸಾಗರವೆ ತೆರೆ ಮಸಗು।
ತಾಗಳುಂ ಬೆಳಗು।ತಿಹ ನಿನ್ನ ಕಡೆ॥
ಗಣ್ಗಳಿಗೆ ಸಂತಸವನಖಿಳರ್ಗ್ಗೆ॥೧॥

ಜಗದಾದಿಬೀಜಂಗೆ। ನಿಗಮಾಂತವೇದ್ಯಂಗೆ।
ನಗರಾಜಸುತಿಯರಮಂ। ರಮಣಂಗೆ ಶಂಭುವಿಂ॥
ಗಗಣಿತೋತ್ಸವದಿನಾನತನಪ್ಪೆ॥೨॥

ವಿಶೇಷವಿಷಯ: ಸಮಗ್ರ

****

೪೪೮

ಕಟ್ಟು: ಕೆ ೪೫

ಕೃತಿಕ್ರಮಾಂಕ: **ಕೆ ೪೫/೨**

ಪರಮಾರ್ಥಗೀತೆ

ಪತ್ರದ ಅಳತೆ: ೧೦.೫" X ೨.೧"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೫೦–೫೫ ಅಕ್ಷರಗಳು. ಪತ್ರ ೨೦ರಿಂದ ಪತ್ರ ೩೫ರವರೆಗಿದೆ.

ಬಿಱುತಿಹ ಫಳರಸದೊಳಿಪ್ಪ ನವರುಚಿಯಂತೆ।
ವಾರಣದ ಮಸ್ತಕದ ಮುತ್ತಿನಂತೆ॥೧॥

ಅಂತ್ಯ:

ತಂನೊಳು ತಾನೆಯಾಗಿ ಯೆಂನಟ ನಾನಱಿದು।
ಯಂನಲ್ಲಿ ನಾನಱಿದೆನೆಂಬ ಅಱಿವಿಗೆ ತೆಱಹುಗುಡದೆ॥
ಬಿಂಮು ಬಿಸರವಾಗಿ ಹಂಮು ಶೂನ್ಯವಾಗಿ।
ನಿರ್ಮ್ಮಳ ನಿಜಪದವಾದ ಉಪಮಾತೀತ ಮಹಿಮಾ॥೫॥

ಗ್ನಾನಜ್ಯೋತಿಯ ಪ್ರಭೆ ತಾನಾಗಿ ನಿಂದಿರ್ದು।
ತಾನಾಗಿರ್ದೆನೆಂಬ ಗ್ನಾನ ಶೂನ್ಯವಾಗಿ।
ತಾನೆ ತಂನೊಳು ವ್ಯೆಮಱದೊಱಗಿದ ನಿರಾಳ।
ಗ್ನಾನಾತೀತಂ ನಿರುಪಮ ನಿಶ್ಕಲ ನಿರ್ಭೇದ್ಯ॥೬॥

ಶಬ್ದ ನಿಃಶಬ್ದವನಾಹತವಾಗಿ।ಶಬ್ದ ನಿಃ
ಶಬ್ದವೆಂಬ ಬುದ್ಧಿಯು ನಿರ್ವಯಲಾಗಿ॥
ಯಿದ್ದುದು ಹೋದುದೆಂಬುದನಱಿಯದೆ ಮೆರೆಗೆಟ್ಟ ನಿಃ।
ಶಬ್ದಗಂಭೀರ ಗೊಹೇಶ್ವರಾ ನಿಂಮ ಬಸವಂಣಾ॥೭॥

ಏಕೋತ್ತರಶತಸ್ಥಲ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೪೭

ಕಟ್ಟು: ಕೆ ೪೫

ಕೃತಿಕ್ರಮಾಂಕ: **ಕೆ ೪೫/೧**

ಅನುಭವಸಾರ

ಪತ್ರದ ಅಳತೆ: ೧೦.೫'' X ೨.೧''; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೫೦–೫೫ ಅಕ್ಷರಗಳು. ಪತ್ರ ೧ರಿಂದ ಪತ್ರ ೧೯ರವರೆಗಿದೆ.

ಯತಿ ಶಂಭುಲಿಂಗದೊಲವಿಂ
ಕ್ಷಿತಿ ಮುಮುಕ್ಷುಗಳಿದಂ ಪರೀಕ್ಷಿಪುದನಿಶಂ॥೨॥

ಇದನೋದಿ ಕೇಳಿ ತಿಳಿದ
ಗೊರ್ಗ್ದವಿದ ಭವಬಂಧವಳಿದು ನಿತ್ಯನಿಜಾನಂ
ದದ ಘನಪದವಪ್ಪುದು ತ
ಪ್ಪದು ಸಲೆ ಗುರುಶಂಭುಲಿಂಗದೊಲವಿಂ ದಿಳೆಯೊಳ್॥೩॥

ಅಂತು ಕಂದ ೩೨ಕ್ಕಂ॥

ಗದ್ಯ॥ ಸ್ವಸ್ತಿಸಮಸ್ತಸುರವಿಸರ ಮಕುಟಮಣಿಗಣಕಿರಣ ಪ್ರಚುರಪ್ರವಾಹ ತರಂಗಿಣಿತಟವಿರಾಜಿತ ಚರಣಕಮಲಯುಗಳ ಶ್ರೀಶಂಭು ಕೃಪಾಕಟಾಕ್ಷ ಸಾಂದ್ರಚಂದ್ರಿಕಾಸಂಕ್ರಾಂತ ನಿರಸ್ತನಿಖಿಲಸಂಸಾರಶ್ರಮವಿಸ್ಫಾರಿತ ನಿಜಾನಂದಾಸ್ವಾದನಾಸಕ್ತಚಿತ್ತೋಪೇತ ನಿಜಗುಣಾಹ್ವಯ ಶಿವಯೋಗಿನಾ ವಿರಚಿತಮಪ್ಪ ಪರಮಾರ್ಥಗೀತಾನಾಮ ಪ್ರಕರಣಂ ಪರಿಸಮಾಪ್ತಂ ಇಂತಿ ಪ್ರಕರಣಗತಿ ೧೧ ಕ್ಕಂ ನಿರೂಪಣೆ ೧೨೧ಕ್ಕಂ ಚರಣ ೧೪೯೬ಕ್ಕಂ ಪರಮಾರ್ಥಗೀತೆ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೪೯

ಕಟ್ಟು: ಕೆ ೪೫

ಕೃತಿಕ್ರಮಾಂಕ: **ಕೆ ೪೫/೩**

ಪರಮಾನುಭವಬೋಧೆ

ಪತ್ರದ ಅಳತೆ: ೧೦.೫" X ೨.೧"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೫೦-೫೫ ಅಕ್ಷರಗಳು. ಪತ್ರ ೩೬ರಿಂದ ಪತ್ರ ೮೩ರವರೆಗಿದೆ.

ಕೃತಿಕಾರ: ನಿಜಗುಣಶಿವಯೋಗಿ

ಸ್ವರೂಪ: ಸಾಂಗತ್ಯ

ಕೃತಿಕಾರ: ನಿಜಗುಣಶಿವಯೋಗಿ

ಸ್ವರೂಪ: ಪದ್ಯ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ।। ಪರಮಾರ್ತ್ಥಗೀತೆ।।

ಕಂ।।

ಶ್ರೀಗುರುನಿಜಶಿಷ್ಯಂಗನು।
ರಾಗಂಮಿಗೆಮುಕ್ತಿಮಾರ್ಗಮಂ ತಿಳುಪಿದನದ।।
ನಿಗಳಾನಿಂತು ಕಂನಡ।
ವಾಗಿರೆ ಸಲೆ ಶಂಭುಲಿಂಗದೊಲವಿಂದುಸಿರ್ವ್ವೆಂ।।೧।।

ಮುನ್ನವೆ ಭಕ್ತಿ ಕ್ರಿಯೆಯಿಂ।
ದಂ ನೆಱೆಪರಿಶುದ್ಧಮಾದ ಬುದ್ಧಿಯನುಳ್ಳ ಸ।
ಮುನ್ನತ ಸದ್ಗುಣಗಣಸಂ।
ಪನ್ನರ್ಗ್ಗೆ ನಿಜಸ್ವರೂಪಮಿದರೊಳ್ಸಾಧ್ಯಂ।।೨।।

ಅಂತ್ಯ:

ಶ್ರೀಗುರು ಪೇಳ್ದ ಮಹಾವಿದ್ಯೆಯೊಳು।
ರಾಗಿಸಿ ಶಿಷ್ಯನಬೋಧಾಬ್ಧಿಯೊಳು।
ಕೈವಲ್ಯೋಪಾಯಾಗಿಮೃತಮಿರ್ಕ್ಕುಂ।।
ಸೇವಿತ ಸುನರುಗಮರತೆ ಬರ್ಕ್ಕುಂ।।೧೨।।

ಕಂ।।

ಗತಿಹನ್ನೊಂದನೆಯದಿದಕ್ಕಾ
ಯತಮಾದನಿದುಪಣಂಗಳೆಕಾದಶಸಂ
ಯುತಮಾಗಿರ್ಪ್ಪುದು ತಿಳಿಯಲ್
ಪ್ರತಿಪಾದಿತವಲಿ ಯೋಗಿವರ ಚರಿತ್ರಂ।।೧।।

ಶ್ರುತಿಪುರಾಣೇತಿಹಾಸ
ಸ್ಮೃತಿಯರ್ಥವನಿಂತು ಕನ್ನಡಿಸಿದಂ ನಿಜಗುಣ

ಗದ್ಯ॥ ಸ್ವಸ್ತಿ ಸಮಸ್ತ ಸುರವಿಸರಮಕುಟಮಣಿಗಣಕಿರಣಪ್ರಚುರಪ್ರವಾಹ ತರಂಗಿಣಿತಟವಿರಾಜಿತ ಪದರಾಜಿಯುಗಳ ಶ್ರೀಶಂಭುಸತ್ಕೃಪಾಕಟಾಕ್ಷ ಸಾಂದ್ರ ಚಂದ್ರಿಕಾಸಕ್ರಾಂತನುಸ್ತನಿಖಿಲಸಂಸಾರಶ್ರಮವಿಸ್ಫಾರಿತ ನಿಜನಂದಾಸ್ವಾದನಾಸಕ್ತ ಚಿತ್ತೋಪೇತ ನಿಜಗುಣಾಹ್ವಯೇನ ಶಿವಯೋಗಿನಾ ವಿರಚಿತವಾದ ಪರಮಾನುಭವಬೋಧಾನಾಮ ಪ್ರಕರಣಂ ಪರಿಪೂರ್ನ್ನ ಸಮಾಪ್ತ ಮಂಗಳಮಸ್ತು। ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೫೦

ಕಟ್ಟು: ಕೆ ೪೫

ಕೃತಿಕ್ರಮಾಂಕ: **ಕೆ ೪೫/೪**

ವಿವೇಕಚಿಂತಾಮಣಿ

ಪತ್ರದ ಅಳತೆ: ೧೦.೫" X ೨.೧"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೫೦-೫೫ ಅಕ್ಷರಗಳು. ಪತ್ರ ೮೪ರಿಂದ ಪತ್ರ ೧೮೮ರವರೆಗಿದೆ.

ಕೃತಿಕಾರ: ನಿಜಗುಣಶಿವಯೋಗಿ

ಸ್ವರೂಪ: ಗದ್ಯ

ವಸ್ತು: ವಿಶ್ವಕೋಶ

ಆದಿ:

ಶ್ರೀಗುರು ಬಸವಲಿಂಗಾಯ ನಮಃ॥ ಶುಭಮಸ್ತು। ನಿರ್ವಿಘ್ನಮಸ್ತು। ನಿಜಗುಣಾಹ್ವಯ ಶಿವಯೋಗಿನಾ ವಿರಚಿತ ವಿವೇಕಚಿಂತಾಮಣಿ॥

ವೃತ್ತ॥

ಶ್ರೀಮದನೇಕಲೋಕಹಿತಮಾಗಿರೆ ವೇದಪುರಾಣಶಾಸ್ತ್ರದೊ।
ಳೆಮಿಪಿ ತೋರ್ಪ ವಿಶ್ವವಿಷಯಂಗಳ ಸುಸ್ಥಿತಿಯಂ ವಿವೇಕಚಿಂ॥

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಯಾನಮಃ।ಪರಮಾನುಭವಬೋಧೆ। ರಾಗ ಭೈರವಿ

ಸೂತ್ರ॥

ಶ್ರೀಗುರುಶಂಭುಲಿಂಗದ ಪಾದಪಂಕಜ
ವಿಗೆಂನ ಮತಿಗೆ ಮಂಗಳವನೂ॥

ಪದ॥

ಶ್ರೀಮಹಾದೇವಂಗೆ ಸೋಮಂಗೆ ಸುಖಪೂರ್ನ್ನ।
ದಾಮಂಗೆ ಸತ್ಯಚಿದ್ರೂಪಂಗೆ॥
ಕಾಮಿತಜನಕಲ್ಪಭೂಜಂಗೆ ಶಂಭುವಿಂ।
ಗಾಮೊದಮಿಗೆ ವಂದಿಸುವೆನೂ॥೧॥

ಸರ್ವ್ವವಿದ್ಯಗಳಿಗೆ ಸರ್ವಬುದ್ಧಿಗಳಿಗೆ।
ಸರ್ವಸಿದ್ಧಿಗಳಿಗೆ ಸರ್ವ್ವಕ್ಕೆ॥
ಸರ್ವ್ವಜೀವರ ತೊರ್ಕ್ಕೆಗಾದಿಕಾರಣಮಾದ।
ಸರ್ವಮಂಗಲೆಗೆ ನತನಪ್ಪೆ॥೨॥

ಗಣವರನಣಿಮಾದಿಗುಣಮಣಿಸಿಂಧುವಾ।
ರಣಮುಖನಭಿಮತಾರ್ತ್ಥಂಗಳಾ॥
ತಣಿವಂತೆ ಕುಡುವ ದಾನಾನ್ವಿತನಿಕೃತಿ।
ಗಣುಮಾತ್ರವೆಡರಿಲ್ಲವೆನೆ ಮಾಳ್ಕೆ॥೩॥

ಅಂತ್ಯ:

ಇದು ನಿಜಗುಣಯೋಗಿ ಮುದದಿಂದೆ ತಿಳಿಯೆ ಪೇ।
ಳಿದಯಾಜ್ಞವಲ್ಕಿಮೈತ್ರೇಯಿಯಾ।
ವೊದವಿದ ಸಂವಾದದೊಳಗಾಱನೆಯ ಸಂಧಿ।
ಸದಾಮಳಪರಮಾನುಭವ ಬಂಧಿ॥೨೭॥

ಈ ೨೭ ಪರಿಶಿಷ್ಟನಿರೂಪಣೆ॥ ಅಂತು ಸೂತ್ರ ೧೨೨ಕ್ಕೆ ಪ ೯೭೨೭॥
ಮಂಗಳಮಸ್ತು॥

ಕಟ್ಟು: ಕೆ ೪೫

ಕೃತಿಕ್ರಮಾಂಕ: **ಕೆ ೪೫/೫**

ಪರಮಾರ್ಥಪ್ರಕಾಶಿಕೆ

ಪತ್ರದ ಅಳತೆ: ೧೦.೫" X ೨.೧"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೫೦–೫೫ ಅಕ್ಷರಗಳು. ಪತ್ರ ೧೮೯ರಿಂದ ಪತ್ರ ೨೨೮ರವರೆಗಿದೆ.

ಕೃತಿಕಾರ: ನಿಜಗುಣಶಿವಯೋಗಿ

ಸ್ವರೂಪ: ಕರ್ನಾಟಕವಚನಪ್ರಬಂಧ

ವಸ್ತು: ವೇದಾಂತವಿಚಾರ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಶ್ರೀಗುರುವಾರಣಾಶಿದೇಶಿಕೇಂದ್ರಾಯನಮಃ॥ ಪರಮಾರ್ಥಪ್ರಕಾಶಿಕೆ॥

ಗದ್ಯ। ಶ್ರೀಮದನಂತಕೋಟಿಬ್ರಹ್ಮಾಂಡಪಿಂಡಾಂಡತತ್ವತಾತ್ವಿಕ। ಮಾಯಾಬಿಂದು ಮುಖ್ಯ ಚೇತನಾಚೇತನಾತ್ಮ ಕವಿಶ್ವಪ್ರಪಂಚದೊಳ ಹೊರಗೆಲ್ಲಿಯು ಪರಿಪೂರ್ಣ ಮಾಗಿ ಸರ್ವಾಧಾರಕತತ್ವ। ಸರ್ವಸಾಕ್ಷಿಕತ್ವ। ಸರ್ವಶಕ್ತಿತ್ವ। ಸರ್ವಾನುಗ್ರಾಹ ಕತ್ವಾದಿಗಳನುಳ್ಳ ಸರ್ವ್ವಕಾಲ ಕ್ರಮಾರ್ಥಂಗಳನೆಲ್ಲವನೇಕಕಾಲದಲ್ಲಿ ನಿರ್ವ್ವಿಕಾರ ತ್ವದಿಂದರಿವ। ನಿತ್ಯನಿರ್ಮಳ। ನಿರ್ವ್ವಿಕಲ್ಪಕ। ನಿರಾವರಣ। ನಿರತಿಶ ಯಾದ್ವಿತೀಯಮಪ್ಪ। ಸತ್ಯಸ್ವಯಂಪ್ರಕಾಶ। ಸಂವಿದ್ರೂಪಮಾದ। ಶಂಭುಲಿಂಗ ದನುಮತದಿಂ। ಸಮ್ಯಜ್ಞಾನ ಸಂಪನ್ನನೆನಿಪ ನಿಜಗುಣಶಿವಯೋಗಿ। ಅನಿಮಿತ್ಯ ಬಂಧುತ್ವದಿ ನೆನೆದು ನೋಡಿ। ಸಂಸ್ಕೃತ ವ್ಯಾಕರಣಪ್ರಮಾಣಾದಿಗಳ। ಲಕ್ಷಣ ಶಿಕ್ಷೆಗಳಿಲ್ಲದ ಮೋಕ್ಷಮಾತ್ರಾಪೇಕ್ಷಿತರಾದ ಸಾಧುಜನಂಗಳಾಯಾಸವಿನಿತಿಲ್ಲ ದೋದಿ ಕೇಳಿ ತಿಳಿದು ಕೃತಾರ್ಥರಾಗಲೆಂದು। ಶಿವಯೋಗಪ್ರದೀಪಿಕೆ ಯೆಂಬ ವಿಶಿಷ್ಟ ಯೋಗಶಾಸ್ತ್ರದ ಗ್ರಂಥಂಗಳನ್ವಯ ತಾತ್ಪರ್ಯವನೆ ಸೂಪಶಾಸ್ತ್ರ ಸಂಮತದಿಂ।

ತಾಮಣಿಯಂದು ಸಲ್ವ ಪೆಸರಿಟ್ಟು ಮಹಾ ಕವಿತಾ ಪ್ರಬಂಧಮಂ।
ಪ್ರೇಮದಿ ಪೇಳ್ವೆನಾನಿದನೆ ನೀನೊಲಿದಾಲಿಸು ಶಂಭುಲಿಂಗವೆ॥

ಗದ್ಯಂ॥

ಶ್ರೀಮದನೇಕಭುವನಭವನಾರಂಭಮೂಲಸ್ತಂಭರೂಪಶಂಭುಲಿಂಗವಾದಿಯಾಗಿ ನಿರಾಭಾರಿದೇಶಿಕೋತ್ತಮಪರ್ಯಂತಮಾದ ಗುರುಪರಂಪರಿಗೆ ಮನೋವಾಕ್ಕಾಯಗಳಿಂದ ವಂದಿಸಿ। ಮತ್ತಮನಮಸ್ಕಾರಲಕ್ಷಣ ಮಂಗಲಾಚರಣಕ್ಕೆ ನಿರ್ವಿಘ್ನದಿಂ ಪ್ರಕರಣ ಪರಿಸಮಾಪ್ತಿ॥

ಅಂತ್ಯ:

ಸರ್ವಜ್ಞತ್ವದಿಂಸತ್ಯಾನಂದಸ್ವರೂಪರಾಗಿರ್ಪ್ಪ ಭೋಗಮೋಕ್ಷಂಗಳಿಂದನೆಕಾಗ್ರಚಿತ್ತದಿಂ। ಕೇಳಿ ತಿಳಿದರ್ಗ್ಗಾಗಲೆಂಬಾಶೀರ್ವ್ವಾದ ಲಕ್ಷಣ ಮಂಗಲಾಚರಣದಿಂದೆ ವಿವೇಕಚಿಂತಾಮಣಿಯೆಂಬ ಪ್ರಕರಣಂ ಪರಿಪೂರ್ನಮಕ್ಕುಂ॥ ಯಿತಿ ಕಾಲಕ್ರಮವರ್ನ್ನನಂ ದಶಮಪರಿಚ್ಛೇದಃ ॥ಶ್ರೀಶ್ರೀಶ್ರೀ॥

ಉತ್ಪಲವೃತ್ತ॥

ಶ್ರೀಮದನಂತಸೂರಿಜನಸಂಮತದಿಂದೆಸೆವಿ ವಿವೇಕಚಿಂ
ತಾಮಣಿಯಂಬ ಸತ್ಕೃತಿಯನಾಲಿಸಿದರ್ಗ್ಗೆ ಶಾಸ್ತ್ರಡೆಗೊಂಡ ಸಂಸಯ
ಸ್ತೋಮವಡಂಗಿ ಬೆರೆ ಬಹುಶಾಸ್ತ್ರವನೋದುವ ಬಾಧೆ ಪಿಂಗಿ ಸ
ತ್ಪ್ರೇಮದೊಳಕ್ಕುಮಿಷ್ಟಫಲಸಿದ್ಧಿ ಸಮುನ್ನತಿಗತಿಶಂಭುಲಿಂಗದಿಂ॥

ಗದ್ಯ॥ ಸ್ವಸ್ತಿ ಸಮಸ್ತ ಸುರವಿಸರಮಕುಟಮಣಿಗಣಕಿರಣಪ್ರಚುರ ಪ್ರವಾಹತ ರಂಗಿಣಿತಟವಿರಾಜಿತ। ಪದರಾಜಿಯುಗಳ ಶಂಭುಸತ್ಕೃಪಾಕಟಾಕ್ಷ ಸಾಂದ್ರ ಚಂದ್ರಿಕಾಸಂಕ್ರಾಂತ ನಿರಸ್ತನಿಖಿಳ ಸಂಸಾರಶ್ರಮವಿಸ್ಫಾರಿತ ನಿಜಾನಂದ ಸ್ವಾದನಾಸಕ್ತ ಚಿತ್ತೋಪೇತ ನಿಜಗುಣಾಹ್ವಯ ಶಿವಯೋಗಿನಾ ವಿರಚಿತ ವಿವೇಕಚಿಂತಾಮಣಿನಾಮಪ್ರಕರಣಂ॥ ಪರಿಸಮಾಪ್ತಂ ಸಂಪೂರ್ನ್ನ ಮಂಗಲ ಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

ಕಟ್ಟು: ಕೆ ೪೫

ಕೃತಿಕ್ರಮಾಂಕ: **ಕೆ ೪೫/೬**

ಕೈವಲ್ಯಪದ್ಧತಿ

ಪತ್ರದ ಅಳತೆ: ೧೦.೫" X ೨.೧"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೫೦–೫೫ ಅಕ್ಷರಗಳು. ಪತ್ರ ೨೯ರಿಂದ ಪತ್ರ ೨೫೭ರವರೆಗಿದೆ.

ಕೃತಿಕಾರ: ನಿಜಗುಣಶಿವಯೋಗಿ

ಸ್ವರೂಪ: ಸ್ವರವಚನ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ।। ರಾಗ ನಾದನಾಮಕ್ರಿ।।

ಶ್ರೀಗುರು ವಚನೋಪದೇಶವನಾಲಿಸಿದಾಗಳಹುದು ಮುಕ್ತಿ।।ಪ।।
ದುರಿತಕರ್ಮವನೊಲ್ಲದಿರು ಪುಣ್ಯವನೆ ಮಾಡು।
ಹರನಡಿವಿಡಿ ಶಾಂತರೊಡನಾಡು।।
ಕರುಣವಿರಲಿ ಜೀವರೊಳು
ನೀತಿವಿದನಾಗು ಪಾರಿಪಾರ್ತ್ಥಿವರನೆಂದು ಬೆಸಸುವಾ।।೧।।

ಅಂತ್ಯ:

ಇಂತು ಶ್ರೀ ನಿಜಗುಣಶಿವಯೋಗಿ ವಿರಚಿತಮಾದ ಕೈವಲ್ಯಪದ್ಧತಿಯಂಬ ಪ್ರಕರಣದಲ್ಲಿ ಜ್ಞಾನಪ್ರತಿಪಾದನ ಸ್ಥಳಕ್ಕೆ ಸೇರಿದ ವಚನಂಗಳು ೨೨೦ಕ್ಕಂ ಜೋಡು ೫೮ಕ್ಕಂ ಅಂತು ಪ್ರಕರಣ ೫ಕ್ಕೆ ಜೋಡು ೧೨೩ಕ್ಕಂ। ವಚನಂಗಳು। ೬೪೭ಕ್ಕಂ। ಮಂಗಳಮಹಾ ಶ್ರೀಶ್ರೀಶ್ರೀ।।

ಗದ್ಯ।। ಇಂತು ಶ್ರೀ ನಿಜಗುಣಶಿವಯೋಗಿ ಗುರುಶಂಭುಲಿಂಗದೊಲವಿಂ ನಿಜಗುಣಶಿವಯೋಗಿ। ಆಬಾಲವೃದ್ಧರಿಗಾಯಾಸವಿನಿತಿಲ್ಲದಂತೆ। ಸಂಯಜ್ಞಾನಿ

ಕೂಡಿ ಮಾಡಿದ ಸುಪದಾರ್ಥ ದಂದವನಱಿದೊಂದಿನಿಸು॥ ತುಪ್ಪವನೆಱೆದೊಪ್ಪಮಾಗಿ। ಪೆಣ್ಣಿಗೆಗೊಟ್ಟುದು। ಮಹಾಸ್ವಾದುಗೊಳಿಸುವಂತೆ। ಲಾಲಿತ್ಯಮಾದ। ಮಾಲಾಟಿಕಾದಿ ವಾತೂಲಾಂತಮಾದ ಶಿವಾಗಮಂಗಳಲ್ಲಿಯ ಜ್ಞಾತಿಜ್ಞಾನಪ್ರಕರಣಸ್ವಾತ್ಮಜ್ಞಾನಸುರೂಪದಿಂ ನೇರಿತ್ತಾಗಿ। ಸೇರುವೆಗೆಯ್ದು ಸಕಲಯೋಗೀಶ್ವರರೊಡಂಬಡುವಂತೆ ಕರ್ನಾಟಕ ವಚನರಚನೆಗಳಿಂ। ಪರಮಾರ್ಥಪ್ರಕಾಶಿಕೆಯೆಂಬ ಪೆಸರನಿಟ್ಟು। ಬೇರೊಂದು ಪ್ರಕಾರಣಮಾಗಿ ಮಾಡಿದನದೆಂತೆಂದೊಡೆ॥

ಅಂತ್ಯ:

ಇದು ನಿಜಗುಣಶಿವಯೋಗಿ ಶಂಭುಲಿಂಗದೊಲವಿಂದಖಿಳವೇದ ವೇದಾಗಮ ಶೄತಿಸ್ಮೃತಿ ಪುರಾಣ ಇತಿಹಾಸ ಪುರಾತನರ ಗೀತಾದಿಗಳ ಯೋಗಪಾದ ಪರಮರಹಸ್ಯರ್ತ್ಥಂಗಳಂ ಪ್ರಸ್ತುತಮೆನೆ ವಿಸ್ತರಿಸಿದ್ದರ್ ಶಿವಯೋಗ ಪ್ರದೀಪಿಕೆಯೆಂಬ ಸಮ್ಯಗನುಭವಗ್ರಂಥಾನ್ವಯತಾತ್ಪರ್ಯಗಳನೆ ಕನ್ನಡಿಸಿ ಕರತಳಾಮಳಕವಾಗಿ ಪೇಳಿದ ಪರಮಾರ್ತ್ಥಪ್ರಕಾಶಿಕೆಯೆಂಬ ಪ್ರಕರಣವಿದು ಪದುಳದಿಂದೊಮ್ಮೆ ಬರೆದೋದಿ ಕೇಳಿದರ್ಗ್ಗಾಕ್ಷಣದಲ್ಲಿಯೆ ಸರ್ವಪಾಪಕ್ಷಯ ಸಮಸ್ತ ದುಃಖನಿವೃತ್ತಿ ಸದ್ಧರ್ಮಾಭಿವೃದ್ಧಿ ಸಂಶಯ ನಿರುಹರಣ ಬುದ್ಧಿ ಶುದ್ಧ ವಿರಕ್ತಿವಿವೇಕ ಶಿವಯೋಗ ಸಂವರ್ತ್ತಿ ಸಮುಂನತ ಸಿದ್ಧಿಮುಕ್ತಿಗಳಂ ಮಾಳ್ಪುದು ಸತ್ಯವಹುದಾಗಿ ಸಾದಕಜನಂಗಳನ್ಯಶಾಸ್ತ್ರಂಗಸಂಭ್ರಮಂಗಳಲ್ಲಿ ಸಾಯಸಂಗೊಳ್ಳದಿದನೆ ಶ್ರದ್ಧಾಭಕ್ತಿಪೂರ್ವ್ವಕಮಾಗಿ ಶ್ರೀಗುರುಮುಖದಿಂ ತಿಳಿದು ಕೃತಾರ್ಥರಾಗಲೆಂಬಾಶೀರ್ವಾದ ಲಕ್ಷಣ ಮಂಗಲಾಚರಣದಿಂದಿದು ಪರಿಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

ಅಂತ್ಯ:

ಯನ್ನ ಅಸ್ತಿಗೆ ವಕಾರವಾದಾತ ಬಸವಣ್ಣ। ಯನ್ನ ಮಜ್ಜೆಗೆ ಯಕಾರವಾದಾತ ಬಸವಣ್ಣ। ಯೆನ್ನ ಸರ್ವಾಂಗಕ್ಕೆ। ಓಂಕಾರವಾದಾತ ಬಸವಣ್ಣ। ಯಿಂತು ಬಸವಣ್ಣನೆ ಪರಿಪೂರ್ನ್ನವಾಗಿ। ಬಸವಣ್ಣನೆ ಪ್ರಾಣವಾಗಿ। ಬಸವಣ್ಣನೆ ಅಂಗವಾಗಿ। ಬಸವಣ್ಣನೆ ಲಿಂಗವಾದ ಕಾರಣ। ನಾನು ಬಸವಣ್ಣಾ ಬಸವಣ್ಣಾ ಯೆಂದು ಬಯಲಾದೆನು ಕಾಣಾ ಕಲಿದೇವರ ದೇವಾ॥೨॥

ವಿಶೇಷವಿಷಯ: ಅಖಂಡೇಶ್ವರಾಂಕಿತದ ಒಂದು ವಚನ, ಕಲಿದೇವರದೇವ ಅಂಕಿತದ ಇನ್ನೊಂದು ವಚನ, ಒಟ್ಟು ಎರಡು ವಚನಗಳು ಮಾತ್ರ ಇವೆ.

****

೪೫೪

ಕಟ್ಟು: ಕೆ ೪೬

ಕೃತಿಕ್ರಮಾಂಕ: **ಕೆ ೪೬/೨**

ಚೆನ್ನಬಸವದೇವರು ನಿರೂಪಿಸಿದ ಕರಣಹಸಿಗೆ

ಪತ್ರದ ಅಳತೆ: ೧೧" X ೨.೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦–೩೫ ಅಕ್ಷರಗಳು. ಪತ್ರ ೨೯ರಿಂದ ಪತ್ರ ೪೨ರವರೆಗಿದೆ.

ಕೃತಿಕಾರ: ಚೆನ್ನಬಸವಣ್ಣ

ಸ್ವರೂಪ: ವಚನ, ಟೀಕಾಗದ್ಯ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಚೆಂನಬಸವೇಶ್ವರದೇವರು ನಿರೂಪಿಸಿದ ಕರಣಹಸಿಗೆ॥ ಓಂಕಾರವೆಂಬ ಪ್ರಣಮದಲ್ಲಿ। ಅಕಾರ ಉಕಾರ ಮಕಾರ ಯೀ ಮೂರು ಬೀಜಾಕ್ಷರ। ಅಕಾರವೆ ನಾದ। ಉಕಾರವೆ ಬಿಂದು। ಮಕಾರವೆ ಕಾಳೆ॥ ಮತ್ತಂ॥ ಅಕಾರವೆ ರುದ್ರ। ಉಕಾರವೆ ಯೀಶ್ವರ। ಮಕಾರವೆ ಸದಾಶಿವ॥ ಯಿಂತೀ ಅಕಾರ ಉಕಾರ ಮಕಾರಕ್ಕೆ। ನಾದಬಿಂದುಕಳೆಯೇ ಆಧಾರ। ಆ ನಾದ ಬಿಂದು ಕಳೆಗೆ ಪ್ರಕೃತಿಯೆ ಆಧಾರ।

ಗಳೊಡಂಬಡುವಂತೆ। ಸಕಲ ವೇದವೇದಾಂತಾಗಮಶ್ರುತಿಸ್ಮೃತಿ ಪುರಾಣೇತಿಹಾಸಸೂತ್ರಾರ್ಥದೀ ಶಾಸ್ತ್ರಸನ್ಮಥದಿಂ ಪುರಾತನಗೀತಾನುಗುಣ್ಯಾಮೆನಿಸಿ। ಕೈವಲ್ಯಪದ್ಧತಿಯಂಬ ಪೆಸರನಿಟ್ಟು। ಮೃದುಮಧುರಸಲ್ಲಕ್ಷಣ ಸಮೇತಮಾದ ಪಂಚಸ್ಥಲ ಪರಿವಿಡಿದುಸಿರಿಸಿದ ಜೋಡುಗ ೧೨೩॥ ಗಣನೆಯುನುಳ್ಳ ಸ್ವರವಚನ ಸಂಗ್ರಾಮುಮಂ ಪೇಳ್ವ ನೀತಿಶಾಸ್ತ್ರ ಸ್ವರವಚನ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೫೩

ಕಟ್ಟು: ಕೆ ೪೬

ಕೃತಿಕ್ರಮಾಂಕ: **ಕೆ ೪೬/೧**

ಎರಡು ವಚನಗಳು

ಪತ್ರದ ಅಳತೆ: ೧೧'' X ೨.೨''; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦--೩೫ ಅಕ್ಷರಗಳು. ೨೦ನೆಯ ಪತ್ರದಿಂದ ೨೩ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ವಚನ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ತಾರಕಾಕ್ರುತಿ। ನಕಾರ ಪ್ರಣವ। ಆಧಾರಚಕ್ರ। ಸದ್ಭಕ್ತನೆ ಅಂಗ। ಸುಚಿತ್ತವೆ ಹಸ್ತ। ಆಚಾರಲಿಂಗ। ಘ್ರಾಣವೆಂಬ ಮುಖ। ಕ್ರಿಯಾಶಕ್ತಿ। ಶ್ರದ್ಧೆ ಭಕ್ತಿ। ಸುಗಂಧ ಪದಾರ್ತ್ಥ। ಗಂಧ ಪ್ರಸಾದ। ನಿವೃತ್ತಿ ಕವಿ। ಕರ್ಮ್ಮ ಸಾದಾಕೆ। ಸತ್ತುವೆಂಬ ಲಕ್ಷಣ। ಪರವೆಂಬ ಸಂಗ್ನೆ। ರುಗ್ವೇದ। ಯಿಂತಿವೆಲ್ಲವು ಯಿಪ್ಪ ಲಿಂಗದ। ಕವೃತ್ತದಲ್ಲಿ ಸಂಬಂಧವು। ದಂಡಕಾಕ್ರುತಿ।

ಕ್ರಿಯಾರ್ಪಣವ ಮಾಡುವಲ್ಲಿ।। ಬೋಜ್ಯವಾಚಾರಲಿಂಗದಲ್ಲಿ।। ಪಾನ್ನ ಗುರುಲಿಂಗದಲ್ಲಿ। ಭಕ್ಷ ಶಿವಲಿಂಗದಲ್ಲಿ। ಚೋಹ್ಯ ಜಂಗಮಲಿಂಗದಲ್ಲಿ। ಲೇಹ್ಯ ಪ್ರಸಾದಲಿಂಗದಲ್ಲಿ। ಯಿವೆಲ್ಲಅಲ್ಲಿಯ ಅಱಿವು ಮಹಾಲಿಂಗದಲ್ಲಿ। ಯಿಂತಿ ಷಡ್ವಿಧಕಾಯಾರ್ಪ್ಪಣವಾದಲ್ಲಿ।।

ಅಂತ್ಯ:

ಶ್ಲೋಕ॥

ಆದಿಶೂನ್ಯಂ ಮಧ್ಯಶುನ್ಯಂ।
ಅಂತ್ಯಶೂನ್ಯಂ ನಿರಾಮಯಂ॥
ಶರ್ವಶುನ್ಯಂ ನಿರಾಲಂಬಂ।
ಶಬ್ದಂ ಬ್ರಹ್ಮಮೂಚ್ಯತಿ॥

ಯೆಂಬ ನುಡಿಗೆಡೆಗೊಡದೆ। ನಿರವಯಸ್ಥಲದಲ್ಲಿ ನಿಜವನೆಯ್ದಿಪ್ಪಾತನೀಗ। ಅಭೇದ್ಯಭೇದಕ। ಅಸಾಧ್ಯಸಾಧಕ। ಚಿನ್ಮಯ ಚಿದ್ರೂಪ ಚಿದಾನಂದ। ಯಿಂತಪ್ಪ ದಿವ್ಯ ಶಿವಂಗೋಗಿ। ಮಹಾಶರಣ ಪ್ರಭುದೇವರ ಬಸವಂಣನ ಕರುಣದಿಂದಾನು ಬದಕಿದೆನಯ್ಯ। ಕೂಡಲಚೆಂನಸಂಗಮದೇವ। ಮಿಶ್ರಾರ್ಪ್ಪಣ ಸಮಾಪ್ತ॥ ಮಂಗಳ ಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೫೬

ಕಟ್ಟು: ಕೆ ೪೬

ಕೃತಿಕ್ರಮಾಂಕ: **ಕೆ ೪೬/೪**

ವರತೆಸೋಮಯ್ಯಗಳು ನಿರೂಪಿಸಿದ ಪಂಚೀಕರಣದ ಪದ

ಪತ್ರದ ಅಳತೆ: ೧೧" X ೨.೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦-೩೫ ಅಕ್ಷರಗಳು. ಪತ್ರ ೪೯ರಿಂದ ಪತ್ರ ೫೨ರವರೆಗಿದೆ.

ಕೃತಿಕಾರ: ವರತೆಯ ಸೋಮಯ್ಯ

ಸ್ವರೂಪ: ಪದ; ವಚನ

ಅಂತ್ಯ:

ಯಿಂನು। ಮಾನಸ। ವಾಚಕ। ಕಾಯಕ। ಯಿಂತ್ತಿವು ತ್ರಿಕರಣಂಗಳು। ಇವಕ್ಕೆ ವಿವರ।। ಮನಸವೆಂದಡೆ ಮನದಲ್ಲಿ ನೆನೆವುದು। ಕಾವಾಚಕವೆಂದಡೆ ನುಡಿವುದು। ಕಾಯಕವೆಂದಡೆ ಎತನು ಮುಟ್ಟಿ ಮಾಡುವದು। ಯಿಂತ್ತಿವು ತ್ರಿಕರಣಂಗಳ ಭೇದ।। ಯಿನ್ನು ಉದರಾಗ್ನಿ ಮಂದಾಗ್ನಿ ಕಾಮಾಗ್ನಿ ಶೋಕಾಗ್ನಿ ವಡಬಾಗ್ನಿ।। ಯಿಂತ್ತಿವು ಪಂಚಾಗ್ನಿಗಳು।। ಚೆಂನಬಸವೇಶ್ವರದೇವರು ನಿರೂಪಿಸಿದ ಕರಣ ಹಸಿಗೆ ಸಮಾಪ್ತ ಮಂಗಳ ಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೪೫೫

ಕಟ್ಟು: ಕೆ ೪೬

ಕೃತಿಕ್ರಮಾಂಕ: **ಕೆ ೪೬/೩**

ಮಿಶ್ರಾರ್ಪಣ

ಪತ್ರದ ಅಳತೆ: ೧೧'' X ೨.೨''; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦–೩೫ ಅಕ್ಷರಗಳು. ಪತ್ರ ೪೨ರಿಂದ ಪತ್ರ ೪೯ರವರೆಗಿದೆ.

ಕೃತಿಕಾರ: ಚೆನ್ನಬಸವಣ್ಣ

ಸ್ವರೂಪ: ವಚನ, ಟೀಕಾಗದ್ಯ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ।। ಮಿಶ್ರಾರ್ಪ್ಪಣ।

ಷಟ್ಸ್ಥಲಬ್ರಹ್ಮವನೊಡಗೂಡಿಹೆನೆಂದೊಡೆ। ಅದಾರಿಗೆ ನಿಲುಕದಯ್ಯಾ।। ಅರ್ಪ್ಪಿತ ಅನಾರ್ಪ್ಪಿತವೆಂದು। ವೊಪ್ಪಕ್ಕೆ ನುಡಿಯಬಹುದಲ್ಲದೆ। ಅರ್ಪ್ಪಣದೊಳಗಣ। ಅರ್ಪ್ಪಣದ ಭೇದವನರಿದು। ಸೊಪ್ಪಡಗಿದ ನಿಃಪತಿ ನಿಜಲಿಂಗೈಕ್ಯದಿರವು।। ಅದೆಂತಯ್ಯ ಎಂದೊಡೆ।। ಕಾಯದ ಕೈಮುಷ್ಟಿ

ಕಟ್ಟು: ಕೆ ೪೬

ಕೃತಿಕ್ರಮಾಂಕ: **ಕೆ ೪೬/೫**

ಉಡುತಡಿಯ ಮಹಾದೇವಿ ಅಕ್ಕಗಳು ನಿರೂಪಿಸಿದ ಸೃಷ್ಟಿಯ ವಚನ

ಪತ್ರದ ಅಳತೆ: ೧೧" X ೨.೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦–೩೫ ಅಕ್ಷರಗಳು. ಪತ್ರ ೫೨ರಿಂದ ಪತ್ರ ೫೪ರವರೆಗಿದೆ.

ಕೃತಿಕಾರ: ಮಹದೇವಿಯಕ್ಕ

ಸ್ವರೂಪ: ವಚನ

ವಸ್ತು: ಸೃಷ್ಟಿರಹಸ್ಯದ ವಿವರಣೆ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಉಡತಡಿಯ ಮಹದೇವಿಅಕ್ಕಗಳು ನಿರೂಪಿಶಿದ ಶೃಷ್ಟಿಯ ವಚನ॥ ಆದಿಯೆ ಕಾಯ। ಅನಾದಿಯೆ ನಿ। ಆದಿ ಅನಾದಿ ನಿತ್ಯಾನಿತ್ಯವ ತಿಳಿಯಲಱಿಯದೇ ವಾಯಕ್ಕೆ ಪರಬ್ರಹ್ಮವ ನುಡಿವ ವಾಂಯುಪ್ರಾಣಿಗಳವರೆತ ಬಲ್ಲರೊ। ಆ ಪರಬ್ರಹ್ಮದ ನಿಜದ ನಿಲವೆಂತೆಂದೊಡೆ। ಆದಿಯೆ ದೆಹ। ಅನಾದಿಯೆ ನಿರ್ದ್ದೆಹ। ಆದಿಯೆ ಸಕಲ। ಅನಾದಿಯೆ ನಿಃಕಲ।

ಅಂತ್ಯ:

ಜ್ಞಾನಿಯಲ್ಲ। ಅಜ್ಞಾನಿ ಮುನ್ನವೆಯಲ್ಲ। ಶೂನ್ಯನಲ್ಲ। ನಿಃಶೂನ್ಯ ಮುನ್ನವೆ ಅಲ್ಲ। ದ್ವೈತಿಯಲ್ಲ। ಅದ್ವೈತಿ ಮುನ್ನವೆ ಅಲ್ಲ। ಯಿಂತೀ ವುಭಯಾತ್ಮಕ ತಾನೆಯಾಗಿ। ಯಿದು ಕಾರಣ। ಯಿದಱಾಗುಹೋಗು ಸಕಲ ಸಂಬಂಧವ ಚೆಂನಮಲ್ಲಿಕಾರ್ಜುನಯ್ಯ ನಿಂಮ ಶರಣರೆ ಬಲ್ಲರು। ಅಕ್ಕಗಳ ಶೃಷ್ಟಿಯ ವಚನ ಸಮಾಪ್ತ ಮಂಗಳ ಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯ ನಮಃ॥ ವರತೆ ಸೋಮಯ್ಯಗಳು ನಿರೂಪಿಸಿದ ಪಂಚೀಕರಣದ ॥

ಪಲ್ಲ॥

ಕ್ರಿಡಿಗೆ ಶೃಷ್ಟಿಯ ಸೂತ್ರವನೊಲವಿಂ।
ಹೂಡಿ ವಿಲಾಸಿಸುವಂತಂನ್ನವನೊಡು।
ಗುಡು ವವರ್ಗೆ ನಿವೃತ್ತಿಯ ಮಾರ್ಗವನೀವಂ ಪರಶಿವನೂ॥

ಪದ॥

ಅಶದ್ರುಸ ನಿತ್ಯ ನಿರಂಜನ ಪರಶಿವ।
ನುಸುರಲ್ಕನುಪಮ ತತ್ವಂ ತಂನಿಂ।
ಯಿಸುಗಿದ ಲೀಲೆಯೆಲಿಂಗಮದಾಯಿತ್ತದಱಿಂದೆ ಸದಾಶಿವನು।
ಯೆಸೆಯಲ್ಕೈವೊಗವಾವೊಗದಿಂದಾ।
ಗಸವನಿಲಾನಲವಾಪಶ್ಚವನಿಗ।
ಳೆಸಗಿದವಾಭೂತಂಗಳ ಗುಣಯಿಪ್ಪತ್ತೈದಾಗಿಹವು ॥೧॥

ಅಂತ್ಯ:

ಯಿಪ್ಪತ್ತೈದು ಗುಣಂಗಳಿಗಶ್ರಯ।
ಮಪ್ಪ ಪಂಚಭೌತಿಕಂಗಳನುಱೆ।
ತಪ್ಪಿಸಿ ಮಂತ್ರಶರೀರಿಯೆನಿಸಿ ಲಿಂಗಾಂಗಸುಮಾರ್ಗ್ಗದೊಳೂ।
ತಪ್ಪದೆ ನಡಸುತ್ತಲ್ಲಿಯ್ಯಲತೆಯಂ
ಕಪ್ರ್ಪರದುರಿಯೊಂದಾಗಿದರ್ದ್ದಡಗು।
ತ್ತಿರ್ಪಂತೆಂನ್ನಂ ತಾನೆನಿಸಿದ ವರಗುರು ಸೋಮೇಶ್ವರನೂ॥೧೩॥

ವರತೆ ಸೋಮಣ್ಣಗಳು ನಿರೂಪಿಸಿದ ಪಂಚೀಕರಣದ ಪದ ಸಮಾಪ್ತ ಮಂಗಳ ಮಹಾಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

ಸಕಲನಿಃಕಲಾತೀತ್ತನಾಗಿ। ಯೆನುಂಯೆನುಯಿಲ್ಲದ ಮಹಾಘನಶೂಂನ್ಯ ಬ್ರಹ್ಮವಾಗಿರಬಲ್ಲನಯ್ಯ ನಮ್ಮ ಗೊಹೇಶ್ವರಲಿಂಗವು॥ ಪ್ರಭುದೇವರು ನಿರೂಪಿಶಿದ ಶೃಷ್ಟಿಯ ವಚನ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೫೯

ಕಟ್ಟು: ಕೆ ೪೬

ಕೃತಿಕ್ರಮಾಂಕ: **ಕೆ ೪೬/೭**

ಏಕೋತ್ತರಶತಸ್ಥಲ

ಪತ್ರದ ಅಳತೆ: ೧೧" X ೨.೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦-೩೫ ಅಕ್ಷರಗಳು. ಪತ್ರ ೫೭ರಿಂದ ಪತ್ರ ೧೩೩ರವರೆಗಿದೆ.

ಕೃತಿಕಾರ: ?

ಸ್ವರೂಪ: ವಚನ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಏಕೋತ್ತರಶತಸ್ಥಲ॥ ಪ್ರಥಮದಲ್ಲಿ ಪಿಂಡಸ್ಥಲ॥ ರಾಗ ಮದುಮಾದವಿ॥ ತಾಳ ದರೂ ॥

ಪಲ್ಲವ॥

ಬಿಂದು ಬಿನ್ನಾಣದೊಳ।
ಗಂಧವಿಷ್ಟಿಯಹತಾಳಾ।
ನಂದಪಿಂಡೊದಯದ ಜ್ಞಾನ ನಿರುತಾ॥

ಪದ॥

ಕಾರಮೇಘದೊಳು ಮಿಂಚಡಗಿ ತೊರದ ತೆಜದಿ।
ನಿಜಿಸೊಳಡಕಂಗೆಯ್ದ ಕಿಚನಂತೆ।

ಕಟ್ಟು: ಕೆ ೪೬

ಕೃತಿಕ್ರಮಾಂಕ: **ಕೆ ೪೬/೬**

ಪ್ರಭುದೇವರು ನಿರೂಪಿಸಿದ ಸೃಷ್ಟಿಯ ವಚನ

ಪತ್ರದ ಅಳತೆ: ೧೧" X ೨.೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦–೩೫ ಅಕ್ಷರಗಳು. ಪತ್ರ ೫೪ರಿಂದ ಪತ್ರ ೫೬ರವರೆಗಿದೆ.

ಕೃತಿಕಾರ: ಅಲ್ಲಮಪ್ರಭು

ಸ್ವರೂಪ: ವಚನ

ವಸ್ತು: ಸೃಷ್ಟಿರಹಸ್ಯದ ವಿವರಣೆ

ಆದಿ:

ಶ್ರೀಗುರುಬಸವಲಿಂಗಾಯನಮಃ।। ಪ್ರಭುದೇವರು ನಿರೂಪಿಸಿದ ಶೃಷ್ಟಿಯ ವಚನ।।

ಪ್ರಥಮದಲ್ಲಿ ವಸ್ತು ಯೇನುವಿಲ್ಲದಂದು। ಮಹಾಘನಶೂನ್ಯಬ್ರಹ್ಮವಾಗಿದ್ದಿತ್ತು। ಅಂತಿರ್ದ್ದ ಪರವಸ್ತು ತಾನೆ ತಂನ ದಿವ್ಯಾನಂದ ಸ್ವಲೀಲಸ್ವಭಾವದಿಂದಾದುದು। ಆತ್ಮತತ್ವವೆಂಬ ಅಂಗಸ್ಥಲ। ಅಂತಪ್ಪ ಜೀವಾತ್ಮನೆಂಬ ಅಂಗಸ್ಥಲಕ್ಕೆ ಸೇರಿದ ತತ್ವಂಗಳೆದಳಿಪ್ಪತ್ತ್ಯೆದು। ಅವಾವೆಂದೊಡೆ।

ಅಂತ್ಯ:

ಗ್ರಂಥ।।

ತಪ್ಪದೆ ನೊಚತೆ ಲಿಂಗಂ।
ತ್ವಂಪದೆನಂಗಮಿರಿತಂ।
ಅನಯೊರೆಕ್ಯಭಾವೆನ।
ಸಂಬಂಧೊಷಿಪದಂ ಖಲು।।

ಯೆಂದುದಾಗಿ। ಯಿಂತ್ತು। ತತ್ವದ ಲಿಂಗ। ತ್ವಂ ಪದವೆ ಅಂಗ। ಯಿ ಯರಡರ ಐಕ್ಯವೆ ಅಸಿಯೆಂದುದಾಗಿ। ಯಿಂತ್ತು। ಸಕಲನಾಗಬಲ್ಲ ನಿಃ ಕಲನಾಗಬಲ್ಲ।

ವಿವರಣಾತ್ಮಕ ಹಸ್ತಪ್ರತಿ ಸೂಚಿ/ ೬೨೭

ಶ್ರೀಗುರುಬಸವಲಿಂಗಾಯನಮಃ। ಚೆನ್ನಬಸವೇಶ್ವರದೇವರು ನಿರೂಪಿಸಿದ ಹಿರಿಯ ಮಂತ್ರಗೋಪ್ಯ। ರಾಗ ಬೌಳಿ। ತಾಳ ಧರು

ಪಲ್ಲವ।

ನೋಡಲಿಲ್ಲ ನುಡಿಯಲಿಲ್ಲ
ಕೂಡಲಿಲ್ಲದಪ್ರತಿಮಂಗೊಡಲೂಯಿಲ್ಲಾ।

ಸೂತ್ರ। ಯೀ ಪಲ್ಲವಪದನೆಂದು। ಸೂತ್ರವೆಂದು। ಮುಂದೆ ಹೇಳುವ ಯಲ್ಲಾ ಪದಂಗಳರ್ಥವನು। ಯೀ ಪಲ್ಲವ ಪದನೆನಿಸುವರ್ತ್ಥವನುಂ। ಸಂಕೋಚವಾಗಿ ಗರ್ಬ್ಭೀಕರಿಸಿಕೊಂಡಿಹುದೆಂದರಿವುದು। ಅದೆಂತೆಂದೊಡೆ। ಯಲ್ಲಾ ಪದಂಗಳರ್ಥನು। ಯೀ ಪಲ್ಲವ ಪದನೆನಿಸುವ ಮೂಲಸೂತ್ರದಲ್ಲಿಯೆ ಗರ್ಬ್ಭೀಕೃತವಾಗಿ। ಬೀಜದೊಳಡಗಿದ ವೃಕ್ಷದಂತೆ ತೋರಿಕೆಯಲ್ಲದೆ ತೋರಲುಳ್ಳದೆಂದರಿವುದು। ಅದೆಂತೆಂದಡೆ।

ಅಂತ್ಯ:

ವೊಡಲಿಲ್ಲದ ಮಹಾಲಿಂಗವು ತಾನೆಯಾಗಿ ನಿಂದ ಶರಣಂಗೆ। ಯರಡಿಟ್ಟು ತೋರುವ ಅವಿದ್ಯಾಸಂಬಂಧಿಗಳಹ। ಅನಂತಕಲ್ಪಂಗಳು ಹೋಗುತ್ತಂ ಬರುತ್ತಂ ಯಿರ್ದ್ದದು। ನಿಜಭಾವಕ್ಕೆ ತೋರುವ ತೋರಿಕೆಗಾಶ್ರಯವಿಲ್ಲವಾಗಿ ವೊಡಲಿಲ್ಲವೆಂದು ಚೆಂನಬಸವೇಶ್ವರದೇವರು ನಿರೂಪಮಂ ಕೊಡುತ್ತಂ ಯಿದ್ದಾರೂ।। ಪದ।। ಆಕಾರವಿಡಿದು ಅರ್ಚನೆ ಪೂಜನೆ [ಇಲ್ಲಿಗೆ ನಿಂತುಹೋಗಿದೆ; ಮುಂದಕ್ಕೆ ಬರವಣಿಗೆಯಿಲ್ಲ]

ವಿಶೇಷವಿಷಯ: ಅಸಮಗ್ರ

****

ಭಿರುತಿಹ ಫಳರಸದೊಳಿಪ್ಪ ನವರುಚಿಯಂತೆ।
ವಾರಣದ ಮಸ್ತಕದ ಮುತ್ತಿನಂತೆ॥೧॥

ಅಂತ್ಯ:

ಅಂತು ಮಹಾಲಿಂಗಸ್ಥಲ ೬ಕ್ಕಂ ಪದನು ೪೨ಕ್ಕಂ ಮಂಗಳಮಹಾ ಶ್ರೀಶ್ರೀಶ್ರೀ॥ ಆಚಾರಲಿಂಗಸ್ಥಲ ೯ಕ್ಕಂ ವಚನ ೫೦೭ಕ್ಕಂ ॥ ಗುರುಲಿಂಗಸ್ಥಲ ೯ಕ್ಕಂ ಪದನು ೪೯ಕ್ಕಂ॥ ಶಿವಲಿಂಗಸ್ಥಲ ೯ಕ್ಕಂ ವಚನ ೪೭ಕ್ಕಂ॥ ಜಂಗಮಲಿಂಗಸ್ಥಲ ೧೨ಕ್ಕಂ ಸಂಬಂಧವಾದಾ ಪದನು ೪೪೮ಕ್ಕಂ॥ ಪ್ರಸಾದ ಲಿಂಗಸ್ಥಲ ೯ಕ್ಕಂ ಪದನು ೪೭ಕ್ಕಂ॥ ಮಹಾಲಿಂಗಸ್ಥಲ ೯ಕ್ಕಂ ಪದನು ೪೭ಕ್ಕಂ॥ ಅಂಗಸ್ಥಲ ೪೪ಕ್ಕಂ ಸೇರಿದ ಸ್ವರಪದನು ೨೫೪ಕ್ಕಂ। ಲಿಂಗಸ್ಥಲ ೫೭ಕ್ಕಂ ಪದನು ೨೯೭ಕ್ಕಂ। ಅಂತು ಉಭಯ ಏಕೋತ್ತರಶತಸ್ಥಲಕ್ಕೆ ಸೇರಿದ ಪದನ ...... ಯೇಕೋತ್ತರ ಶತಸ್ಥಲ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೬೦

ಕಟ್ಟು: ಕೆ ೪೬

ಕೃತಿಕ್ರಮಾಂಕ: **ಕೆ ೪೬/೮**

ಚೆನ್ನಬಸವೇಶ್ವರದೇವರು ನಿರೂಪಿಸಿದ ಪದ ಮಂತ್ರಗೋಪ್ಯ

ಪತ್ರದ ಅಳತೆ: ೧೧'' X ೨.೨''; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦–೩೫ ಅಕ್ಷರಗಳು. ಪತ್ರ ೧೩೩ರಿಂದ ಪತ್ರ ೧೩೪ರವರೆಗಿದೆ.

ಕೃತಿಕಾರ: ?

ಸ್ವರೂಪ: ವಚನ, ಟೀಕಾಗದ್ಯ

ವಸ್ತು: ಆಧ್ಯಾತ್ಮಿಕ

ಆದಿ:

ಪಿಡಿದ ಕರ್ಪ್ಪೂರದುರಿಯುಮುಖದೊಳಗಿತೂ॥
ಗಡಣವಿಲ್ಲದ ಪ್ರಭೆಯ ಕುಡಿಯ ಬೆಳಗಿನ
ನಡುವೆ ಪಿಡಿಪಿಡಿಯಾ ಬಯಲಾದ ಕೂಡಲ ಚೆಂನ ಸಂಗಯ್ಯನೂ॥೫॥

ಯಿಲ್ಲಿಗೆ ಜ್ಞಾನಶೂನ್ಯಸ್ಥಲ ಸಮಾಪ್ತ॥ ಚೆನ್ನಬಸವೇಶ್ವರದೇವರು ನಿರೂಪಿಸಿದ ಪದ ಮಂತ್ರಗೋಪ್ಯದ ಪದಂಗಳುಸಮಾಪ್ತ ಮಂಗಳ ಮಹಾ ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೬೨

ಕಟ್ಟು: ಕೆ ೪೬

ಕೃತಿಕ್ರಮಾಂಕ: **ಕೆ ೪೬/೧೦**

ಪ್ರಭುಸ್ವಾಮಿ ಸಿದ್ಧರಾಮೇಶ್ವರಂಗೆ ಬೋಧಿಸಿದ ಪದ ಮಂತ್ರಗೋಪ್ಯ

ಪತ್ರದ ಅಳತೆ: ೧೧'' X ೨.೨''; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦–೩೫ ಅಕ್ಷರಗಳು. ಪತ್ರ ೧೪೦ರಿಂದ ಪತ್ರ ೧೪೩ರವರೆಗಿದೆ.

ಕೃತಿಕಾರ: ಅಲ್ಲಮಪ್ರಭು

ಸ್ವರೂಪ: ಸ್ವರವಚನ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರು ಬಸವಲಿಂಗಾಯ ನಮಃ॥ ಪ್ರಭುಸ್ವಾಮಿ ಸಿದ್ಧರಾಮೇಶ್ವರಂಗೆ ಬೋಧಿಸಿದ ಪದ ಮಂತ್ರಗೋಪ್ಯವು॥

ಪಲ್ಲವ॥

ರಾಮ ಕೇಳ ದ್ಯಾನಸೋಮ ಕೇಳನುಭಾವಸಿದ್ಧ
ರಾಮಕೇಳಾನಂದ ನಿಂದ ನಿಜವಾ॥

ಕಟ್ಟು: ಕೆ ೪೬

ಕೃತಿಕ್ರಮಾಂಕ: **ಕೆ ೪೬/೯**

ಚೆನ್ನಬಸವೇಶ್ವರದೇವರು ನಿರೂಪಿಸಿದ ಹಿರಿಯ ಮಂತ್ರಗೋಪ್ಯ

ಪತ್ರದ ಅಳತೆ: ೧೧" X ೨.೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦-೩೫ ಅಕ್ಷರಗಳು. ಪತ್ರ ೧೩೫ರಿಂದ ಪತ್ರ ೧೪೦ರವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ; ವಚನ; ಟೀಕಾಗದ್ಯ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯನಮಃ।। ಚೆನ್ನಬಸವೇಶ್ವರದೇವರು ನಿರೂಪಿಸಿದ ಪದ ಮಂತ್ರಗೋಪ್ಯ ।।

ಪಲ್ಲ।।

ಗುರುವೆ ಪರಶಿವನೆ ಸಕಲಾಗಮಂಗಳ ಮೂರ್ತ್ತಿ।
ಗುರುವೆ ಅಜ್ಞಾನತಿಮಿರಕಂಜನಾ।।
ನಾಸ್ತಿತತ್ತ್ವಂ ಗುರುಃ ಪರವೆಂದುದಾಗಿ।
ಶ್ರೀಗುರುಪಾದಸೇವೆಕಾರಣ ಯೋಗಿಗೆ।।

ಪದ।।

ಆಕಾರ ನಿರಾಕಾರ ಯೇಕವೆಂದೆ ನೋಡಿ।
ಆಕಾರವಿಡಿದು ಅರ್ಚನೆ ಪೂಜನೆ।।
ಯೇಕೋಭಾವದ ನಿಷ್ಟೆ ನಿರ್ವ್ವಾಣದಲಿ ನಿಲಲು ನಿಂ।
ನಾಕಾರ ನಿರಾಕಾರ ತಾನು ತಾನೆ।।೧।।

ಅಂತ್ಯ:

ಸೊಡರಿಲ್ಲದಾ ಬೆಳಗು ಕುಡಿವರಿದ ಪ್ರಭೆಯೊಳಗೆ

ವಿವರಣಾತ್ಮಕ ಹಸ್ತಪ್ರತಿ ಸೂಚಿ/೬೩೧

ಕಟ್ಟು: ಕೆ ೪೬

ಕೃತಿಕ್ರಮಾಂಕ: **ಕೆ ೪೬/೧೧**

ಅಷ್ಟವಿಧಾನದ ವಾರ್ಧಕ

ಪತ್ರದ ಅಳತೆ: ೧೧" X ೨.೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೩೦–೩೫ ಅಕ್ಷರಗಳು. ಕೊನೆಯ ಪತ್ರದಲ್ಲಿದೆ.

ಕೃತಿಕಾರ: ?

ಸ್ವರೂಪ: ವಚನ, ಪದ್ಯ

ವಸ್ತು: ಆಧ್ಯಾತ್ಮಿಕ

ಆದಿ:

ಶ್ರೀಗುರುಬಸವಲಿಂಗಾಯ ನಮಃ।। ಅಷ್ಟವಿದಾನದ ವಾರ್ಧಿಕ।।

ಶ್ರೀಗುರು ಸದಾನಂದ ಚಿದ್ಬಿಂದು ಚಿತ್ಕಳೆಯು।
ಶ್ರೀಗುರುವೆ ನಾಲ್ಕು ವೇದಕತೀತನೆನಿಸುವದು।
ಶ್ರೀಗುರುವೆ ಸರ್ವಸೂತ್ರಕದಾರ ತ್ರಿಜಗಕೆ ಶ್ರೀಗುರುವೆ ಅದಿಕ ನೋಡಾ।।
ಶ್ರೀಗುರುವೆ ಮೂರ್ತಿತ್ರ್ಯಯ ಧರುಷಣವೆ ಪರುಷಣವು।
ಶ್ರೀಗುರುವಿನ ದ್ಯೆನ ಸರ್ವ ಕಂಠಕಹಾರ।
ಶ್ರೀಗುರು।।

ಸೂತ್ರ ಇಂತ್ತು।। ಜೀವಾತನೆ ಶಿವನೆಂಬುದನು। ಕರ್ಮಯೋಗವನು ಶುದ್ಧ ಶೈವನು। ಅಲ್ಲಿಯ ಸಮರ್ತಿಕೆಯುನು। ಪೂರ್ವಪಕೆಯೆಂದು ಕಳದು। ಗುರುಲಿಂಗಜಂಗಮದಲ್ಲಿ ಸಹಜ ಸದ್ಭಕ್ತಿಯನೆ। ಉಳುಮೆಯ ಮಾಡಿ। ಮಡಿವಾಳಯ್ಯಗಳು। ನಿರೂಪಿಸುತಿರಲು। ಇದಕ್ಕೆ ಹಡಪದಪ್ಪಗಳು।।

ಅಂತ್ಯ:

ಇಂತಿವೆಲ್ಲಕ್ಕೂ ಮಾತ್ರುಸ್ಥಾನವಾಗಿಹುದು। ಮಕಾರವೆಂಬ ಬೀಜಾಕ್ಷರ। ಅದು ಪ್ರಣವದ ದಂಡಕಾಕ್ರುತಿಯೆಯಲ್ಲಿಹುದು। ಓಂಓಂಓಂ ಮಾಂಮಾಂಮಾಂ ಯೆಂಬ ಬ್ರಹ್ಮನಾದಮಂತ್ರವೊರ್ತಿ। ಪ್ರಣವಕ್ಕೆ ನಮಸ್ಕಾರವು। ಇದು

ಪದ||

ಯೆಂಟೆಸಳ ಕಮಲದಾ ನವಬ್ರಹ್ಮಪುರದೊಳಗೆ।
ಯೆಂಟು ಬೀದಿಗಂಯೊಳೆಂಟು ಕರಿಗಳುಂಟು||
ಯೆಂಟು ಕರಿಗಳ ಸುಟ್ಟು ಕಂಠಕಂಗಳ ಗೆಲಿದು।
ದಾಂಟಿದೆನು ಸಂಸಾರ ಸಾಗರವನೂ||೧||

ಅಂತ್ಯ:

ಖೇಚರತ್ವದ ನಿಲವ ಭೂಚರರು ಬಲ್ಲರೆ।
ವಾಚಾಳಕರ ಮಾತಿಗಿದು ಸಲ್ಲದೂ||
ಆಚಾರದನುಭಾವ ಭಕ್ತಿ ನೆಲೆಗೊಂಡಂಗೆ
ಸೂಚಿಸುವದು ಮಹಪರಮಪದವೂ||೨೫||

ಬ್ರಹ್ಮರಂಧ್ರದ ಕೊನೆಯವರ್ಮಾಡಿ ವರ್ಮ್ಮವನು
ನ್ಮರ್ಮ್ಮಳಾಗಿರ್ದ್ದೆಹಿಕಂಗಲ್ಲದೆ।
ವರ್ಮ್ಮವಱದಾನಿರ್ಮ್ಮಳ ನಿತ್ಯಂಗಲ್ಲದೆ
ಕರ್ಮ್ಮ ಬಹುಬಾವಿಗಳಿಗಿರು ಸಲ್ಲದೂ||೨೬||

ಮುಖಕಮಲಸಿಖರ ಸಿಂಹ್ವಸನಾಗ್ರದ ಮೇಲೆ
ಮಕರತೋರಣವದಱದ್ಧರಾಶ್ವರಂ।
ಕೆಲಕೆಲದಲಿ ಸಕಲ ಗಣತಿಂಥಿಣಿಯು ಜಯತುಜಯತೆಂತೆ
ನಲು ಸುಖಿ ಗೊಹೇಶ್ವರನ ಶರಣ ಸಿದ್ಧರಾಮಾ||೨೭||

ಪ್ರಭುದೇವರು ಸಿದ್ಧರಾಮೇಶ್ವರಂಗೆ ಬೋಧಿಸಿದ ಪದ ಮಂತ್ರಗೋಪ್ಯದ ಪದಂಗಳು ಸಮಾಪ್ತ ಮಂಗಳ ಮಹಾ ಶ್ರೀಶ್ರೀಶ್ರೀ||

ವಿಶೇಷವಿಷಯ: ಸಮಗ್ರ

****

ಮಲ್ಹಣಸ್ತೋತ್ರ ಸಮಾಪ್ತ ಮಂಗಳಮಹಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೪೬೫

ಕಟ್ಟು: ಕೆ ೪೭

ಕೃತಿಕ್ರಮಾಂಕ: **ಕೆ ೪೭/೨**

ಅನಾಮಯಸ್ತೋತ್ರ (ಸಂ)

ಪತ್ರದ ಅಳತೆ: ೫.೬" X ೧.೬"; ಪ್ರತಿ ಮುಖದಲ್ಲಿ ಏಳರಿಂದ ಎಂಟು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೨೮-೩೦ ಅಕ್ಷರಗಳು. ಪತ್ರ ೭ರಿಂದ ಪತ್ರ ೧೩ರವರೆಗಿದೆ.

ಕೃತಿಕಾರ: ದಂಡಿ

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಸೂಚನೆ: ಆದಿಯಲ್ಲಿರಬೇಕಾದ ೭ನೆಯ ಪತ್ರ ಇಲ್ಲ; ಅದರಲ್ಲಿ ೪ ಪದ್ಯಗಳಿರಬೇಕು; ೮ನೆಯ ಪತ್ರವು ೫ನೆಯ ಪದ್ಯದಿಂದ ಪ್ರಾರಂಭವಾಗಿದೆ.

ಶಕ್ತಿಶೂನ್ಯಂ।
ಭೋಕ್ತಾನ್ಯೈನಾಂ ಪರಿಣಮಯಿತುಂ ಬಂಧವರ್ತಿ ಸಮತಃ॥
ಋಣಫ್ಯಸ್ಮಿನ್ ಭವತಿ ಮಿಥುನೆ ಪುಷ್ಕಲ ಸ್ತೋತ್ರಹೇತೋ।
ನೀಲಗ್ರೀವ ತ್ವಮಸಿ ಭುವನಸ್ಥಾಪನಾಸೂತ್ರಧಾರಃ ॥೫॥

ಅಂತ್ಯ:

ಸ್ತೋತ್ರಂ ಸಮ್ಯಕ್ಪರಮವಿದುಷಾ ದಂಡಿನಾ ವಾಚ್ಯವೃತ್ತೈ
ರ್ಮಂದಾಕ್ರಾಂತೈಸ್ತ್ರಿಭುವನಗುರೋಃ ಪಾರ್ವ್ವತೀವಲ್ಲಭಸ್ಯ।
ಕೃತ್ವಾ ಸ್ತೋತ್ರಂ ಯದಿ ಸುಭಗಮಾಪ್ನೋತಿ ನಿತ್ಯಂ ಹಿ ಪುಂಣ್ಯಂ
ತೇನ ವ್ಯಾಧಿಂ ಹರಹರ ನ್ರುಣಾಂ ಸ್ತೋತ್ರ ಪಾಠೇನ ಸತ್ಯಂ ॥೩೩॥

ದ್ವಿತೀಯಾಚಕ್ರ ಮಹೇಶ್ವರಸ್ಥಲ॥೨॥ [ಇಲ್ಲಿಗೆ ನಿಂತುಹೋಗಿದೆ; ಮುಂದಿನ ಪತ್ರಗಳು ಲಭ್ಯವಿಲ್ಲ]

ವಿಶೇಷವಿಷಯ: ಅಸಮಗ್ರ?

****

೪೬೪

ಕಟ್ಟು: ಕೆ ೪೭

ಕೃತಿಕ್ರಮಾಂಕ: **ಕೆ ೪೭/೧**

ಮಲುಹಣಸ್ತೋತ್ರ (ಸಂ)

ಪತ್ರದ ಅಳತೆ: ೫.೬" X ೧.೬"; ಪ್ರತಿ ಮುಖದಲ್ಲಿ ಏಳರಿಂದ ಎಂಟು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೨೮-೩೦ ಅಕ್ಷರಗಳು. ಪತ್ರ ೧ರಿಂದ ಪತ್ರ ೬ರವರೆಗಿದೆ.

ಕೃತಿಕಾರ: ಮಲುಹಣ

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರು ಬಸವಲಿಂಗಾಯನಮಃ। ಮಲುಹಣಸ್ತೋತ್ರ॥

ಕಾಂತಾಕಚಪ್ರಚಯಪುಷ್ಪಸುಗಂಧಿಗಂಧ
ಲುಬ್ಧ ಭ್ರಮದ್ಭ್ರಮರಕರ್ಬ್ಬುರ ಕಂಧರಾಯ॥
ಗಂಧರ್ವ್ವಯಕ್ಷಸುರಸಿದ್ಧಕಿರೀಟಕೋಟಿ
ಸಂಘಟ್ಟ ಪೃಷ್ಟಚರಣಾಯ ನಮಃಶಿವಾಯ॥೧॥

ಅಂತ್ಯ:

ಸ್ತೋತ್ರಂ ಮಯಾಕೃತಮಿದಂ ಭವತೋಗಣೇನ।
ವೃತ್ತೈರ್ವಸಂತತಿಲಕೈಃ ಶಿವ ಮಲ್ಹಣೇನ।
ಆಯಾಸಮತ್ರ ಭಗವನ್ ಗದಿತಂ ದುರುಕ್ತಂ।
ಭಕ್ತಿಪ್ರಮಾಣಮಿತಿಸರ್ವ್ವಮಿದಂ ಕ್ಷಮಸ್ವ॥೪೦॥

ಕಟ್ಟು: ಕೆ ೪೭

ಕೃತಿಕ್ರಮಾಂಕ: **ಕೆ ೪೭/೪**

ಸಮಾಧಿಕ್ರಿಯದ ಉದ್ಧರಣೆ [ಸಂ.ಕ.]

ಪತ್ರದ ಅಳತೆ: ೫.೬" X ೧.೬"; ಪ್ರತಿ ಮುಖದಲ್ಲಿ ಏಳರಿಂದ ಎಂಟು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೨೮–೩೦ ಅಕ್ಷರಗಳು. ೮ ಪತ್ರಗಳಿವೆ.

ಕೃತಿಕಾರ: ?

ಸ್ವರೂಪ: ಗದ್ಯ

ವಸ್ತು: ಸಮಾಧಿಕ್ರಿಯಾವಿಚಾರ

ಆದಿ:

ಶ್ರೀಗುರು ಬಸವಲಿಂಗಾಯನಮಃ। ಸಮಾಧಿಕ್ರಿಯದ ಉದ್ಧರಣೆ॥

ಮೂಲ.......ಚಾಕ್ಷರಬ್‌ನಮಃ ಶಿವಾಯ
ಸಂಲಪಂಚಾಕ್ಷರಬ್ ಹ್ರಾಂಹ್ರೀಂಹ್ರೂಂ ನಮಃ ....
ವಾಯ ಸ್ತೂಲಪಂಚಾಕ್ಷರ ॥೫॥

ಅಂತ್ಯ:

ಯೀ ನಾಲ್ಕು ಲಿಂಗಮುದ್ರೆ ತಗಡಳನು ಸಮಾದಿಯ ನಾಲ್ಕು ಮೂಲೆಗೆ ಸಂಬಂದಿಸುವದು ಶ್ರೀಶ್ರೀಶ್ರೀ

ವಿಶೇಷವಿಷಯ: ಅಸಮಗ್ರ

****

ಇತ್ಯನಾಮಯಸ್ತೋತ್ರಂ ಸಮಾಪ್ತಂ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಅಸಮಗ್ರ

****

೪೬೬

ಕಟ್ಟು: ಕೆ ೪೭

ಕೃತಿಕ್ರಮಾಂಕ: **ಕೆ ೪೭/೩**

ಮಹಿಮ್ನಸ್ತೋತ್ರ (ಸಂ)

ಪತ್ರದ ಅಳತೆ: ೫.೬" X ೧.೬"; ಪ್ರತಿ ಮುಖದಲ್ಲಿ ಏಳರಿಂದ ಎಂಟು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೨೮-೩೦ ಅಕ್ಷರಗಳು. ಪತ್ರ ೧೩ರಿಂದ ಪತ್ರ ೧೮ರವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಸ್ತುತಿ

ಆದಿ:

ಶ್ರೀಗುರು ಬಸವಲಿಂಗಾಯನಮಃ। ಮಹಿಮ್ನಸ್ತೋತ್ರಃ॥

ಮಹಿಮ್ನಃ ಪಾರಂ ತೇ ಪರಮವಿದುಷೋಯದ್ಯ ಸದೃಶಿ।
ಸ್ತುತಿರ್ಬ್ರಹ್ಮಾದಿನಾಮಪಿ ತದವಸನ್ನಾ ಸ್ವಯಗಿರಃ॥
ಅಥಾ ವಾಚ್ಯಃ ಸರ್ವ್ವಸ್ವಮತಿ ಪರಿಣಾಮಾವಧೀ ಗಣನ್।
ಮಮಾಪ್ಯೇಷಃ ಸ್ತೋತ್ರೇ ಹರನಿರಪವಾದಃ ಪರಿಕರಃ ॥೧॥

ಅಂತ್ಯ:

.... ದ್ರುತಧನುಷಮಹ್ನಾಯ ತ್ರುಣವತ್ ಪುರಪ್ಲುಷ್ಟಂ
ದ್ರುಷ್ಟ್ವಾ ಪುರಮಥನ ಪ....... ರ ಮುಗ್ಧಾ ಯುವತಯಃ ॥೨೪॥

.... ರಹರ ಪಿಶಾಚಾಃ .... [ಅಪೂರ್ಣ; ತ್ರುಟಿತ]

ವಿಶೇಷವಿಷಯ: ಅಸಮಗ್ರ

****

ಕಟ್ಟು: ಕೆ ೪೮

ಕೃತಿಕ್ರಮಾಂಕ: **ಕೆ ೪೮/೨**

ಶಬ್ದರೂಪಮಾಲಿಕೆ

ಪತ್ರದ ಅಳತೆ: ೯"X೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫-೫೦ ಅಕ್ಷರಗಳು. ೧ನೆಯ ಪತ್ರದಿಂದ ೨೧ನೆಯ ಪತ್ರದವರೆಗೆ ಇದೆ.

ಕೃತಿಕಾರ: ?

ಸ್ವರೂಪ: ಪದ್ಯ, ಗದ್ಯಟೀಕೆ

ವಸ್ತು: ಶಬ್ದರೂಪವಿಚಾರ

ಆದಿ:

ಶ್ರೀ ಗುರುಬಸವಲಿಂಗಾಯನಮಃ।। ಶಬ್ದರೂಪಮಾಲಿಕೆ।।

ಗ್ರಂಥ।।

ವಾಗರ್ಥಾ ಯಿವ ಸಂಪೃಕ್ತೌ।
ವಾಗಾರ್ಥ್ಥ ಪ್ರತಿಪತ್ತಯೆ।
ಜಗತಃ ಪಿತರೌ ವಂದೆ।
ಪಾರ್ವತೀಪರಮೇಶ್ವರೌ।।೧।।

ಶಿವಃ ಪ್ರಕಾಶತಶ್ಶೈಲವೇ।
ಶಿವೋಲೋಕಾನರಕ್ಷ್ಣಯೇತ್।।
ಶಿವೋಭೀಷ್ಟಫಲವ್ರಾತಂ।
ಶಿವಭಕ್ತಾನಯಾಚತ।।
ತಪ್ರಾಪ್ತಂಶಿವೇನ ಕಾರುಣ್ಯಂ।
ಶಿವೇನಾಪರತಂ ಸ್ಥಿತಂ।।೨।।

ಅದುಗಳನು। ಉ ಪ್ರಥಮಾ। ನನುಕೂತರ್ಥ್ಥ। ದ್ವಿತೀಯಶಾ ಅದಱಿಂದೆ। ಕೂಡೆ। ವಡನೆ। ತ್ರುತಿಯಶಾ। ಅದಕ್ಕೊಸ್ಕರ ಚತುರ್ಥ್ಥಾ। ಅದ ಅತ್ತಣಿಂದೆ।

ಕಟ್ಟು: ಕೆ ೪೮

ಕೃತಿಕ್ರಮಾಂಕ: **ಕೆ ೪೮/೧**

ನಾಮಲಿಂಗಾನುಶಾಸನ: ಅಮರಸಿಂಹ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫-೫೦ ಅಕ್ಷರಗಳು. ೧೭೬ ಪತ್ರಗಳಿವೆ.

ಕೃತಿಕಾರ: ಅಮರಸಿಂಹ

ಸ್ವರೂಪ: ಪದ್ಯ, ಗದ್ಯಟೀಕೆ

ವಸ್ತು: ಕೋಶ

ಆದಿ:

ಶ್ರೀ ಗುರುಬಸವಲಿಂಗಾಯನಮಃ।। ಶ್ರೀಗುರುಭ್ಯೋನ್ನಮಃ।। ನಿರ್ವಿ.......

ಶ್ಲೋಕ।। ಯಸ್ಯಜ್ಞಾನದಯಾಸಿಂಧೋ।

ರಗಾಧಸ್ಯನಘಾಗುಣಾಃ...........

ಸಿಂಧೋ। ಗ್ನ್ಯಾನಕ್ಕೂ ದಯೆಗೂ ಸಮುದ್ರವೆನಿಸಿದ। ಅಗಾಧಸ್ಯನೆ....... ರ್ಮಳಂಗಳಕು। ಗುಣಾಃ ಗುಣಂಗಳು। ಸಂತಿ । ಉಂಟು। ಭೋ ಧೀರಾಃ। ...... ಆದವನೂ। ಶ್ರಿಯೆ ಚ। ಸಿರಿಗೋಸುಕರ। ಅಮ್ರುತಾಯ ಚ। ಮೋಕ್ಷಕ್ಕೋಸ್ಕರ ಭವದ್ಭಿಃ। ನಿಮ್ಮಿಂದ। ಸೇವ್ಯತಾಂ। ವೋಲಗಿಸಲ್ಪಡಲಿ ।।೧।।

ಅಂತ್ಯ:

ಇತ್ಯಮರಸಿಂಹಕೃತೌ। ನಾಮಲಿಂಗಾನುಶಾಸನೆ। ದ್ವಿತೀಯೋ ಭೂಮಿ ಕಾಂಡೋಯ। ಸಂಗಯೆವ ಸಮರ್ಥಿತಃ।। ಶ್ರೀಶ್ರೀಶ್ರೀ।। ಯಿತಿ ದ್ವಿತೀಯ ಖಾಂಡ ಸಮಾಪ್ತ ಮಂಗಳಮಹಾ।। ಪ್ರಥಮಖಾಂಡಕ್ಕೆ ೨೭೮ ಗ್ರಂಥ। ದ್ವಿತೀಯಖಾಂಡಕ್ಕೆ ೭೩೨ ಗ್ರಂಥ।। ಅಂತು ಕೂಡಿ ೧೦೧೦ ಉಭಯಖಾಂಡಕ್ಕೆ ಸೆರಿದ ಗ್ರಂಥ ಸಮಾಪ್ತಂ।। ಶ್ರೀಶ್ರೀಶ್ರೀ

ವಿಶೇಷವಿಷಯ: ಅಮರಕೋಶದ ಮೊದಲೆರಡು ಕಾಂಡಗಳು; ಮೂಲಕ್ಕೆ ಕನ್ನಡ ಅನ್ವಯಾರ್ಥ. ಸಮಗ್ರ; ಅಲ್ಲಲ್ಲಿ ತ್ರುಟಿತ.

****

ಶ್ರೀಯುತನಮಃಶಿವಾ।
ಯತ್ಯಯ ಚ ಪಂಚಾಕ್ಷರಿಪ್ರಮಾಣಸಂಭೂತ।
ಸಾಯುತಭಾವಂ ನಾಕ್ಷರ।
ಕಾಯಸ್ಥನೆ ನಿಂಮ ನಾಂ ಪೊಗಳ್ವೆನು ಬಸವೇಶಾ॥

ಟೀ॥ ಶ್ರೀಯುತ। ನಿರತಿಶಯೈಶ್ವರ್ಯೋಪಲಕ್ಷಿತವಾದ ನಮಃ ಶಿವಾಯೆತಿ। ನಮಃ ಶಿವಾಯಯೆಂಬ। ಆಯತ। ದೀರ್ಘವಾದಂಥಾ। ಪಂಚಾಕ್ಷರಿ। ಶ್ರೀಶೈವ ಪಂಚಾಕ್ಷರಿ। ಯೆಂಬ। ಪ್ರಣಮ। ಓಂಕಾರದಲ್ಲಿ। ಸಂಭೂತ। ಯ್ಯೆದಲುಪಟ್ಟ। ಸ್ವ। ತಂನ ಸಂಬಂಧವಾದ। ಆಯತ। ಉಂನತವಾದ। ಭಾವಂ। ಚಿತ್ತವ ನುಳ್ಳಂಥಾ। ಅಕ್ಷರಕಾಯಸ್ಥನೆ। ಅಕ್ಷರ। ಮಾತೃಕಾಕ್ಷರಂಗಳೆಂಬ ಕಾಯ। ಶರೀರದಲ್ಲಿ। ಸ್ಥಾ। ಇದಂಥಾ। ಬಸವೇಶ। ಯೆಲೆ। ಬಸವೇಶ್ವರ। ನಿಮ ನಾಂ ಪೊಗಳ್ವೆ। ನಮ್ಮ ಸ್ತೋತ್ರ ಮಾಡಿನೂ ॥೧॥

ಅಂತ್ಯ:

॥೪೦॥
ಶಿವಮಸ್ತು ಭಕ್ತಿವಿಭವೋ।
ದ್ಭವಮಸ್ತುವಕ್ಷರಾಂಕಪಠಣಶ್ರವಣ।
ಸ್ತವನಾಸಕ್ತರಿಗೆ ಮಹೋತ್ಸವಮಸ್ತು ವಾಕ್ಸಿದ್ಧಿರಸ್ತು ಬಸವೇಶಾ॥

ಟೀ॥ ಶಿವ। ಮಂಗಲಸ್ವರೂಪನಾದಂಥಾ। ಬಸವೇಶಾ। ಯೆಲೆ ಬಸವೇಶ್ವರನೆ। ಅಕ್ಷರಾಂಕ। ಪಠನ ಶ್ರವಣಸ್ತವಸ್ತವನಾಶಕ್ತರಿಗೆ। ನಿನ ಅಕ್ಷರಾಂಕಸ್ತೋತ್ರದ। ಪಠಣ। ಪಾಠದಲ್ಲಿ। ಶ್ರವಣ। ಕೇಳುವಿಕೆಯಲ್ಲಿ। ಸ್ತವನ। ಸ್ತೋತ್ರದಲ್ಲಿ। ಆಶಕ್ತರಿಗೆ। ಶಿವಮಸ್ತು। ಮಂಗಲವಾಗಲಿ। ಭಕ್ತಿ। ಭಕ್ತಿಯೂ। ವಿಭವ। ವೈಭವದ। ಉದ್ಭವಃ। ಬೆಳವಳಿಗೆಯೂ। ಅಸ್ತು। ಆಗಲಿ। ಮಹೋತ್ಸವಮಸ್ತು। ಮಹೋತ್ಸವಮಾದೊಡ್ಡಿತ್ತಾದ ವಸಗೆಯೂ। ಅಸ್ತು। ಆಗಲಿ। ವಾಕ್ಸಿದ್ಧಿ। ವಾಕ್ಸಿದ್ಧಿಯೂ। ಅಸ್ತು। ಆಗಲಿ। ಶ್ರೀಬಸವರಾಜಾಯೆನ್ನಮಃ। ಅಕ್ಷರಾಂಕಗದ್ಯ ವ್ಯಾಖ್ಯಾನ ಸಂಪೂರ್ಣ ಮಂಗಳಮಹಾಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

ಅದ ಅದೇಸೆ। ಯಿಂದ ಪಂಚಮಿ। ಅದರ ಅದಕ್ಕೆ। ಷಷ್ಟಿ। ಅದರದಲ್ಲಿ। ಅದರೊಳ್। ಸಪ್ತಮಿ। ಅಂಥಾ। ಕರ್ಮಧಾರಯೆ। ಉಳ್ಳಂಥಾ ಬಹುವ್ರೀಹಿಃ। ಅಕಾರಾಂತಃ ಪುಲ್ಲಿಂಗಃ ಶಂಕರಶಬ್ದಃ॥

ಅಂತ್ಯ:

ನಾಮಪ್ರತಿಪದಿಕಂ ನಾಮ ಪೂರ್ವಪದೋ ಯಥಾಶಾಕನ್ಯಮಾತ್ರಾ ಶಾಕಂ ಪ್ರತಿಫಲಸ್ಯ ಮಾತ್ರ ಫಲಂ ವೃತಿ। ಅವ್ಯಯಪೂರ್ವಪದೋ ಯಥಾಕುಂಭಸ್ಯ ಸಮಿಪೆ ಆವರ್ತತನ್ತ್ಯುಪಕುಂಭಕ್ರಯಮನತಿಕ್ರಮ್ಯವರ್ತ್ತಗತನ್ತಿ ವಾಥಾ ಕ್ರಮಂಪಿಷಾಂ ಪುನಃ ಸಮಾಸಾನಾಂ ಪ್ರದಾಸ್ಯಂಸ್ಯಾ ಚತುರ್ವಿಧಂ। ಅಸ್ಯಾಯಮರ್ಥಃ ಅವ್ಯಯೀಭಾವಃ ತತ್ಪುರುಷಂ ಬಹುವ್ರೀಹಿ ದ್ವಂದ್ವಂ ಶ್ಚತಿಚತೂರ್ವಿದಮೆವನ್ತಿ ಸಮಾಸವಿವರಣಂ ಸ॥ಶ್ರೀಶ್ರೀಶ್ರೀ॥

ವಿಶೇಷವಿಷಯ: ಸಮಗ್ರ

****

೪೭೦

ಕಟ್ಟು: ಕೆ ೪೮

ಕೃತಿಕ್ರಮಾಂಕ: **ಕೆ ೪೮/೩**

ಅಕ್ಷರಾಂಕಗದ್ಯವ್ಯಾಖ್ಯಾನ

ಪತ್ರದ ಅಳತೆ: ೯"X೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫-೫೦ ಅಕ್ಷರಗಳು. ೧ನೆಯ ಪತ್ರದಿಂದ ೧೬ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ, ಗದ್ಯ

ವಸ್ತು: ಸ್ತುತಿ

ಆದಿ:

ಶ್ರೀ ಗುರುಬಸವಲಿಂಗಾಯನಮಃ॥ ಅಕ್ಷರಾಂಕಗದ್ಯವ್ಯಾಖ್ಯಾನ॥

ಕಂದ ॥

ವಿಶೇಷವಿಷಯ: ಸಮವೃತ್ತಾಧಿಕಾರದವರೆಗೆ ಸರಿಯಾಗಿದೆ; ಅಲ್ಲಿಂದ ಮುಂದಕ್ಕೆ ಪ್ರಕ್ಷಿಪ್ತ ಅಧಿಕವಾಗಿದೆ; ತಾಳವಿಚಾರ, ವಿವಿಧ ಷಟ್ಪದಿಗಳ ವಿಚಾರ ಎಲ್ಲ ಇವೆ. ಅಂತ್ಯವು ಕೂಡ ನಾಗವರ್ಮನ ಕೃತಿಯ ಅಂತ್ಯವಲ್ಲ.

ವಿಶೇಷವಿಷಯ: ಸಮಗ್ರ

****

೪೭೨

ಕಟ್ಟು: ಕೆ ೪೮

ಕೃತಿಕ್ರಮಾಂಕ: **ಕೆ ೪೮/೫**

ಛಂದದ ವಿಸ್ತಾರದ ವಾರ್ಧಕ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫–೫೦ ಅಕ್ಷರಗಳು. ೨೦ನೆಯ ಪತ್ರದಿಂದ ೨೧ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ಛಂದಸ್ಸಿನ ವಿಚಾರ

ಆದಿ:

ಶ್ರೀ ಗುರುಬಸವಲಿಂಗಾಯನಮಃ।। ಚಂದದವಿಸ್ತಾರದ ವಾರ್ದ್ಧಿಕ।।

ಸರಸಿಜಂನಿಜವಕ್ಕುರಂ ಗರುಡಗುಡಿಸುತಾಂ।
ಹರಿಣಕೊಂಬಂವೆತ್ಪಹಂಷನೊತ್ಪ್ರಕಾಶ।
ಸಿರಿಬಂದು ನಾಶಕೀರ್ತಿಯು ವಿದ್ಯ
ಮರಣವಸುಪತ್ಸ್ಯಮಸ್ವೆತಕ್ರುಷ್ತಾ।
ವರಲಕ್ಷ್ಮಿಚಾಮುಂಡಿಸಿಂಹಶಾಧಿಕಾಳಿ।
ನಿರುತವಡಿಗಳ ಪಂಚಪಟಲವುವರ್ನ್ನದಿದ್ಯೆವ।
ವಶವುದ್ಯೆಗುರುಚರಣಸರಸಿಜಕ್ಕೆರಪಮಧುಕರನೆ ಶಿವಭಕ್ತಿಚರನೆ।।೧।।

ಕಟ್ಟು: ಕೆ ೪೮

ಕೃತಿಕ್ರಮಾಂಕ: **ಕೆ ೪೮/೪**

ಛಂದೋಂಬುಧಿ: ನಾಗವರ್ಮ

ಪತ್ರದ ಅಳತೆ: ೯" X ೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫-೫೦ ಅಕ್ಷರಗಳು. ೧ನೆಯ ಪತ್ರದಿಂದ ೧೯ನೆಯ ಪತ್ರದವರೆಗಿದೆ.

ಕೃತಿಕಾರ: ನಾಗವರ್ಮ

ಸ್ವರೂಪ: ಪದ್ಯ, ಗದ್ಯ

ವಸ್ತು: ಛಂದಸ್ಸು

ಆದಿ:

ಶ್ರೀ ಗುರುಬಸವಲಿಂಗಾಯನಮಃ॥ ನಾಗವರ್ಮಚಂದಸ್ಸು॥

ಶ್ರೀವಧುವಂ ಪಯೋಧಿಮಥನೋದ್ಭವವಸ್ತುಸಮೂಹದೊಳ್ ಮಹ।
ದೇವಸಮೇತಮಿರ್ದ್ದು ಸುರರಂ ಸುರರಂ ಮಿಗೆ ತನ್ನಿಂ ಮೆಚ್ಚುಗೊಂ।
ಡಾವನಶೇಷ ಭೂಭುವನಮಂಡಲವಲ್ಲಭನಾದ ದೇವನೀ।
ಗಾವಗ ಬಂದುವೆಂಮ್ಮ ಬೇಳ್ಪ ವರದುಂನತೆಯಂ ಸುಕವೀಂದ್ರವಲ್ಲಭಂ॥೧॥

ಅಂತ್ಯ:

ಯಿಂತೀ ಛಂದ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀಶ್ರೀಶ್ರೀಶ್ರೀಶ್ರೀ ಚರಮೂರ್ತಿ ಮಹೇಶ್ವರರು ನಾಗಠಾಣ್ಯದ ಸೋಮಶೇಕರಸ್ವಾಮಿಯ ಕರಕಮಲದಲ್ಲಿ ಉದ್ಭವರಾದ ನಾಗಠಾಣ್ಯದ ಚೆನ್ನಮಲ್ಲಿಕಾರ್ಜುನದೇವರು ಸಾಲಿವಾಹನಸಖ ೧೬೪೭ ವಿಶ್ವಾವಸು ಸಂವಚ್ಛರದ ಆಶ್ವೀಜ ಛಾಳ ೫ ಸುಕ್ರವಾರದಲ್ಲಿ ಛಂದಸುತ್ರಪುಸ್ತಕ ಪ್ರತಿಸಮಾನವಾಗಿ ಬರದು ಮುಗಿಸಿದರು ತಂಮ್ಮ ಕಾಸಕ್ಕೆ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀಶ್ರೀಶ್ರೀಶ್ರೀಶ್ರೀ

ಸಿಂಗತಾನೊಂದುಕಡೆ ಮುಖವಾಗಿ ನೋಡುತ್ತಾ।
ಲಂಗಿಪದು ಮತ್ತೊಂದು ಕಡಿಗೆಯಂಬಂದದಿಂ।
ಲಿಂಗಭಕ್ತನು ಸಕಲ ಸಂಸಾರದಲ್ಲಿ ಕೂಡಿರ್ದ ಬಂಗಿರಂಗದಲ್ಲಿ॥
ಹಿಂಗಾದೆ ತಂಸ್ನಾದಿ ಶಿವತತ್ತ್ವದಲಿ ಮನವ।
ಸಂಗಿಸಿಯೆ ಸಮರಸದಿ ಭ್ಯೇದಭಾವವನಳಿದಾ।
ಮಂಗಳೊಂನ್ಮಥಭಕ್ತಗೊಂದನೆ ಅವಧಾನಯೆಂದು ಪೇಳ್ವರು ನಲ್ಮಿಯಿಂ॥೧॥

ಅಂತ್ಯ:

ಅಷ್ಟಾವದಾನಿ ತನಗುಳ್ಳ ರಾಜನ ತೆರದಿ।
ಯಿಷ್ಟಲಿಂಗದ ಪೂಜೆ ಗುರುಭಕ್ತಿ ಜಂಗಮಕೆ।
ಕೊಟ್ಟು ದ್ರವ್ಯಾದಿಗಳ ವಿಭೂತಿ ರುದ್ರಾಕ್ಷಿ ತೀರ್ಥಪ್ರಸಾದಂಗಳಂ॥
ನೈಷ್ಟಿಯಿಂದವಧರಿಸಿ ಮಂತ್ರಮಂ ಜಪಿಸುತ್ತ।
ಅಷ್ಟತನುವರ್ತ್ತನೆಯನಳಿದುಳಿದ ಭಕ್ತಂಗೆ।
ಅಷ್ಟಂಗಪೂರ್ಣ್ನಕದಿನಮಿಸುತ್ತಿಹ ಭಕ್ತಿಯನು ಕೊಡು ಯಮಗೆ ಬಸವಲಿಂಗಾ॥೮॥

ಅಷ್ಟಾವಧಾನದ ವಾರ್ಧ್ದಿಕ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೪೭೪

ಕಟ್ಟು: ಕೆ ೪೮

ಕೃತಿಕ್ರಮಾಂಕ: **ಕೆ ೪೮/೭**

ಕರ್ಣಾಟಕಶಬ್ದಮಂಜರಿ

ಪತ್ರದ ಅಳತೆ: ೮" X ೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫-೫೦ ಅಕ್ಷರಗಳು. ೧ರಿಂದ ೧೬ನೆಯ ಪತ್ರದವರೆಗಿದೆ.

ಕೃತಿಕಾರ: ತೋಂಟದಾರ್ಯ

ಸ್ವರೂಪ: ಪದ್ಯ

ಅಂತ್ಯ:

ದೇವರ್ಕ್ಕಂಶಶಿಭಾಸ್ಕರತ್ರಿತಯಂ।
ಪಾವಕನಿರೆ ಚಂಪಕವೃತ್ತಮಿದಂ।
ಭೂವನಲಂ ಶಶಿ ದಿವಿಜ ದ್ವಂದಂಮಂತ್ಯದಿ ಹರನಿರೆ
ಭಾವಗ್ನರು ಭಾವಿಸಿ ತಿಳಿವುದು
ಮಹಾಸ್ರಗ್ಧರಾವೃತ್ತಮಿದಂ।।೨।।

[ಇಲ್ಲಿಗೇ ನಿಂತಿದೆ]

ವಿಶೇಷವಿಷಯ: ಅಸಮಗ್ರ

****

೪೭೩

ಕಟ್ಟು: ಕೆ ೪೮

ಕೃತಿಕ್ರಮಾಂಕ: **ಕೆ ೪೮/೬**

ಅಷ್ಟಾವಧಾನದ ವಾರ್ಧಕ

ಪತ್ರದ ಅಳತೆ: ೯"X೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫-೫೦ ಅಕ್ಷರಗಳು. ೨೧ನೆಯ ಪತ್ರದಿಂದ ೨೨ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಷಟ್ಪದಿ

ವಸ್ತು: ಅಧ್ಯಾತ್ಮ

ಆದಿ:

ಶ್ರೀಗುರುಬಸವಲಿಂಗಾಯನಮಃ।। ಅಷ್ಟಾವಧಾನದ ವಾರ್ಧ್ದಿಕವೂ।।

ಅಷ್ಟಾವಧಾನಿ ತಾನೆಂತೆನಲು ಪೇಳ್ವೆನವ।
ಅಷ್ಟ.......ಂಗನುಳಿದು ವಳಹೊರಗೆಂಬ।
ಅಷ್ಟವರ್ನ್ನದ ಭಕ್ತಿಪೂರ್ನ್ನವಾಗಳವಡಲು ಅಷ್ಟಾವಧಾನ ಶರಣಾ।। ಪಲ್ಲ।।

ಕಟ್ಟು: ಕೆ ೪೮

ಕೃತಿಕ್ರಮಾಂಕ: **ಕೆ ೪೮/೮**

ನಾನಾರ್ಥ ಸಮಾನಾರ್ಥಗಳು

ಪತ್ರದ ಅಳತೆ: ೯"X೨"; ಪ್ರತಿ ಮುಖದಲ್ಲಿ ಹತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೪೫–೫೦ ಅಕ್ಷರಗಳು. ೧೬ರಿಂದ ೧೮ ಪತ್ರಗಳವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ

ವಸ್ತು: ನಾನಾರ್ಥ, ಸಮಾನಾರ್ಥಗಳು

ಆದಿ:

ಶ್ರೀಗುರುಬಸವಲಿಂಗಾಯನಮಃ॥

ಕಂದ॥

ಮಂಗಳಮರದುದಿ ನವಿಲು ಭು।
ಜಂಗಾಗ್ನಿಯೆ ಮಯೂಖ ತಾಮ್ರವಿಪ್ರಕಿರಿಪೋ॥
ತ್ತುಂಗ ಶಿರಂ ಮೂಲಿಕೆ ಭೇ।
ದಂಗಳ್ ಪಂನೊಂದು ನಾಮಶಿಖಿಶಬ್ದಂಗಳಂ॥೧॥

ಅಂತ್ಯ:

ಘನ ಹಳಿದು ಕೈದು ದೊಡ್ಡಿತು।
ತನು ನಿರ್ ಸಂಗ್ರಾಮದಟ್ಟಯೊಹಂತೋಹಂ॥
ಜನ ನೆರವಿ ಸಾರ್ಯ..ಕ್ತಿಗ।
ಆನಿತುಂ ಪದಿಮೂರು ನಾಮ ಘನಶಬ್ದಂಗಳ್॥೩೮॥

ಸಾಮಾನ್ಯಂ ಪುಣ್ಯಂ ಸು
ತ್ರಾಮಂ ಘನಬಹಳ ಸರುಸದಂತಿ ಸಮೂಹಂ

ವಸ್ತು: ಶಬ್ದರೂಪವಿಚಾರ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ಕರ್ಣಾಟಕಶಬ್ದಮಂಜರಿ॥ ವಾರ್ಧಿಕಷಟ್ಪದಿ॥

ಶ್ರೀಮದವಿರಳಸಕಲನಿಕಲಗುಣಾತೀತ।
ನಾಮರೂಪಕ್ರಿಯಾರಹಿತ ಶೃತಿತತಿವಿನುತ।
ಕಾಮಿತಫಲಪ್ರದಾಯಕ ಸಕಲಲೋಕನಾಯಕ ನಿತ್ಯನಿರ್ಮಾಯಿಕಾ॥
ರಾಮಣಿಯ್ಯಕ ಯ್ಯೋಗಿಜನಮನೋನಿಲಯ ಚಿ।
ತ್ಕಾಮಿನಿಕಾಂತ ಕರುಣಿಸು ವಿಮಲಮತಿಯ ಮ।
ತ್ಸ್ವಾಮಿ ವರಗುರು ನಿರಂಜನ ವ್ರಜಿನ ಮೇಘಪ್ರಭಂಜನ ಮದಭಂಜನಾ ॥೧॥

ವರಷಟ್ಸ್ಥಲಾಚಾರಸಂಸಿದ್ಧನಲಸೂ।
ಸ್ಥಿರಶೈವಪಂಚಾಕ್ಷರಿಮಂತ್ರಹೃದಯನುರು।
ತರಸತ್ಕ್ರಿಯಾಜ್ಞಾನಸಂಪನ್ನನಖಿಳಶಾಸ್ತ್ರಾರ್ಥಕೋವಿದಪಾವನಾ॥
ಚರಿತಘನಗುರುನಿರಂಜನಲಿಂಗಚರಣಸರ।
ಸಿರುಹಸೌರುಭಮಧುಕರಂ ತೋಂಟದಾರ್ಯ್ಯ ಬಿ।
ತ್ತರಿಸಿದನೆನಲ್ಕೆ ಮೆಚ್ಚದರೊಳರೆ ಕರ್ಣ್ನಾಟಶಬ್ದಮಂಜರಿಯನಿದನಂ॥೨॥

ಅಂತ್ಯ:

ಇಂತು ನೆಱೆ ಕರ್ಣಾಟಭಾಷೆಯೊಳ್ತಱಸಂದ।
ನಂತನಾಮಂಗಳೊಳೆ ಶಿಷ್ಯಯ್ಯಾ ಪಲವು ತೆಱ।
ನಂತವು ಮಹಾಶೇಷಗಂ ತಿಳಿಯಲಳವಲ್ತದಱೊಳು ಪಲಕೆಲ ಶಬ್ದಮಂ॥
ಸಂತಸದೊಳಚ್ಚಗನ್ನಡಗೂಡಪದತದ್ಭ।
ವಂ ತತ್ಸಮಂಗಳೆಂದೆಂಬ ನಾಮಗಳನೋ।
ರಂತೆ ವಿರಚಿಸಿದೆನೆಲ್ಲ ಕವೀಶ್ವರರುದಾಹರಣ ಸನ್ಮಾರ್ಗವಿಡಿದೂ॥ ೧೨೦॥

ಕರ್ಣಾಟಶಬ್ದಮಂಜರಿ ಸಂಪೂರ್ನ್ನ ಮಂಗಳಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

ಕೃಪೆಗು। ಸಮುದ್ರನೆನಿಸಿದಕ್ಕೆ। ಅನಘಾಗುಣಾಃ। ಪಾಪವಿಲ್ಲದೆಯಿದ್ದಂಥಾ ಗುಣಂಗಳು। ಸಂತಿ। ಉಂಟು। ಸಃ। ಆ ಪರಮೇಶ್ವರನು। ಶ್ರಿಯ್ಯೈ ಚ। ಐಶ್ವರ್ಯಕ್ಕೋಸ್ಕರವು। ಅಮೃತಾಯ ಚ। ಮೋಕ್ಷಕ್ಕೋಸ್ಕರವು। ಭವದ್ಭಿಃ। ನಿಂಮಿಂದ। ಸೇವ್ಯತಾಂ। ಸೇವಿಸಲುಪಡಲಿ॥೧॥

ಸಮಾಹೃತ್ಯಾನ್ಯ ತಂತ್ರಾಣಿ।
ಸಂಕ್ಷಿಪ್ತೈಃ ಪ್ರತಿಸಂಸ್ಕೃತೈಃ॥
ಸಂಪೂರ್ಣಮುಚ್ಯತೇ ವರ್ಗೈ।
ನಾಮಲಿಂಗಾನುಶಾಸನಂ॥

ಟೀಕು॥ ಶಾಸ್ತ್ರಾರಂಭಪ್ರಯೋಜನಮಂ ಪೇಳ್ವ ಫಲ। ಅನ್ಯ ತಂತ್ರಾಣೀ। ಸಮಾಹೃತ್ಯ। ಉಳಿದ ವೈಜಯಂತಿ ಹಲಾಯುಧ ಮೊದಲಾದ ನಿಘಂಟುಗಳನೊಬ್ಬುಳಿಕ್ಕಿ। ಸಂಕ್ಷಿಪ್ತೈಃ। ಸಂಕೋಚಿಸಲ್ಪಟ್ಟಂಥಾ। ಪ್ರತಿಸಂಸ್ಕೃತೈಃ। ಯಲ್ಲಾ ಸಂಸ್ಕಾರಂಗಳಿಂದ। ಸಂಪೂರ್ನ್ನಂ। ಸಂಪೂರ್ನ್ನವಹ। ವರ್ಗ್ಗೈಃ। ವರ್ಗಗಳಿಂದ। ನಾಮಲಿಂಗಾನುಶಾಸನಂ। ಹೆಸರು ಲಿಂಗಗಳ ಪಂರ್ಯಾಂಯ। ಸಂಪೂರ್ನ್ನಮುಚ್ಯತೆ। ಸಂಪೂರ್ನ್ನವು। ಸಂಕೋಚದಿಂದ ಹೇಳಲ್ಪಟ್ಟವೆಂಬುದು। ತಾತ್ಪರ್ಯ್ಯ। ಕೆಲಬರು ಲಿಂಗವನೆ ಹೇಳುವರು। ಕೆಲಬರು ಲಿ ತಾತ್ಪರ್ಯ್ಯವನೆ ಹೇಳುವರು। ತಾತ್ಪರ್ಯ......ರನೆ ಹೇಳುವರು। ಈ ಶಾಸ್ತ್ರದಲ್ಲಿ ಯಲ್ಲವನು ಕಂಡೆಹೆನೆಂಬುದು ತಾತ್ಪರ್ಯಂ॥೨॥

ಅಂತ್ಯ:

ಶೇಷಂ ತು ಜ್ಞೇಯಂ ಶಿಷ್ಟಪ್ರಯೋಗತಃ। ಈ ಪ್ರಕಾರದಲ್ಲಿ ಹೇಳಿದ ಶಬ್ದಂಗಳಂ ತಿಳಿವುದು। ಉಳಿದವನೂ ಶಿಷ್ಟಪಾರಾದವರ ಪ್ರಂಯೋಗದ ವುದಾಹರಣೆಯಿಂದಱಿವುದು॥ ಇತಿ ಲಿಂಗಾದಿ ಸಂಗ್ರಹವರ್ಗ್ಗಃ ॥ ಶ್ರೀ॥ ಇತ್ಯಮರಸಿಂಹ್ಯಕೃತೌ ನಾಮಲಿಂಗಾನುಶಾಸನೇ। ತೃತೀಯಃ ಕಾಂಡಃ ಸಮಾಪ್ತ ಮಂಗಳಮಹಾಶ್ರೀಶ್ರೀಶ್ರೀ ॥

ಯಾದೃಶಂ ಪುಸ್ತಕಂ ದೃಷ್ಟ್ವಾ।
ತಾದೃಶಂ ಲಿಖಿತಂ ಮಯಾ॥
ಅಪದ್ಧೋ ವಾ ಸುಬದ್ಧೋ ವಾ।
ಮಮದೋಷ ನವಿದ್ಯತೇ ॥

ಶ್ರೀ॥ ಕರಕೃತಮಪರಾಧಂ ಕ್ಷಂತುಮರ್ಹಂತು ಸಂತಃ॥ ಶುಭಮಸ್ತು॥

ವಿಶೇಷವಿಷಯ: ಸಮಗ್ರ

****

ಸಾಮಜ ಮಳೆಯೊಂಭತ್ತುಂ
ಭೂಮಿಗೆ ಪೊಸತೆನಿಸುತ್ತಿಹ ಘನಾಘನಶಬ್ದ॥೩೯॥

[ಇಲ್ಲಿಗೆ ನಿಂತುಹೋಗಿದೆ]

ವಿಶೇಷವಿಷಯ: ಅಪೂರ್ಣ; ನಾನಾರ್ಥಗಳು ಮತ್ತು ಸಮಾನಾರ್ಥಗಳನ್ನು ತಿಳಿಸುವ ಪದ್ಯಗಳು; ಕೃತಿಯ ಹೆಸರು ಕೂಡ ಲಭ್ಯವಿಲ್ಲ.

****

೪೭೬

ಕಟ್ಟು: ಕೆ ೪೯

ಕೃತಿಕ್ರಮಾಂಕ: **ಕೆ ೪೯/೧**

ನಾಮಲಿಂಗಾನುಶಾಸನ

ಪತ್ರದ ಅಳತೆ: ೧೩.೫" X ೨"; ಪ್ರತಿ ಮುಖದಲ್ಲಿ ಒಂಬತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦ ಅಕ್ಷರಗಳು. ೧ನೆಯ ಪತ್ರದಿಂದ ೧೨೧ನೆಯ ಪತ್ರದವರೆಗಿದೆ.

ಕೃತಿಕಾರ: ಅಮರಸಿಂಹ, ಟೀಕಾಕಾರ: ನಾಚಿರಾಜ

ಸ್ವರೂಪ: ಪದ್ಯ, ಗದ್ಯಟೀಕೆ

ವಸ್ತು: ಕೋಶ

ಆದಿ:

ಶ್ರೀ ಗುರುಬಸವಲಿಂಗಾಯನಮಃ॥ ಅಮರಸಿಂಹ ನಾಚಿರಾಜೀಯಂ॥

ಶ್ಲೋಕ॥ ಯಸ್ಯ ಜ್ಞಾನದಯಾಸಿಂಧೋ।
ರಗಾಧಸ್ಯಾನಘಾಗುಣಾಃ॥
ಸೇವ್ಯತಾಮಕ್ಷಯೋ ಧೀರಾಃ।
ಸಶ್ರಿಯೈ ಚಾಮೃತಾಯ ಚ॥

ಟೀಕು॥ ಭೋ ಧೀರಾಃ। ಎಲೆ ವಿದ್ವಾಂಸರುಗಳಿರಾ। ಅಗಾಧಸ್ಯ। ಅತಿ ಗಂಭೀರವಾಗಿದ್ದಂಥಾ। ಯಸ್ಯ। ಆವುದಾನೊಂದು। ಜ್ಞಾನದಯಾಸಿಂಧೋಃ। ಜ್ಞಾನಕು।

ಶ್ರೋತ್ರದೊಳ್। ಶ್ರೋತ್ರೇಂದ್ರಿಯವೊಂದಱಲ್ಲಿಯೆ। ಶಬ್ದದಿಂ। ಶಬ್ದಾನುಲಿದ್ದವೊಲೆಗಂ। ಜಗತ್ಸರ್ವ್ವಂ ಚರಾಚರಂ। ಎಂದಾಗಮ ವಾಕ್ಯ ಮುಂಟಾಗಿ। ಸಮಸ್ತ ವಿಷಯಂಗಳುಂ। ಶಬ್ದದಿಂದೆಂ ಅಱಿಯ ಲ್ಪಟ್ಟಪುವಾಗಿ। ಶಬ್ದದಿಂದೆ। ಉದ್ಭಾವಿಪ ನಿರ್ಮ್ಮಳಮೂರ್ತ್ತಿಗೆ। ಉದ್ಭಾವಿಪ। ಅಭಿವ್ಯಕ್ತಮಾಗಿ ಅಱಿಯಿಸುವ। ನಿರ್ಮ್ಮಳಮೂರ್ತ್ತಿಗೆ। ವಿಮಳಸ್ವರೂಪೆಯಾದ। ಇಳಾವಂದ್ಯೆಗೆ। ಭೂಜನದಿಂದೆ ವಂದಿಸಿಕೊಂಬಳಾದ ಶ್ರೀ ವಾಗ್ದೇವಿಗೆ। ಶ್ರೀ ಐಶ್ವರ್ಯೋಪಲಕ್ಷಿತೆಯಾದ ವಾಗ್ದೇವಿಗೆ। ವಾಕ್ಕೆಂಬ ದೇವಿಗೆ। ಶಾಸ್ತ್ರಮುಖದೊಳ್। ಶಬ್ದಶಾಸ್ತ್ರಪ್ರಾರಂಭದಲ್ಲಿ। ಅವನತಂ। ನಮಸ್ಕರಿಸು ವಾತಂ। ಅಪ್ಪೆಂ। ಆಗುವೆಂ॥

ವ॥ ಶಾಂತಿಯೆಂಬ ಗುಣದೊಳನ್ವಿತೆಯಪ್ಪ ವಾಕ್ಯಂಬ ಕಿವಿಗೆ ಪಂಚೇಂದ್ರಿಯಂಗಳ ವಿಷಯಮಪ್ಪ। ಶಬ್ದಸ್ಪರ್ಶರೂಪುರಸಗಂಧಂಗಳೊಳ್ಪಂ। ಶ್ರೋತ್ರೇಂದ್ರಿಯವೊಂದಱೊಳೆ ಶಬ್ದಮುಖದಿನಭಿವ್ಯಕ್ತಿಯುಂ ಮಾಳ್ಪ ವಿಮಳಸ್ವರೂಪಿಗೆ। ಭುವನಸ್ತುತ್ಯೆಗೆ। ಈ ಶಾಸ್ತ್ರಮುಖದೊಳ್॥

ಅಂತ್ಯ:

ಕಂ॥

ನಡೆದುದೆ ಮಾರ್ಗ್ಗಂ ಪದವಿಡ।
ಲೊಡರಿಸಿದುದೆ ಭಂಗಿ ಕೇಶವಂಗಿದಿರುಂಟೆ॥

ತೊಡಗಿದ ಕೃತಿಗಳೊಳಾನೆಯ।
ನಡು ಬಡವೆ ತಾನೆ ಲೋಕದೊಳ್ ಲಾಕ್ಷಣಿಕಂ॥

ದೊರೆವಡೆದ ಚೋಳಪಾಲಕ।
ಚರಿತಂ ಶ್ರೀಚಿತ್ರಮಾಲೆ ಮತ್ತೆ ಸುಭದ್ರ।
ಹರಣಂ ಪ್ರಬೋಧಚಂದ್ರಂ।
ಕಿರಾತಮಿವು ಕೇಶಿರಾಜವಿರಚಿತಕಂಗಳ್॥

ಶಿತಿಗೀಕ್ಷಿಪರಸಚಿತ್ರಂ।
ಸರಸತಿಗೆರಡನೆಯ ವೀಣೆ ಎನೆ ಸೌಭಾಗ್ಯಂ॥

ದೊರೆಕೊಂಡುದೆಂದು ಬುಧರಾ।
ದರಿಪರ್ ಮೆಚ್ಚಿಂದೆ ಶಬ್ದಮಣಿದರ್ಪ್ಪಣಮಂ॥

ಆರ್ಯ್ಯನ ಯಾದವಕಟಕಾ।
ಚಾರ್ಯನ ಕೇಶವನ ಶಬ್ದಮಣಿದರ್ಪ್ಪಣಮಂ॥

ಕಟ್ಟು: ಕೆ ೪೯

ಕೃತಿಕ್ರಮಾಂಕ: **ಕೆ ೪೯/೨**

ಶಬ್ದಮಣಿದರ್ಪಣ, ನಿಟ್ಟೂರ ನಂಜಯ್ಯನ ಟೀಕುಸಹಿತ

ಪತ್ರದ ಅಳತೆ: ೧೩.೫" X ೨"; ಪ್ರತಿ ಮುಖದಲ್ಲಿ ಒಂಬತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦ ಅಕ್ಷರಗಳು. ೧ನೆಯ ಪತ್ರದಿಂದ ೧೨೦ನೆಯ ಪತ್ರದವರೆಗಿದೆ.

ಕೃತಿಕಾರ: ಕೇಶಿರಾಜ, ಟೀಕಾಕಾರ: ನಿಟ್ಟೂರ ನಂಜಯ್ಯ

ಸ್ವರೂಪ: ಪದ್ಯ ಮತ್ತು ಟೀಕಾಗದ್ಯ

ವಸ್ತು: ವ್ಯಾಕರಣ

ಆದಿ:

ಶ್ರೀಶಿವಾಯನಮಃ॥ ಶುಭಮಸ್ತು॥ ನಿರ್ವಿಘ್ನಮಸ್ತು॥ ಆಯುರಾರೋಗ್ಯಮಸ್ತು॥ ಐಶ್ವರ್ಯಮಸ್ತು॥ ಶಬ್ದಮಣಿದರ್ಪಣಕ್ಕೆ ನಿಟ್ಟುರ ನಂಜಯ್ಯ ಬರೆದ ಯಾಖ್ಯಾನದ ಪುಸ್ತಕಂ॥

ಸೂತ್ರಂ॥

ಶ್ರೀ ವಾಗ್ದೇವಿಗೆ ಶಬ್ದದಿ।
ನಾವಾವಿಂದ್ರಿಯದ ವಿಷಯಮಂ। ಶ್ರೋತ್ರದೊಳು॥
ದ್ಭಾವಿಪ ನಿರ್ಮ್ಮಳಮೂರ್ತ್ತಿಗ।
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ॥

ಪದಚ್ಛೇದಂ॥ ಶ್ರೀವಾಗ್ದೇವಿಗೆ। ಶಬ್ದದಿಂ। ಆವಾವಿಂದ್ರಿಯದ। ವಿಷಯಮಂ। ಶ್ರೋತ್ರದೊಳ್। ಉದ್ಭಾವಿಪ। ನಿರ್ಮ್ಮಳಮೂರ್ತ್ತಿಗೆ। ಇಳಾವಂದ್ಯೆಗೆ। ಶ್ರೀವಾಗ್ದೇವಿಗೆ। ಶಾಸ್ತ್ರಮುಖದೊಳ್। ಅವನತಂ। ಅಪ್ಪೆಂ॥

ಟೀಕು॥ ಆವಾವಿಂದ್ರಿಯದ। ಶ್ರೋತ್ರತ್ವಗ್ನೇತ್ರಜಿಹ್ವೆಘ್ರಾಣಂಗಳೆಂಬ ಸರ್ವ್ವೇಂದ್ರಿಯಂಗಳ ವಿಷಯುವಂ। ಶಬ್ದಸ್ಪರ್ಶರೂಪುರಸಗಂಧಂಗಳೆಂಬ ಸಮಸ್ತ ವಿಷಯುಂಗಳಂ।

ಶ್ರೀಶಿವಾಯನಮಃ॥ ನಾಗವರ್ಮಛಂದಸ್ಸ ಬರೆವುದಕ್ಕೆ ಶುಭಮಸ್ತು॥

ಚಂಪಕ॥

ಜೆಡೆಗಳ ಬಂಬಲೊಪ್ಪುವ ಕಳಾವಳಿಭಿಷಣಮಪ್ಪ ಪಾಪಿನೊ
ಳ್ಪೊಡಿಗೆ ಪೊದಳ್ದ ಪೊಂದೊಡಿಗೆ ಶಕ್ತಿವಿರಾಜಿತ ಶಕ್ತಿ ಶುಲಮೆ
ಪಿಡಿದ ಕರಾಸಿ ಗೌರಿ ನಿಜವಲ್ಲಭೆಯಾಗಿರೆ ಮಿಕ್ಕ ನಾಕಿ ಸ
ಯ್ಯಡಿಯ ಪಿನಾಕಿ ಕೂರ್ತ್ತುವೆಮಗೀಗೆ ವರಂಗಳನುತ್ಸವಂಗಳಂ॥೧॥

ಅಂತ್ಯ:

ಇದು ಪರಮೇಶ್ವರಚರಣಾರವಿಂದಮಂದಮಧುಕರಾಯಮಾನವಿಬುಧಜನ ಮನಃಪದ್ಮಿನೀರಾಜಹಂಸಂಶ್ರೀಮತ್ಕವಿರಾಜಹಂಸವಿರಚಿತಮಪ್ಪಛಂದೋಂಬುಧಿ ಯೊಳ್ಪಂಚಮಾಧಿಕಾರಂ ಸಮಾಪ್ತಂ ಮಂಗಳಮಹಾ ಶ್ರೀಶ್ರೀಶ್ರೀ॥ ಅಂತುಮೆಲ್ಲ ಲೆಕ್ಕಂ ೨೪೮ಕ್ಕಂ॥

ಲಾದ್ಯಾಯತೋಯಸುತಮದ್ಯಲರಾಗ್ನಿಮೃತ್ಯು।
ರ್ವಾಂತಸ್ಥಖಂ ವಿಫಲ ಗಾದಿಭಯಿಂದುಕೀರ್ತ್ತಿಃ।
ಜ್ಯಾಮದಗ್ನೋರ್ಕ್ಕಋಜುಶೋಂತ್ಯಗವಾಯುಯಾನಂ।
ಸ್ತ್ರೀರ್ಮದ್ಯಗೋದಧಿಸುತಾಸ್ತಿಲನಸ್ಸ್ವರಾಯುಃ ॥

ಶ್ರೀಶ್ರೀಶ್ರೀ ॥

ವಿಶೇಷವಿಷಯ: ಸಮಗ್ರ

****

೪೭೯

ಕಟ್ಟು: ಕೆ ೪೯

ಕೃತಿಕ್ರಮಾಂಕ: **ಕೆ ೪೯/೪**

ಶಬ್ದಮಣಿದರ್ಪಣ: ಧಾತುನಿರ್ಣಯಪ್ರಕರಣ

ಪತ್ರದ ಅಳತೆ: ೧೩.೫"X೨"; ಪ್ರತಿ ಮುಖದಲ್ಲಿ ಒಂಬತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦ ಅಕ್ಷರಗಳು. ೧೩೬ನೆಯ ಪತ್ರದಿಂದ ೧೪೩ನೆಯ ಪತ್ರದವರೆಗಿದೆ.

ಸೂರ್ಯೇಂದು ಮೇರುವಾರಿಧಿ।
ಪರ್ಯಂತಂ ಪರಿದು ನಿಲ್ಕನಾಕುಳದಿಂದಂ॥

ವೃ॥ ಗಮಕಸಮಾಸದಿಂ ಜಟಿಕುಳಕ್ಷಳದಿಂ ಶ್ರುತಿಸಹ್ಯಸಂಧಿಯಿಂ।
ಸಮುಚಿತವಾಗಿ ಬರ್ಪ್ಪ ಸತಿಸಪ್ತಮಿಯಿಂ ಸಂಸ್ಕೃತೋಕ್ತಿಯಿಂ॥
ವಮಹಪಭೇದದಿಂ ವಿಹಿತಾವ್ಯಯಸಂಸ್ಕೃತಲಿಂಗದಿಂ ಪದೋ।
ತ್ತಮ ಶಿಥಿಲದ್ವಿತ್ವದಿಂ ಯತಿವಿಲಂಘನದಿಂದರಿದಲ್ತೆ ಕನ್ನಡಂ॥

ಗದ್ಯ॥ ಇದು ಸಮಸ್ತ ಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯ ಚಾರು ಚುಂಬಕಾಯುಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯ ಸುಕವಿ ಕೇಶಿರಾಜ ವಿರಚಿತಮಪ್ಪ ಶಬ್ದಮಣಿದರ್ಪ್ಪಣದೊಳ್ ಪ್ರಯೋಗಾನುಸಾರ ಶಬ್ದಾರ್ಥ ನಿರ್ಣ್ಣಯಂ ನವಮಪ್ರಕರಣಂ ಶಬ್ದಮಣಿದರ್ಪ್ಪಣ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

೪೭೮

ಕಟ್ಟು: ಕೆ ೪೯

ಕೃತಿಕ್ರಮಾಂಕ: **ಕೆ ೪೯/೩**

ನಾಗವರ್ಮಛಂದಸ್ಸು

ಪತ್ರದ ಅಳತೆ: ೧೩.೫" X ೨"; ಪ್ರತಿ ಮುಖದಲ್ಲಿ ಒಂಬತ್ತು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೦ ಅಕ್ಷರಗಳು. ೧೨೧ನೆಯ ಪತ್ರದಿಂದ ೧೩೩ನೆಯ ಪತ್ರದವರೆಗಿದೆ.

ಕೃತಿಕಾರ: ನಾಗವರ್ಮ

ಸ್ವರೂಪ: ಪದ್ಯ ಮತ್ತು ಗದ್ಯ

ವಸ್ತು: ಛಂದಸ್ಸು

ಆದಿ:

ಕೃತಿಕಾರ: ಕೇಶಿರಾಜ

ಸ್ವರೂಪ: ಪದ್ಯ ಮತ್ತು ಗದ್ಯ

ವಸ್ತು: ವ್ಯಾಕರಣ

ಆದಿ:

ಶ್ರೀಗುರುವೇ ಗತಿ॥

ವೇದಸಮನಾಗಿ ಭೀಮನಿ।
ನಾದುದು ಸಂಸ್ಕೃತದ ಧಾತುವಾ ತೆಱದಿಂದಂ॥
ಯಾದವಕಟಕಾಚಾರ್ಯ್ಯನಿ।
ನಾದುದು ಕರ್ಣಾಟಧಾತು ಕವಿಕೇಶವನಿಂ॥೧॥

ಅಂತ್ಯ:

ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯ ಚಾರುಚುಂಬಕಾಯ ಮಾನಾನೂನ ಕರ್ಣಾಟಕಲಕ್ಷಣಶಿಕ್ಷಾಚಾರ್ಯ ಸುಕವಿ ಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಧಾತುನಿರ್ಣಯ ಷಷ್ಠಮ ಪ್ರಕರಣಂ ಮಂಗಳ ಮಹಾ ಶ್ರೀಶ್ರೀಶ್ರೀ ॥

ವಿಶೇಷವಿಷಯ: ಸಮಗ್ರ

****

೪೮೦

ಕಟ್ಟು: ಕೆ ೫೦

ಕೃತಿಕ್ರಮಾಂಕ: **ಕೆ ೫೦/೧**

ರಾಘವಾಂಕನಕಾವ್ಯ: ಚಿಕ್ಕನಂಜೇಶ

ಪತ್ರದ ಅಳತೆ: ೧೪" X ೨"; ಪ್ರತಿ ಮುಖದಲ್ಲಿ ಹನ್ನೆರಡು ಸಾಲುಗಳು; ಪ್ರತಿ ಸಾಲಿನಲ್ಲಿ ಸುಮಾರು ೬೫ರಿಂದ ೭೦ ಅಕ್ಷರಗಳು. ೧ನೆಯ ಪತ್ರದಿಂದ ೯೫ನೆಯ ಪತ್ರದವರೆಗಿದೆ.

ಕೃತಿಕಾರ: ಸಿದ್ಧನಂಜೇಶ

ಸ್ವರೂಪ: ವಾರ್ಧಕಷಟ್ಪದಿ

ವಸ್ತು: ರಾಘವಾಂಕನ ಚರಿತ್ರೆ

ಆದಿ:

ಶ್ರೀಗುರುಬಸವಲಿಂಗಾಯನಮಃ॥ ರಾಘವಾಂಕಯ್ಯನ ಕಾವ್ಯವ ಬರೆವುದಕ್ಕೆ
ಶುಭಮಸ್ತು॥ ಶೋಭನಮಸ್ತು॥ ಆಯುರಾರೋಗ್ಯಮಸ್ತು॥ ನಿರ್ವಿಘ್ನಮಸ್ತು॥
ಶ್ರೀಶಾಂಭಶಿವಾಯನಮಃ॥ ವಾರ್ಧಿಕಷಟ್ಪದಿ॥ ಪದ॥

ಶ್ರೀಪರಮಕೈಲಾಸದಿಂ ದಕ್ಷಿಣಾಸೆಯೊಳ।
ಗಾಪುಣ್ಯಸುಕ್ಷೇತ್ರ ಪೊಂಪಾಕ್ಯ ನಗರದೊಳು।
ಪಾಪನಾಶಂ ಕವೀಶಂ ರಾಘವೇಶಂ ಮೆರದನು ಸಜ್ಜನರು ಮೆಚ್ಚೆ॥

ಪದ॥ ರಾಗ ತಮ್ಮಿಚ್ಚೆ॥

ಶ್ರೀಗಿರಿಜೆಯಾಸ್ಯಬ್ದ। ಷಟ್ಚರಣ ಕಾತ್ಯಯ।
ನೀಗುರುಸ್ತನಂಕುಂಕುಮಾಂಕಿತಂಮಲವಕ್ಷ।
ಶ್ರೀಗಿರಿಸುತಾ ಯವ್ವನಾಂಮ್ರುತ ಸರೋಹಂಸನುಮಯಹ್ರುದ್ವನಚೈತ್ರನೂ॥

ಯೋಗಿಜನಹೃದ್ಜ್ಯೋತಿ ಭಕ್ತವತ್ಸಲನತುಳ।
ಭೋಗಿ ಕಂಕಣಭಕ್ತರ್ಗಭವರೋಗವೈದ್ಯ ಸಲೆ।
ಭೋಗಿತಳ್ಪಾರ್ಚಿತಪದಾಂಭೋಜಸ್ತುತಿಸುಹಿತ। ಪಾಲಿಸುಗೆ ನಂಜೇಶ್ವರಾ॥೧॥

ಅಂತ್ಯ:

ಸುರುಚಿರೈಕೋನವಿಂಶತಿಸಂದಿಗಳೆಸಕ್ಕೆ।
ಮೆರೆವ ಸಾವಿರದ ನಾನೂರತೊಂಬತ್ತೈದು।
ಪರಿಶೋಭಿಸುವ ಪದಗಳೆ ಪಕ್ವಫಳ ರಾಘವಾಂಕಪ್ರಬಂಧವೆನಿಪಾ॥
ಸುರಭೂಜಸದ್ಭಕ್ತಜನಮನದಿಷ್ಟವಾ।
ದರದಿಂದಲಿವ್ರುತಂ ರಾಜಿಸಿತು ಭುವನದೊಳು।
ಗುರುಪಂಚವಂಣಿಗೆಯಸಿದ್ಧನಂಜೇಶನಾಣಯಮರ್ದನುಂಡುಬೆಳದೂ॥೧೯॥

ಆಚಾರ್ಯರೇವಣಾಸಿದ್ದೇಶಮರುಳುಸಿ।
ದ್ಧಾಚಾರ್ಯರಾಮಿದೇವಾಚಾರ್ಯಗುರು ಪಂಡಿ।
ತಾಚಾರ್ಯ ಚೌಕಮದದಿ ನಿಂದ ಪಂಚವಂಣಿಗೆ ಸಿದ್ದನಂಜೇಶ್ವರಾ॥

ಆಚಾರ್ಯಪದಪದ್ಮಮದುಕರಂ ಚಿಕ್ಕನಂ।
ಜಾರ್ಯ್ಯರಚಿತವಹ ಹಂಪೆಯ ಹರೀಶ್ವರಶಿಂವಾ।
ಚಾರ್ಯಸುತ ರಾಘವನಕೃತಿಗೆನವದಶಕ ಸಂದಿಸುವಚೋನುಬಂಧಿ ॥೧೧೦॥

ಅಂತು ಸಂಧಿ ೧೯ಕ್ಕಂ ಪದನು ೧೪೯೫ ಗ್ರಂಥ ೨೫೩ಕ್ಕಂ ಮಂಗಳಮಹಾ ಶ್ರೀಶ್ರೀಶ್ರೀ॥ ಜಯಾಭ್ಯುದಯ ಶಾಲಿವಾಹನಶಕ ೧೬೯೭ನೆಯ ಮನ್ಮಥ ಸಂವತ್ಸರದ ಮಾಘಬ ೧೩ಯು ಶನಿವಾರ ತಾಸು ಯೆಂಟುವರೆಗೆ ಬರೆದು ಮುಕ್ತಾಯವಾಯಿತು॥

ವಿಶೇಷವಿಷಯ: ಸಮಗ್ರ

****

೪೮೧

ಕಟ್ಟು: ಕೆ ೫೦

ಕೃತಿಕ್ರಮಾಂಕ: **ಕೆ ೫೦/೨**

ವಿಭೂತಿ ಪಂಚಾಕ್ಷರಗಳಿಗೆ ಸಂಬಂಧಿಸಿದ ಕೆಲವು ವಿವರಗಳು

ಪತ್ರದ ಅಳತೆ: ೧೪" X ೨"; ಪ್ರತಿ ಮುಖದಲ್ಲಿ ಹನ್ನೆರಡು ಸಾಲುಗಳು;
ಪ್ರತಿ ಸಾಲಿನಲ್ಲಿ ಸುಮಾರು ೬೫ರಿಂದ ೭೦ ಅಕ್ಷರಗಳು.
೧ನೆಯ ಪತ್ರದಿಂದ ೩ನೆಯ ಪತ್ರದವರೆಗಿದೆ.

ಕೃತಿಕಾರ: ?

ಸ್ವರೂಪ: ಪದ್ಯ, ಟೀಕಾಗದ್ಯ

ವಸ್ತು: ವೀರಶೈವತತ್ತ್ವಗಳು

ಆದಿ:

ಶ್ರೀಗುರುಬಸವಲಿಂಗಾಯನಮಃ॥

ಸೂತ್ರ॥ ಯಿಂತು। ಲಿಂಗಧಾರಣವಾಗಿ। ಸದಾಚಾರಸತ್ಕ್ರಿಯಸಂಪಂನಾದ। ಮಹಾಮಹಿಮಂಗೆ। ಶಿವನ ಮಹಾದೈಶ್ವರ್ಯ್ಯಸ್ವರೂಪಮಪ್ಪ। ವಿಭೂತಿಯ ಧರಿಸಬೇಕಾದ ಕಾರಣ। ಮುಂದೆ ವಿಭೂತಿಸ್ಥಲವಾದುದು। ವಿಭೂತಿಯ ಸ್ಥಲದ ಪದನೂ॥ ರಾಗ ಭೈರವಿ। ಪಲ್ಲವ॥ ಶ್ರೀ

ಶ್ರೀವಿಭೂತಿಯನೊಲಿದು ಧರಿಸಿದ
ಡಾವ ಕರ್ಮವು ಹೊದ್ದಲಂಮವು।
ಪಾವನಮಾಡುವದು ಪರಮ
ಪದವಿಯನು ತೋಱುವದೂ॥

ಪದನು॥

ಶಿವನ ಪರಮಜ್ಞಾನಾದಾಮೂಲದಾಧಾರದ। ಶಕ್ತಿಯಾ ಸರ್ವಾಂಗದ। ಮಂಗಳಭೂಷಣದಾ। ಪರಬ್ರಹದ। ಸಾರೋದ್ಧಾರದ। ಸುಖದ ಮಹದೈಶ್ವರ್ಯ್ಯದಾ। ಅನಾದಿ ಸಂಸಿದ್ಧವಾದ ವಿಭೂತಿ॥೧॥

ಅಂತ್ಯ:

ಅಂಗಮಾಚಾರಮಾಶ್ರಿತ್ಯಂ।
ಆಚಾರಂ ಪ್ರಾಣಮಾಶ್ರಿತಂ॥
ತತ್ಪ್ರಾಣಂ ಲಿಂಗಮಾಶ್ರಿತ್ಯಂ।
ತಂ ಲಿಂಗಂ ಜಂಗಮಾಶ್ರಿತಂ॥೧೪॥

ಶ್ರೀಶ್ರೀಶ್ರೀ

ವಿಶೇಷವಿಷಯ: ಸಮಗ್ರ

****

ಕಳೆದ ಮೂರು ದಶಕಗಳಿಂದ ಗುಲಬರ್ಗಾ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆಯ ಜೊತೆಗೆ ಪ್ರಕಟಣೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು.

ಈ ಯೋಜನೆಗಳಲ್ಲಿ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆ ಭಾಗ-1 ರ ಪ್ರಧಾನ ಸಂಶೋಧಕರು ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರು ಈ ಯೋಜನೆಯಲ್ಲಿ ಹಲವಾರು ಅಪ್ರಕಟಿತ ಹಸ್ತಪ್ರತಿಗಳನ್ನು ಪ್ರಕಟಿಸಿದ್ದಾರೆ. ನಾಡಿನ ಪ್ರಮುಖ ಹಸ್ತಪ್ರತಿಗಳನ್ನು ಪ್ರಕಟಿಸಿ ಜನಸಾಮಾನ್ಯರಿಗೆ ತಲುಪುವಂತೆ ಮಾಡಿದ್ದಾರೆ. ಈ ಯೋಜನೆಯ ಸಂಪುಟಗಳು ಅಪೂರ್ವ ದಾಖಲೆಗಳೆನಿಸಿವೆ. ಹಸ್ತಪ್ರತಿಗಳನ್ನು ಸಂಪಾದನೆ ಮಾಡಿಕೊಟ್ಟಿರುವ ಸಂಪಾದಕರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ. ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಹಾಗೂ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ. ಟಿ. ಪುಟ್ಟಯ್ಯ
ಕುಲಪತಿಗಳು

ISBN 81-923128-5-2
9788192312859